ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಸಿದ್ಧಲಿಂಗಯ್ಯ

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೦

ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ

ಸಂಶೋಧಕ

ಸಿದ್ಧಲಿಂಗಯ್ಯ

ಮಾರ್ಗದರ್ಶಕರು

ಡಾ. ಕೆ. ಮೋಹನ್‌ಕೃಷ್ಣ ರೈ

ಚರಿತ್ರೆ ವಿಭಾಗ

ಸಮಾಜ ವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩೨೭೬

೨೦೧೦

ಪ್ರಮಾಣ ಪತ್ರ

ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ಎಂಬ ಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಡಾ. ಕೆ. ಮೋಹನ್‌ಕೃಷ್ಣ ರೈ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ ಪಿಎಚ್.ಡಿ. ಪದವಿಗಾಗಿ ಸಮಾಜ ವಿಜ್ಞಾನಗಳ ನಿಕಾಯದ ಚರಿತ್ರೆ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : 02-08-2010

(ಸಿದ್ಧಲಿಂಗಯ್ಯ)

ಸಂಶೋಧಕ

ಚರಿತ್ರೆ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - ೫೮೩ ೨೭೬

ಡಾ. ಕೆ. ಮೋಹನ್‌ಕೃಷ್ಣ ರೈ
ಮಾರ್ಗದರ್ಶಕರು ಮತ್ತು ಸಹಪ್ರಾಧ್ಯಾಪಕರು
ಚರಿತ್ರೆ ವಿಭಾಗ, ಕನ್ನಡ ವಿಶ್ವವಿದ್ಯಾಲಯ
ಹಂಪಿ, ವಿದ್ಯಾರಣ್ಯ - ೫೮೩೨೭೬

ದೃಢೀಕರಣ ಪತ್ರ

ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ಎಂಬ ವಿಷಯದ ಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ. ಪದವಿಗಾಗಿ ಸಿದ್ಧಲಿಂಗಯ್ಯ ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ
ದಿನಾಂಕ : 02-05-2010

(ಡಾ. ಕೆ. ಮೋಹನ್‌ಕೃಷ್ಣ ರೈ)
ಮಾರ್ಗದರ್ಶಕರು

ಕೃತಜ್ಞತೆಗಳು

'ಆಗ ಕಾಡಿನೊಳಗೆ ನಾಡು, ಈಗ ನಾಡಿನೊಳಗೆ ಕಾಡು' ಇಲ್ಲವಾಗುತ್ತಿರುವ ಈ ಕಾಲದಲ್ಲಿ ಮಳೆ - ಬೆಳೆ - ವಾತಾವರಣ ಹೇಗೋ ಏನೋ ಎಂದು ಮಾತನಾಡಿಕೊಳ್ಳುತ್ತಲೇ ನನ್ನೂರಾಗಿರುವ ತುಮಕೂರು ತಾಲೂಕು ಮೆಳೇಹಳ್ಳಿಯ ಶಾಲಾವರಣದಲ್ಲಿ, ಬಸ್‌ಸ್ಟಾಂಡಿನಲ್ಲಿ ಗಿಡಗಳನ್ನು ನೆಟ್ಟು ಪೋಷಿಸಿದ ಅನಕ್ಷರಸ್ಥ ಬುದ್ಧಿಜೀವಿ ತಂದೆ - ತಾಯಿಗಳು, ಬೆಳೆದುನಿಂತ ಹೆಮ್ಮರಗಳಡಿಯಲ್ಲಿ ಅನೇಕರು ಸದಾ ತಂಪಾಗಿರುವಾಗ ತಾವಿಲ್ಲವಾದರು. ಮರ ಬೆಳೆಸುವ ಸ್ಫೂರ್ತಿಪಾಠ ಕಲಿಸಿ ಪರಿಸರ ಕಾಳಜಿಯನ್ನು ಮೂಡಿಸಿ ಅದೇ ಮನೋಭಾವನೆಯಲ್ಲಿ ಸುಮಾರು ಇಪ್ಪತ್ತೈದು ವರ್ಷಗಳು ಸಾಗಿ ಈಗ ಪರಿಸರ ಸಂಬಂಧೀ ವಿಷಯಾಧ್ಯಯನ ಮಾಡಲು ಪ್ರೇರಿತಗೊಂಡಿರುವ ನನ್ನಿಂದ ಮೊದಲ ನೆನಕೆಗಳು ತಂದೆ-ತಾಯಿಗಳಿಗೆ ಸಲ್ಲುತ್ತವೆ.

ಉತ್ತರ ಕನ್ನಡ ಜಿಲ್ಲೆಯ ಯಲ್ಲಾಪುರದ ಸರ್ಕಾರಿ ಪದವಿ ಕಾಲೇಜಿನಲ್ಲಿ ಇತಿಹಾಸ ಉಪನ್ಯಾಸಕನಾಗಿ ನೌಕರಿಗೆ ಸೇರಿದೆ. ಬಿಡುವಿದ್ದಾಗಲೆಲ್ಲಾ ಸುತ್ತಿ, ಪಶ್ಚಿಮ ಘಟ್ಟಗಳ ಪರಿಸರದ ಪರಿಚಯ ಮಾಡಿಕೊಂಡೆ. 'ಮರದ ಮಾತುಗಳು' ಎನ್ನುವ ಲೇಖನ, 'ಪರಿಸರ ಜಾಗೃತಿ' ಪ್ರಶ್ನಾವಳಿ, ನುಡಿಮುತ್ತುಗಳನ್ನು ರಚಿಸಿ ಇತರರಿಗೆ ಹಂಚುವ ಪ್ರವೃತ್ತಿ ನನ್ನ ವೃತ್ತಿಯೊಂದಿಗೆ ಮುಂದುವರಿಯಿತು. ಉದಾಹರಣೆಗೆ "ಉತ್ತರ ಕನ್ನಡ ಜಿಲ್ಲೆಯ ಪರಿಸರದಲ್ಲಿ ಶೌಚಾಲಯ ಬೇಕು, ಪರಿಸರವೇ ಶೌಚಾಲಯವಾಗಿರಬಾರದು". ಎನ್ನುವುದು ಜಿಲ್ಲೆಯಾದ್ಯಂತ ಗೋಡೆಬರಹವಾಗಿ ಬರೆಯಲ್ಪಟ್ಟು ನೈರ್ಮಲ್ಯಪರ ಪ್ರಚಾರ ಮಾಡುತ್ತಿದೆ. ಜಿಲ್ಲೆಯ ಪರಿಸರ ಸಿರಿಗೆ ಕೃತಜ್ಞತೆಗಳು.

ಓದಿ ಬರೆಯುವ ಹವ್ಯಾಸವುಳ್ಳ ನನಗೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಪ್ರಕಟಿಸಿರುವ ಚರಿತ್ರೆ ವಿಶ್ವಕೋಶ ಸಂಪುಟವು ದೊರೆಯಿತು. ಅದರಲ್ಲಿ ನನ್ನ ವಿದ್ಯಾಗುರುಗಳಾಗಿದ್ದ ದಿ. ಡಾ. ಆರ್. ರಾಮಕೃಷ್ಣನ್ ಅವರು ಬರೆದಿದ್ದ ಆನಲ್ಸ್ ಚರಿತ್ರೆ ಎಂಬ ಲೇಖನದೊಳಗೆ ಚರಿತ್ರೆಯ ಸಂಶೋಧನಾಕ್ಷೇತ್ರದಲ್ಲಿ 'ಪರಿಸರದ ಇತಿಹಾಸ' ಕುರಿತು ಅಧ್ಯಯನ ಮಾಡಬಹುದೆಂಬ ವಿಷಯವು ಬೀರಿದ ಪ್ರಭಾವದ ಫಲವೇ ಈ ಅಧ್ಯಯನವೆಂದು ಹೇಳಲು ಸಂಕೋಚವಿಲ್ಲ. ಕಾರಣರಾದ ಆ ನನ್ನ ಹಿತೈಷಿ ದಿವಂಗತ ವಿದ್ಯಾ ಗುರುಗಳಿಗೆ ಪ್ರಣಾಮಗಳು.

ಉತ್ತರ ಕನ್ನಡ ಜಿಲ್ಲೆಯಲ್ಲಿ ದಶಕದಷ್ಟು ಕಾಲ ಇದ್ದು ಸುತ್ತಾಡಿ ಕಣ್ಣಾರೆ ಕಂಡ ಪರಿಸರ ಸಂಬಂಧೀ

ವಿಷಯವೊಂದಕ್ಕೆ ಅಧ್ಯಯನ ರೂಪ ಕೊಡಬೇಕೆಂದು ನಿರ್ಧರಿಸಿ 'ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು' ಎಂಬ ಸಾರಲೇಖ ಬರೆದು ಒಪ್ಪಿಸಿ ಪಿಎಚ್.ಡಿ. ಸಂಶೋಧನಾ ವಿದ್ಯಾರ್ಥಿಯಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದ ಚರಿತ್ರೆ ವಿಭಾಗದ ಪರಿಸರದೊಳಗೆ ಸೇರಿದೆ. ನಿಯಮಬದ್ಧ ಒಪ್ಪಿಗೆ ಸೂಚಿಸಿ, ಅಧ್ಯಯನ ಮಾಡಿ ಮುಂದುವರಿಯಿರಿ ಎಂದು ಸದಾ ರಚನಾತ್ಮಕ ಪ್ರೋತ್ಸಾಹ ನೀಡುತ್ತಾ ನನ್ನ ಮಾರ್ಗದರ್ಶಕರಾಗಿರುವ ಡಾ. ಕೆ. ಮೋಹನ್‌ಕೃಷ್ಣ ರೈ ಇವರಿಗೆ ನಮಿಸುತ್ತೇನೆ.

ಕನ್ನಡ ವಿಶ್ವವಿದ್ಯಾಲಯ ವ್ಯವಸ್ಥೆಯ ಪರಿಸರದೊಳಗೆ ವಿವಿಧ ಜವಾಬ್ದಾರಿ ಹುದ್ದೆಗಳಲ್ಲಿದ್ದು ಆಯಾ ಸಂದರ್ಭದಲ್ಲಿ ಸಲಹೆ, ಸಹಾಯ ಮಾಡಿದ ಮಾನ್ಯ ಕುಲಪತಿಗಳು, ಕುಲಸಚಿವರು, ಅಧ್ಯಯನಾಂಗದ ನಿರ್ದೇಶಕರು, ಸಮಾಜ ವಿಜ್ಞಾನ ನಿಕಾಯದ ಡೀನ್ ಇವರೆಲ್ಲರಿಗೆ, ಗ್ರಂಥಾಲಯ ಅಧಿಕಾರಿಗಳು - ಸಿಬ್ಬಂದಿಯವರಿಗೂ, ಚರಿತ್ರೆ ವಿಭಾಗದಲ್ಲಿ ಮುಖ್ಯಸ್ಥರಾಗಿರುವ ಡಾ. ಎನ್. ಚಿನ್ನಸ್ವಾಮಿ ಸೋಸಲೆ, ಪ್ರಾಧ್ಯಾಪಕರುಗಳಾಗಿರುವ ಪ್ರೊ. ಲಕ್ಷ್ಮಣ್ ತೆಲಗಾವಿ (ವಿಶ್ರಾಂತ) ಡಾ. ಟಿ.ಪಿ. ವಿಜಯ್ ಮತ್ತು ಡಾ. ಸಿ.ಆರ್. ಗೋವಿಂದರಾಜು, ಸಹ ಪ್ರಾಧ್ಯಾಪಕರಾಗಿರುವ ಡಾ. ವಿರೂಪಾಕ್ಷಿ ಪೂಜಾರಹಳ್ಳಿ ಇವರುಗಳಿಗೆ ಹಾಗೂ ವಿಭಾಗದ ಇತರ ನೌಕರ ಸಿಬ್ಬಂದಿಗಳೆಲ್ಲರಿಗೆ ನನ್ನ ನಮನಗಳು.

ವಿಷಯಾಧ್ಯಯನಕ್ಕೆ ಸಂಬಂಧಿಸಿದಂತೆ ವಿಶೇಷವಾಗಿ ಸಹಾಯ ಮಾಡಿರುವ ಪರಿಸರಾಸಕ್ತ ಬರಹಗಾರರಾಗಿರುವ ಶ್ರೀ ಶಿವಾನಂದ ಕಳವೆಯವರಿಗೆ, ಕ್ಷೇತ್ರಕಾರ್ಯದಲ್ಲಿ ಸಹಕರಿಸಿದ ಪರಿಸರ ಪ್ರೇಮಿಗಳು, ಪರಿಸರವಾದಿಗಳು, ಅಧಿಕಾರಿಗಳು, ವಿವಿಧ ಅಭಿವೃದ್ಧಿ ಯೋಜನೆಗಳಿಂದಾದ ನಿರಾಶ್ರಿತರು, ಹೋರಾಟಗಾರರು, ಮಾಧ್ಯಮದವರೇ, ಮುಂತಾದವರನ್ನೆಲ್ಲಾ ಹೆಸರಿಸದೇ ಇರುವುದಕ್ಕೆ ಕ್ಷಮೆ ಕೋರಿ ಋಣಿಯಾಗಿರುತ್ತೇನೆ. ಪುಸ್ತಕ ರೂಪಕ ಶ್ರೀ ಕೆ.ಎಲ್. ರಾಜಶೇಖರ್, ಉತ್ತರ ಕನ್ನಡ ಜಿಲ್ಲೆಯ ದೈನಿಕ 'ಕರಾವಳಿ ಮುಂಜಾವು' ಪತ್ರಿಕೆಯ ವ್ಯವಸ್ಥಾಪಕ ಸಂಪಾದಕರಾಗಿರುವ ಶ್ರೀ ಗಂಗಾಧರ ಹಿರೇಗುತ್ತಿ ಹಾಗೂ ಹಿತೈಷಿಗಳಾಗಿರುವ ಶ್ರೀ ಹೆಚ್.ಜಿ. ಶಿವಾನಂದಮೂರ್ತಿ, ಭಾ.ಅ.ಸೇ. ಅವರಿಗೆ ವಂದನೆಗಳು.

ವೃತ್ತಿಯಲ್ಲಿದ್ದುಕೊಂಡು ಅಧ್ಯಯನ ಮುಂದುವರಿಸಲು ಕಷ್ಟ ಸಾಧ್ಯ ಎನಿಸಿದಾಗ ಸಹಕರಿಸಿದ ಯು.ಜಿ.ಸಿ., ಕಾಲೇಜು ಶಿಕ್ಷಣ ಇಲಾಖೆ, ಕಾರವಾರದ ಸರ್ಕಾರಿ ಕಲಾ ಮತ್ತು ವಿಜ್ಞಾನ ಕಾಲೇಜಿನ ಪ್ರಿನ್ಸಿಪಾಲರು, ಬೋಧಕ - ಬೋಧಕೇತರ ಸಿಬ್ಬಂದಿಯವರಿಗೆ ಮತ್ತು ಪ್ರೀತಿಯ ವಿದ್ಯಾರ್ಥಿಗಳಿಗೆ ನನ್ನ ಧನ್ಯವಾದಗಳು. ಅಧ್ಯಯನದ ಕೊನೆಯ ಹಂತದಲ್ಲಿ, ಮೈಸೂರು ಜಿಲ್ಲೆ ಕೃಷ್ಣರಾಜನಗರದ ಸರ್ಕಾರಿ ಪದವಿ ಕಾಲೇಜಿಗೆ ವರ್ಗಾವಣೆಯಾಯಿತು. ಹೊಸ ಪರಿಸರದಲ್ಲಿಯೂ ಅಧ್ಯಯನಕ್ಕೆ ಸಹಕರಿಸಿದ ಕಾಲೇಜಿನ ಪ್ರಿನ್ಸಿಪಾಲರಾಗಿರುವ ಪ್ರೊ. ಎಸ್. ಶ್ರೀರಾಮ್ ಮತ್ತು ಎಲ್ಲಾ ಸಿಬ್ಬಂದಿಯವರಿಗೆ ಹಾಗೂ ವಿಶೇಷ ಕಾರಣಕ್ಕಾಗಿ ! ಡಾ. ಎಚ್.ಎನ್. ಮಂಜುರಾಜ್ ಇವರಿಗೆ ಆಭಾರಿಯಾಗಿದ್ದೇನೆ. ಜ್ಞಾನದ ತುಣುಕಾಗಿ ಬರೆದು ಒಪ್ಪಿಸುತ್ತಿರುವ ಈ ಮಹಾಪ್ರಬಂಧವನ್ನು ಸುಂದರ-

ಸುಸ್ಥಿತಿಯಲ್ಲಿ ವಿನ್ಯಾಸಗೊಳಿಸಿಕೊಟ್ಟಿರುವ ಕೀರ್ತನ್ ಗ್ರಾಫಿಕ್ಸ್‌ನ ಬಸವರಾಜು ಮತ್ತು ಕುಮಾರಿ ಯಶೋದ - ಇವರಿಗೆ ಕೈ ಜೋಡಿಸುತ್ತೇನೆ.

ಅಧ್ಯಯನಾಸಕ್ತಿಗೆ ಚ್ಯುತಿ ಬರದಂತೆ ನೋಡಿಕೊಂಡು ಸದಾ ಪ್ರೋತ್ಸಾಹಿಸುತ್ತಿರುವ ನನ್ನ ಶ್ರೀಮತಿ ಎಸ್. ಭಾಗ್ಯ ಮತ್ತು ಆಗಾಗ್ಗೆ ಎಡ-ಬಲದಲ್ಲಿ ನಿಂತು ಏನು ಮಾಡುತ್ತೀಯಪ್ಪ ಎಂದು ಕೇಳುತ್ತಾ, ನೀನು ನಮ್ಮ ಹಾಗೆ ಹತ್ತೊಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದೀಯಾ, ಚನ್ನಾಗಿ ಓದು ಜೊತೆಗೆ ನಾವೂ ಓದಿಕೊಳ್ಳುತ್ತೇವೆ ಎನ್ನುವ ಮಕ್ಕಳು ಮೌನ ಮತ್ತು ಲೀನ ಇವರಿಗೆ ನನ್ನ ಏನೆಲ್ಲವೂ !

ಹೀಗೆಯೇ ಹೆಸರಿಸುವುದು - ನಮಸ್ಕರಿಸುವುದು ಸೌಜನ್ಯ ಸಂಸ್ಕೃತಿಯೆನಿಸಿದರೂ ಅತಿ ವಿಸ್ತರಣೆ ಅರ್ಥ ಕಳೆದುಕೊಳ್ಳುತ್ತದೆಂದು ತಿಳಿದು ಮರೆತವರನ್ನೆಲ್ಲಾ ಮನದಾಳದಿಂದ ನೆನಪಿಸಿಕೊಳ್ಳುತ್ತೇನೆ. ವಿಷಯಾಧ್ಯಯನದ ಸಂಗ್ರಹ - ಸಾರಸತ್ವವೇ ನಮಸ್ಕಾರಗಳಿಗಿಂತ ಅಧಿಕವೆಂದು ಭಾವಿಸಬೇಕೆಂದು ಕಾರಣರಾದವರಿಗೆಲ್ಲ ನಮ್ರತೆಯಿಂದ ವಿನಂತಿಸುತ್ತೇನೆ. ಅಂತಿಮವಾಗಿ ಅಧ್ಯಯನದೊಳಗಿನ ತಪ್ಪು ಒಪ್ಪುಗಳಿಗೆ ಜವಾಬ್ದಾರಿ ನನ್ನದಾಗಿದೆ ಎಂದು ತಿಳಿದಿರುತ್ತೇನೆ.

ಸಿದ್ಧಲಿಂಗಯ್ಯ

ಪರಿವಿಡಿ

ಅಧ್ಯಾಯ - ೧

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ

✦

೧.೧ ಪ್ರಸ್ತಾವನೆ

ಪರಿಸರವು ಯಾರೊಬ್ಬರ ಸ್ವಂತದ್ದಲ್ಲ, ಅದು ಸ್ವತಂತ್ರವಾದುದು ಹಾಗೂ ಸಾರ್ವತ್ರಿಕವಾದುದು. ವಿಶ್ವವ್ಯಾಪಕವಾಗಿರುವ ಪರಿಸರವು ವಿವಿಧತೆ, ಕಲಾತ್ಮಕತೆ ಹಾಗೂ ಚಿತ್ತಾಕರ್ಷಕ ಲಕ್ಷಣಗಳನ್ನೊಳಗೊಂಡಿದೆ.[೧] ಒಂದರಂತೆ ಇನ್ನೊಂದಿರದ ಜೀವಕೋಟಿಗಳ, ಜಡ ವಸ್ತುಗಳ ಮೊತ್ತವಾಗಿರುವ ಭೂಮಿಯ ಪರಿಸರದೊಳಗೆ ಉದಾಹರಣೆಗಳನ್ನು ಸೀಮಿತಗೊಳಿಸಲಾದೀತೆ !

'ಪರಿಸರ' ಎಂಬ ಪದವು 'ಎನ್‌ವಿರೋನ್‌ಮೆಂಟ್' ಎಂಬ ಇಂಗ್ಲಿಷ್ ಪದದ ಕನ್ನಡ ಭಾಷಾಂತರವಾಗಿದೆ. ಅಂದರೆ ಸನ್ನಿವೇಶ, ಸುತ್ತಮುತ್ತ, ಸುತ್ತಮುತ್ತಲೂ ಇರುವ ವಸ್ತುಗಳು, ಪ್ರದೇಶ, ಪರಿಸ್ಥಿತಿ ಎನ್ನುವ ಸಂದರ್ಭೋಚಿತ ಅರ್ಥಗಳನ್ನು ಹೊಂದಿರುತ್ತದೆ. ನಿರ್ದಿಷ್ಟವಾಗಿ ಒಂದು ಕಾಲಕ್ಕೆ ರೂಢಿಯಲ್ಲಿದ್ದ ಹಸಿರುಳ್ಳ ಅರಣ್ಯವನ್ನಷ್ಟೇ ನಾವೀಗ ಪರಿಸರ ಎನ್ನಲಾಗದು. ಅರಣ್ಯವು ಪರಿಸರದ ಒಂದು ಪ್ರಮುಖ ಭಾಗವಷ್ಟೆ. ಇಂದು ಪರಿಸರ ಕಲ್ಪನೆಯು ಚರ-ಸ್ಥಿರ, ಜೀವ-ನಿರ್ಜೀವ, ಭೌತ-ಅಭೌತ, ನಿರ್ಮಿತ-ಸ್ವಾಭಾವಿಕ, ಸುತ್ತ-ಮುತ್ತಲಿನ ಏನೆಲ್ಲಾ...! ಹೀಗೆ ಒಟ್ಟಾರೆ ಜಗತ್ತಿನ ಎಲ್ಲ ವಸ್ತು-ಸ್ಥಿತಿ ಸಂದರ್ಭಗಳನ್ನು ಒಳಗೊಂಡಿದೆ.

ಭೌತಿಕ ಪರಿಸರದೊಳಗಿನ ಎಲ್ಲ ರೀತಿಯ ಸಂಪತ್ತು ಗೊತ್ತು ಗುರಿಯಿಲ್ಲದೆ ಬಳಕೆಯಾಗಿ, ಮನುಷ್ಯನ ಮಿತಿಯಿಲ್ಲದ ಆಸೆಯನ್ನೆಲ್ಲಾ ಪೂರೈಸುತ್ತಲೇ ಸರಿಪಡಿಸಲಾರದಷ್ಟು ವಿಕೃತವಾಗಿದೆ. ಪರಿಸರದ ಪಾಲಿಗೆ ಬಂದಿರುವ ವಿನಾಶಕಾರಿ ಪರಿಸ್ಥಿತಿಯು ಜಗತ್ತಿನ ಎಲ್ಲ ರಾಷ್ಟ್ರಗಳ ಮೇಲೆಯೂ ಹಂಚಿ ಬೀಳುವುದು ನಿಶ್ಚಯ.[೨] ಓಜೋನ್ ಪದರದಲ್ಲಿ ರಂಧ್ರ, ಆಮ್ಲಮಳೆ, ಸಾಗರ - ಸಮುದ್ರಗಳ ಏರಿಕೆ ಮುಂತಾದವುಗಳ ಪರಿಣಾಮವು ಕೇವಲ ಬಡರಾಷ್ಟ್ರಗಳ ಮೇಲೆ ಮಾತ್ರ ಉಂಟಾಗುತ್ತದೆಂದು ಹೇಳಲಾದೀತೆ. ಮಿತ ಆವಶ್ಯಕತೆಗಳನ್ನು ಪರಿಸರದಿಂದ ನಿರೀಕ್ಷಿಸಿದ್ದ ಮನುಷ್ಯ ಇಂದು ಅತಿ ಆವಶ್ಯಕತೆಗಳ ಬೆನ್ನು ಹತ್ತಿದ್ದಾನೆ. ಮಹಾತ್ಮಾ ಗಾಂಧೀಜಿಯವರು ಹೇಳಿದಂತೆ "ಈ ಭೂಮಿಯ ಮೇಲೆ ಬದುಕಿರುವ ಪ್ರತಿಯೊಬ್ಬರಿಗೂ ಅಗತ್ಯವಾದುದನ್ನು ಪ್ರಕೃತಿ ಕೊಡಬಲ್ಲುದು ; ಆದರೆ ನಮ್ಮ ದುರಾಸೆಗಳನ್ನೆಲ್ಲಾ ಅದು ಪೂರೈಸಲಾಗದು" ಎಂಬ ಮಾತು ಪ್ರತಿಯೊಬ್ಬರಿಗೂ ಮನವರಿಕೆಯಾಗಲೇ ಬೇಕಾಗಿದೆ.

ಪ್ರಕೃತಿಯ ವಿಕೃತಿ ತಡೆ ಸಂಬಂಧವಾಗಿ ಇತ್ತೀಚೆಗೆ ಸಾಮಾಜಿಕ ಪರಿಸರದೊಳಗೆ 'ಪರಿಸರ ವಿಜ್ಞಾನ'ವು ಒಂದು ಅಧ್ಯಯನ ವಿಷಯವಾಗಿ ಜಗತ್ತಿನೆಲ್ಲೆಡೆ ಇರುವ ಶೈಕ್ಷಣಿಕ ಶಿಸ್ತುಗಳಲ್ಲಿ ಮುಂಚೂಣಿಯಲ್ಲಿದೆ. 'ಪರಿಸರ ವಿಜ್ಞಾನ'ವು ಇಂಗ್ಲಿಷ್ ಭಾಷೆಯ 'ಇಕಾಲಜಿ' ಎಂಬ ಪದಾರ್ಥವಾಗಿದೆ. ಗ್ರೀಕ್ ಭಾಷೆಯ 'ಐಕೋಸ್' ಪದ ಮೂಲದಿಂದ 'ಇಕಾಲಜಿ'

ಎಂಬ ಪದವು ನಿಷ್ಪತ್ತಿಯಾಗಿದ್ದು, 'ಮನೆ' ಎಂಬ ಅರ್ಥಕೊಡುತ್ತದೆ. ಅಂದರೆ ಮನೆಯ, ಮನೆಯಲ್ಲಿರುವವರ, ಮನೆಯ ಮೇಲೆ ಪ್ರಭಾವ ಬೀರಬಹುದಾದುದರ ಅಧ್ಯಯನವೇ ಪರಿಸರ ವಿಜ್ಞಾನವೆನಿಸಿಕೊಳ್ಳುತ್ತದೆ. ಮನೆ ಎಂಬ ಪರಿಕಲ್ಪನೆಯನ್ನು 'ಜಾಗತಿಕ ಹಳ್ಳಿ'ಯ (ಗ್ಲೋಬಲ್ ವಿಲೇಜ್) ಭಾಗವೆಂದೇ ಪರಿಗಣಿಸಲಾಗಿರುವ ಈ ಸಂದರ್ಭದಲ್ಲಿ ಪರಿಸರ ವಿಜ್ಞಾನವು ಇಡೀ ವಿಶ್ವದ ಬಗೆಗಿನ ಅಧ್ಯಯನವೆನಿಸಿಕೊಳ್ಳುತ್ತದೆ. ಜಗತ್ತಿನಲ್ಲಿ ಎಲ್ಲೇ ಪರಿಸರಕ್ಕೆ ಹಾನಿಯಾದರೂ ಒಟ್ಟು ಮನುಕುಲದ ಅಸ್ತಿತ್ವಕ್ಕೆ ಕೊಡಲಿಪೆಟ್ಟು ಬೀಳುವುದಾಗಿದೆ. ಪರಿಸರ ಪ್ರಜ್ಞೆ ಉಂಟುಮಾಡುವ, ಜಾಗೃತಗೊಳಿಸುವ ಕಾರ್ಯ ನಡೆಯುತ್ತಿರುವಾಗಲೇ ಸಾಮಾಜಿಕ ಪರಿಸರದೊಳಗೆ ಪರಿಸರ ಚಳವಳಿಗಳು ನಡೆದಿವೆ.

'ಚಳವಳಿ' ಎಂಬ ಪದವು ಇಂಗ್ಲಿಷ್‌ನ 'ಮೂವ್‌ಮೆಂಟ್'ಗೆ ಸಂವಾದಿಯಾಗಿ ಬಳಕೆಯಾಗುತ್ತಿದ್ದು, ಏಕಾರ್ಥವನ್ನು ಹೊಂದಿರುವುದಿಲ್ಲ. ಸಮಾಜದ ಸಂಬಂಧಗಳಲ್ಲಿ, ನಿಯಮಗಳಲ್ಲಿ, ಸಾಮಾಜಿಕ ಸಂಸ್ಥೆಗಳಲ್ಲಿ ಪರಿವರ್ತನೆಯನ್ನು ತರಲು ಅಥವಾ ತಡೆಯಲು ಪ್ರಯತ್ನಗಳು ನಡೆದಿವೆ. ಇಂತಹ ಸಾಮೂಹಿಕ ಯತ್ನಗಳನ್ನು ಅಥವಾ ಹೋರಾಟಗಳನ್ನು ಚಳವಳಿಗಳೆಂದು ಕರೆಯಬಹುದು. ಹರ್ಬಟ್ ಬ್ಲೂಮರ್, ರುಡೊಲ್ಫ ಹರ್ಬರ್ಲೆ ಮೊದಲಾದ ಸಾಮಾಜಿಕ ಚಳವಳಿಗಳ ಅಧ್ಯಯನಕಾರರು ಚಳವಳಿಗಳನ್ನು 'ಸ್ಥಾಪಿತ ಸಾಮಾಜಿಕ ಸಂಬಂಧಗಳನ್ನು ರೂಪಾಂತರಿಸುವ, ಸಾಮಾಜಿಕ ವ್ಯವಸ್ಥೆಗಳಲ್ಲಿ ಮೂಲಭೂತ ಪರಿವರ್ತನೆಗಳನ್ನು ತರುವ ಪ್ರಯತ್ನ'ಗಳೆಂದು ವರ್ಣಿಸಿದ್ದಾರೆ.[೩] ಅಂತೆಯೇ ಪ್ರತಿಯೊಂದು ಚಳವಳಿಗಳು ಗುರಿ ಮತ್ತು ಉದ್ದೇಶ, ತತ್ತ್ವಾದರ್ಶ, ಸಂಘಟನೆ, ತಂತ್ರ ಅಥವಾ ವಿಧಾನ, ಆಕರ್ಷಕತೆ ಎಂಬ ಪ್ರಮುಖ ಲಕ್ಷಣಗಳನ್ನು ಹೊಂದಿದ್ದು, ಪರಿವರ್ತನೆಗಳನ್ನು ತರುವ ಅಥವಾ ತಡೆಯುವ ಪ್ರಯತ್ನಗಳನ್ನು ನಡೆಸಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದು. ಚಳವಳಿಗಳು ತಮ್ಮ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ವಿಭಿನ್ನವಾದ ಕಾರ್ಯತಂತ್ರಗಳನ್ನು ರೂಪಿಸಿಕೊಳ್ಳುತ್ತವೆ. ಸತ್ಯಾಗ್ರಹ, ಸಂಧಾನ, ಶಿಕ್ಷಣ ಪ್ರಚಾರ, ವಕೀಲಿ ಮಾಡುವುದು, ಒತ್ತಡ ಹೇರುವುದು, ಬಹಿಷ್ಕಾರ ಹಾಕುವುದು, ಕರ ನಿರಾಕರಣೆ, ಮುಷ್ಕರ, ಲಾಕ್‌ಔಟ್, ಉಪವಾಸ, ಧರಣಿ, ಮೋರ್ಚಾ, ಮೆರವಣಿಗೆ ಮುಂತಾದ ಕಾರ್ಯತಂತ್ರಗಳ ಬಳಕೆಯನ್ನು ನಡೆದಿರುವ ಯಾವುದೇ ಚಳವಳಿಗಳಲ್ಲಿ ಗುರುತಿಸಬಹುದು.[೪] ಭಾರತದ ಸ್ವಾತಂತ್ರ್ಯ ಚಳವಳಿಯನ್ನಾಗಲಿ ಅಥವಾ ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ನದೀಯೋಜನೆಗಳ ವಿರೋಧದ ಚಳವಳಿಯನ್ನಾಗಲಿ ಇಲ್ಲಿ ಉದಾಹರಿಸಬಹುದು. ಯುದ್ಧವೊಂದನ್ನು ಹೊರತುಪಡಿಸಿ ಉಳಿದೆಲ್ಲ ರೀತಿಯ ಪ್ರಯತ್ನಗಳು, ಹೋರಾಟಗಳನ್ನು ಸಾಂದರ್ಭಿಕವಾಗಿ ಚಳವಳಿಗಳೆಂದೇ ಕರೆಯಬಹುದು. ಚಳವಳಿಗಳಲ್ಲಿ ಅಲ್ಪಕಾಲೀನ ಹಾಗೂ ದೀರ್ಘಕಾಲೀನ ಎಂಬ ವಿಂಗಡಣೆ ಮಾಡಿಕೊಳ್ಳಬಹುದಾದರೂ ಮಹತ್ವದ ದೃಷ್ಟಿಯಿಂದ ಹೇಳಲಾಗುವುದಿಲ್ಲ. ಇಂತಹ ಚಳವಳಿಗಳ ಚರಿತ್ರೆಯ ವ್ಯಾಪ್ತಿಗೆ ಸೇರಿರುವ ದಶಕಗಳ ಕಾಲದ ದಾಖಲೆಯನ್ನಷ್ಟೇ ಹೊಂದಿರುವ ಪರಿಸರ ಚಳವಳಿಗಳೂ ಸಾಮಾಜಿಕ ಚಳವಳಿಗಳೇ ಆಗಿದ್ದು ಪ್ರಮುಖ ಸ್ಥಾನ ಪಡೆದುಕೊಳ್ಳುತ್ತಿವೆ. 'ವಿಶಾಲವಾದ ಸಾಮಾಜಿಕ ಪ್ರತಿಕ್ರಿಯೆಗೆ, ಪರಿಸರ ವಾಗ್ವಾದಕ್ಕೆ' ಪರಿಸರಾಂದೋಲನಗಳು ಕಾರಣಗಳಾಗಿವೆ ಎಂಬ ಸ್ಪೇನ್ ಬರಹಗಾರ ಮಾರ್ಟಿನೆಜ್ ಏಲಿಯರ್‌ನ ಮಾತು[೫] ಚರ್ಚಿತವಾಗಬೇಕಾಗಿದೆ.

ಜಗತ್ತಿನಾದ್ಯಂತ ಎಲ್ಲ ರಾಷ್ಟ್ರಗಳೂ ಪರಿಸರ ಸಂಪನ್ಮೂಲಗಳ ಹಾಗೂ ಬಹುಮುಖೀಯ ಶೀಘ್ರ ಆರ್ಥಿಕಾಭಿವೃದ್ಧಿಯ ನಡುವಿನ ಬಿಕ್ಕಟ್ಟಿನಲ್ಲಿ ಸಿಲುಕಿಕೊಂಡಿವೆ. ಕೈಗಾರಿಕಾ ಕ್ರಾಂತಿ ನಂತರದಲ್ಲಿ ಪರಿಸರವಾದದ ಕಾಳಜಿ ಬಿರುಸುಗೊಂಡಿದೆ. ಪರಿಸರವು ಇತ್ತೀಚಿನ ದಶಕಗಳಲ್ಲಿ ಸಾಮಾಜಿಕ ಚಿಂತನೆಯ, ಧೋರಣೆಯ ಹಾಗೂ ಸಾಮಾಜಿಕ

ನ್ಯಾಯದ ಪ್ರಶ್ನೆಯಾಗಿದೆ. ಇದಕ್ಕೆ ಕಾರಣವೆಂದರೆ, ಮಾನವ - ಪರಿಸರದ ನಡುವಿನ ಸಂಬಂಧದ ಅನಿವಾರ್ಯ ನಿರಂತರತೆ. ಉದಾರೀಕರಣ, ಖಾಸಗೀಕರಣ ಹಾಗೂ ಜಾಗತೀಕರಣಗಳ ಬೆಂಬಲಿತ ಹೊಸ ಆರ್ಥಿಕ ನೀತಿಯು ಪರಿಸರವನ್ನು ಜಾಗತಿಕ ನೆಲೆಯಲ್ಲಿ ಚರ್ಚಿಸುವಂತೆ ಮಾಡಿದವು.[೫] ಎಂಬ ಮಾತಿಗೆ ಈ ಮೇಲಿನ 'ಜಾಗತಿಕ ಹಳ್ಳಿ'ಯ ಪರಿಕಲ್ಪನೆಯ ಸಂದರ್ಭದಲ್ಲಿ ಪುಷ್ಟಿ ನೀಡಲಾಗಿದೆ.

ಪರಿಸರ ಸಂರಕ್ಷಣೆ ಮತ್ತು ಹೋರಾಟಕ್ಕೆ ಜನ ಬೆಂಬಲ ಹೆಚ್ಚುತ್ತಿದೆ. ಪರಿಸರ ಚಳವಳಿಗಳು ಪ್ರದೇಶ, ಜಾತಿ, ಮತಗಳ ಹೊರತಾಗಿ ಆರಂಭವಾಗಿ ಕ್ರಮೇಣ ಪರಿಸರ ಪ್ರೇಮಿಗಳು, ಪರಿಸರವಾದಿಗಳು, ನಿರಾಶ್ರಿತರು, ಸರ್ವಭಕ್ಷಕರು (ಒಟ್ಟಾರೆಯಾಗಿ ಉತ್ಪನ್ನವಾದುದೆಲ್ಲವನ್ನೂ ತನ್ನ ಕೈಗೆಟಕುವಂತೆ ಮಾಡಿಟ್ಟುಕೊಂಡಿರುವ ಜನರನ್ನು 'ಸರ್ವಭಕ್ಷಕರು' ಎಂದು ಮಾಧವ ಗಾಡ್ಗೀಳ ಹಾಗೂ ರಾಮಚಂದ್ರ ಗುಹಾ 'ಇಕಾಲಜಿ ಅಂಡ್ ಈಕ್ವಿಟಿ' ಎಂಬ ಗ್ರಂಥದಲ್ಲಿ ಪ್ರಥಮವಾಗಿ ಪ್ರಸ್ತಾಪಿಸಿರುತ್ತಾರೆ) - ಎಂಬ ಗುಂಪುಗಳಾಗಿ ಪ್ರತ್ಯೇಕಗೊಂಡು ವಿಭಿನ್ನ ಫಲಿತಾಂಶಗಳನ್ನು ಕಂಡುಕೊಳ್ಳುತ್ತಿವೆ. ರಾಜಕೀಯ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಚಳವಳಿಗಳು ವಿಭಿನ್ನ ನೆಲೆಗಳಲ್ಲಿ ನಡೆಯಬಹುದು. ಫ್ರಾನ್ಸಿನ ಕ್ರಾಂತಿಕಾಲದ 'ರೊಟ್ಟಿ ಚಳವಳಿ'ಯಂತೆಯೇ ಭಾರತದ ರಾಷ್ಟ್ರೀಯ ಚಳವಳಿ ಕಾಲದಲ್ಲಿ ರೊಟ್ಟಿ ಚಳವಳಿಯೇ ನಡೆಯಬೇಕಾಗಿಲ್ಲ. ಆದರೆ ಮನುಕುಲವು ಜೀವ ವೈವಿಧ್ಯದ ಭಾಗವಾಗಿರುವಾಗ ಎರಡೂ ದೇಶಗಳ ಪರಿಸರ ಪ್ರಜ್ಞೆ ಮತ್ತು ಹೋರಾಟಗಳಲ್ಲಿ ವ್ಯತ್ಯಾಸವಿರಬಾರದು, ಈ ನಿಟ್ಟಿನಲ್ಲಿ ಯತ್ನಗಳನ್ನು ಹೆಚ್ಚಿಸುವಲ್ಲಿ ಅಧ್ಯಯನಗಳು ಪೂರಕವಾಗಿರಬೇಕು, ವ್ಯಾಪಕವಾಗಿ ನಡೆಯಬೇಕು.

ಸಾಮಾಜಿಕ ಚಳವಳಿಗಳಿಗೆ ದೀರ್ಘ ಇತಿಹಾಸ ಇರಬಹುದಾದರೂ ಯಾವುದೇ ಒಂದು ವಿಶಿಷ್ಟ ಚಳವಳಿಗೆ ದೀರ್ಘಾಯುಷ್ಯ ಇರುವುದಿಲ್ಲ ಎಂಬುದನ್ನು ಕಾಣಬಹುದು.[೬] ಈ ಮಾತಿನಂತೆ ಪರಿಸರ ಚಳವಳಿಗಳ ವಿಶಿಷ್ಟತೆಯಲ್ಲಿ ಒಂದೆರಡು ಚಳವಳಿಗಳು ದೀರ್ಘಾಯುಷ್ಯ ಹೊಂದಿದ್ದ ಉದಾಹರಣೆಗಳಾಗಿ ಇದ್ದರೂ, ಅಭಿವೃದ್ಧಿ ಯೋಜನೆಯು ಯಶಸ್ವಿಯಾದಾಗ ನಿಂತು ಹೋಗಿರುವುದನ್ನು ಈ ಅಧ್ಯಯನದಲ್ಲಿ ನೋಡಬಹುದಾಗಿದೆ. ಇದಕ್ಕೆ ಕಾರಣವಾಗಿದ್ದ ಕಾರ್ಯತಂತ್ರಗಳನ್ನು ಹುಡುಕಿ ವಿಶ್ಲೇಷಿಸುವ ಪ್ರಯತ್ನವೂ ಇದೆ.

ಪ್ರಸ್ತುತ ಅಧ್ಯಯನವು ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ಸಾಹಿತ್ಯಕ ಅಧ್ಯಯನ, ಪರಿಸರ ಪ್ರಜ್ಞೆ ಉಂಟು ಮಾಡುತ್ತಿರುವವರ ಕಾರ್ಯಚಟುವಟಿಕೆಗಳ ಸಹ ಸಂಬಂಧವನ್ನು ಒಪ್ಪಿಕೊಳ್ಳುತ್ತದೆ. ಪರಿಸರ ಪ್ರಜ್ಞೆ ಮತ್ತು ಸಂರಕ್ಷಣೆ ಉಂಟುಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿರುವ ಪರಿಸರ ಚಳವಳಿಗಳು ನಡೆದಿದ್ದರೂ ಅವು ಅಧ್ಯಯನಕ್ಕೊಳಪಟ್ಟು ದಾಖಲೆಗೊಳ್ಳದಿರುವುದರ ಕೊರತೆಯನ್ನು ಗಮನಿಸಲಾಗಿದೆ. ವಿಶೇಷವಾಗಿ ಪರಿಸರ ವಿಜ್ಞಾನದೊಳಗೆ ಸೇರಿಸಿ ಚರ್ಚಿಸಬಹುದಾದ ಪರಿಸರಾಂದೋಲನಗಳ ಇತಿಹಾಸವನ್ನು ಜಾಗತಿಕವಾಗಿ, ರಾಷ್ಟ್ರ-ರಾಜ್ಯ ಮಟ್ಟದಲ್ಲಿ ಬಿಡಿಯಾಗಿ ಸಮೀಕ್ಷಿಸಿ, ಪ್ರಾದೇಶಿಕವಾಗಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ಇಡಿಯಾಗಿ ಯಶಸ್ಸು ಹಾಗೂ ವಿಫಲತೆಗಳನ್ನು 'ಪರಿಸರವನ್ನು ಉಳಿಸಿ, ಅಭಿವೃದ್ಧಿಯನ್ನು ನಡೆಸಿ' ಎಂಬ ನೆಲೆಯಿಂದ ವಿಶ್ಲೇಷಿಸುವುದು ಈ ಪ್ರಸ್ತಾವನೆಯ ಪ್ರಮುಖಾಂಶವಾಗಿರುತ್ತದೆ.

೧.೨ ಅಧ್ಯಯನದ ಉದ್ದೇಶ

ಈ ದಿನಮಾನಗಳಲ್ಲಿ ಜಾಗತಿಕ ನೆಲೆಯಲ್ಲಿ ಚರ್ಚೆಯಾಗುತ್ತಿರುವ ಪ್ರಮುಖ ವಿಷಯವಾಗಿದೆ ಪರಿಸರ ; ಪರಿಹಾರಗಳನ್ನು ಹುಡುಕಲಾರದಷ್ಟು ಸಂಕೀರ್ಣವಾಗಿವೆ, ಪರಿಸರದ ಸಮಸ್ಯೆಗಳು. ಸಮಸ್ಯೆಗಳ ಸಮಾನಾಂತರವಾಗಿ ನಡೆದಿವೆ ಪರಿಸರ ಚಳವಳಿಗಳು. ವಿವಿಧೋದ್ದೇಶ ಹಿತ ಸಾಧನೆಗಳಿಗಾಗಿ ನಡೆಯುತ್ತಿರುವ ಪರಿಸರ ಚಳವಳಿಗಳು ಪ್ರದೇಶ - ದೇಶ - ಕಾಲ - ಜನರ ಆಶಯಗಳಿಗೆ ಅನುಗುಣವಾಗಿ ವಿಭಿನ್ನತೆ ಹೊಂದಿವೆ. ಸಾಮಾಜಿಕ ನ್ಯಾಯದ ಪ್ರಶ್ನೆ ಒಂದು ಚಳವಳಿಯ ಹೋರಾಟದ ವಸ್ತುವಾದರೆ, ಪರಿಸರ ಮಾಲಿನ್ಯ ತಡೆ ಮತ್ತೊಂದು ಚಳವಳಿಯ ಕೂಗು. ಅನಾದಿಕಾಲದಿಂದ ನಮ್ಮೊಂದಿಗೆ ಇರುವ ಜ್ಞಾನ ಶಾಖೆಗಳಲ್ಲಿ ಒಂದಾಗಿರದ ಪರಿಸರವಾದ ಅಥವಾ ಸಿದ್ಧಾಂತಗಳು ಈಗಿನ ಕಾಲದ ಬಹುಚರ್ಚಿತ ವಿದ್ಯಮಾನಗಳಾಗಿವೆ. ಅಭಿವೃದ್ಧಿ ಪೂರಕ, ಅಭಿವೃದ್ಧಿ ಮಾರಕ ಎಂಬ ಎರಡು ಪ್ರಮುಖ ಗುಂಪುಗಳನ್ನು ಸೃಷ್ಟಿಸಿವೆ. ಅಭಿವೃದ್ಧಿಯೂ ಬೇಕು, ಪರಿಸರವೂ ಉಳಿಯಬೇಕು ಎನ್ನುವ ವಿಚಾರವಂತಿಕೆ ಹುಟ್ಟಿಕೊಂಡಿರುವುದು ಪರಿಸರ ಚಳವಳಿಯ ಇನ್ನೊಂದು ಮಹತ್ವದ ಭಾಗವಾಗಿದೆ. ಆರ್ಥಿಕವಾಗಿ ಮುಂದುವರಿದ ರಾಷ್ಟ್ರಗಳು ಮೊದಲು ಅಭಿವೃದ್ಧಿ ಆನಂತರ ಪರಿಸರ, ಆರ್ಥಿಕಾಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು ಅಭಿವೃದ್ಧಿ ಮತ್ತು ಪರಿಸರ, ಇಲ್ಲವೇ ಪರಿಸರ ಮತ್ತು ಅಭಿವೃದ್ಧಿ ಎಂಬ ಗೊಂದಲಗಳಲ್ಲಿರುವುದನ್ನು ಕಾಣಬಹುದು. ಇಂತಹ ಗೊಂದಲಗಳ ನಡುವೆ ಪರಿಸರ ಚಳವಳಿಗಳು ಹುಟ್ಟಿ ಬೆಳೆದು ಮಹತ್ವ ಪಡೆದುಕೊಂಡಿವೆ. ಹಣದಿಂದಲೋ, ದರ್ಪ - ದೌರ್ಜನ್ಯಗಳಿಂದಲೋ ಉತ್ತಮ ಪರಿಸರ ನಿರ್ಮಾಣ ಅಸಾಧ್ಯ ಎಂಬ ವೈಚಾರಿಕ ಪರಿಸರ ಪ್ರಜ್ಞೆಯನ್ನು ಸಾಮೂಹಿಕವಾಗಿಸುವಲ್ಲಿ ಪರಿಸರ ಚಳವಳಿಗಳು ಜ್ವಲಂತವಾಗಿವೆ. ಸಮಕಾಲೀನ ಅಗತ್ಯದ ಪ್ರಸ್ತುತ ಅಧ್ಯಯನವು 'ಪರಿಸರವನ್ನು ಉಳಿಸಿ ; ಅಭಿವೃದ್ಧಿಯನ್ನು ನಡೆಸಿ' ಎನ್ನುವ ಧ್ಯೇಯವನ್ನು ಹೊಂದಿದೆ. ಪ್ರಸ್ತುತ ಸ್ತ್ರೀವಾದ, ಮಾನವತಾವಾದ ಮುಂತಾದವುಗಳಿಗಿಂತಲೂ ಪರಿಸರವಾದವು ಪ್ರಬಲವಾಗಿದೆ. ಯಾವುದೇ ರಾಜಕೀಯ ಚಳವಳಿ ಅಥವಾ ಭಾಷೆ, ಗಡಿ ಸಮಸ್ಯೆ ಸಂಬಂಧದ ಚಳವಳಿಗಳಿಗಿಂತಲೂ ವಿಭಿನ್ನವಾಗಿದ್ದು, ನಮಗೆ ಸಂಬಂಧವೇ ಇಲ್ಲ ಎಂದು ಹೇಳಲಾಗದು. ಬಹು ಚರ್ಚಿತವಾಗಿರುವ ಮಹತ್ವಪೂರ್ಣವೆನಿಸಿರುವ ಪರಿಸರ ಚಳವಳಿಗಳ ಅಧ್ಯಯನದ ಅಗತ್ಯವಿದೆ.

ಪರಿಸರವೆಂದರೆ ಹಸಿರಾಗಿರುವ ಗಿಡಮರಗಳುಳ್ಳ ಸುಂದರ ಪ್ರಕೃತಿ ಎಂದಷ್ಟೇ ತಿಳಿಯಲಾಗಿತ್ತು. ಪರಿಸರದ ಕಲ್ಪನೆ ಇಂದು ವ್ಯಾಪಕವಾದುದಾಗಿದೆ. ಪರಿಸರವೆಂಬುದು ನಾವು ಪಡೆದಿರುವ ಬಳುವಳಿ, ಅದನ್ನು ಎಲ್ಲರೂ ಅನುಭವಿಸಿದರಷ್ಟೇ ಸಾಲದು, ಮುಂದಿನ ಪೀಳಿಗೆಗೆ ಕಾಯ್ದು ಕೊಡಬೇಕಾದುದು ಅನಿವಾರ್ಯವೆನಿಸಿದೆ. ಮನುಷ್ಯ ಮತ್ತು ಪ್ರಕೃತಿಯ ನಡುವೆ ಅವಿನಾಭಾವ ಸಂಬಂಧವಿದೆ. ಮನುಷ್ಯ ಮತ್ತು ಪ್ರಕೃತಿ ಬೇರ್ಪಟ್ಟರೆ ಜೀವಿಗಳ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದರಲ್ಲಿ ಅನುಮಾನ ಪಡಲು ಕಾರಣಗಳಿಲ್ಲ. ಜೀವ-ನಿರ್ಜೀವ, ಭೌತ-ಅಭೌತ, ನಿರ್ಮಿತ-ಸ್ವಾಭಾವಿಕ, ನಮ್ಮದು-ಅವರದು, ಸ್ವಂತದ್ದು-ಸಾರ್ವಜನಿಕ ಎನ್ನುವ ವಸ್ತು-ಸ್ಥಿತಿ-ಸಂದರ್ಭಗಳನ್ನು ಪರಿಸರವು ಒಳಗೊಂಡಿದೆ. ಪರಿಸರ ಅಧ್ಯಯನವು ನಿರ್ದಿಷ್ಟ ವ್ಯಾಪ್ತಿಗೆ ಒಳಪಡಿಸಲಾಗದ ಅಂತರ್‌ಶಿಸ್ತೀಯ ವಿಷಯವಾಗಿದೆ. ಮನುಕುಲದ ಬೇಕು ಬೇಡಿಕೆಗಳೆಲ್ಲವೂ ಪರಿಸರ ಸಂಬಂಧಿತವಾಗಿವೆ. ಮುಂದುವರಿದು, ಸಮಸ್ಯೆಗಳಿಗೂ, ಚಳವಳಿಗಳಿಗೂ ಕಾರಣವಾಗಿವೆ. ಈ ಸಂಶೋಧನಾಧ್ಯಯನವು ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳ ಮತ್ತು ಚಳವಳಿಗಳ ವಿವಿಧ ರೀತಿ-ನೀತಿಗಳನ್ನು ಅರ್ಥಪೂರ್ಣ ಮಾಹಿತಿಗಳೊಂದಿಗೆ ವಿಮರ್ಶಾತ್ಮಕವಾಗಿ ನೋಡುವುದಾಗಿದೆ.

ಈ ವಿಷಯಾಧ್ಯಯನವು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ಕುರಿತಾಗಿದೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದಷ್ಟು ಪರಿಸರ ಚಳವಳಿಗಳು ದೇಶದ ಬೇರೆ ಇನ್ನಾವ ಜಿಲ್ಲೆ - ಪ್ರದೇಶಗಳಲ್ಲಿ ನಡೆದಿಲ್ಲ ಎಂಬ ವಿಚಾರವು ಗಮನ ಸೆಳೆಯುವಂತಹುದಾಗಿದೆ. ಕರಾವಳಿ, ಪಶ್ಚಿಮ ಘಟ್ಟಗಳು, ಬಯಲು ಭೂಮಿಯಂತಹ ಮೂರು ಪ್ರಮುಖ ಭೌಗೋಳಿಕ ವಿಶಿಷ್ಟತೆಗಳಿಂದ ಕೂಡಿದ ಉತ್ತರ ಕನ್ನಡ ಜಿಲ್ಲೆಯು ನೈಸರ್ಗಿಕ ಸಂಪತ್ತಿನಿಂದ ಕೂಡಿದ್ದು ವಿರಳ ಜನಸಂಖ್ಯೆಯನ್ನು ಹೊಂದಿದೆ. ಸರ್ಕಾರ ಹಾಗೂ ವಲಸೆ ಬಂದ ಜನರಿಂದ ಆಕರ್ಷಿತವಾದ ಜಿಲ್ಲೆಯ ಪರಿಸರ ನಿರೀಕ್ಷಿಸಿದಂತೆಯೇ ಪರಿಸರ ಚಳವಳಿಗಳಿಗೆ ಕಾರಣವಾದುದು ಹೇಗೆ ? ಏಕೆ ? ಎಂಬ ಕುತೂಹಲದ ಪ್ರಶ್ನೆಗಳಿಗೆ ಅಧ್ಯಯನವು ಉತ್ತರ ಕಂಡುಕೊಳ್ಳುವತ್ತ ತೊಡಗಿಸಿಕೊಳ್ಳುತ್ತದೆ.

ಶತಮಾನಗಳ ಕಾಲದ ಪರಿಸರವು ಮೂರು ದಶಕಗಳಿಂದೀಚೆಗೆ ಚರ್ಚೆಯ ವಸ್ತುವಾಗಿದೆ. ಸಾಮಾನ್ಯರಿಬ್ಬರ ಚರ್ಚೆಯಿಂದ ಹಿಡಿದು ಜಾಗತಿಕವಾಗಿ ನಡೆಯುವ ಶೃಂಗಸಭೆಗಳಲ್ಲಿ ಬೇರೆ ಇನ್ನಾವ ವಿಷಯಗಳಿಗೂ ಭಾಗವಹಿಸದಷ್ಟು ದೇಶ - ವಿದೇಶಗಳ ನಾಯಕರು ಭಾಗವಹಿಸಿ ಚರ್ಚಿತವಾಗುತ್ತಿರುವ ವಿಷಯವಾಗಿದೆ. ಪರಿಸರ ಕಾಳಜಿ ಹಾಗೂ ಚಳವಳಿಯ ಮಹತ್ವ - ಅಗತ್ಯಗಳನ್ನು ತಿಳಿಯಲು ಇತ್ತೀಚೆಗೆ ನಡೆದ ಕೂಪನ್ ಹೇಗನ್ ಶೃಂಗಸಭೆಯನ್ನು ಉದಾಹರಿಸಬಹುದು. ಎರಡು ಮಹಾಯುದ್ಧಗಳ ಕಾಲದಲ್ಲಿಯೂ ವಿಶ್ವಶಾಂತಿ ಸ್ಥಾಪನೆಗಾಗಿ ಇಷ್ಟೊಂದು ಸಂಖ್ಯೆಯ ರಾಜತಾಂತ್ರಿಕ ನಾಯಕರುಗಳು ಭಾಗವಹಿಸಿರಲಿಲ್ಲವೆಂಬುದನ್ನು ಗಮನಿಸಬಹುದಾಗಿದೆ. ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳು ಮುಂದೊಡ್ಡಿದ ಮುಕ್ತ ಆರ್ಥಿಕನೀತಿ ಮುಂತಾದ ಪ್ರಕ್ರಿಯೆಗಳು ಬೃಹತ್ ಕೈಗಾರಿಕೆಗಳು ಮತ್ತು ಅಸಾಂಪ್ರದಾಯಿಕ ಕೃಷಿ ಚಟುವಟಿಕೆಗಳಿಗೆ ಕಾರಣವಾಗಿವೆ. ಅವುಗಳ ಮಾಲಿನ್ಯ ಮೂಲದಿಂದ ಆರಂಭವಾದ ಚರ್ಚೆ ಜಾಗತಿಕವನ್ನಾಗಿಸಿ ಪರಿಸರ ಬಿಕ್ಕಟ್ಟು ಮತ್ತು ಚಳವಳಿಗೆ ಕಾರಣವಾದವು. ಈ ಕುರಿತಾದ ಹಲವು ಸಂಬಂಧದ ಹಲವಾರು ಅಂಶಗಳ ನಡುವಿನ ಅಂತರ್ ಸಂಬಂಧಗಳ ಅಧ್ಯಯನ ಮಾಡಬೇಕಾಗಿದೆ.

ಪರಿಸರ ಚಳವಳಿಗಳು ಮೇಲ್ನೋಟಕ್ಕೆ ವ್ಯಾಪಕವೆನಿಸಿದರೂ ಕ್ರಮೇಣ ನಿರ್ದಿಷ್ಟ ವ್ಯಕ್ತಿ-ಸಂಘ-ಸಂಸ್ಥೆ-ಸರ್ಕಾರಗಳತ್ತ ಕೇಂದ್ರೀಕೃತಗೊಂಡು ಗಮನ ಸೆಳೆದರೂ ವಿಫಲವಾಗುತ್ತಿರುವುದೇ ಹೆಚ್ಚು. ಪರಿಸರ ಚಳವಳಿಗಳನ್ನು ಹಿಮ್ಮೆಟ್ಟಿಸುತ್ತಿರುವ, ವಿಫಲತೆಗೆ ಕಾರಣವಾಗಿರುವ ವ್ಯಕ್ತಿ-ಶಕ್ತಿ-ಅಂಶಗಳಾವುವು ? ಯಶಸ್ವಿಯಾಗಿರುವ ಪರಿಸರ ಚಳವಳಿಗಳ ವೈಜ್ಞಾನಿಕ ಸತ್ಯಗಳು ಯಾವುವು ? ಶೈಕ್ಷಣಿಕ ಮತ್ತು ಆರ್ಥಿಕ ಸ್ವಾವಲಂಬನೆ ಸಾಧಿಸಿರುವ ಜನರ ಹಾಗೂ ಪ್ರದೇಶಗಳ ಪರಿಸರ ಚಳವಳಿಗಳಿಗೂ ವ್ಯತ್ಯಾಸಗಳು ಏಕೆ ? ಪರಿಸರ ಚಳವಳಿಗಳಲ್ಲಿ ಸಾಮಾಜಿಕ ನಿಯಂತ್ರಣ ಹಾಗೂ ಬಂಡವಾಳಶಾಹಿ ನಿಯಂತ್ರಣಗಳ ಪಾತ್ರವೇನು ? ವೈಯಕ್ತಿಕ ಹಿತಾಸಕ್ತಿಗಳು ಪರಿಸರ ಚಳವಳಿಯಲ್ಲಿ ಹೇಗೆ ಕೆಲಸ ಮಾಡುತ್ತಿವೆ ಎಂಬುದನ್ನು ಗಮನಿಸಲೇಬೇಕಾಗಿದೆ. ಉದ್ದೇಶ, ಸಾಫಲ್ಯಗಳತ್ತ ಈ ಅಧ್ಯಯನವು ಮುಂದುವರಿಯುತ್ತದೆ.

೧.೩ ಅಧ್ಯಯನದ ವ್ಯಾಪ್ತಿ

ಸೌರಮಂಡಲದಲ್ಲಿನ ದಿನನಿತ್ಯದ ಅಲ್ಲೋಲ ಕಲ್ಲೋಲಗಳ ನಡುವೆ ಪ್ರಾಕೃತಿಕ ಪರಿಸರ ನಮಗೇನು ಕೊಟ್ಟಿದೆ ಎಂದು ಕೇಳುವುದಕ್ಕಿಂತ ಸಾಮಾಜಿಕ ಪರಿಸರದಲ್ಲಿರುವ ನಾವೇನನ್ನು ಕೊಟ್ಟಿದ್ದೇವೆ ಎಂಬುದನ್ನು ಕಂಡುಕೊಳ್ಳಲು ಪರಿಸರ ಚಳವಳಿಗಳ ಕುರಿತಾದ ಅಧ್ಯಯನ ಈಗಿನ ಅತ್ಯಂತ ಮಹತ್ವದ ವಿಷಯವಾಗಿದೆ. ಜಾಗತಿಕ ಮತ್ತು ರಾಷ್ಟ್ರ - ರಾಜ್ಯಗಳ

ಪರಿಸರ ಚಳವಳಿಗಳ ಸಮೀಕ್ಷೆಯ ಮೂಲಕ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ಜಾಗತಿಕವಾಗಿ ಏಕೆ ? ಹೇಗೆ ? ಗುರುತಿಸಲ್ಪಟ್ಟವು ಎಂಬುದನ್ನು ಅಧ್ಯಯನ ವ್ಯಾಪ್ತಿಗೊಳಪಡಿಸಿ ಪ್ರಸಕ್ತ ನಿಬಂಧವು ವಿಶ್ಲೇಷಿಸಿದೆ.

ಪರಿಸರ ಮತ್ತು ಅದರೊಂದಿಗಿನ ಚಟುವಟಿಕೆಗಳು ಯಾರೊಬ್ಬರದೂ ಆಗಿಲ್ಲದ, ನಿರ್ದಿಷ್ಟ ವ್ಯಾಪ್ತಿಗೆ ಒಳಪಡದ ನಿರಂತರ ಪ್ರಕ್ರಿಯೆಗಳಾಗಿವೆ. ಪರಿಸರದೊಂದಿಗಿನ ನಿರಂತರವಾದ ಮಾನವ ಸಂಬಂಧಗಳು ಅನೇಕ ಅವಘಡಗಳ ಸೃಷ್ಟಿಗೆ ಕಾರಣವಾಗಿವೆ ಎಂದು ಗುರುತಿಸಬಹುದು. ಅಂತಹವುಗಳನ್ನೆಲ್ಲಾ ಸಂಶೋಧನೆಗೆ ಒಳಪಡಿಸಿದಾಗ ಪರಿಸರ ಮತ್ತು ಸ್ವಾನುಭವವಾದ, ಪರಿಸರ ಮತ್ತು ಸಮಾಜವಾದ, ಪರಿಸರ ಮತ್ತು ಬಂಡವಾಳಶಾಹಿವಾದ, ಪರಿಸರ ಮತ್ತು ಅಭಿವೃದ್ಧಿವಾದ ಮುಂತಾದ ಚರ್ಚೆಗಳು ಹುಟ್ಟಿಕೊಂಡಿವೆ ಎಂಬುದು ಸ್ಪಷ್ಟವಾಗುತ್ತದೆ. ಕಾಲದ ವ್ಯಾಪ್ತಿಯಲ್ಲಿ ಹಿಡಿದಿಟ್ಟು ಹೇಳಲಾಗದ ವಿಸ್ಮಯ ಪರಿಸರ. ಆದರೆ ದಶಕಗಳಷ್ಟು ಹಳೆಯದಾದ ಪರಿಸರ ವಾದಗಳ ಕುರಿತು ಇದೇ ಸತ್ಯವೆಂಬ ತೀರ್ಮಾನಕ್ಕೆ ಬಂದಿರುವ ಬರವಣಿಗೆಗಳಾಗಲಿ, ಅಧ್ಯಯನಗಳಾಗಲಿ ನಡೆದಿರುವುದು ಕಡಿಮೆಯೆಂದೇ ಹೇಳಬಹುದು. ದೊರೆಯಬಹುದಾದ ಚರ್ಚೆಗಳು, ಅಧ್ಯಯನಗಳು, ಬರವಣಿಗೆಗಳು, ಸಿದ್ಧಾಂತಗಳು, ತೌಲನಿಕ ಅಧ್ಯಯನ, ಕ್ಷೇತ್ರಕಾರ್ಯ, ಸ್ವಾನುಭವ, ಆನ್ವಯಿಕತೆ ಮುಂತಾದ ಪರಿಕರಗಳನ್ನು ಸಮರ್ಪಕವಾಗಿ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ. 'ಪರಿಸರ ಪರವಾದ, ಅಭಿವೃದ್ಧಿ ಪೂರಕ'ವಾದ ವಿಧಿವಿಧಾನಗಳ ಪರವಾಗಿ ಈ ಅಧ್ಯಯನವು ಸಾಗುತ್ತದೆ ಎಂಬುದನ್ನು ಮತ್ತೊಮ್ಮೆ ಸ್ಪಷ್ಟವಾಗಿರಿಸಿಕೊಳ್ಳಲಾಗಿದೆ.

ಪರಿಸರದೊಂದಿಗಿನ ಮಾನವ ಸಂಬಂಧಗಳು ವಿರುದ್ಧ ದಿಕ್ಕಿನಲ್ಲಿ ಸಾಗುತ್ತಿವೆ ಎಂಬುದನ್ನು ಸ್ಪಷ್ಟವಾಗಿ ಗುರುತಿಸಿಕೊಂಡು, ಪರವಾಗಿ ಸಾಗಿದರೆ ಆಗಬಹುದಾದ ಲಾಭಗಳೇನು ? ವಿರುದ್ಧವಾಗಿಯೇ ಮುಂದುವರಿದರೆ ಆಗುವ ಅನಾಹುತಗಳೇನು ? ಎಂಬ ಪ್ರಶ್ನೆಗಳಿಗೆ ಈ ಅಧ್ಯಯನವು 'ನಡೆದಿರುವ ಪರಿಸರ ಚಳವಳಿಗಳೊಳಗೆ' ಉತ್ತರ ಕಂಡುಕೊಳ್ಳಲು ಸಹಾಯಕವಾಗಬಹುದು. ಪರಿಸರ ಚಳವಳಿಗಳಲ್ಲಿ ಭಾಗವಹಿಸಿದವರ ಹಿತಾಸಕ್ತಿಗಳು, ಪರವಾಗಿದ್ದವರ ಹಿತಾಸಕ್ತಿಗಳು, ಸರ್ಕಾರದ ಧೋರಣೆಗಳು, ಪರಿಸರ ಸಂಬಂಧೀ ಕಾಯಿದೆಗಳು ಯಾವ ನಿರ್ಣಯಕ್ಕೆ ಬಂದಿವೆ, ಬರಲಾಗದ್ದಕ್ಕೆ ಕಾರಣಗಳೇನು? ಎಂಬುದನ್ನು ಕಂಡುಕೊಳ್ಳಲು ಪ್ರಯೋಜನವಾಗುತ್ತದೆ. ಯಶಸ್ವಿಯಾಗಿವೆ ಎಂದು ಗುರುತಿಸಿಕೊಂಡಿರುವ ಪರಿಸರ ಚಳವಳಿಗಳು ಎಷ್ಟರಮಟ್ಟಿಗೆ ಪ್ರಭುತ್ವ ಹಿತಾಸಕ್ತಿಯ ಹೊರತಾಗಿಯೂ ಪರಿಸರ ಸಂಬಂಧಿ ಲಾಭನಷ್ಟಗಳಿಗೆ ಪೂರಕವಾಗಿವೆ ಎಂಬುದರ ಅಧ್ಯಯನವು ಅತ್ಯಂತ ಪ್ರಮುಖವಾದುದಾಗಿದೆ.

ಪ್ರಸಕ್ತ ಅಧ್ಯಯನವು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳೆಲ್ಲವುಗಳ ಪೂರ್ಣಪ್ರಮಾಣದ ವಿಷಯ ವಿಶ್ಲೇಷಣೆಗಳನ್ನೊಳಗೊಂಡಿದೆ. ಬ್ರಿಟಿಷ್ ವಸಾಹತು ಕಾಲದ ಕಾಯ್ದಿಟ್ಟ ಅರಣ್ಯದ ಕಟ್ಟಿಗೆ ಚಳವಳಿಯಿಂದ ಹಿಡಿದು ಇತ್ತೀಚೆಗಿನ ತದಡಿ ಹಾಗೂ ಹಣಕೋಣಗಳ ಉಷ್ಣವಿದ್ಯುತ್‌ಸ್ಥಾವರ ಸ್ಥಾಪನೆ ವಿರುದ್ಧದ ಹೋರಾಟಗಳವರೆಗೆ ಗೊತ್ತುಪಡಿಸಿಕೊಂಡದ್ದಾಗಿದೆ. ಭಾರತದ, ಕರ್ನಾಟಕದ ವಿವಿಧೆಡೆಯಲ್ಲಿ ನಡೆದ ಪರಿಸರ ಚಳವಳಿಗಳಿಗಿಂತ ವಿಭಿನ್ನವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಜರುಗಿ ಕೆಲವು ಯಶಸ್ವಿಯಾಗಿ, ಕೆಲವು ವಿಫಲವಾಗಿ ಮತ್ತೆ ಕೆಲವು ಮುಂದುವರಿಯುತ್ತಲೂ ಇವೆ. ಹೀಗೆ ಇವೆಲ್ಲವುಗಳನ್ನು 'ನೆಲಸಂಬಂಧಿ ಮತ್ತು ಜಲಸಂಬಂಧಿ' ಎಂಬ ಎರಡು ಪ್ರಮುಖ ಭಾಗಗಳಲ್ಲಿ ಪ್ರಸ್ತಾಪಿಸಿ, ಚರ್ಚಿಸಿ ಅಧ್ಯಯನಕ್ಕೊಳಪಡಿಸಲಾಗಿದೆ.

ಪ್ರಸ್ತುತ ಅಧ್ಯಯನವು ಪರಿಸರ ಚಳವಳಿಗಳ ಇತಿಹಾಸವನ್ನು ಪ್ರಮುಖವಾಗಿ ಪರಿಗಣಿಸಿದೆ. ಈ ಸಂದರ್ಭದ ವ್ಯಕ್ತಿಗತ - ಸಂಘ ಸಂಸ್ಥೆಗಳ ಖಾಸಗಿ ವಿವರಗಳ ಗೋಜಿಗೆ ಹೋಗಿರುವುದಿಲ್ಲ. ಅಧ್ಯಯನದ ನಿರ್ಣಯಗಳಿಗೆ ಪೂರಕವಾಗಿ ನಿಲ್ಲುವ ವಿವರಣೆಗಳನ್ನಷ್ಟೇ ಈ ಸಂಬಂಧವಾಗಿ ಪರಿಗಣಿಸಲಾಗಿದೆ.

೧.೪ ಅಧ್ಯಯನದ ಸ್ವರೂಪ

'ಪರಿಸರ ಚಳವಳಿಗಳು' ಈ ಅಧ್ಯಯನ ವಿಷಯವು ಜೀವವೈವಿಧ್ಯದ ಮೇಲೆ ಉಂಟಾದ ಪರ-ವಿರೋಧಿ ಪರಿಣಾಮಗಳನ್ನು ಎದುರಿಸಿದ ಘಟನೆಗಳ ಮೊತ್ತವಾಗಿದೆ. ನಿರ್ದಿಷ್ಟಕಾಲ ಮತ್ತು ವ್ಯಾಪ್ತಿಯೊಳಗೆ ಸೀಮಿತಗೊಳಿಸಿ ನೋಡಲು ಸಾಧ್ಯವೆನಿಸದಿರುವ ಪರಿಸರ ಚಳವಳಿಗಳು ಈಗಲೂ ನಿರಂತರವಾಗಿ ನಡೆಯುತ್ತಿವೆ. ಯಶಸ್ವಿಯಾಗಿದೆ ಎಂದು ಗುರುತಿಸಿಕೊಂಡಿರುವ ಉತ್ತರ ಕನ್ನಡ ಜಿಲ್ಲೆಯ ಬೇಡ್ತಿ ಚಳವಳಿ ನಿಂತಿದೆ, ಮುಗಿದಿಲ್ಲ. ಸರ್ಕಾರವು ಬೇಡ್ತಿ ಜಲವಿದ್ಯುತ್ ಯೋಜನೆಯನ್ನು ಕೈಗೆತ್ತಿಕೊಳ್ಳಲು ಮತ್ತೆ ಮತ್ತೆ ಪ್ರಯತ್ನಿಸುತ್ತಿರುವುದನ್ನು ಕಾಣಬಹುದು. ಕೈಗಾ ಅಣುವಿದ್ಯುತ್ ಸ್ಥಾವರ ಸ್ಥಾಪನೆಯ ನಂತರವೂ ಚಳವಳಿಯ ಕೂಗು ನಿಂತಿಲ್ಲ. ಹೀಗೆ ಸಂಶೋಧನೆಯ ವ್ಯಾಪ್ತಿಗೆ ತಕ್ಕುದಾದ ಎಲ್ಲಾ ಪರಿಸರ ಚಳವಳಿಗಳನ್ನು ಒಟ್ಟಾಗಿ ನೋಡಬಹುದಾದರೂ ಆಗಾಗ್ಗೆ ಅವುಗಳನ್ನು ವಿವಿಧ ಸೈದ್ಧಾಂತಿಕ ನೆಲೆಗಳಲ್ಲಿ ವಿಶ್ಲೇಷಿಸಬಹುದಾಗಿದೆ. ತಾತ್ವಿಕ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ಅಧ್ಯಯನದ ಚೌಕಟ್ಟಿಗೆ ಒಳಪಡಿಸಲಾಗಿದೆ. ಈ ಜಿಲ್ಲೆಯಲ್ಲಿ ಪರಿಸರ ಚಳವಳಿಗಳು ಬ್ರಿಟಿಷ್ ಆಳ್ವಿಕೆಯ ಕಾಲದ ಅರಣ್ಯಸಂಬಂಧಿ ಹೋರಾಟಗಳಿಂದ ಆರಂಭವಾಗಿ, ಇಪ್ಪತ್ತೊಂದನೆಯ ಶತಮಾನದ ಆರಂಭದ ದಶಕದಲ್ಲಿಯೂ ನಡೆದು ಮುಂದುವರಿದಿವೆ. ಕಟ್ಟಿಗೆ ಚಳವಳಿಯಿಂದ ಉಷ್ಣವಿದ್ಯುತ್ ಸ್ಥಾವರಗಳ ವಿರೋಧಿ ಚಳವಳಿಗಳ ನಡುವಿನ ಸುಮಾರು ಎಂಟು ದಶಕಗಳ ಕಾಲಮಿತಿಯೊಳಗಿನ ಎಲ್ಲ ಪ್ರಮುಖ ಪರಿಸರ ಚಳವಳಿಗಳನ್ನು ಪ್ರಮುಖವಾಗಿ ಎರಡು ವಿಧಗಳಲ್ಲಿ ವಿಭಾಗಿಸಿಕೊಂಡು ಅಧ್ಯಯನವು ಸಾಗುತ್ತದೆ. ವಿಭಾಗಿಸಿಕೊಂಡಿರುವ ವಿವರಣೆಯನ್ನು ಸಂಬಂಧಪಟ್ಟ ಅಧ್ಯಾಯಗಳಲ್ಲಿ ನೀಡಲಾಗಿದೆ.

ಪರಿಸರದ ಇತಿಹಾಸವೂ ಇತಿಹಾಸದ ಸಂಶೋಧನೆಯ ವ್ಯಾಪ್ತಿಗೆ ಸೇರಿರುವುದಾಗಿದೆ. ಗತಕಾಲದ ಪರಿಸರ ಸಂಬಂಧಿ ಹೋರಾಟಗಳು ವರ್ತಮಾನ ಕಾಲದಲ್ಲಿಯೂ ಮುಂದುವರಿದು ಭವಿಷ್ಯದಲ್ಲಿಯೂ ಉತ್ತರ ಕಂಡುಕೊಳ್ಳುವಲ್ಲಿ ಅನುಮಾನಗಳನ್ನು ವ್ಯಕ್ತಪಡಿಸಬಹುದಾಗಿರುವುದರಿಂದ ಅಧ್ಯಯನ ಮಾಡಲು ಇತಿಹಾಸ ಸಂಶೋಧಕನಿಗೆ ಅರ್ಹತೆಯನ್ನು ತಂದು ಕೊಡುತ್ತವೆ. ಪರಿಸರ ಚಳವಳಿಗಳನ್ನು ಕುರಿತು ಅಧ್ಯಯನವನ್ನು ಕೈಗೊಳ್ಳುವಾಗ ಚರಿತ್ರೆಯೊಳಗಿನ ಇತರೆ ರಾಜಕೀಯ ಹಾಗೂ ಸಾಮಾಜಿಕ ಚಳವಳಿಗಳು ಉಂಟುಮಾಡಿರುವ ಪ್ರಭಾವಗಳನ್ನು ಗಮನಿಸಲೇಬೇಕಾಗುತ್ತದೆ. ಉತ್ತರ ಕನ್ನಡ ಜಿಲ್ಲೆಯ ಸಿರಸಿ, ಸಿದ್ದಾಪುರಗಳಲ್ಲಿ ನಡೆದ ಸ್ವದೇಶಿ ಹಾಗೂ ಕರನಿರಾಕರಣೆ ಮತ್ತು ಅಂಕೋಲದಲ್ಲಿ ನಡೆದ ಉಪ್ಪಿನ ಸತ್ಯಾಗ್ರಹ ಚಳವಳಿಗಳು ಪ್ರಭುತ್ವದ ಎದುರು ನ್ಯಾಯಪರತೆಗಾಗಿ ನಡೆದು ಜನರಲ್ಲಿ ಸಾಮೂಹಿಕ ಪ್ರಜ್ಞೆ ಹಾಗೂ ಜವಾಬ್ದಾರಿಗಳನ್ನು ಹೆಚ್ಚಿಸಿದವು. ಹಾಗೆಯೇ ಜನರು ಪರಿಸರ ಸಂಬಂಧಿ ಚಳವಳಿಗಳಲ್ಲಿಯೂ ತೊಡಗಿಸಿಕೊಳ್ಳಲು ಪ್ರಭಾವಿತವಾಗಿರುವುದನ್ನು ಕಾಣಬಹುದಾಗಿದೆ.

ಮಹಾಪ್ರಬಂಧದ ವ್ಯಾಪ್ತಿಯಲ್ಲಿ ಅಂತರ್‌ಶಿಸ್ತೀಯ ವಿಷಯವಾಗಿರುವ ಪರಿಸರ ಚಳವಳಿಗಳನ್ನು ಕಾಲಾನುಕ್ರಮದಲ್ಲಿ

ಮತ್ತು ಪ್ರದೇಶವಾರು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗುವುದು. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ಏಕರೂಪವಾಗಿಲ್ಲ. ಮಹಾಪ್ರಬಂಧವು ಈ ಅಂಶವನ್ನು ಅಧ್ಯಯನ ಕಕ್ಷೆಗೆ ತಂದುಕೊಂಡಿದೆ. ಇದನ್ನು ಸಂಶೋಧನಾ ವಿಧಾನಗಳಿಂದ ಕಂಡುಕೊಳ್ಳಲಾಗುತ್ತದೆ. ಕೆಲವೊಮ್ಮೆ ಪರಿಸರ ಚಳವಳಿಗಳನ್ನು ವಿಶ್ಲೇಷಣಾ ವಿಧಾನದಡಿಯಲ್ಲಿ ನೋಡಬೇಕಾಗುತ್ತದೆ. ಸಾಂದರ್ಭಿಕವಾಗಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ಇತರ ಜಿಲ್ಲೆಗಳಲ್ಲಿ ನಡೆದ ಚಳವಳಿಗಳೊಂದಿಗೆ ತೌಲನಿಕವಾಗಿ ನೋಡುವುದಾಗಿದೆ. ಈ ಅಧ್ಯಯನ ವಿಧಾನಗಳನ್ನು ಅನುಸರಿಸಿಯೂ ದ್ವಂದ್ವಗಳಿಗೆ ಕಾರಣವಾದ ಸಂದರ್ಭಗಳಲ್ಲಿ ವಿವರಣೆಗಳು, ಉದಾಹರಣೆಗಳನ್ನು ಒದಗಿಸಿ ಚರ್ಚಿಸಲಾಗುವುದು. ದತ್ತಾಂಶಗಳಿಂದ ಪಡೆದುಕೊಂಡ ಸಂಗತಿಗಳನ್ನು ಸೈದ್ಧಾಂತೀಕರಿಸುವತ್ತ ಪ್ರಸ್ತುತ ಅಧ್ಯಯನವು ಗಮನ ಕೊಟ್ಟಿರುತ್ತದೆ. ಪಡೆದುಕೊಂಡ ಮಾಹಿತಿಗಳನ್ನು ಹಾಗಾಗಿಯೇ ಉಲ್ಲೇಖಿಸಿ ಅವುಗಳಿಂದ ಹೊರಡುವ ಹೊಳಹುಗಳನ್ನು ಸಿದ್ಧಾಂತೀಕರಿಸುವತ್ತ ಪ್ರಯತ್ನಪಟ್ಟಿದೆ.

ಪರಿಸರಾಧ್ಯಯನ ಸಾಹಿತ್ಯದ ವಿಚಾರಕ್ಕೆ ಬರುವುದಾದರೆ, 'ಪರಿಸರ ಅಧ್ಯಯನ ಸಾಹಿತ್ಯ'ವು 'ಪರಿಸರ ಚಳವಳಿಗಳು' ಎಂಬ ವಿಷಯ ಸಂಬಂಧಿತವಾಗಿ ಬರೆಯಲ್ಪಟ್ಟಿರುವುದು ಕಡಿಮೆಯೆಂದೇ ಹೇಳಬಹುದಾಗಿದೆ. ಆದರೆ ಪರಿಸರವಿಜ್ಞಾನ ಸಂಬಂಧಿತ ಸಾಹಿತ್ಯವು ವಿಫಲವಾಗಿದೆ. ಈಗಿನ ಪ್ರಮುಖ ಅಧ್ಯಯನ ಶಿಸ್ತುಗಳಲ್ಲಿ ಒಂದಾಗಿರುವ ಪರಿಸರ ವಿಜ್ಞಾನವು ಮಾಲಿನ್ಯರಹಿತವಾದ ಪರಿಸರ ನಿರ್ಮಾಣದ ಕುರಿತು ಪ್ರಜ್ಞೆ ಮೂಡಿಸುವಲ್ಲಿ ಮುಂದಾಗಿದ್ದು, ರಾಜ್ಯ-ರಾಷ್ಟ್ರ-ಅಂತಾರಾಷ್ಟ್ರೀಯವಾಗಿ ಸಂಬಂಧಪಟ್ಟ ಸಾಹಿತ್ಯವು ವಿವಿಧ ಭಾಷೆಗಳಲ್ಲಿ ಬರೆಯಲ್ಪಟ್ಟಿದೆ. ಅಂತಹವುಗಳೊಳಗೇ ಪರಿಸರ ಚಳವಳಿಗಳನ್ನು ಕುರಿತ ವಿಷಯ ವಿವರಣೆಗಳು ದೊರೆಯುತ್ತವೆ.

ಜಾಗತಿಕ ನೆಲೆಯಲ್ಲಿ ಪ್ರಕಟವಾಗಿರುವ ಪರಿಸರ ಅಧ್ಯಯನ ಸಾಹಿತ್ಯದಲ್ಲಿ ಅಮೆರಿಕಾದ ರಾಖೆಲ್ ಕಾರ್ಸನ್ ಅವರ 'ಸೈಲೆಂಟ್ ಸ್ಪ್ರಿಂಗ್' ಕೃತಿಯು ಪರಿಸರಾಂದೋಲನದ 'ಬೈಬಲ್' ಎನಿಸಿಕೊಂಡಿದೆ.[೭] ಅದರಲ್ಲಿ ಆಕೆಯು ಅಮೆರಿಕನ್ನರ ಪರಿಸರ ಪ್ರಜ್ಞೆ ಸಹಿತವಾದ ಹೋರಾಟವನ್ನು ವಿವರಿಸಿದ್ದಾರೆ. ಲಂಡನ್ನಿನ ಬಾರ್ಬರಾವಾರ್ಡ್ ಮತ್ತು ರೆನೆಡ್ಯೂಬಾಸ್ ಅವರ 'ಓನ್ಲಿ ಒನ್ ಅರ್ಥ್' ಸ್ಟಾಕ್ ಹೋಂನಲ್ಲಿ ನಡೆದ ಸಂಯುಕ್ತ ರಾಷ್ಟ್ರಗಳ ಪ್ರಥಮ ಪರಿಸರ ಸಮಾವೇಶಕ್ಕಾಗಿ ಬರೆದ ಪುಸ್ತಕವಾಗಿದ್ದು ಎಲ್ಲರ ಗಮನ ಸೆಳೆಯಿತು.[೮]

ರಾಷ್ಟ್ರೀಯ ನೆಲೆಯಲ್ಲಿ ಪ್ರಕಟವಾಗಿರುವ ರಾಮಚಂದ್ರ ಗುಹಾ ಅವರ 'ಜಾಗತಿಕ ಪರಿಸರ ಚರಿತ್ರೆ'ಯು ಅಂತಾರಾಷ್ಟ್ರೀಯ ಮತ್ತು ರಾಷ್ಟ್ರೀಯ ಪರಿಸರಾಂದೋಲನಗಳ ತೌಲನಿಕ ಅಧ್ಯಯನವಾಗಿದೆ. ಮಾಧವ ಗಾಡ್ಗೀಳ ಮತ್ತು ರಾಮಚಂದ್ರ ಗುಹಾ ಅವರ 'ಇಕಾಲಜಿ ಅಂಡ್ ಈಕ್ವಿಟಿ' ಕೃತಿಯು ಪರಿಸರವಾದಗಳ ವಿಮರ್ಶಾತ್ಮಕ ಅಧ್ಯಯನವಾಗಿರುತ್ತದೆ. ಈ ನಿಟ್ಟಿನಲ್ಲಿ ಕೆ. ಶಿವರಾಮ ಕಾರಂತರ 'ಭಾರತದ ಪರಿಸರದ ಪರಿಸ್ಥಿತಿ' ಮತ್ತು ಎನ್.ಆರ್. ರಾವ್ ಅವರ 'ಪರಿಸರ ಮತ್ತು ಅಭಿವೃದ್ಧಿ' ಕೃತಿಗಳು ಭಾರತದ ಪರಿಸರ ಪರಿಸ್ಥಿತಿಗಳನ್ನು ಕೂಲಂಕಷವಾಗಿ ವಿವರಿಸಿವೆ. ವಂದನಾಶಿವ ಅವರ 'ಬತ್ತದ ಚಿಲುಮೆ', ಟಿ.ಎಸ್. ವಿವೇಕಾನಂದರ 'ಭೂಮಿಗೀತೆ' ಎಂಬವು ಪರಿಸರವಾದದ ಇತರ ಕೃತಿಗಳು.

ಕರ್ನಾಟಕದ ಹಾಗೂ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಕುರಿತಾಗಿ ನಾಗೇಶ್ ಹೆಗಡೆಯವರ 'ಇರುವುದೊಂದೇ ಭೂಮಿ', ಕೆ. ಮೋಹನ್‌ಕೃಷ್ಣ ರೈ ಅವರ 'ಪರಿಸರ ಚಳವಳಿಗಳು' ಭಾರತಿಭಟ್ ಅವರ 'ಬೇಡ್ತಿ ಚಳವಳಿ ಸಾಗಿ ಬಂದ ದಾರಿ' ಇವುಗಳು ಪರಿಸರವಾದಗಳ ಹಿನ್ನೆಲೆಯಲ್ಲಿ ನೇರವಾಗಿ ಪರಿಸರ ಚಳವಳಿಗಳನ್ನು ಕುರಿತೇ ವಿವರಿಸುತ್ತವೆ. ಹೀಗೆ ನೂರಾರು ಕೃತಿಗಳೆನ್ನುವ ಬದಲಾಗಿ ಹತ್ತಾರು ಕೃತಿಗಳು, ಲೇಖನಗಳು, ಜಾಲತಾಣ ಹಾಗೂ ವೆಬ್‌ಬ್ಲಾಗುಗಳೇ ಮುಂತಾಗಿ ಪರಿಸರ ಚಳವಳಿಗಳನ್ನು ಕುರಿತು ಬರೆದು ಪ್ರಕಟಿಸಿರುವ ಸಾಹಿತ್ಯಾವಲೋಕನದೊಂದಿಗೆ ಪರಿಸರ ಸಂಬಂಧಿತವಾಗಿ ಲಭ್ಯವಾಗಿರುವ ಇತರೆ ಸಾಹಿತ್ಯವನ್ನೂ ಗಮನಿಸಬಹುದಾಗಿದೆ. ಗೆಜೆಟಿಯರ್‌ಗಳು, ಫ್ರಾನ್ಸಿಸ್ ಬುಕಾನಿನ್‌ನ ಪ್ರಯಾಣದ ವರದಿಗಳು, ಅರಣ್ಯ ಸಂರಕ್ಷಣಾ ಕಾನೂನುಗಳು, ಚಳವಳಿಗಳ ಕಾಲದ ಘೋಷಣೆಗಳು, ಪತ್ರಿಕಾವರದಿಗಳು ಹೀಗೆ... ಇತರ ಸಾಹಿತ್ಯ ಪ್ರಕಾರಗಳು ಚಳವಳಿಗಳ ಅಧ್ಯಯನಕ್ಕೆ ಆಕರಗಳಾಗಿವೆ.

ಗಮನಾರ್ಹ ಅಂಶವೆಂದರೆ ಅಮೆರಿಕಾದಲ್ಲಿ ರಾಖೆಲ್ ಕಾರ್ಸನ್ ಅವರ 'ಸೈಲೆಂಟ್ ಸ್ಪ್ರಿಂಗ್' ಕೃತಿಯು ನೇರವಾಗಿ ಪರಿಸರಾಂದೋಲನಗಳಿಗೆ ಪ್ರೇರಣೆಯಾದಂತೆ, ಭಾರತ ಅಥವಾ ಕರ್ನಾಟಕದಲ್ಲಿ ಪರಿಸರ ಸಂಬಂಧಿತ ಕೃತಿಯೊಂದು ಪ್ರಕಟಗೊಂಡಿದ್ದರಿಂದಲೇ ಪರಿಸರ ಚಳವಳಿಯೊಂದು ನಡೆಯಿತೆಂದು ಹೇಳಬಹುದಾದ ಉದಾಹರಣೆಗಳಿಲ್ಲ. ಆದರೆ ಪರಿಸರ ಚಳವಳಿಗಳು ನಡೆದ ನಂತರದಲ್ಲಿ ನಾಲ್ಕಾರು ಕೃತಿಗಳು ಪ್ರಕಟಗೊಳ್ಳಲು ಪ್ರೇರಣೆಯಾದುದನ್ನು ಗಮನಿಸಬಹುದಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ ನಡೆದ ಪರಿಸರ ಚಳವಳಿಗಳ ಸಂಬಂಧವಾಗಿಯೇ ಪ್ರಕಟವಾದ ಕೆ. ಮೋಹನ್‌ಕೃಷ್ಣ ರೈ ಅವರ 'ಪರಿಸರ ಚಳವಳಿಗಳು', ನಾಗೇಶ್‌ಹೆಗಡೆ ಅವರ 'ಇರುವುದೊಂದೇ ಭೂಮಿ' (ವಿವಿಧ ಚಳವಳಿಗಳನ್ನೇ ದಾಖಲಿಸಿರುವ ಕೃತಿ), ಭಾರತಿ ಭಟ್ ಅವರ 'ಬೇಡ್ತಿ ಚಳವಳಿ ನಡೆದು ಬಂದ ದಾರಿ' ಪ್ರಮುಖವಾದವುಗಳಾಗಿವೆ. ಮುಂದಿನ ಅಧ್ಯಾಯದ ಪರಿಸರ ಚಳವಳಿಗಳಿಗೆ 'ಪ್ರೇರಕ ಅಂಶಗಳು' ಎಂಬ ಶೀರ್ಷಿಕೆಯಡಿಯಲ್ಲಿ ಪರಿಸರಸಂಬಂಧಿ ಸಾಹಿತ್ಯ ಕೃತಿಗಳ ಕುರಿತು ವಿವರಿಸಲಾಗಿದೆ.

ಈ ಅಧ್ಯಯನವು ಪ್ರಮುಖವಾಗಿ ಆರು ಅಧ್ಯಾಯಗಳನ್ನು ಒಳಗೊಂಡಿರುತ್ತದೆ. ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಸ್ವರೂಪ ಕುರಿತಾಗಿದೆ. ಮೊದಲಿಗೆ ಪ್ರಸ್ತಾವನೆಯು ಪರಿಸರ, ಪರಿಸರ ವಿಜ್ಞಾನದ ಮೂಲಾರ್ಥಗಳನ್ನು, ಪರಿಸರದ ಇತಿಹಾಸ ಮತ್ತು ಮಹತ್ವವನ್ನು ಹೇಳುತ್ತಾ, ಪರಿಸರ ಚಳವಳಿಗಳತ್ತ ಅಧ್ಯಯನ ಸಾಗುವುದರ ಕುರಿತು ಹೇಳಿಕೊಂಡಿದೆ. ಯಾವುದೇ ಅಧ್ಯಯನವು ಶಿಸ್ತು ಮತ್ತು ಚೌಕಟ್ಟಿಗೊಳಪಟ್ಟಿರಬೇಕೆಂಬುದನ್ನು ಗಮನಿಸಿ, ಈ ಅಧ್ಯಯನದ ಉದ್ದೇಶ, ವ್ಯಾಪ್ತಿ ಹಾಗೂ ಸ್ವರೂಪಗಳನ್ನು ವಿವರಿಸಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ಪರಿಸರ ಚಳವಳಿಗಳ ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕತೆಗಳ ವಿವರಣೆಗಳಿರುತ್ತವೆ. ಉಪಶೀರ್ಷಿಕೆಗಳಡಿಯಲ್ಲಿ ಪರಿಸರ ಚಳವಳಿಗೆ ಪ್ರೇರಕ ಅಂಶಗಳು, ಅಂತಾರಾಷ್ಟ್ರೀಯ, ಭಾರತೀಯ ಹಾಗೂ ಕರ್ನಾಟಕದಲ್ಲಿಯ ಪರಿಸರ ಚಳವಳಿಗಳ ಸಂಕ್ಷಿಪ್ತ ಅಧ್ಯಯನವನ್ನು ಪೂರಕವಾಗಿ ನೋಡಲಾಗಿದೆ. ಅಂತಾರಾಷ್ಟ್ರೀಯ ಮಟ್ಟದ ಪರಿಸರ ಚಳವಳಿಗಳು ದೇಶವನ್ನಾಳುವ ರಾಜಕೀಯ ಪಕ್ಷ ಮತ್ತು ಮುಖಂಡರು ಪರಿಸರ ಪೂರಕ ಏನೇನು ಕೆಲಸಗಳನ್ನು ಮಾಡುತ್ತೇವೆ ಎಂಬುದನ್ನು ಕಡ್ಡಾಯವಾಗಿ ತಮ್ಮ ಪ್ರಣಾಳಿಕೆಯಲ್ಲಿ ಪ್ರಕಟಿಸುವಂತೆ ಮಾಡಿವೆ.[೬] ಅದರಂತೆ ಜರ್ಮನಿಯಲ್ಲಿ ಗ್ರೀನ್‌ಪಾರ್ಟಿಯ (ಹಸಿರುಪಕ್ಷ) ಚಟುವಟಿಕೆಗಳನ್ನು ಉದಾಹರಿಸಬಹುದು. ಭಾರತದ ಪರಿಸರ

ಚಳವಳಿಗಳಲ್ಲಿ ಮುಖ್ಯವಾದ 'ಚಿಪ್ಕೋ' ಚಳವಳಿ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ 'ಅಪ್ಪಿಕೋ' ಚಳವಳಿಗೆ ಪ್ರೇರಕವಾಯಿತು. ಕರ್ನಾಟಕದ ಇತರ ಜಿಲ್ಲೆಗಳಲ್ಲಿ ನಡೆದ ಪರಿಸರ ಚಳವಳಿಗಳು ಕಡಿಮೆ ಎನಿಸಿದರೂ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳೊಂದಿಗೆ ಬೇರೆ ಬೇರೆ ರೀತಿಯ ಸಂಬಂಧಗಳನ್ನು ಹೊಂದಿರುತ್ತವೆ. ಮಹಾಪ್ರಬಂಧದ ವಿಷಯಕ್ಕೆ ಪೋಷಕವಾಗಿ ಈ ವಿಷಯಗಳ ಸಮೀಕ್ಷೆ ಅಗತ್ಯವಾಗಿದೆ.

ಮೂರನೆಯ ಅಧ್ಯಾಯವು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳಿಗೆ ಪೂರಕವಾಗಿರುವ ಭೌಗೋಳಿಕ ಲಕ್ಷಣಗಳನ್ನು ಒಳಗೊಂಡಿರುತ್ತವೆ. ಇತಿಹಾಸವನ್ನು ಅರಿಯಲು ಭೂಗೋಳ ಜ್ಞಾನವು ಅತ್ಯಗತ್ಯವಾಗಿದೆ. ಉಪಶೀರ್ಷಿಕೆಗಳಡಿಯಲ್ಲಿ ಪ್ರಮುಖ ಭೌಗೋಳಿಕ ಲಕ್ಷಣಗಳೆಂದು ಗುರುತಿಸಲ್ಪಟ್ಟಿರುವ ಕರಾವಳಿ, ಘಟ್ಟ ಪ್ರದೇಶ, ಬಯಲು ಭೂಮಿ ಹಾಗೂ ಇತರೆ ಲಕ್ಷಣಗಳನ್ನು ಕುರಿತು ವಿವರಿಸಿ, ವಿಶ್ಲೇಷಿಸಲಾಗಿದೆ. ಇದರಿಂದಾಗಿ ಮುಂಬರುವ ಅಧ್ಯಾಯಗಳಿಗೆ ಮುಖ್ಯ ಭೂಮಿಕೆಯನ್ನು ಕಂಡುಕೊಂಡಂತಾಗಿದೆ.

ನಾಲ್ಕನೆಯ ಅಧ್ಯಾಯವು ಮಹಾಪ್ರಬಂಧದ ಅಂತಃಸೂತ್ರಕ್ಕೆ ಗಟ್ಟಿತನವನ್ನು ಒದಗಿಕೊಡಲು ಪ್ರಯತ್ನಿಸಿರುತ್ತದೆ. ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧಿ ಪರಿಸರ ಚಳವಳಿಗಳ ಪ್ರಾಧಾನ್ಯವನ್ನು ತಿಳಿಸುತ್ತದೆ. ಈ ಜಿಲ್ಲೆಯ ಭೌಗೋಳಿಕ ಲಕ್ಷಣಗಳಲ್ಲಿ ಘಟ್ಟ ಪ್ರದೇಶ, ಬಯಲು ಭೂಮಿಗಳು ವಿಶಿಷ್ಟವಾಗಿದ್ದು, ಇವು ಬಹುಪಾಲು ಅರಣ್ಯಾವೃತವಾಗಿವೆ ; ಘಟ್ಟಗಳ ಇಳಿಜಾರು ಹಾಗೂ ಕುಮರಿಗಳಲ್ಲಿ ತೋಟಗಳಿವೆ. ಜಲವಿದ್ಯುತ್ ಯೋಜನೆಗಳ ಸಲುವಾಗಿ ಅಣೆಕಟ್ಟೆ ನಿರ್ಮಿಸಿದಾಗ ತೋಟಗಳು ಮುಳುಗಡೆಯಾಗುವುದನ್ನು ತಪ್ಪಿಸಿಕೊಳ್ಳಲು ಪರಿಸರ ಚಳವಳಿಗಳಲ್ಲಿ ಭಾಗವಹಿಸಿರುವುದನ್ನು ಗುರುತಿಸಬಹುದಾಗಿದೆ. ಇಂತಹ ಅಂಶಗಳನ್ನು ಗಮನಿಸಿರುವುದರಿಂದ ನೆಲಸಂಬಂಧಿ ಚಳವಳಿಗಳೆಂದು ವಿಭಾಗಿಸಿ, ಪ್ರತ್ಯೇಕಿಸಿ ಅಧ್ಯಯನಕ್ಕೊಳಪಡಿಸಲಾಗಿದೆ. ಉಪಶೀರ್ಷಿಕೆಗಳಡಿಯಲ್ಲಿ ನೆಲಸಂಬಂಧಿ ಚಳವಳಿಗಳ ಮಹತ್ವದ ಜೊತೆಗೇ ಗಣಿಗಾರಿಕೆ, ಕೈಗಾರಿಕೆಗಳು, ಸೀಬರ್ಡ್ ನೌಕಾನೆಲೆ, ರೈಲ್ವೇಯೋಜನೆಗಳ ಸಂಬಂಧವಾಗಿ ನಡೆದ ಪರಿಸರ ಚಳವಳಿಗಳನ್ನು ಅಧ್ಯಯನ ಮಾಡಲಾಗಿದೆ.

ಐದನೆಯ ಅಧ್ಯಾಯ ಪ್ರಮುಖವಾಗಿ ಉತ್ತರ ಕನ್ನಡ ಜಿಲ್ಲೆಯ ಜಲಸಂಬಂಧಿ ಚಳವಳಿಗಳ ಪ್ರಾಧಾನ್ಯವನ್ನು ಕುರಿತು ವಿವರಣೆಗಳನ್ನು ಒಳಗೊಂಡಿರುತ್ತವೆ. ಜಿಲ್ಲೆಯು ಭೌಗೋಳಿಕವಾಗಿ ಬಹುಪಾಲು ಅರಣ್ಯಾವೃತವಾಗಿದ್ದು, ಕಾಳಿ, ಬೇಡ್ತಿ, ಶರಾವತಿಯಂತಹ ಪ್ರಮುಖನದಿಗಳ ಉಗಮಸ್ಥಾನವಾಗಿ, ಪಶ್ಚಿಮಾಭಿಮುಖವಾಗಿ ಹರಿದು ಅರಬ್ಬೀಸಮುದ್ರ ಸೇರುತ್ತವೆ. ನದೀ ಯೋಜನೆಗಳಿಂದಾಗಿ ಪರಿಸರ ಮಾಲಿನ್ಯ, ಜೀವವೈವಿಧ್ಯದ ನಾಶ, ಅರಣ್ಯಗಳ ಮುಳುಗಡೆಯಿಂದಾಗುವ ಅನಾಹುತಗಳು ಮುಂತಾದ ಅಂಶಗಳನ್ನು ಪ್ರಧಾನವಾಗಿರಿಸಿಕೊಂಡು ಜಲಸಂಬಂಧೀ ಯೋಜನೆಗಳನ್ನು ಪ್ರಶ್ನಿಸಿ ಚಳವಳಿಗಳು ನಡೆದಿವೆ. ಕಾಳಿ ನದಿಗೆ ಏಳು ಕಡೆಗಳಲ್ಲಿ ಜಲವಿದ್ಯುತ್ ಉತ್ಪಾದನೆಗಾಗಿ ಅಣೆಕಟ್ಟೆಗಳನ್ನು ಕಟ್ಟಲಾಗಿದೆ. ಈ ಸಂಬಂಧವಾಗಿ 'ಕಾಳಿ ಬಚಾವೋ ಚಳವಳಿ' ನಡೆಯಿತು. ಹೀಗೆಯೇ ಉಪಶೀರ್ಷಿಕೆಗಳಡಿಯಲ್ಲಿ ಬೇಡ್ತಿ, ಶರಾವತಿ ನದಿಗಳ ಯೋಜನೆಗಳಿಂದಾದ ಪರಿಣಾಮಗಳ ಸಂಬಂಧವಾಗಿ ನಡೆದ ಚಳವಳಿಗಳನ್ನು ಅಧ್ಯಯನ ಮಾಡುವುದಾಗಿದೆ. ಜಿಲ್ಲೆಯಲ್ಲಿ ನಡೆದಿರುವ ಇತರ ಪುಟ್ಟ ಪ್ರಮಾಣದ ಚಳವಳಿಗಳ ಕುರಿತೂ ಈ ಅಧ್ಯಾಯದಲ್ಲಿ ವಿವರಣೆಗಳಿರುತ್ತವೆ.

ಆರನೆಯ ಹಾಗೂ ಕೊನೆಯ ಅಧ್ಯಾಯದಲ್ಲಿ ಅಧ್ಯಯನದ ಫಲಿತಗಳು ನಿರ್ಣಯಿತವಾಗಿ, ಉಪಶೀರ್ಷಿಕೆಗಳಡಿಯಲ್ಲಿ ದಾಖಲಿಸಲಾಗಿದೆ. ಅಧ್ಯಯನಕ್ಕೆ ಅಗತ್ಯವಿರುವ ಆಕರಗ್ರಂಥಗಳು, ಲೇಖನಸೂಚಿ, ಪತ್ರಿಕಾಸೂಚಿ, ನಕಾಶೆಗಳು, ಚಿತ್ರಗಳನ್ನು ಕಾಲಾನುಕ್ರಮ, ವಿಷಯಾನುಕ್ರಮ, ಅಕಾರಾದಿ ಕ್ರಮದಲ್ಲಿ ಅನುಬಂಧ-ಒಂದು ಎಂಬುದರ ಅಡಿಯಲ್ಲಿ ಒದಗಿಸಲಾಗಿದೆ. ಅನುಬಂಧ-ಎರಡು ಎಂಬುದರ ಅಡಿಯಲ್ಲಿ ಪ್ರಬಂಧದ ಪೂರಕ ಮಾಹಿತಿಗಳುಳ್ಳ ವಿವರ ಪಟ್ಟಿಗಳನ್ನು (ತಃಖ್ತೆ) ನೀಡಲಾಗಿದೆ. ಒಟ್ಟು ಚಳವಳಿಗಳ ಸ್ವರೂಪ - ವಿಶಿಷ್ಟತೆ-ಸಫಲತೆ-ವಿಫಲತೆಗಳನ್ನು ಸಂಖ್ಯಾವಾರು ಅಭ್ಯಾಸ ಮಾಡಲಾಗಿದೆ. ಅಧ್ಯಯನದಲ್ಲಿ ಪ್ರಧಾನ, ಪೂರಕ, ಪೋಷಕ ಆಕರಗಳನ್ನು ಬಳಸಿಕೊಳ್ಳಲಾಗಿದ್ದು, ಅವುಗಳಿಂದ ಪಡೆದಿರುವ ಉದ್ಧೃತ ಭಾಗಗಳನ್ನು ಅಧ್ಯಯನ ಶಿಸ್ತಿಗೆ ಅಳವಡಿಸಿಕೊಂಡು ಆಯಾ ಅಧ್ಯಾಯಗಳ ಮುಕ್ತಾಯದಲ್ಲಿ 'ಕೊನೆ ಟಿಪ್ಪಣಿ'ಗಳಾಗಿ ನೀಡಲಾಗಿದೆ.

ಪ್ರಸ್ತುತ ಸಂಶೋಧನೆಯು ನಿರ್ದಿಷ್ಟ ಸೈದ್ಧಾಂತಿಕತೆಯನ್ನು ಕಟ್ಟಿಕೊಳ್ಳುವತ್ತ ಗಮನ ಹರಿಸಿದೆ. ಚಳವಳಿಗಳ ಸ್ವರೂಪ ದೊಡ್ಡದಿರಲಿ, ಪುಟ್ಟದಿರಲಿ ಉಪೇಕ್ಷಿಸದೆ ತಾತ್ತ್ವಿಕತೆಯಡಿಯಲ್ಲಿ ವಿವರಣಾತ್ಮಕ, ವಿಶ್ಲೇಷಣಾತ್ಮಕ ಹಾಗೂ ತುಲನಾತ್ಮಕ ವಿಧಾನಗಳನ್ನು ಅಳವಡಿಸಿಕೊಂಡು ಅಧ್ಯಯನವು ಮುಂದುವರಿದಿದೆ.

ಕೊನೆ ಟಿಪ್ಪಣಿಗಳು

೧. ಕೆ. ಭೈರಪ್ಪ, ಪರಿಸರ ಪ್ರಜ್ಞೆ, ಪುಟ ೧

೨. ಕೆ. ಶಿವರಾಮ ಕಾರಂತ, ಭಾರತದ ಪರಿಸರದ ಪರಿಸ್ಥಿತಿ, ಪುಟ ೭

೩. ಎಚ್.ವಿ. ನಾಗೇಶ್, ಸಾಮಾಜಿಕ ಚಳವಳಿಗಳು, ಪುಟ ೧

೪. ರಾಮಚಂದ್ರ ಗುಹಾ, ಜಾಗತಿಕ ಪರಿಸರ ಚರಿತ್ರೆ, ಪುಟ ೯೪

೫. ಕೆ. ಮೋಹನ್‌ಕೃಷ್ಣ ರೈ, ಪರಿಸರ ಚಳವಳಿಗಳು, ಪುಟ ೧

೬. ಎಚ್.ವಿ. ನಾಗೇಶ್, ಪೂರ್ವೋಕ್ತ, ಪುಟ ೧೪

೭. ರಾಮಚಂದ್ರ ಗುಹಾ, ಪೂರ್ವೋಕ್ತ, ಪುಟ ೧೫

೮. ಅದೇ, ಪುಟ ೧೫೮

೯. ಅದೇ, ಪುಟ ೧೯

❑ ❑ ❑

ಅಧ್ಯಾಯ - ೨

ಪರಿಸರ ಚಳವಳಿಗಳು

ಪರಿಸರ ಚಳವಳಿಗಳು

✦

೨.೧ ಹಿನ್ನೆಲೆ-ಸ್ವರೂಪ-ಸೈದ್ಧಾಂತಿಕತೆ

ಹಿನ್ನೆಲೆ : ಪರಿಸರವಾದವು ಇಂದು ಜಗತ್ತಿನಾದ್ಯಂತ ಹರಡಿಕೊಂಡಿರುವ ವ್ಯಾಪಕವಾದ ಆಂದೋಲನವಾಗಿದ್ದು, ಅದರ ತೀವ್ರತೆಯಲ್ಲಿ ಮಾತ್ರ ದೇಶ-ದೇಶಗಳ ನಡುವೆ ವ್ಯತ್ಯಾಸವಿದೆ[೧]. ಪರಿಸರ ಚಳವಳಿಗಳು ಆಸಕ್ತ ಸಂಘ-ಸಂಸ್ಥೆಗಳ ಹಾಗು ವ್ಯಕ್ತಿಗಳ ನೇರ ಸಂಪರ್ಕವಿಲ್ಲದೆ ಜಗತ್ತಿನಾದ್ಯಂತ ಹರಡಿಕೊಂಡಿದ್ದು ರಾಷ್ಟ್ರ - ರಾಷ್ಟ್ರಗಳ ಗಡಿಗಳನ್ನು ಮೀರಿ ನಡೆಯುವ ಆಂದೋಲನಗಳಾಗಿವೆ. ಪರಿಸರ ಚಳವಳಿಗಳು ಪ್ರಾರಂಭವಾಗಿದ್ದು ಯಾವಾಗ ? ಎಂದು ಪ್ರಶ್ನಿಸಿಕೊಂಡರೆ ಅಮೆರಿಕಾದಲ್ಲಿನ ಆಂದೋಲನದ ದಾಖಲೆಗಳ ಪ್ರಕಾರ ೧೯೬೨ರಲ್ಲಿ ಪ್ರಕಟವಾದ ರಾಖೆಲ್‌ಕಾರ್ಸನ್ ಅವರ ಪುಸ್ತಕ ಪ್ರೇರಣೆಯಿಂದ ಪರಿಸರ ಚಳವಳಿ ಆರಂಭವಾಯಿತು. ಆ ಪುಸ್ತಕವನ್ನು ಆಧುನಿಕ ಪರಿಸರ ಚಳವಳಿಯ 'ಬೈಬಲ್' ಮತ್ತು 'ಸ್ಥಾಪನಾಘಟನೆ' ಎನ್ನಲಾಗಿದೆ.[೨] ಪ್ರಾರಂಭದಲ್ಲಿ ಜನಬೆಂಬಲವಿಲ್ಲದೆಯೂ ಪರಿಸರವಾದಿಗಳು ಅಮೆರಿಕಾದಲ್ಲಿ ಜಲಸಂರಕ್ಷಣೆಗೆ ಕಾರ್ಯಕ್ರಮಗಳನ್ನು ರೂಪಿಸಿ, ರಾಷ್ಟ್ರೀಯ ಉದ್ಯಾನವನಗಳನ್ನು ಸ್ಥಾಪಿಸಿದರು.

ಇದೇ ರೀತಿಯಲ್ಲಿ ಇಂಗ್ಲೆಂಡ್, ಜರ್ಮನಿ, ದಕ್ಷಿಣ ಆಫ್ರಿಕಾ ಮುಂತಾದ ದೇಶಗಳಲ್ಲಿ ಪರಿಸರ ಚಳವಳಿಗಳು ನಂತರದ ದಶಕಗಳಲ್ಲಿ ವಿಶಾಲವಾದ ಸಾಮಾಜಿಕ ಆಂದೋಲನಗಳಾಗಿ ಪರಿವರ್ತನೆಗೊಂಡು ಮುಂದುವರಿದವು. ಕೈಗಾರಿಕೀಕರಣಕ್ಕೆ ಪ್ರತಿಕ್ರಿಯೆಯಾಗಿ ಬಂದದ್ದು ಪರಿಸರ ಆಂದೋಲನದ ಮೂಲವೆನಿಸಿದರೆ, ಕ್ರಮೇಣ ಜನಾಭಿಪ್ರಾಯ, ಬೌದ್ಧಿಕ ಪ್ರತಿಕ್ರಿಯೆಗಳು ಪರಿಸರ ಚಳವಳಿಗಳನ್ನು ವಿಸ್ತರಿಸುವಂತೆ ಮಾಡಿದವು. ಪರಿಸರದ ಚಳವಳಿಗಳಿಗೆ ದೀರ್ಘವಾದ, ಸ್ಪಷ್ಟವಾದ ಪರಂಪರೆ ಇದೆ. ಅದರ ಸಮಕಾಲೀನ ರೂಪವು ೧೯೭೦ರ ಕೂಸು, ೧೮೬೦ರ ಮೊಮ್ಮಗು ಎಂಬುದಾಗಿ ಜಾಗತಿಕ ಪರಿಸರ ಚರಿತ್ರೆಯಲ್ಲಿ ಗುರುತಿಸಲ್ಪಟ್ಟಿದೆ.[೩] ವೈವಿಧ್ಯದಿಂದ ಕೂಡಿದ ಪರಿಸರ ಚಳವಳಿಗಳು ಕೈಗಾರಿಕೀಕರಣದ ಮೂಸೆಯಲ್ಲಿ ಸೃಷ್ಟಿಯಾಗಿ ಕ್ರಮೇಣ ಇತರೆ ಸಾಮಾಜಿಕ ಚಳವಳಿಗಳಂತೆಯೇ ರಾಜಕೀಯ ಪ್ರೇರಣೆಯೊಂದಿಗೆ ಸಂಬಂಧ ಹೊಂದಿದೆ.

ಭಾರತದಲ್ಲಿ ಪರಿಸರ ಚಳವಳಿಗಳ ಕುರಿತಾಗಿ ಅಧ್ಯಯನ ನಡೆಸುವಾಗ ಯುರೋಪಿಯನ್ನರ ವಸಾಹತುಶಾಹಿ ಧೋರಣೆ ಹಾಗೂ ಅದರ ಮುಂದುವರಿದ ಭಾಗಗಳು ಚರ್ಚೆಯೊಳಗೆ ಬರುತ್ತವೆ. ಪರಿಸರದ ಮೇಲೆ ಮಾನವ ಅಧಿಕ ಪ್ರಮಾಣದಲ್ಲಿ ತನ್ನ ಪ್ರಭುತ್ವವನ್ನು ಸ್ಥಾಪಿಸಲು ಹೊರಟಿದ್ದು ವಸಾಹತು ಆಳ್ವಿಕೆಯ ನಂತರದ ದಿನಗಳಲ್ಲಿ.[೪] ಪಶ್ಚಿಮಘಟ್ಟಗಳು ಸಾಂಬಾರು ಬೆಳೆಗಳ ತಾಣಗಳಾಗಿ ಮತ್ತು ರಬ್ಬರ್ ತೋಟಗಳಾಗಿ ಪರಿವರ್ತಿಸಲ್ಪಟ್ಟವು ; ವಾಣಿಜ್ಯ ಬೆಳೆ ಬೆಳೆಯುವ ಪ್ರವೃತ್ತಿ ಪ್ರಾರಂಭಗೊಂಡಿತು. ವಸಾಹತು ಆಳ್ವಿಕೆಯ ಆರ್ಥಿಕ ನೀತಿಗಳು ಮುಂದುವರಿದಂತೆ ಗುಡಿ ಕೈಗಾರಿಕೆಗಳು, ವಿರಳವಾಗಿ

ಬೃಹತ್ ಕೈಗಾರಿಕೆಗಳು ಅಸ್ತಿತ್ವಕ್ಕೆ ಬಂದವು. ಅವುಗಳಿಂದುಂಟಾದ ಪರಿಣಾಮಗಳು ಪರಿಸರ ಚರ್ಚೆಯ ವಸ್ತುಗಳಾದವು. ಕೃಷಿಯಲ್ಲಿಯೂ ಆಧುನಿಕತೆ ಪ್ರಾರಂಭವಾದ ಮೇಲೆ ಪರಿಸರ ಮಾಲಿನ್ಯ ಏರ್ಪಟ್ಟು ಅವುಗಳ ವಿರೋಧಿ ಧ್ವನಿಗಳು ರೂಪುಗೊಂಡವು. ಪರಿಸರ ಮಾಲಿನ್ಯ ಎಂಬುದಾಗಿ ಧ್ವನಿ ಎತ್ತಿದರೆ ಅದು ಪ್ರಗತಿ ವಿರೋಧಿ ಧ್ವನಿ ಎಂದು ತೀರ್ಮಾನಿಸುವಂತಾಯಿತು. ಪ್ರಗತಿಯಿಂದುಂಟಾದ ಅನಾಹುತಗಳ ಕುರಿತು ಉದಾಸೀನ ತಾಳಿದ್ದರಿಂದ ಪರಿಸರ ಪ್ರಜ್ಞೆ ಎಚ್ಚೆತ್ತು ಆಂದೋಲನವಾಗಿ ರೂಪುಗೊಂಡಿತು. ಸ್ವಾತಂತ್ರ್ಯಾನಂತರದ ಪಂಚವಾರ್ಷಿಕ ಯೋಜನೆಗಳಲ್ಲಿ ಕೈಗಾರಿಕೀಕರಣ, ಹಸಿರು ಕ್ರಾಂತಿ ಘೋಷಣೆಗಳು ಊರ್ಜಿತಗೊಂಡು ಅಭಿವೃದ್ಧಿಯ ವೇಗವು ಹೆಚ್ಚಿತು. ಕೈಗಾರಿಕೀಕರಣ ಹಾಗೂ ನಗರೀಕರಣಗಳೆರಡೂ ಕ್ಷಿಪ್ರಗತಿಯಲ್ಲಿ ಬೆಳವಣಿಗೆಯನ್ನು ಹೊಂದಿದವು. ಹೊಸ ಆರ್ಥಿಕ ನೀತಿಯಂತೆ ಗ್ಯಾಟ್, ಡಂಕೆಲ್‌ನಂಥ ಒಪ್ಪಂದಗಳು ಏರ್ಪಟ್ಟು ಬಂಡವಾಳಶಾಹಿ ರಾಷ್ಟ್ರಗಳು ನಿರ್ಧಾರಕ ಶಕ್ತಿಗಳಾದವು. ಗಡಿಗಳನ್ನು ಉಲ್ಲಂಘನೆ ಮಾಡದೆಯೇ ಭಾರತದ ಸಂಪನ್ಮೂಲಗಳನ್ನು ಸ್ವಂತಕ್ಕಾಗಿ ಕಬಳಿಸುವ ಶಕ್ತಿ ಪಡೆದುಕೊಂಡವು. ಮಾಧವ ಗಾಡ್ಗೀಳ ಮತ್ತು ರಾಮಚಂದ್ರ ಗುಹಾ ಅವರು ಹೇಳುವಂತೆ ಸಂಪನ್ಮೂಲಗಳ ವ್ಯಾಖ್ಯೆ ಬದಲಾಯಿತು ; ಆಕ್ರಮಣಕಾರರು ತಮ್ಮ ಹಿತ್ತಲಿನ ಸಂಪನ್ಮೂಲಗಳನ್ನು ಜೋಪಾನವಾಗಿಟ್ಟುಕೊಂಡು, ದೂರದ ದೇಶಗಳಿಂದ ಅರಣ್ಯ, ಖನಿಜ, ಕೃಷಿ ಸಂಪತ್ತನ್ನು ಎತ್ತಿ ಸಾಗಿಸುವ ಪ್ರವೃತ್ತಿ ಬೆಳೆದು ಬಂದಿತು.[೫] ಅದರಂತೆ ಭಾರತದಿಂದ ಅರಣ್ಯ ಹಾಗೂ ಖನಿಜ ಸಂಪತ್ತನ್ನು ಎತ್ತಿಸಾಗಿಸುವುದು ನಿರಂತರವಾಗಿ ನಡೆಯುತ್ತಿದ್ದು ಪರಿಸರ ಸಂರಕ್ಷಣೆಯ ಜಾಗೃತಿಗೆ ಕಾರಣವಾಗಿದೆ. ಕರ್ನಾಟಕದಲ್ಲಿ ನಡೆಯುತ್ತಿರುವ ಗಣಿಗಾರಿಕೆಯನ್ನು ಇಲ್ಲಿ ಉದಾಹರಿಸಬಹುದಾಗಿದೆ. ಹೀಗಾಗಿ 'ನಮ್ಮದು' ಎಂಬ ಕಲ್ಪನೆ ಗಟ್ಟಿಯಾಗತೊಡಗುತ್ತಾ, ಪರಿಸರ ಚಳವಳಿಗೆ ದಾರಿಯಾಯಿತು. ಭಾರತದಲ್ಲಿ ನಡೆದ ಪರಿಸರ ಚಳವಳಿಗಳನ್ನು ಕುರಿತು ಮುಂದಿನ ಉಪಶೀರ್ಷಿಕೆಯಡಿಯಲ್ಲಿ ವಿವರಿಸಲಾಗಿದೆ.

ಕರ್ನಾಟಕದಲ್ಲಿ ನಡೆದ ಪರಿಸರ ಚಳವಳಿಗಳೂ ಬ್ರಿಟಿಷ್ ಆಡಳಿತ, ಆನಂತರ ಬಂಡವಾಳಶಾಹಿಗಳು ನಿರ್ಮಿಸಿದ ವ್ಯವಸ್ಥೆಯೊಳಗೇ ಕಾರ್ಯನಿರ್ವಹಿಸುತ್ತಿರುವಂತೆ ಕಂಡುಬರುತ್ತವೆ. ಉತ್ಪಾದನಾ ಸಾಧನಗಳ ಒಡೆಯರಾದ ಬಂಡವಾಳಶಾಹಿಗಳು ಲಾಭದ ನಿರೀಕ್ಷೆಯ ಹೊರತಾಗಿ ಎರಡನೆಯ ವಿಚಾರಮಾಡುವುದು ಕಡಿಮೆ. ಭೂಮಿ ಕಳೆದುಕೊಂಡ ಕಾರಣದಿಂದ ಕೆಲವರು ಚಳವಳಿಗೆ ಮುಂದಾಗುತ್ತಾರೆ. ಮತ್ತೆ ಕೆಲವರು ಮಾಲಿನ್ಯ ಕಾರಣದಿಂದ ಪರಿಸರ ಪ್ರಜ್ಞೆ ಮೂಡಿಸಲು ಮುಂದಾಗಿರುವುದನ್ನು ಇಲ್ಲಿ ನಡೆದ ಪರಿಸರ ಚಳವಳಿಗಳಲ್ಲಿ ಗುರುತಿಸಬಹುದು. ಇಂತಹ ಹಿನ್ನೆಲೆಯುಳ್ಳ ಪರಿಸರ ಚಳವಳಿಗಳನ್ನು ಇದೇ ಅಧ್ಯಾಯದಲ್ಲಿ ವಿವರಣಾತ್ಮಕವಾಗಿ ಅಧ್ಯಯನ ಮಾಡಲಾಗಿದೆ.

ಸ್ವರೂಪ : ಪರಿಸರ ಚಳವಳಿಗಳ ಸ್ವರೂಪದ ಬಗ್ಗೆ ವಿಶ್ಲೇಷಣೆ ಮಾಡುವಾಗ ಹಲವಾರು ಅಂಶಗಳನ್ನು ಗಮನಿಸಬೇಕಾಗುತ್ತದೆ. ಅವುಗಳಲ್ಲಿ ನಾಯಕತ್ವದ ಪ್ರಶ್ನೆ ಮೊದಲನೆಯದು. ಪರಿಸರ ಸಂಬಂಧಿತ ಸಮಸ್ಯೆಗಳು ಮತ್ತು ಚಳವಳಿಗಳಲ್ಲಿ ಬೂರ್ಶ್ವಾವರ್ಗದ ನಾಯಕತ್ವವು ಎದ್ದು ಕಾಣುವುದು. ಚಳವಳಿಯ ಒಟ್ಟು ಆಶಯವನ್ನು ನಾಯಕತ್ವ ವಹಿಸಿದ ವರ್ಗವು ನಿಯಂತ್ರಿಸುವುದನ್ನು ಕಾಣಬಹುದಾಗಿದೆ. ಜನಹಿತ, ಪರಿಸರದ ಹಿತವನ್ನೂ ಗಮನಿಸಿದ್ದ ನಾಯಕತ್ವವನ್ನು ಕೆಲವು ಚಳವಳಿಗಳ ಪ್ರಮುಖ ಭಾಗವಾಗಿ ಇದ್ದುದನ್ನೂ ಗುರುತಿಸಬಹುದು. ಉದಾಹರಣೆಗೆ ಸುಂದರ್‌ಲಾಲ್ ಬಹುಗುಣರ ನಾಯಕತ್ವದ ಚಿಪ್ಕೋ ಚಳವಳಿ ಇತ್ಯಾದಿ.

ಎಲ್ಲಾ ಜನವರ್ಗಗಳು ಜಾತಿ, ವರ್ಗ ಭೇದವಿಲ್ಲದೆ ಚಳವಳಿಗಳಲ್ಲಿ ಭಾಗವಹಿಸಿದವು ಎನ್ನುವ ತಪ್ಪು ವರದಿಯೂ ದಾಖಲುಗೊಳ್ಳುತ್ತಿರುತ್ತದೆ.[೬] ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದ ಪರಿಸರ ಸಂಬಂಧಿತ ಚಳವಳಿಗಳನ್ನು ಅವಲೋಕಿಸಿದಾಗ ವರ್ಗ-ಜಾತಿ ವಿಭಜಿತ ಸಮಾಜದ ಪ್ರಪಂಚವೇ ತೆರೆದುಕೊಳ್ಳುತ್ತದೆ. ಒಂದೊಂದು ಚಳವಳಿಯಲ್ಲಿಯೂ ಒಂದೊಂದು ವರ್ಗದ ಇಲ್ಲವೇ ಜಾತಿಯ ಮುನ್ನಡೆಯನ್ನು ಗಮನಿಸುವಾಗಲೆ, ನಮಗೆ ಸಂಬಂಧವೇ ಇಲ್ಲವೆಂಬಂತೆ ಇದ್ದ ಸಂದರ್ಭಗಳನ್ನೂ ನಿಚ್ಚಳವಾಗಿ ಗುರುತಿಸಬಹುದು. ಈ ಸಂಘರ್ಷದ ನಡುವೆ ಪರಿಸರ ಮಾಲಿನ್ಯದ ವಿಚಾರ ಗೌಣವಾಗಿ ಬಿಡುತ್ತದೆ. ಮೇಲು - ಕೀಳು ಅಥವಾ ಜಾತಿ ವಿಭಜಿತ ಸಮಾಜದ ಪರಿಸರ ಚಳವಳಿಗಳ ಸ್ವರೂಪವನ್ನು ನಿರ್ಧರಿಸುವುದು ಕಷ್ಟದ ಕೆಲಸ. ಪ್ರಗತಿಗಾಮಿ ಪರವರ್ಗ ಅಥವಾ ಪ್ರತಿಗಾಮಿ ಪರವರ್ಗಗಳ ನಡುವಿನ ದ್ವಂದ್ವಗಳು ಪರಿಸರ ಚಳವಳಿಯ ಚರಿತ್ರೆಯುದ್ದಕ್ಕೂ ಕಾಣಸಿಗುತ್ತವೆ.

ಪರಿಸರ ಚಳವಳಿಗಳು ನಿಶ್ಚಿತ ಉದ್ದೇಶಗಳನ್ನು ಹೊಂದಿವೆಯೆನಿಸಿದರೂ ಅವುಗಳು ಪರಿಸರ ಮಾಲಿನ್ಯ ತಡೆ, ಅಭಿವೃದ್ಧಿ ವಿರೋಧಿ ಎಂಬ ಎರಡಂಶಗಳಿಗೆ ಸೀಮಿತಗೊಳ್ಳುತ್ತವೆ. ಬಂಡವಾಳಶಾಹಿಗಳಾಗಲಿ, ಸರ್ಕಾರವಾಗಲಿ ಪರಿಸರ ಸಂರಕ್ಷಣಾ ಕಾಯಿದೆಗಳನ್ನು ಪಾಲಿಸಲಾಗುವುದೆಂಬ ಭರವಸೆಗಳನ್ನು ಮುಂದೆ ಮಾಡಿಕೊಂಡು ಕಣ್ತಪ್ಪಿಸುವ ಇಲ್ಲವೆ ಯೋಜನೆಗಳನ್ನು ಮುಂದೂಡುವ ತಂತ್ರಗಳನ್ನು ಬಳಸಿ ಪರಿಸರ ಚಳವಳಿಗಳ ಉದ್ದೇಶವನ್ನೇ ಬುಡಮೇಲು ಮಾಡುತ್ತವೆ. ಈ ಸಂದರ್ಭಗಳಲ್ಲಿ ಪರಿಸರ ಚಳವಳಿಗಳು ಸೊರಗಿ ಹಿನ್ನಡೆ ಅನುಭವಿಸುತ್ತವೆ. ಅಲ್ಲೊಂದು ಇಲ್ಲೊಂದು ಎಂಬಂತೆ ಯಶಸ್ವಿಯಾಗಿವೆ ಎನಿಸಿಕೊಂಡ ಚಳವಳಿಗಳೂ ಸರ್ವಭಕ್ಷಕ ವರ್ಗ ಹಾಗೂ ಸರ್ಕಾರದ ಅಭಿಪ್ರಾಯದಲ್ಲಿ ಮುಗಿದಿರುವ ಚಳವಳಿಗಳಲ್ಲ. ಉತ್ತರ ಕನ್ನಡ ಜಿಲ್ಲೆಯಲ್ಲಿ ೧೯೮೦ರಲ್ಲಿ ನಡೆದ ಬೇಡ್ತಿ ಚಳವಳಿ ಕರ್ನಾಟಕದಲ್ಲಿ ನಡೆದ ಮೊದಲ ಪರಿಸರ ಹೋರಾಟವೆಂದು ಹೇಳಬೇಕು.[೭] ವಿದ್ಯುತ್ ಬೇಡಿಕೆಯ ಒತ್ತಡದಡಿಯಲ್ಲಿ ಸರ್ಕಾರ ಬೇಡ್ತಿ ಸಂಬಂಧದ ಕಿರುಯೋಜನೆಗಳ ನೆಪದಲ್ಲಿ ಯೋಜನೆಯನ್ನು ಪೂರ್ಣವಾಗಿ ಕೈಬಿಟ್ಟಿರುವುದಕ್ಕೆ ದಾಖಲೆಗಳು ಇಲ್ಲ.

ವನವಾಸಿ ಬುಡಕಟ್ಟು ಜನರು, ರೈತಾಪಿ ಗ್ರಾಮೀಣ ಪ್ರದೇಶದ ಜನರು ಪರಿಸರ ಚಳವಳಿಯ ಪ್ರಮುಖ ವರ್ಗವೆಂದು ಗುರುತಿಸಲ್ಪಟ್ಟಿದ್ದು, ನೇರವಾಗಿ ಇವರೇ ಚಳವಳಿಗಳಲ್ಲಿ ಭಾಗವಹಿಸಿದ್ದು ಕಡಿಮೆ. ಇವರು ನಡೆಸುವ ಹೋರಾಟಗಳು ಎಲ್ಲೂ ದಾಖಲುಗೊಳ್ಳುವುದಿಲ್ಲ ಮತ್ತು ಪ್ರಚಾರಗೊಳ್ಳುವುದೂ ಇಲ್ಲ. ಸರ್ವಭಕ್ಷಕ ವರ್ಗ ಇಲ್ಲಿಯೂ ಕಾರ್ಯ ತಂತ್ರಗಳನ್ನು ಹೆಣೆದಿರುತ್ತದೆ. ಕೃಷಿ ಸಂಬಂಧಿತ ಚಟುವಟಿಕೆಗಳಲ್ಲಿ ಬದ್ಧತೆ ಹೊಂದಿರುವ ಈ ವರ್ಗವನ್ನು ಯಾವಾಗಲೂ ಅಲ್ಪತೃಪ್ತರಾಗಿಯೇ ಇರುವಂತೆ ನೋಡಿಕೊಳ್ಳುವ ಮೇಲ್ವರ್ಗದ ನಾಯಕತ್ವವು ಮೋಸದ ತಂತ್ರಗಳನ್ನು ರೂಪಿಸಿ ನಿರ್ಧರಿಸುತ್ತಿರುತ್ತದೆ. ಶಿಕ್ಷಣ ವಂಚಿತರಾಗಿರುವ ಈ ಪ್ರಮುಖವರ್ಗವು ಭೂ ಒಡೆತನವನ್ನು ಮುಖ್ಯವೆಂದು ಭಾವಿಸಿ, ತಮ್ಮ ಭೂಮಿಯನ್ನು ಯೋಜನೆಗಳ ಸಂಬಂಧ ಬಿಟ್ಟು ಕೊಡಬೇಕಾದಾಗ ನಿರಾಶ್ರಿತರಾಗುತ್ತೇವೆಂಬ ಭಯದಿಂದ ಚಳವಳಿಯಲ್ಲಿ ಭಾಗವಹಿಸುತ್ತಾರೆ.

ಕರ್ನಾಟಕದ ಪರಿಸರ ಚಳವಳಿಗಳ ಸ್ವರೂಪವನ್ನು ಕುರಿತು ಹೇಳುವಾಗ ಕೆ. ಮೋಹನ್‌ಕೃಷ್ಣ ರೈ ಅವರು 'ಶ್ರೀಮಂತ ವರ್ಗದ ಸಾಂಸ್ಕೃತಿಕ ರಾಜಕೀಯ' ಎಂಬ ಹೆಸರಿನಿಂದ ಪರಿಸರ ಚಳವಳಿಗಳನ್ನು ಕರೆದಿದ್ದಾರೆ.[೮] ಬಂಡವಾಳಶಾಹಿಗಳ

ಸ್ವಾರ್ಥಸಾಧನೆಯನ್ನು ಪ್ರಶ್ನಿಸುವ ಉದ್ದೇಶವನ್ನು ಇರಿಸಿಕೊಂಡ ಪರಿಸರ ಚಳವಳಿಗಳೇ ಸ್ವಾರ್ಥ ಸಾಧನೆಯಲ್ಲಿ ಮುಳುಗಿವೆ ಎನ್ನುವಾಗ ಹೀಗೆನ್ನುವುದು ಸರಿಯಾಗಿಯೇ ಇದೆ. ಆದರೆ ಶ್ರೀಮಂತವರ್ಗದಲ್ಲಿಯೇ ದ್ವಂದ್ವಾತ್ಮಕ ನೀತಿಗಳು ಏರ್ಪಟ್ಟು ಉಂಟಾಗುವ ಪರಿಸರ ಬಿಕ್ಕಟ್ಟುಗಳಲ್ಲಿ ದಿಕ್ಕು ತಪ್ಪುವ ಕೆಳ ಮತ್ತು ಮಧ್ಯಮವರ್ಗಗಳ ನಡುವೆ ಸಾಂಸ್ಕೃತಿಕ ರಾಜಕೀಯ ಸಾಧ್ಯವೇ ? ಎನ್ನುವ ಪ್ರಶ್ನೆಯು ಯಾರಲ್ಲಿಯಾದರೂ ಉತ್ತರ ಬಯಸುತ್ತದೆ. ಕೆಳ ಮತ್ತು ಮಧ್ಯಮ ವರ್ಗಗಳನ್ನು ದಿಕ್ಕು ತಪ್ಪಿಸುವುದೇ ಶ್ರೀಮಂತ ವರ್ಗದ ಸಾಂಸ್ಕೃತಿಕ ರಾಜಕೀಯದ ಉದ್ದೇಶ. ಈ ವರ್ಗಗಳ ನಡುವೆ ಸಾಂಸ್ಕೃತಿಕ ರಾಜಕೀಯ ಸಾಧ್ಯವೇ ಎನ್ನುವ ಪ್ರಶ್ನೆ ಸಂಕೀರ್ಣವಾದದ್ದು. ಕೆಳ ಮತ್ತು ಮಧ್ಯಮ ವರ್ಗಗಳಿಗೆ ತಮ್ಮ ಅಸ್ತಿತ್ವದ ಪ್ರಶ್ನೆ ಪ್ರಮುಖವಾದದ್ದು. ಅಸ್ತಿತ್ವಕ್ಕಾಗಿ ನಡೆಯುವ ಹೋರಾಟಗಳಲ್ಲಿ ಸಾಂಸ್ಕೃತಿಕ ರಾಜಕೀಯ ಇಲ್ಲ ಎಂದಲ್ಲ. ಆದರೆ ಅದನ್ನು ಶ್ರೀಮಂತ ವರ್ಗಗಳ ಸ್ವಾರ್ಥ ರಾಜಕಾರಣದೊಂದಿಗೆ ಹೋಲಿಸಲು ಸಾಧ್ಯವಾಗುವುದಿಲ್ಲ.

ಆಧುನೀಕರಣದ ಸೌಲಭ್ಯಗಳೆನಿಸಿರುವ ಸಾರಿಗೆ-ಸಂಪರ್ಕ ಮುಂತಾದವುಗಳು ಪರಿಸರ ಚಳವಳಿಗಳಿಗೆ ಪೂರಕವಾಗಿವೆ. ರೈಲ್ವೇ ಯೋಜನೆ ಬೇಕು ಎಂದು ಒಪ್ಪಿಕೊಂಡ ಹಿಂದೆಯೇ ನಿರಾಶ್ರಿತರಾಗುವ ಒಂದು ವರ್ಗ ಹುಟ್ಟಿಕೊಳ್ಳುತ್ತದೆ. ಕೆಲವೊಮ್ಮೆ ನಿರಾಶ್ರಿತರ ಸಮಸ್ಯೆ ಗೋಜಲನ್ನು ಸರಿಪಡಿಸಲು ಪರಿಸರ ಚಳವಳಿಗಳು ನಡೆಯಬೇಕಾಗಿರುತ್ತದೆ. ಉದಾಹರಣೆಗೆ ಈಗಲೂ ನಡೆಯುತ್ತಿರುವ ಹುಬ್ಬಳ್ಳಿ-ಅಂಕೋಲ ರೈಲ್ವೇ ಯೋಜನೆ ವಿರೋಧದ ಚಳವಳಿ. ಆಪಾದನೆಗಳನ್ನು ಆಪಾದಿತರ ಮೇಲೆ ತಿರುಗಿಸುವ ತಂತ್ರಗಳು ವ್ಯವಸ್ಥಿತವಾಗಿ ಪರಿಸರ ಚಳವಳಿಗಳೆನಿಸಿಕೊಂಡವುಗಳಲ್ಲಿ ನಡೆದಿವೆ. ಮೇಲ್ನೋಟಕ್ಕೆ ಪರಿಸರ ಚಳವಳಿಗಳು ಯಶಸ್ವಿಯಾದಂತೆ ಕಂಡುಬಂದರೂ ಅವುಗಳ ಪರಿಣಾಮಗಳೊಳಗೆ ಮುಂದಿನ ಚಳವಳಿಗಳ ಕಾರಣಗಳು ಇರುತ್ತವೆ ಎಂಬುದನ್ನು ವಿವಿಧ ವಾದಗಳನ್ನು ಚರ್ಚಿಸಿ, ವಿಶ್ಲೇಷಿಸುವುದರಿಂದ ಕಂಡುಕೊಳ್ಳಬಹುದು.

ಸೈದ್ಧಾಂತಿಕತೆ : ಮಾನವನ ನಾಗರಿಕತೆಯ ವಿಕಾಸದಲ್ಲಿ ದೂರಗಾಮಿ ಸಾಮಾಜಿಕ ಬದಲಾವಣೆಗೆ ಕಾರಣವಾದ ಕೈಗಾರಿಕಾ ಕ್ರಾಂತಿಯ ಜೊತೆ ಜೊತೆಗೇ ಪರಿಸರವಾದದ ಮೊದಲನೇ ಅಲೆ ಹುಟ್ಟಿಕೊಂಡು ಹಂತ ಹಂತವಾಗಿ ಮುನ್ನಡೆಯಿತು.[೮] ರಾಮಚಂದ್ರ ಗುಹಾ ಅವರ ಈ ಮಾತಿಗೆ ಪೂರಕವಾಗಿ ಪರಿಸರವಾದ ಎಂಬುದು ಒಂದೆರಡು ಶತಮಾನಗಳಿಂದ ಈಚೆಗೆ ಪರಿಸರ ಸಂಬಂಧೀ ಚಾರಿತ್ರಿಕ ಘಟನೆಗಳಿಂದ ಹಾಗೂ ಒತ್ತಡಗಳಿಂದ ಉದ್ಭವಿಸಿದ ಒಂದು ವಿದ್ಯಮಾನವಾಗಿರುತ್ತದೆ. ಪರಿಸರವು ಹಾನಿಗೊಳಗಾಗಲೂ ಬಾರದು, ಯಾರೂ ಪರಿಸರಕ್ಕೆ ಅಪಾಯ ತಂದೊಡ್ಡಲೂ ಬಾರದೆಂಬ ಪರಿಸರ ಪ್ರಜ್ಞೆಯು ನಿರಂತರವಾಗಿ ಇರುವಂತಹದು. ಸಾಮಾಜಿಕ ಚಿಂತನೆಯಲ್ಲಿ ಪರಿಸರವಾದದ ಸೇರ್ಪಡೆ ಇತ್ತೀಚಿನದು. ಔದ್ಯಮಿಕ ಕ್ರಾಂತಿಯ ನಂತರದ ದಶಕಗಳಲ್ಲಿ ಅಭಿವೃದ್ಧಿ ಹೊಂದಿದ, ಹೊಂದುತ್ತಿರುವ ಯುರೋಪ್, ಅಮೆರಿಕಾ ಹಾಗೂ ಏಷ್ಯಾ ಖಂಡಗಳ ದೇಶಗಳಲ್ಲಿ ಇದರ ಕಾಳಜಿಯು ಕೇಳಿಬರುತ್ತಿರುವುದು. ಇದಕ್ಕೆ ಕಾರಣವೆಂದರೆ ಮಾನವ-ಪರಿಸರದ ನಡುವಿನ ಸಂಬಂಧದ ಅನಿವಾರ್ಯ ನಿರಂತರತೆ. ಜೀವವಿಜ್ಞಾನದ ಪರಿಭಾಷೆಯಲ್ಲಿ ಪರಿಸರವು ವ್ಯಕ್ತಿಯನ್ನು ಸುತ್ತುವರೆದಿರುವ ಭೌತಿಕ-ಜೈವಿಕ ಸಮೂಹವಾಗಿದ್ದು, ಎಲ್ಲ ಜೈವಿಕ ವಸ್ತುಗಳೂ ಒಂದು ಪರಿಸರದಲ್ಲಿ ಪರಸ್ಪರ ಪ್ರತಿಕ್ರಿಯಿಸುತ್ತಲೇ ಇರುತ್ತವೆ. ಮಳೆಯ ಅತಿವೃಷ್ಟಿ ಇಲ್ಲವೆ ಅನಾವೃಷ್ಟಿ ಸಂದರ್ಭಗಳಲ್ಲಿ ಇಂತಹ ಪ್ರತಿಕ್ರಿಯೆಗಳನ್ನು ಗಮನಿಸಬಹುದು. ಅಂತಹ ಪ್ರತಿಕ್ರಿಯೆಗಳು ಇಂದಿನ ಸಾಮಾಜಿಕ ಜಿಜ್ಞಾಸೆಯಲ್ಲಿ ಪರಿಸರ ಮತ್ತು

ಅಭಿವೃದ್ಧಿ ಕುರಿತಾಗಿ ಬೇಕು-ಬೇಡಗಳೆಂಬ ವಾದಗಳು ಹುಟ್ಟಿಕೊಂಡು, ಅವುಗಳೇ ಪರಿಸರ ಚಳವಳಿಗಳ ಮುಖ್ಯಾಂಶಗಳಾಗಿವೆ. ಈಗ ಪರಿಸರವು ಜೈವಿಕ ವ್ಯವಸ್ಥೆ ಮತ್ತು ಸಾಮಾಜಿಕ ಆಂದೋಲನ ಎಂಬ ಎರಡು ಮಜಲುಗಳಲ್ಲಿ ಪರಸ್ಪರ ಪೂರಕವಾಗಿದ್ದು, ನಿರಂತರ ಪ್ರಯೋಗಶೀಲತೆಗೆ ಒಳಗಾಗಿದೆ.

ಪರಿಸರವಾದದ ಬೆಳವಣಿಗೆಯನ್ನು ನಾಲ್ಕು ಹಂತಗಳಲ್ಲಿ ಗುರುತಿಸಬಹುದು.[೧೦]

i) ಹತ್ತೊಂಬತ್ತನೆಯ ಶತಮಾನದ ಪ್ರಾರಂಭಿಕ ಬೆಳವಣಿಗೆ (೧೮೬೦-೧೯೦೦)

ii) ಇಪ್ಪತ್ತನೆಯ ಶತಮಾನದ ಪೂರ್ವಾರ್ಧದ ಪ್ರತಿಕ್ರಿಯೆಯ ಸ್ವರೂಪ

iii) ೧೯೫೦ ರ ನಂತರದ ನೂತನ ಸ್ತರ

iv) ಪರಿಸರ ಸಂರಕ್ಷಣೆಯೊಂದಿಗೆ ಆರ್ಥಿಕಾಭಿವೃದ್ಧಿ - ಸಮಕಾಲೀನ ವಾದ

ಎನ್.ಆರ್. ರಾವ್ ಅವರು ತಮ್ಮ 'ಪರಿಸರ ಮತ್ತು ಅಭಿವೃದ್ಧಿ' ಕೃತಿಯಲ್ಲಿ ಗುರುತಿಸಿಕೊಟ್ಟಿರುವ ಈ ನಾಲ್ಕು ಹಂತಗಳು ಸಕಾಲಿಕವಾಗಿದ್ದು, ಕಾಲಾನುಕ್ರಮದಲ್ಲಿ ಏರುಪೇರುಗಳಿಗೆ ಅವಕಾಶವಿರುವುದನ್ನು ಗುರುತಿಸಿಕೊಂಡು ವಿವರಣೆಗಳನ್ನು ಮುಂದುವರಿಸಲಾಗಿದೆ.

ಮೊದಲನೆಯ ಹಂತದಲ್ಲಿ ೧೮೬೦-೧೯೦೦ರ ನಡುವಿನ ಅವಧಿಯಲ್ಲಿ ಕೈಗಾರಿಕಾಕ್ರಾಂತಿಯ ಆರ್ಥಿಕ-ಸಾಮಾಜಿಕ-ನೈತಿಕ ಅಸ್ಥಿರತೆಗಳು ಮತ್ತು ಮೌಲಿಕ ವ್ಯವಸ್ಥೆಯಲ್ಲಿನ ಅಸಹನೀಯ ಬದಲಾವಣೆಗಳು ಸಾರ್ವತ್ರಿಕ ಜುಗುಪ್ಸೆ ತಂದು ಪಾರಂಪರಿಕ ಜೀವನಾಡಿಗಳನ್ನು ಕಿತ್ತುಹಾಕಿದವು. ಮನುಷ್ಯನಲ್ಲಿ ಅಸಹಾಯಕತೆಯನ್ನು ಹುಟ್ಟು ಹಾಕಿ ಸಮಾಜದ ವಿರುದ್ಧ ಎತ್ತಿಕಟ್ಟಿದವು. ಯಂತ್ರನಾಗರಿಕತೆ ಮತ್ತು ಸಾಮಾಜಿಕ ಸ್ಥಿತ್ಯಂತರಗಳಿಗೆ ಬಹುರೀತಿಯ ಪ್ರತಿಕ್ರಿಯೆಗಳು ಕಂಡುಬಂದವು. ಅವುಗಳಲ್ಲಿ ಪರಿಸರವಾದದ ಹುಟ್ಟು ಬಹಳ ಮುಖ್ಯವಾದುದು. ಶ್ರೇಷ್ಠ ಚಿಂತಕರೆನಿಸಿದ ವಿಲಿಯಂ ಮಾರಿಸ್, ರಸ್ಕಿನ್, ಒವೆನ್ ಮುಂತಾದವರು ಆವರೆಗೂ ಪ್ರಚಲಿತವಿದ್ದ ಬೇಕನ್‌ನ ವೈಜ್ಞಾನಿಕ ವಿವರಣೆ ಮತ್ತು ಸೃಷ್ಟಿವಾದಗಳನ್ನು ವೈಜ್ಞಾನಿಕ ನಿಯಮಗಳಿಗನುಗುಣವಾಗಿ ಪುನರ್ ರೂಪಿಸಬಹುದೆಂದು ಪ್ರತಿಪಾದಿಸಿದರು.[೧೧] ಅದರಂತೆ ಹತ್ತೊಂಬತ್ತನೆಯ ಶತಮಾನದ ಅಂತ್ಯದಲ್ಲಿ ಈ ತತ್ತ್ವವು ಅಮೆರಿಕಾದಲ್ಲಿ ನಿಸರ್ಗವಾದವೆಂಬ ಪಂಥಕ್ಕೆ ಅವಕಾಶ ಕಲ್ಪಿಸಿತು. ಈ ಚಿಂತನೆಯು ಸಂಸ್ಕೃತಿಯ ಅನೇಕ ಭಾಗಗಳನ್ನು ಪ್ರವೇಶಿಸಿತು. ಅಲ್ಲಿನ ಕಾವ್ಯ, ಮಾಧ್ಯಮ ರಾಜಕೀಯದ ತತ್ತ್ವ ಪ್ರಣಾಲಿಕೆಗಳು ಇತ್ಯಾದಿ. ಮರಳಿಮಣ್ಣಿಗೆ, ವೈಜ್ಞಾನಿಕ ಸಂರಕ್ಷಣೆ, ವೈಲ್ಡರ್‌ನೆಸ್ ತತ್ತ್ವ (ಕಾನನ ಕಲ್ಪನೆ) ಇವು ಅಲ್ಲಿನ ಪರಿಸರ ಆಂದೋಲನದ ಮೂರು ಶಾಖೆಗಳಾಗಿ ಬೆಳೆದವು.[೧೨] ಯುರೋಪ್ ಮತ್ತು ಏಷ್ಯಾದ ದೇಶಗಳಲ್ಲಿಯೂ ಈ ಹಂತದ ಚಟುವಟಿಕೆಗಳು ನಡೆದವು.

ಎರಡನೆಯದಾಗಿ ೧೯೦೦ ರಿಂದ ೧೯೫೦ರ ಅವಧಿಯಲ್ಲಿನ ಪರಿಸರವಾದದ ತಿರುವಿನ ಹಂತದಲ್ಲಿ ಪರಿಸರವಾದವು ಹೊಸ ಆರ್ಥಿಕ ವ್ಯವಸ್ಥೆಗೆ ಹಾಗೂ ಯುರೋಪಿಯನ್ನರ ವಸಾಹತು ವಿಸ್ತರಣೆಗೆ ಸವಾಲೆಂಬಂತೆ ಹೊಸ ಅನ್ವೇಷಣೆಯಲ್ಲಿ ತೊಡಗಿ ತಾತ್ತ್ವಿಕ ನೆಲೆಯನ್ನು ಸ್ಥಿರಗೊಳಿಸಿತು. ಇದರಲ್ಲಿ ಮಾರ್ಕ್ಸ್‌ವಾದ ಹಾಗೂ ನಗರೀಕರಣದಿಂದ ಉದ್ಭೂತವಾದ ಮಾಲಿನ್ಯ ಇವುಗಳು ಪರಿಸರವಾದಕ್ಕೆ ಹೊಸ ದೃಷ್ಟಿಯನ್ನು ಒದಗಿಸಿದವು. ಪರಿಸರದ ಅವಲಂಬನೆಯಲ್ಲಿಯೇ ಬದುಕಿ

ಬಾಳುತ್ತಿದ್ದ ಜನಾಂಗಗಳನ್ನು ಅಳಿವಿನ ಸಮೀಪಕ್ಕೆ ಕೊಂಡೊಯ್ಯಲಾಯಿತು. ಇಂದು ನಾವು ಎದುರಿಸುತ್ತಿರುವ ಪರಿಸರದ ಬಹುಮುಖೀಯ ಸಮಸ್ಯೆಗಳು ಕಳೆದ ಶತಮಾನದ ಸಾಮ್ರಾಜ್ಯ ವಿಸ್ತರಣೆಯ ಮತ್ತು ಮುಕ್ತ ಮಾರುಕಟ್ಟೆಯ ದೇಣಿಗೆ.[೧೩] ಈ ಮಾತನ್ನು ಅಲ್ಲಗಳೆಯಲಾಗದು.

ಮೂರನೆಯದು ಜಾಗತಿಕ ಪರಿಸರ ಪ್ರಜ್ಞೆಯು ಉದಯವಾದ ಹಂತ. ಎರಡನೆಯ ಪ್ರಪಂಚ ಮಹಾಯುದ್ಧವು ಕೊನೆಗೊಂಡ ನಂತರ ಪರಿಸರವಾದಕ್ಕೆ ಜಾಗತಿಕ ಪುಷ್ಟೀಕರಣ ಹಾಗೂ ಮನ್ನಣೆ ದೊರೆಕಿತು. ಪ್ರತಿಯೊಂದು ದೇಶವೂ ಅದರದ್ದೇ ಆದ ಬಾಹ್ಯಾಂತರಿಕ ಪರಿಸರದ ಮೇಲಿನ ದಾಳಿ-ಪ್ರತಿದಾಳಿಗಳ ಇಕ್ಕಟ್ಟಿಗೆ ಸಿಲುಕಿದ್ದಲ್ಲದೆ ಜಾಗತಿಕ ಒತ್ತಡದ ಎದುರಿನಲ್ಲಿ ತತ್ತರಿಸುವಂತಾಯಿತು. ಅಣುಶಕ್ತಿ ವಿರೋಧಿ ಚಳವಳಿಗಳು ಪಾಶ್ಚಿಮಾತ್ಯ ದೇಶಗಳನ್ನು ಒಳಗೊಂಡಂತೆ ಅನಾಭಿವೃದ್ಧಿ ದೇಶಗಳಲ್ಲೂ ಸಾಮೂಹಿಕ ಸ್ವರೂಪ ಪಡೆದವು. ಬಹುರಾಷ್ಟ್ರೀಯ ಕಂಪನಿಗಳು ದೇಶ - ವಿದೇಶಗಳ ಸಂಪತ್ತನ್ನು ಅಭಿವದ್ಧಿಯ ಹೆಸರಿನಲ್ಲಿ ಖಾಲಿಮಾಡುವುದಕ್ಕೆ ಮುಂದಾದವು. ಇಂತಹ ಘಟನೆಗಳು ಪರಿಸರವಾದಿಗಳನ್ನು ಎಚ್ಚರಿಸಿ ಜಾಗತಿಕವಾಗಿ ಒಗ್ಗೂಡಿಸಿತು. ಇದರ ಫಲಶ್ರುತಿಯೆ ೧೯೭೧ರಲ್ಲಿ ಸ್ಟಾಕ್ ಹೋಂ ನಗರದಲ್ಲಿ ನಡೆದ ಜಾಗತಿಕ ಪರಿಸರ ಸಮ್ಮೇಳನ. ಇದು ಜಾಗತಿಕ ಪರಿಸರ ಪ್ರಜ್ಞೆ ಮೂಡಿ ಅಂತಾರಾಷ್ಟ್ರೀಯ ಸಹಕಾರಕ್ಕೆ ದಾರಿ ಮಾಡಿಕೊಟ್ಟಿತು.

ನಾಲ್ಕನೆಯ ಹಾಗೂ ಕೊನೆಯ ಹಂತವು ಪಾರಿಸರಿಕ ಕ್ರಿಯಾತ್ಮಕ ಚಳವಳಿ ಎನಿಸಿಕೊಂಡು 'ಪರಿಸರ ಸಂರಕ್ಷಣೆಯೊಂದಿಗೆ ಆರ್ಥಿಕಾಭಿವೃದ್ಧಿ, ಎಂಬ ಘೋಷಣೆಗೆ ಕಾರಣವಾಗಿದೆ. ೧೯೮೦ರ ದಶಕದಲ್ಲಿ ಪರಿಸರ ಪ್ರಜ್ಞೆಯು ಕೇವಲ ತಾತ್ತ್ವಿಕ ವಿಚಾರವಾಗಿಯೆ ಉಳಿಯದೆ ಜಾಗತಿಕ ಚಳವಳಿಯಾಗಿ ಸಾಮೂಹಿಕ ಅರಿವಿನೆಡೆಗೆ ಸಜ್ಜಾಯಿತು. ವೈಚಾರಿಕ ಪರಿಪುಷ್ಟತೆಯನ್ನು ಸಾಧಿಸಿದ ನಂತರದಲ್ಲಿ ಪರಿಸರವಾದವೂ ವಿರುದ್ಧ ಬಣಗಳ ಪ್ರತಿಭಟನಾ ತಂತ್ರಗಳನ್ನು ರೂಪಿಸಿಕೊಂಡಿತು.[೧೪] ಈ ಮಾತಿಗೆ ಪೂರಕವಾಗಿ ಭೂಮಿ - ಅರಣ್ಯ ಹಾಗೂ ಜಲ - ನೈರ್ಮಲ್ಯ ಇವುಗಳ ಕೂಗು ಎಲ್ಲೆಡೆಯಿಂದ ಕೇಳಿ ಬಂದಿತು. ಭಾರೀ ಉದ್ದಿಮೆಗಳು, ಜಲವಿದ್ಯುತ್ ಯೋಜನೆಗಳ ತಾಂತ್ರಿಕ ವಿಧಾನಗಳ ವಿರುದ್ಧ ಸಾಮೂಹಿಕ ಆಂದೋಲನಗಳು ಅಂತಾರಾಷ್ಟ್ರೀಯವಾಗಿ ಸಂಘಟಿತವಾದುದು ಈ ಹಂತದಲ್ಲಿಯೇ. ನಗರಗಳಲ್ಲಿ ನೈರ್ಮಲ್ಯಸಂಬಂಧೀ ವಿಚಾರಗಳಿಗೆ ಆದ್ಯತೆ ಕೊಡುವಂತಾಯಿತು. ಪರಿಸರ ವಾದವು ಕೇವಲ ಮಾತಾಗಿ ಉಳಿಯದೆ ಕ್ರಿಯಾಶೀಲವಾಗಿ, ಜನಜಾಗೃತಿ ಮೂಡಿಸಿದ ಚಳವಳಿಗಳನ್ನು ಕಂಡಿತೆಂಬುದು ಈ ಹಂತದ ಮಹತ್ವದ ಹೆಜ್ಜೆಯಾಗಿದೆ.

ಈ ಮೇಲ್ಕಂಡ ಕಾಲಾನುಕ್ರಮದ ಹಂತಗಳಿಗನುಗುಣವಾಗಿ ದೇಶ ವಿದೇಶಗಳಲ್ಲಿ ಹುಟ್ಟಿಕೊಂಡ ಪರಿಸರ ವಾದಗಳನ್ನು ಈ ಮುಂದಿನಂತೆ ವಿಶ್ಲೇಷಿಸಬಹುದಾಗಿದೆ. ಇಂದಿನ ಅಭಿವೃದ್ಧಿ ನೀತಿಯ ವೈಫಲ್ಯಕ್ಕೆ ಮತ್ತು ಪರಿಸರ ಚಳವಳಿಗೆ ದೇಶದ ತುಂಬೆಲ್ಲ ಒಗ್ಗಟ್ಟಿದ್ದರೂ ಕೂಡ ಪರ್ಯಾಯ ಅಭಿವೃದ್ಧಿ ನೀತಿ ಯಾವುದೆನ್ನುವ ವಿಷಯದಲ್ಲಿ ಒಂದೇ ವಾದ ಇಲ್ಲ. ಪರಿಸರ ಪ್ರಜ್ಞೆ, ಪರಿಸರವಾದ ಹಾಗೂ ಪರಿಸರ ಸಿದ್ಧಾಂತ ಇವುಗಳು ಪರಿಸರ ಸಂಬಂಧಿತವೇ ಆಗಿದ್ದರೂ ಬೇರೆ ಬೇರೆ ಅರ್ಥಗಳನ್ನು ಹೊಂದಿವೆ. ಪರಿಸರ ಪ್ರಜ್ಞೆ ಅಂತರ್ಗತ, ಪರಿಸರವಾದ ವ್ಯಕ್ತ. ಹೀಗೆಯೇ ಇರಬೇಕು ಎನ್ನುವುದು ಪರಿಸರ ಸಿದ್ಧಾಂತ. ಹೀಗೆ ವಿಭಿನ್ನವಾಗಿರುವ ವೈಚಾರಿಕ ನೆಲೆಗಳಲ್ಲಿ ಪರಿಸರ ಚರ್ಚೆಗಳು, ವಾದಗಳು ಮುಂದುವರಿದು ಚಳವಳಿಗಳು ನಡೆದಿರುತ್ತವೆ. ಈ ಮುಂದಿನ ಪರಿಸರ ಪ್ರಜ್ಞೆ ಹಾಗೂ ಪರಿಸರ ವಾದಗಳನ್ನು ಕುರಿತು ಮಾಡಲಾಗಿರುವ ವಿಶ್ಲೇಷಣೆಗಳನ್ನು ಅವಲೋಕಿಸುವುದು ಅತ್ಯಗತ್ಯವಾದುದಾಗಿದೆ.

ಪ್ರಾಚೀನ ಕಾಲದಲ್ಲಿ ಪರಿಸರವನ್ನು ದೈವತ್ವದ ನೆಲೆಯಲ್ಲಿ ನೋಡುತ್ತಿದ್ದ ಸಂದರ್ಭವನ್ನು ಪರಿಸರವಾದವೆನ್ನಲಾಗದು. ಕಾರಣ ಆ ಕಾಲದ ಬಹುಪಾಲು ಎಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಪರಿಸರದೊಂದಿಗೆ ಪೂಜನೀಯ ಅವಿನಾಭಾವ ಸಂಬಂಧ ಹೊಂದಿದ್ದರು.

ಸಮುದ್ರ ವಸನೇ ಪೃಥ್ವೀ ಪರ್ವತಸ್ತನ ಮಂಡಲೇ |

ವಿಷ್ಣುಪತ್ನಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮ ಸ್ವಮೇ ||

ಅಂದರೆ ಹೇ ಸೃಷ್ಟಿಕರ್ತಳಾದ ವಿಷ್ಣುಪತ್ನಿಯೇ, ನದೀ ಸಮುದ್ರಗಳು ನಿನ್ನ ಒಡವೆ ವಸ್ತ್ರಗಳು, ಪರ್ವತ ಗುಡ್ಡಗಳು ನಿನ್ನ ಸ್ತನಗಳು. ಇಂತಹ ನಿನ್ನ ದೇಹದ ಮೇಲೆ ಕಾಲಿಡುತ್ತಿರುವುದಕ್ಕಾಗಿ ನನ್ನನ್ನು ಕ್ಷಮಿಸು ತಾಯಿ. ಎಂಬರ್ಥದಲ್ಲಿ ಸನಾತನ ಶ್ಲೋಕದಿಂದ ಆರಂಭವಾದ ಪರಿಸರ ಪ್ರಜ್ಞೆಯು ಪ್ರಕೃತಿಯನ್ನು ಪೂಜನೀಯ ಸ್ಥಾನದಲ್ಲಿ ನೋಡಿತು. ಸೃಷ್ಟಿಯು ಪಂಚಭೂತಗಳಿಂದಾದುದು ಎಂದು ನಂಬಿ ಭೂಮಿ, ನೀರು, ಅಗ್ನಿ, ವಾಯು, ಆಕಾಶ ಮುಂತಾದ ವಿವಿಧ ಹೆಸರುಗಳಲ್ಲಿ, ವಿವಿಧ ರೀತಿಯಲ್ಲಿ ಪೂಜಿಸಲ್ಪಟ್ಟಿತ್ತು. ಮಳೆ ಬೆಳೆಗಳಲ್ಲಿ ಏರು-ಪೇರು ಉಂಟಾದಾಗ ಪರಿಸರ ಪ್ರಜ್ಞೆಯಲ್ಲಿ ಅಪರಾಧೀಭಾವ ಉಂಟಾಗಿ ವಿಶೇಷ ಪೂಜೆಗಳು, ಪ್ರಾಣಿ ಬಲಿಗಳು ನಡೆಯುತ್ತಿದ್ದವು. ಪ್ರಮಾಣವನ್ನು ಊಹಿಸಲಾಗದಿದ್ದರೂ ಪರಿಸರ ಮಾಲಿನ್ಯ ಇಂದಿನಂತಿರಲಿಲ್ಲ. ಆಗ 'ಭಾರತದ ತುಂಬ ಮರಗಳಿದ್ದವು, ಈಗ ಭಾರತದ ತುಂಬಾ ಜನರಿದ್ದಾರೆ' ಎಂಬುದು ಪೂರಕ ಮಾತು. ಜನಸಂಖ್ಯೆ ಹೆಚ್ಚಿದಂತೆಲ್ಲಾ ಬೇಡಿಕೆಗಳು ಜಾಸ್ತಿಯಾದಾಗ ಅರಣ್ಯ ಸಂಪತ್ತೇನು, ಮತ್ತಿನ್ನೇನು ಸಾಕಾದೀತು? ಹಿಂದೆಯೇ ಕಾಣಿಸಿಕೊಂಡಿತು ಪರಿಸರ ಮಾಲಿನ್ಯ, ಆರಂಭವಾಯಿತು ಪರಿಸರವಾದ. ಅಂದಿನಿಂದ ಇಂದಿನವರೆಗೂ ಪರಿಸರವನ್ನು ದೈವತ್ವದ ನೆಲೆಯಲ್ಲಿ ನೋಡುವ ವರ್ಗ ಇದ್ದೇ ಇದೆ. ಈ ವರ್ಗವು ದೈವವನ, ಮಂಡಲವನ, ಸೂರ್ಯವನ, ಚಂದ್ರವನ, ನವಗ್ರಹವನಗಳಂತಹ ಕೃತಕ ವನಗಳ ನಿರ್ಮಾಣದಲ್ಲಿ ತೊಡಗಿಸಿಕೊಂಡಿತು. ಜನರು ಬೆಳೆದ ಬೆಳೆಗಳನ್ನು ಪೂಜಿಸಿ ಮೊಸರನ್ನ ಎರಚಿದರೆ ವಿನಾ ಸೃಷ್ಟಿಚಕ್ರದಲ್ಲಿ ಇಡಿಯಾಗಿ ಭೂಮಿಗಿರುವ ಮಹತ್ವವನ್ನು, ಜೀವನ ನಶ್ವರತೆಯನ್ನು ಕಂಡುಕೊಂಡ ಸತ್ಯಗಳನ್ನು ವ್ಯಾಖ್ಯಾನಿಸಲಿಲ್ಲ.[೧೫] ಭಾರತೀಯ ಪರಿಸರವಾದದ ಪುನರಾವಲೋಕನ ಮಾಡುತ್ತಾ ಟಿ.ಎಸ್. ವಿವೇಕಾನಂದ ಅವರು "ಪಾರಂಪರಿಕ ಸನಾತನ ಪರಿಸರವಾದಿಗಳ ಹೃದಯ ಶ್ರೀಮಂತಿಕೆಯನ್ನು ವಿದೇಶಿ ಧನ ಸಹಾಯ, ಸರ್ಕಾರಿ ಯೋಜನೆಗಳು ಭಗ್ನಗೊಳಿಸಿದವು" ಎನ್ನುತ್ತಾರೆ. ಈ ಮಾತು ಸತ್ಯಾಂಶದಿಂದ ಕೂಡಿರುತ್ತದೆ. ಅಭಿವೃದ್ಧಿ ಪರವಾದ ಜನವರ್ಗ ಆಮಿಷಗಳಿಗೆ ಬಲಿಯಾಗಿ ಪರಿಸರವನ್ನು ನಿರ್ಲಕ್ಷಿಸಬಹುದು. ಆದರೆ ಪರಿಸರನಾಶವಿಲ್ಲದೆ ಅಭಿವೃದ್ಧಿಯಾದರೆ ಆಗಲಿ ಎನ್ನುವ ವರ್ಗವು ಇನ್ನೂ ಪರಿಸರದೊಂದಿಗಿನ ಸನಾತನತೆಯನ್ನು ಉಳಿಸಿಕೊಂಡಿದೆ. ಎರಡೂ ವರ್ಗಗಳಲ್ಲಿ ಅಂತರ್ಗತವಾಗಿರುವ ಭಾವನೆಗಳನ್ನು ಇಂದಿಗೂ ಈ ಮುಂದಿನ ದೇಶೀಪರಿಸರವಾದದಲ್ಲಿ ಕಾಣಬಹುದು.

ಭೂಮಿ ತಾಯಿ ಬಸುರಾಗಿ ಹಸಿರುಡಿಗೆ ಉಟ್ಕೊಂಡು, ಮೊಸರು ಅನ್ನಕೆ ಭ್ರಮಿಸಾಳೆ, ಆ ಊರ ಗೌಡನು ಕರಸವನೆ ಹೆಸವಂತರ, ಮಾಡಿಸಾನಾಗ ಮೊಸರನ್ನ - ಹಸಿರು ವನದಾಗೆ ಎರಚಾನೋ ಎಂದು ಜೀವ ಸೃಷ್ಟಿಯ ಸಂಕೇತವಾಗಿ 'ಭೂಮಿಗೆ ಬಸಿರಡಿಗೆ ಮಾಡಿಡುವಂತಹ ಹೃದಯವಂತ ಅನಕ್ಷರಸ್ಥ ಜನಪದರ ಪುರಾತನ ಕಳಕಳಿ ಸರ್ವಭಕ್ಷಕರ

ಕಿವಿಗೆ ಬೀಳಲೇ ಇಲ್ಲ.[೧೬] ಎಂಬ ಈ ವಿಚಾರದೊಳಗೆ ಭಾರತೀಯ ಪರಿಸರವಾದದ ಬೇರುಗಳ ಆಳದ ಅರಿವಾಗುತ್ತದೆ. ಅಕ್ಷರಸ್ಥ ವಿಚಾರವಾದಿಗಳಿಗಿಂತಲೂ ಅನಕ್ಷರಸ್ಥರೆಂದು ಗುರುತಿಸಲ್ಪಟ್ಟಿರುವ ಬುದ್ಧಿಜೀವಿ ಆದಿವಾಸಿಗಳು, ವನವಾಸಿಗಳು, ಬುಡಕಟ್ಟು ಜನರು, ರೈತರು ಹಾಗೂ ಹಳ್ಳಿಗರು ತಾವು ಇರುವಲ್ಲಿಯೇ ದೇವರ ಕಾಡು, ದೇವರ ಮರ, ಭೂಮಿ ತಾಯಿ, ಗಂಗಾಪೂಜೆ, ಅಶ್ವತ್ಥಕ್ಕೆ ಮದುವೆ ಮುಂತಾದ ನಂಬಿಕೆಗಳೊಂದಿಗೆ ಬದುಕಿ ಬಾಳುತ್ತಿದ್ದಾರೆ. ಅವರಲ್ಲಿರುವ ಪರಿಸರ ಪ್ರಜ್ಞೆಯನ್ನು ಗುರುತಿಸಿ ದೇಶೀ ಪರಿಸರವಾದ ಅಥವಾ ಸ್ಥಳೀಯ ಪರಿಸರವಾದವೆಂದು ಹೆಸರಿಸಬಹುದು. ಇಂದು ವಿವಿಧ ಅಭಿವೃದ್ಧಿಯೋಜನೆಗಳಿಗಾಗಿ ಈ ಸನಾತನ ಸ್ಥಳೀಯ ಪರಿಸರವಾದಿಗಳ ದೊಡ್ಡ ಗುಂಪನ್ನೆ ವಿಭಜಿಸಿ ಆಳುವ ಕೆಲಸ ನಡೆದೇ ಇರುವುದನ್ನು ಗುರುತಿಸಬಹುದು. ಇದನ್ನೆ ಗಾಂಧೀವಾದಿ ಪರಿಸರವಾದಿಗಳು ವಿರೋಧಿಸುತ್ತಾ ಬಂದಿರುವುದು.

ಗಾಂಧೀತತ್ವದ ಹೋರಾಟಗಾರರು ಪರಿಸರ ನಾಶಕ್ಕೆ ಮುಖ್ಯ ಕಾರಣಗಳನ್ನು ಇಂದು ಬೆಳೆಯುತ್ತಿರುವ ಉಪಭೋಗತ್ವದಲ್ಲಿ ಗುರುತಿಸುತ್ತಾರೆ.[೧೭] ಅಂದರೆ ಧಾರ್ಮಿಕ ಮತ್ತು ನೈತಿಕ ಕಾರಣಗಳಿಗಾಗಿ ಆಧುನಿಕ ಜೀವನ ಶೈಲಿಯನ್ನು ತಿರಸ್ಕರಿಸುತ್ತಾರೆ. ಆಧುನಿಕ ಜೀವನಪದ್ಧತಿಗಳು ಮನುಷ್ಯನನ್ನು ನಿಸರ್ಗಜೀವನದಿಂದ ದೂರಮಾಡುತ್ತವೆಂದು ಇವರು ನಂಬುತ್ತಾರೆ. ಜೀವ ಸಂಕುಲ ಮತ್ತು ಪ್ರಕೃತಿ ಪೂಜೆಯು ನಮ್ಮ ಸಂಸ್ಕೃತಿಯ ಅವಿಭಾಜ್ಯ ಅಂಗವಾಗಿದೆ ಎಂದು ಒಪ್ಪುತ್ತಾರೆ. ಗಾಂಧೀಜಿಯವರು ಪ್ರತಿಪಾದಿಸಿದ್ದ ರಾಮರಾಜ್ಯ ನಮ್ಮದಾಗಬೇಕೆನ್ನುವ ಗಾಂಧೀವಾದಿ ಪರಿಸರ ಹೋರಾಟಗಾರರು ವಸಾಹತು ಆಡಳಿತಪೂರ್ವದ ಗ್ರಾಮ ಸ್ವರಾಜ್ಯದತ್ತ ಹಿಂತಿರುಗಬೇಕೆನ್ನುವವರು. ಇಂದಿನ ಆಧುನಿಕ ಯುಗದಲ್ಲೂ ನೈತಿಕ ಜೀವನದ ಮಹತ್ವವನ್ನು ಜಗತ್ತಿನಾದ್ಯಂತ ಸಾರಲು ಬಹಳವಾಗಿ ಶ್ರಮಿಸುತ್ತಿದ್ದಾರೆ. ಅದಕ್ಕೆ ಅವರು ಕೊಡುವ ಸಮರ್ಥನೆ ಎಂದರೆ ಆಧುನಿಕ ಜೀವನವಿಧಾನವು ಎಲ್ಲ ರೀತಿಯಲ್ಲೂ ಪರಿಸರ ವಿರೋಧಿಯಾದದ್ದು ಎಂಬುದಾಗಿದೆ. ಆಧುನಿಕ ತತ್ತ್ವಗಳನ್ನು ಮಾತಿನಲ್ಲಿ ಮತ್ತು ಬರವಣಿಗೆಯಲ್ಲಿ ಅವರು ಖಂಡಿಸುತ್ತಾರೆ. ಪರಿಸರನಾಶಕ್ಕೆ ಬಡವರು ಕಾರಣ ಅಲ್ಲವೇ ಅಲ್ಲ ಎಂಬುದು ಗಾಂಧೀವಾದಿಗಳ ವಾದ. ಭಾರತದ ಸಂಪ್ರದಾಯಬದ್ಧ ಜೀವನ ಶೈಲಿಯಲ್ಲಿಯೇ ಇಂದಿನ ಆಧುನಿಕ ಅಭಿವೃದ್ಧಿಗೆ ಪರ್ಯಾಯ ಇದೆ ಎಂಬುದು ಅವರ ನಿಲುವಾಗಿದ್ದು ಮಾರ್ಕ್ಸಿಸ್ಟರ, ಬಂಡವಾಳಶಾಹಿಗಳ ವಿರೋಧಕ್ಕೆ ಕಾರಣರಾಗಿದ್ದಾರೆ. ಪರಿಸರವನ್ನೂ ಉಳಿಸಿ ಅಭಿವೃದ್ಧಿಯನ್ನೂ ನಡೆಸಲು ಗಾಂಧೀ ಪ್ರಣೀತ ಪರಿಸರವಾದವು ಬದ್ಧವಾಗಿದೆ ಹಾಗೂ ಈ ಮುಂದಿನ ಮಾರ್ಕ್ಸಿಸ್ಟರ ಪರಿಸರವಾದಕ್ಕೆ ತದ್ವಿರುದ್ಧವಾಗಿದೆ.

ಪರಿಸರವಾದಿ ಮಾರ್ಕ್ಸಿಸ್ಟರು ಗಾಂಧೀವಾದಿ ಪರಿಸರವಾದಿಗಳ ತದ್ವಿರುದ್ಧ ನಂಬಿಕೆ ಹೊಂದಿದವರು ; ಸಂಪ್ರದಾಯಗಳನ್ನು ನಂಬದವರು. ಇಂದಿನ ಪರಿಸರ ನಾಶಕ್ಕೆ ಮೂಲ ಕಾರಣ ಸಂಪನ್ಮೂಲಗಳ ಅಸಮಾನ ಹಂಚಿಕೆ ಎಂಬುದು ಇವರ ವಾದ. ಅಂದರೆ ಇವರು ಆರ್ಥಿಕ ಹಿನ್ನೆಲೆಯಲ್ಲಿ ಪರಿಸರವನ್ನು ನೋಡುತ್ತಾರೆ. "ಶ್ರೀಮಂತರು ಇನ್ನೂ ಹಣ ಮಾಡಲಿಕ್ಕಾಗಿ ಸಂಪನ್ಮೂಲಗಳನ್ನು ಕಿತ್ತುಕೊಳ್ಳುತ್ತಾರೆ ; ಬಡವರು ಬದುಕಿ ಉಳಿಯಲಿಕ್ಕಾಗಿ ಸಂಪನ್ಮೂಲಗಳನ್ನು ಕಿತ್ತುಕೊಳ್ಳುತ್ತಾರೆ."[೧೮] ಈ ಮಾತು ಸಂಪನ್ಮೂಲಗಳ ಸಮಾನ ಹಂಚಿಕೆ ಆಗದಿರುವುದನ್ನು ಸ್ಪಷ್ಟಪಡಿಸುತ್ತದೆ.

ಬಡವ-ಶ್ರೀಮಂತರೆಂಬ ಭೇದಭಾವ ತೊಲಗಬೇಕು ಎನ್ನುವ ಮಾರ್ಕ್ಸ್‌ವಾದಿ ಪರಿಸರ ಪ್ರಿಯರು ಆರ್ಥಿಕ ಮತ್ತು ರಾಜಕೀಯ ಶಕ್ತಿಯ ಸಮಾನ ಹಂಚಿಕೆಯ ಗುರಿ ಹೊಂದಿದ್ದು ಜನರನ್ನು ಸಂಘಟಿಸುತ್ತಿರುತ್ತಾರೆ. ಮಾರ್ಕ್ಸ್‌ವಾದಿಗಳಲ್ಲಿಯೂ ಆರ್ಥಿಕ ಸ್ಥಿತವಂತರಿದ್ದು ರಾಜಕೀಯ ಬೆಂಬಲದಡಿಯಲ್ಲಿಯೇ ಚಟುವಟಿಕೆಗಳನ್ನು ನಡೆಸುತ್ತಿರುವುದನ್ನು ಗುರುತಿಸಬಹುದು. ಮಾರ್ಕ್ಸ್‌ವಾದಿಗಳು ವಿಜ್ಞಾನವನ್ನು ಜನಪ್ರಿಯಗೊಳಿಸುತ್ತ ಪರಿಸರ ಚಳವಳಿಗಳಲ್ಲಿ ಜನರ ಪಾಲ್ಗೊಳ್ಳುವಿಕೆಯನ್ನು ಬಯಸುತ್ತಾರೆ. ಆದರೆ ನಕ್ಸಲ್‌ಬಾರಿ ಚಟುವಟಿಕೆಗಳಲ್ಲಿ ಭಾಗವಹಿಸುವ ಗುಂಪುಗಳು, ಕ್ರಾಂತಿಕಾರಿ ಗುಂಪುಗಳು ಮಾರ್ಕ್ಸ್‌ವಾದೀ ತತ್ತ್ವಗಳಡಿಯಲ್ಲಿ ನಡೆಸುತ್ತಿರುವ ಹೋರಾಟಗಳೆಲ್ಲವೂ ಪರಿಸರ ಚಳವಳಿಗಳಾಗಿಲ್ಲವೆಂಬುದನ್ನು ಗಮನಿಸಬೇಕು. ಪರಿಸರ ಚಳವಳಿಗಳು ಬಂಡವಾಳ ಹತೋಟಿಯಿಂದ ಮುಕ್ತವಾಗಿರಬೇಕೆಂಬ ಮಾರ್ಕ್ಸಿಸ್ಟರ ಪರಿಸರವಾದವನ್ನು ಪ್ರಸ್ತುತದಲ್ಲಿ ಗಂಭೀರವಾಗಿ ಪರಿಗಣಿಸಬಹುದಾಗಿದೆ.

ಮಾರ್ಕ್ಸ್‌ವಾದಿ ಪರಿಸರವಾದವು ಹಿನ್ನೆಡೆ ಅನುಭವಿಸುತ್ತಿರುವಾಗ, ಗಾಂಧೀವಾದಿ ಪರಿಸರವಾದವು ಜನಪ್ರಿಯತೆ ಗಳಿಸದಿರುವ ಈ ಕಾಲದಲ್ಲಿ ಬಂಡವಾಳಶಾಹಿ ಪರಿಸರವಾದವು ದಿನದಿಂದ ದಿನಕ್ಕೆ ವೇಗ ಹೆಚ್ಚಿಸಿಕೊಳ್ಳುತ್ತಿದೆ. ಹೊಸ ಆರ್ಥಿಕ ನೀತಿಯ ಹೆಸರಿನಲ್ಲಿ ಉದಾರೀಕರಣ ದೇಶದೊಳಗೆ ಪ್ರವೇಶಮಾಡಿದೆ. ವಿದೇಶಿ ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ದೊರೆತು ಭಾರತದ ಮಾರುಕಟ್ಟೆ ಇಡೀ ಜಗತ್ತಿಗೆ ತೆರೆದುಕೊಳ್ಳಬೇಕು ಎಂಬ ಅಂತಾರಾಷ್ಟ್ರೀಯ ಒತ್ತಡಗಳಿಗೆ ಸಿಲುಕಿದೆ. ಎಲ್ಲರಿಗೂ ಸಮಾನ ಅವಕಾಶವಿರುವ ಪ್ರಜಾಪ್ರಭುತ್ವವನ್ನು ಪ್ರತಿಷ್ಠಾಪಿಸಿ ಪರಿಸರಕ್ಕೂ, ಜನರಿಗೂ ನ್ಯಾಯವಾಗಿ ಸಿಗಬೇಕಾದ ಮನ್ನಣೆ ಸಿಗುವಂತೆ ಮಾಡುವುದು ಬಂಡವಾಳಶಾಹಿ ಪರಿಸರವಾದಿಗಳ ಮೂಲತತ್ತ್ವ. ಆದರೆ ಸಮಾನತೆಯೇ ಇಲ್ಲದಿರುವ ಸಮಾಜದಲ್ಲಿ ಇಂತಹ ತತ್ತ್ವಗಳನ್ನು ಅಳವಡಿಸಹೋದರೆ ಅನರ್ಥವು ಹೆಚ್ಚಾದೀತೇ ಹೊರತು ನಿಜವಾದ ಪರಿಸರ ಪ್ರಗತಿ ಸಾಧ್ಯವಾಗದು. ಅಸಮಾನತೆಯನ್ನು ಸೃಷ್ಟಿಸುವ ಹುನ್ನಾರ ಶ್ರೀಮಂತ ವರ್ಗದಿಂದಲೇ ನಡೆಯುತ್ತಿರುತ್ತದೆ. ಶ್ರೀಮಂತವರ್ಗ ಉದ್ದಿಮೆಗಳ ಸ್ಥಾಪನೆಗೆ ಅಪಾರವಾದ ಬಂಡವಾಳವನ್ನು ಹೂಡುವಂತೆ ಪರಿಸರ ಚಳವಳಿಗಳನ್ನು ಸಂಘಟಿಸಲೂ ಬಂಡವಾಳವನ್ನು ಹೂಡುತ್ತಿದೆ. ಇದು ಶ್ರೀಮಂತವರ್ಗದ ದ್ವಂದ್ವಾತ್ಮಕ ನೀತಿಯಾಗಿದ್ದು ಪರಿಸರ ಬಿಕ್ಕಟ್ಟು ತಲೆದೋರುವಂತೆ ಮಾಡಿದೆ. ಅಂದರೆ ದುಡಿಯುವ ಸಾಮಾನ್ಯವರ್ಗವನ್ನು ಪ್ರಶ್ನಿಸುವ ಮಧ್ಯಮವರ್ಗದಿಂದ ಬೇರ್ಪಡಿಸಿ ಲಾಭಮಾಡಿಕೊಳ್ಳುವುದು ಶ್ರೀಮಂತವರ್ಗದ ಉದ್ದೇಶ. ಬಂಡವಾಳಿಗರು ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಸ್ಥಾಪಿಸಿದ ಮೇಲೂ ಸಾಮಾನ್ಯ ಜನರ ಸಾಮಾಜಿಕ ಕಾರ್ಯಕ್ರಮಗಳಿಗೆ ಆಕರ್ಷಕ ದೇಣಿಗೆ ನೀಡಿ ಪರಿಸರ ಪ್ರಶ್ನೆಯನ್ನೇ ಎತ್ತದಂತೆ ಮಾಡುತ್ತಾರೆ. ದಾಂಡೇಲಿ ವೆಸ್ಟ್ ಕೋಸ್ಟ್ ಪೇಪರ್ ಮಿಲ್‌ನಿಂದ ಕಾಳಿ ನದಿ ಮಾಲಿನ್ಯ ಕುರಿತಾದ ಚಳವಳಿ ಇನ್ನೂ ಜೀವಂತವಾಗಿರುವಾಗಲೇ ಸುತ್ತಮುತ್ತಲಿನ ಜನರ ಸಾಮಾಜಿಕ - ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ, ಕ್ರೀಡಾಕೂಟಗಳನ್ನು ನಡೆಸಲು, ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವಾಗಿ ಪ್ರತಿವರ್ಷ ಹಣ ಕೊಡುತ್ತಾರೆ. ಪಡೆದವರ ಮನಸ್ಥಿತಿಯೊಳಗೆ ಕಾರ್ಖಾನೆಯಿಂದುಂಟಾಗುವ ಮಾಲಿನ್ಯದ ವಿರುದ್ಧ ಹೋರಾಟ ಮಾಡುವ ಮನೋಭಾವ ಮುಂದುವರಿಯಲು ಸಾಧ್ಯವೇ ?

ಬಂಡವಾಳಶಾಹಿ ಪರಿಸರವಾದದಿಂದ ಜನರಲ್ಲಿ ಉಪಭೋಗತ್ವ ಹೆಚ್ಚಿ 'ಬಳಸು ಬಿಸಾಡು' ಎಂಬ ಹುಚ್ಚು ವಸ್ತುಗಳ ಉತ್ಪಾದನೆಗೆ ಅನುಕೂಲ ಮಾಡಿಕೊಟ್ಟು ಬಂಡವಾಳಿಗರ ಲಾಭ ಹೆಚ್ಚುತ್ತದೆಯೇ ಹೊರತು ಪರಿಸರ ನಾಶವನ್ನು ಯಾವುದೇ

ರೀತಿಯಿಂದಲೂ ಕಡಿಮೆ ಮಾಡುವುದಿಲ್ಲ. ಪರಿಸರನಾಶದ ಫಲವನ್ನೆಲ್ಲಾ ಪರಿಸರ ಸ್ನೇಹಿ ಜನರ ಹೆಗಲಿಗೆ ವರ್ಗಾಯಿಸುವ ಬಂಡವಾಳಶಾಹಿ ಪರಿಸರವಾದಿಗಳ ತಂತ್ರಗಳು 'ಅಭಿವೃದ್ಧಿಯ ಜೊತೆಗೆ ಪರಿಸರ ಉಳಿಸುವ' ವೈಜ್ಞಾನಿಕ ಸಂರಕ್ಷಣೆಗೆ ಅಪವಾದವಾಗಿದೆ.

ವೈಜ್ಞಾನಿಕ ಸಂರಕ್ಷಣೆ ಪರಿಸರವಾದವೆಂಬುದು ಮತ್ತೊಂದು ಬಗೆಯದು. ಅತ್ಯಂತ ಪ್ರಭಾವಶಾಲಿಯಾದ ಇದರೊಳಗಿನ ಪರಿಸರವಾದಿಗಳೆಂದರೆ ಸರ್ಕಾರ ಮತ್ತು ಅಧಿಕಾರಿಗಳು. ಭೂಮಿ ಮತ್ತು ಮಣ್ಣು ಸಂರಕ್ಷಣೆಗಾಗಿ ಸಂಪೂರ್ಣ ಸ್ವಾಯತ್ತತೆ ಇರುವ ಸರ್ಕಾರಿ ಇಲಾಖೆಯು ಪ್ರತ್ಯೇಕವಾಗಿ ಇರಬೇಕು ಎಂಬುದು ಅಧಿಕಾರಿವರ್ಗದವರು ಪ್ರತಿಪಾದಿಸುವ ಉಪಾಯ. ದೇಶದಲ್ಲಿ ಯಾವುದೇ ಕೆಲಸ ಆಗಬೇಕೆಂದರೂ ಸರ್ಕಾರವೇ ಮುಂದೆ ಬರಬೇಕೆಂಬುದು ಅವರ ಅಭಿಪ್ರಾಯ.[೧೯] ಈ ಮಾತಿನಂತೆ ಸರ್ಕಾರವು 'ವನ್ಯಜೀವಿ ಸಂರಕ್ಷಣಾ ಕಾಯಿದೆ ೧೯೭೨, ಅರಣ್ಯ ಸಂರಕ್ಷಣಾ ಕಾಯಿದೆ ೧೯೮೦ ಮತ್ತು ಪರಿಸರ ರಕ್ಷಣಾ ಕಾಯಿದೆ ೧೯೮೬ ಹೀಗೆ ಅನೇಕ ಪರಿಸರ ರಕ್ಷಣೆಯ ಕಾನೂನುಗಳು ಜಾರಿಗೆ ತರುವಂತೆ ಮಾಡಲಾಯಿತು. ಜನರ ಹಿತವನ್ನು ಕಡೆಗಣಿಸುವ ಈ ವೈಜ್ಞಾನಿಕ ಸಂರಕ್ಷಣೆ ಪರಿಸರವಾದಿಗಳ ಗುಂಪನ್ನು ಗಾಂಧೀವಾದಿ ಮತ್ತು ಮಾರ್ಕ್ಸ್‌ವಾದಿ ಪರಿಸರ ಪ್ರಿಯರು ನಂಬುವುದಿಲ್ಲ. ಆದರೂ ಪ್ರತಿಯೊಂದು ಪರಿಸರ ಚಳವಳಿಗಳ ಸಂದರ್ಭದಲ್ಲಿ ಸರ್ಕಾರಕ್ಕೆ ಕಾನೂನಿನ ಜಾರಿಯ ನೆನಪು ಮತ್ತು ನೆರವಿಗೆ ವೈಜ್ಞಾನಿಕ ಪರಿಸರವಾದಿ ಗುಂಪಿನ ಕೊಡುಗೆಯನ್ನು ಗಮನಿಸಲೇಬೇಕಾಗಿದೆ.

ಸ್ವಾನುಭವ ಪರಿಸರವಾದವು ಯಾವ ಕಾಲದಲ್ಲಿಯೂ ಇರುವುದೇ ಆಗಿದೆ. ಪರಿಸರದ ಕುರಿತು ವೈಯಕ್ತಿಕವಾಗಿ ಹೊಂದಿರುವ ನಿಲುವುಗಳು ಮತ್ತು ಅವುಗಳ ಅಭಿವ್ಯಕ್ತಿಯನ್ನು ಸ್ವಾನುಭವವಾದ ಎನ್ನಬಹುದು. ಪರಿಸರ ಚಳವಳಿಗಳ ಪೂರ್ವದಲ್ಲಿ ಹಾಗೂ ಚಳವಳಿಗಳ ಕಾಲದಲ್ಲಿ ಬರವಣಿಗೆ, ಹೇಳಿಕೆಗಳು, ಭಾಷಣಗಳು, ಹಾಡುಗಳು, ಕತೆಗಳು, ಫೋಟೋಗಳು, ಸಾಕ್ಷ್ಯಚಿತ್ರ ನಿರ್ಮಾಣ, ಸ್ಲೈಡ್‌ಷೋ, ಕಿರುಚಿತ್ರ, ನುಡಿಮುತ್ತುಗಳು ಮುಂತಾದ ಕ್ರಿಯೆಗಳ ಮೂಲಕ ವೈಯಕ್ತಿಕವಾದುದನ್ನು ಹೇಳಲಾಗುತ್ತಿದೆ. ಸೀಬರ್ಡ್ ವಿರೋಧದ ಚಳವಳಿ ಆರಂಭವಾಗಿದ್ದೇ ನಾನು ಸ್ಲೈಡ್‌ಷೋ ಮಾಡಿ ತೋರಿಸಿದ ಮೇಲೆ ಎಂದು ಹೇಳಿಕೊಳ್ಳುವಂತಹ ಅನೇಕ ಸಂದರ್ಭಗಳು ವಿವಿಧ ಪರಿಸರ ಚಳವಳಿಗಳ ಕಾಲದಲ್ಲಿ ಕಾಣಿಸಿಕೊಳ್ಳಬಹುದು. ಅಂತಹ ಸಂದರ್ಭಗಳಲ್ಲಿ ಘಟನೆಯ ಹಿಂದಿರುವ ಇತರ ಸತ್ಯಗಳನ್ನು ತಿಳಿಯಬೇಕಾಗುತ್ತದೆ. ಯಾವ ಲಾಭವನ್ನೂ ನಿರೀಕ್ಷಿಸದೆ, ಹೇಳಿಕೊಳ್ಳದೆ ಪರಿಸರ ಸೇವಾವಾದಿಗಳೆನ್ನಬಹುದಾದ ಸಾಲುಮರದ ತಿಮ್ಮಕ್ಕ ಅಂತಹವರ ಸ್ವಾನುಭವವನ್ನು ಕುರಿತು ಕೇಳಿ ಒಪ್ಪಿಕೊಳ್ಳಬಹುದಾದರೂ ವಾದ ಮಂಡಿಸಲೇಬೇಕಾಗಿಲ್ಲ. ಸೂಡೋ ಪರಿಸರವಾದ, ಕಾನ್ವೆಂಟ್ ಪರಿಸರವಾದ ಇವೇ ಮುಂತಾದವುಗಳು ಈ ಸ್ವಾನುಭವವಾದದಡಿಯಲ್ಲಿ ಬರುತ್ತವೆ. ಪರಿಸರ ಚಳವಳಿಗಳ ಸೋಲು-ಗೆಲುವುಗಳ ಹಿಂದೆ ಸ್ವಾನುಭವವಾದವನ್ನು ನಂಬಲೂ ಆಗದು, ಕೈ ಬಿಡಲೂ ಆಗದು.

ಭಾರತದಲ್ಲಿ 'ಸಮಾಜವಾದ' ಅಥವಾ 'ಸಮತಾವಾದ'ಗಳು ಮಾತ್ರ ವಾದಗಳಾಗಿ ನಿಲ್ಲಬಹುದೇ ವಿನಾ ಪರಿಸರ ಎಂದೂ 'ವಾದ'ವಾಗಲು ಸಾಧ್ಯವಿಲ್ಲ. ಯಾವುದು ಆಚರಣೆಗೆ ಬರದಿದ್ದರೂ ಚಿಂತೆ ಇಲ್ಲವೋ ಅದು 'ವಾದ' ಆಗುತ್ತದೆ. ಪರಿಸರವೆಂದರೆ ಬದುಕು, ಬದುಕು ವಾದವೂ ಅಲ್ಲ, ತರ್ಕವೂ ಅಲ್ಲ, ಅದು ಆಚರಣೆ.[೨೦] ಈ ಮಾತುಗಳು

ಅರ್ಧಸತ್ಯವಾಗಿವೆ ಎನಿಸಿದರೂ ಇನ್ನೊಂದು ಅರ್ಥದಲ್ಲಿ ಬದುಕು ಒಂದು ನಿರಂತರ ತರ್ಕವೇ ಆಗಿದೆ. ಯಾರೂ ಹೇಗೆ ಹೇಗೋ ಬದುಕಲು ಇಷ್ಟಪಡುವುದಿಲ್ಲವೆನ್ನುವಾಗ ತರ್ಕಗಳು ಹುಟ್ಟಿಕೊಳ್ಳುತ್ತವೆ.ಇದೇ ರೀತಿಯಲ್ಲಿ ಪರಿಸರವೂ ಇಂದು ತರ್ಕಬದ್ಧ ವಿಷಯಗಳಡಿಯಲ್ಲಿ ಸೇರುತ್ತದೆ.ಅದರಂತೆ ಈ ಮೇಲ್ಕಂಡ ಎಲ್ಲ ಪರಿಸರವಾದಿ ಗುಂಪುಗಳ ನಡುವೆ ನಡೆದಿರುವುದು ವಿವಿಧ ರೀತಿಯಲ್ಲಿ ವಾದಗಳೇ ಆಗಿವೆ. ಆದರೆ ಈ ಎಲ್ಲ ಗುಂಪುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದು ಎದ್ದು ಕಾಣುತ್ತದೆ. ಇದರಿಂದಾಗಿಯೇ ವಿನಾಶಕಾರಿ ಅಭಿವೃದ್ಧಿಗೆ ಒಂದು ಸರಿಯಾದ ಪರ್ಯಾಯವನ್ನು ಸೂಚಿಸಲು ಸಾಧ್ಯವಾಗದೆ, ಬಂಡವಾಳಶಾಹಿಗಳು ಪರಿಸರವಾದಿಗಳನ್ನು 'ಅಭಿವೃದ್ಧಿ ವಿರೋಧಿ'ಗಳೆಂದೂ, ವಿದೇಶಿಯರ ಏಜೆಂಟರೂ ಎಂದು ಕರೆಯಲು ದಾರಿಯಾಯಿತು. ಪರಿಸರ ಪ್ರಜ್ಞೆ ಪ್ರತಿಯೊಬ್ಬರದ್ದಾಗಿರುತ್ತದೆ. ಪರಿಸರವಾದ ಹಲವರದ್ದಾಗಿದೆ. ಪರಿಸರ ಸಿದ್ಧಾಂತವೆಂಬುದು ಇನ್ನೂ ಯಾರೊಬ್ಬರದೂ ಆಗಿಲ್ಲವೆಂಬುದನ್ನು ಈ ಮುಂದಿನ ಅಧ್ಯಯನದಲ್ಲಿ ಕಂಡುಕೊಳ್ಳಲು ಪ್ರಯತ್ನಿಸಲಾಗಿದೆ.

೨.೨ ಪ್ರೇರಕ ಅಂಶಗಳು

ಚರಿತ್ರೆಯಲ್ಲಿ ನಡೆದಿರುವ ಪುನರುಜ್ಜೀವನ ಚಳವಳಿ, ಭಕ್ತಿಪಂಥ ಚಳವಳಿ, ಸಮಾಜೋ-ಧಾರ್ಮಿಕ ಚಳವಳಿ, ಸ್ವಾತಂತ್ರ್ಯ ಚಳವಳಿ, ಹಿಂದುಳಿದ ವರ್ಗಗಳು ಮತ್ತು ದಲಿತ ಚಳವಳಿಗಳೇ ಮುಂತಾಗಿ ಇತ್ತೀಚೆಗಿನ ಪರಿಸರ ಚಳವಳಿಗಳು ಇದ್ದಕ್ಕಿದ್ದಂತೆ ಸಂಭವಿಸಿದ ಘಟನೆಗಳಲ್ಲ. ಪ್ರತಿಯೊಂದೂ ಚಳವಳಿಗೆ ಅವುಗಳದ್ದೆ ಆದ ಪ್ರೇರಕ ಅಂಶಗಳು ಕಾರಣಗಳಾಗಿರುತ್ತವೆ. ಇಂಗ್ಲಿಷರ ವಿರುದ್ಧದ ಸ್ವಾತಂತ್ರ್ಯ ಚಳವಳಿಗೆ ಭಾರತೀಯರನ್ನು ಪ್ರೇರೇಪಿಸಿದ ಅಂಶಗಳಲ್ಲಿ ಇಂಗ್ಲಿಷ್ ಶಿಕ್ಷಣವೂ ಒಂದು. ಮೀಸಲಾತಿ ಪ್ರಶ್ನೆಯು ಹಿಂದುಳಿದ ವರ್ಗಗಳ ಮತ್ತು ದಲಿತ ಚಳವಳಿಗಳಿಗೆ ಮುಖ್ಯ ಪ್ರೇರಣೆಯಾಯಿತು. ಅಂತೆಯೇ ಪರಿಸರ ಚಳವಳಿಗಳಿಗೂ ಪ್ರೇರಕ ಅಂಶಗಳಿವೆ. ಅಂತಹ ಪ್ರೇರಕ ಅಂಶಗಳ ಕುರಿತು ವಿಚಾರ ಮಾಡುವುದರಿಂದ ಅವುಗಳ ಸ್ವರೂಪ, ಪರಿಣಾಮ ಮುಂತಾದವುಗಳ ಸ್ಪಷ್ಟ ಚಹರೆ ಲಭ್ಯವಾಗುತ್ತದೆ.

ಯುರೋಪಿಯನ್ನರ ವಸಾಹತುಶಾಹಿ ಧೋರಣೆಗಳು ಪರಿಸರದ ಮೇಲೆ ಪ್ರಭುತ್ವ ಸ್ಥಾಪಿಸಲು ಅನುಕೂಲ ಮಾಡಿಕೊಟ್ಟವು. ವಸಾಹತುಶಾಹಿ ಆಳ್ವಿಕೆ ಇದ್ದ ಕಡೆಯಿಂದ ಯುರೋಪಿಯನ್ನರಿಗೆ ಅಗತ್ಯವಿರುವ ವಸ್ತುಗಳು ಸರಬರಾಜು ಆಗುತ್ತಿದ್ದವು. ಅಂತಹ ವಸ್ತುಗಳ ಕೊರತೆ ಬಿದ್ದಾಗ ವಸಾಹತು ಆಡಳಿತವು ಅಲ್ಲಿನ ಜನರಿಂದ ಬಲವಂತವಾಗಿ ಉತ್ಪಾದಿಸಲು ಬೇಕಾದ ಕ್ರಮಗಳನ್ನು ಕೈಗೊಂಡಿತು. ಭಾರತದಲ್ಲಿ ಬ್ರಿಟಿಷ್ ಸರ್ಕಾರ ಬಂಗಾಳದ ರೈತರು ನೀಲಿ ಬೆಳೆಯನ್ನು ಕಡ್ಡಾಯವಾಗಿ ಬೆಳೆಯಲೇಬೇಕೆಂಬ ದಬ್ಬಾಳಿಕೆ ಪ್ರಯೋಗಿಸಿತು.[೨೧] ಬ್ರಿಟಿಷ್ ಆಡಳಿತ ಕಾಲದಲ್ಲಿ ಘಟ್ಟ ಪ್ರದೇಶಗಳು, ಕಾಡುಗಳು ವಾಣಿಜ್ಯ ಬೆಳೆಗಳನ್ನು ಬೆಳೆಯುವ ತೋಟಗಳಾದವು. ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮಘಟ್ಟಗಳು ಏಲಕ್ಕಿ, ಕಾಳುಮೆಣಸು ಮುಂತಾದ ಸಾಂಬಾರು ಪದಾರ್ಥಗಳು ಮತ್ತು ಮರ- ಮುಟ್ಟುಗಳನ್ನು ನಿರಂತರವಾಗಿ ರಫ್ತು ಮಾಡುವ ತಾಣಗಳಾದವು. ಕೃಷಿಯಲ್ಲಿ ಆಧುನಿಕತೆಯ ಪ್ರವೇಶದಿಂದಾಗಿ ಪರಿಸರ ಮಾಲಿನ್ಯಗಳು ಉಂಟಾದವು. ಪ್ರಗತಿಯ ಜೊತೆಗೂಡಿ ಪ್ರಾಕೃತಿಕ ಅನಾಹುತಗಳು ಮುಂದಾದವು. ಅನಾಹುತಗಳನ್ನು ಪ್ರಶ್ನಿಸಿ ಪರಿಸರ ಚಳವಳಿಗಳು ನಡೆದವು.

ಹೊಸ ಆರ್ಥಿಕ ನೀತಿಯ ಫಲವಾಗಿ ಕೈಗಾರಿಕೀಕರಣ ಹಾಗೂ ನಗರೀಕರಣಗಳೆರಡೂ ವೇಗವಾಗಿ ಬೆಳವಣಿಗೆಯನ್ನು ಹೊಂದಿದವು. ಬೃಹತ್ ಉದ್ದಿಮೆಗಳು ಅಸ್ತಿತ್ವಕ್ಕೆ ಬಂದವು. ಗ್ಯಾಟ್, ಡಂಕೆಲ್‌ನಂಥ ವಾಣಿಜ್ಯ ಒಪ್ಪಂದಗಳು ಏರ್ಪಟ್ಟ ಮೇಲೆ ಬಂಡವಾಳಶಾಹಿ ರಾಷ್ಟ್ರಗಳು ನಿರ್ಧಾರಕ ಶಕ್ತಿಗಳಾದವು. ಉದಾರೀಕರಣ, ಖಾಸಗೀಕರಣ ಮತ್ತು ಜಾಗತೀಕರಣ ನೀತಿಗಳು ೨೦ನೇ ಶತಮಾನದ ಕೊನೆಯ ವೇಳೆಗೆ ಅಭಿವೃದ್ಧಿಯೊಂದನ್ನೇ ಬೆಂಬಲಿಸಿದವು. ಇದು ಪರಿಸರದ ಮೇಲುಂಟಾದ ದುಷ್ಪರಿಣಾಮಗಳ ಕುರಿತು ಜಾಗತಿಕ ನೆಲೆಯಲ್ಲಿ ಚರ್ಚಿಸಲು ದಾರಿಮಾಡಿ ಕೊಟ್ಟಿತು. ಹೊಸ ಆರ್ಥಿಕ ನೀತಿಯ ಫಲವಾಗಿ ಅಭಿವೃದ್ಧಿಯೋಜನೆಗಳು ವಿಸ್ತರಿಸಲ್ಪಟ್ಟು ಬಲಗೊಳ್ಳುತ್ತಾ ಮುನ್ನಡೆದವು. ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ ಮುಂತಾದ ಪರಿಸರ ವೈಪರೀತ್ಯಗಳಿಗೆ ಕಾರಣವಾದವು. ಬೃಹತ್ ಯೋಜನೆಗಳಿಂದಾಗಿ ಅನೇಕರು ನಿರಾಶ್ರಿತರಾದರು. ಮಾಲಿನ್ಯತಡೆ ಹಾಗೂ ನಿರಾಶ್ರಿತರ ಪರವಾಗಿ ಪರಿಸರ ಚಳವಳಿಗಳು ನಡೆದವು.

ಬಂಡವಾಳಶಾಹಿಗಳು ತಾವು ಬಯಸಿದ ರೀತಿಯಲ್ಲಿ ಉತ್ಪಾದನಾ ಸಾಧನಗಳಾದ ಭೂಮಿ, ಅರಣ್ಯಗಳು, ನದೀನೀರು ಮುಂತಾದವುಗಳನ್ನು ದುಡಿಸಿಕೊಳ್ಳಲು ಮುಂದಾಗಿದ್ದಾರೆ. ದುಡಿಯುವ ವರ್ಗಗಳ ಹಿತಾಸಕ್ತಿಗಳಿಗೆ ವಿರುದ್ಧವಾಗಿರುವ ಬಂಡವಾಳಶಾಹಿಗಳ ಸರ್ವಾಧಿಕಾರವನ್ನು ಪರಿಣಾಮಕಾರಿಯಾಗಿ ಹತೋಟಿಯಲ್ಲಿಡಲು ಸರ್ಕಾರವು ಗಂಭೀರ ಪ್ರಯತ್ನಗಳನ್ನು ಮಾಡಿಲ್ಲವೆನಿಸುತ್ತದೆ. ಬಂಡವಾಳಶಾಹಿಗಳೊಳಗೆ ಗುರುತಿಸಿಕೊಂಡಿರುವ ರಾಜಕೀಯ ಧುರೀಣರು ಜನಸಾಮಾನ್ಯರ ಒಳಿತನ್ನು ಸಾಧಿಸುವುದರಲ್ಲಿ ಉತ್ಸುಕರಾಗಿರುವುದಿಲ್ಲ. ಉದ್ಯಮಪತಿಗಳು ತಮಗೆ ಬೇಕಾದಂತೆ ಕಾನೂನು-ಕಾಯಿದೆಗಳನ್ನು ಜಾರಿಗೊಳಿಸಿಕೊಂಡು ಪರಿಸರ ಸಂರಕ್ಷಣೆಯ ಪ್ರತಿಜ್ಞೆಯನ್ನು ಕೈಗೊಂಡು ಯೋಜನೆಗಳನ್ನು ಪ್ರಾರಂಭಿಸುವುದು ವಾಡಿಕೆಯಾಗಿದೆ.[೨೨] ಯೋಜನಾ ಪ್ರದೇಶದ ಒಂದು ಭಾಗದಲ್ಲಿ ಒಂದಿಷ್ಟು ಅರಣ್ಯ ಬೆಳೆಸಿ ಪರಿಸರ ಸಂರಕ್ಷಣೆಯ ಕೆಲಸವನ್ನು ಮುಗಿಸಿ ಬಿಡುತ್ತಾರೆ. ಜನರನ್ನು ಸಂತೈಸುವ ಅಥವಾ ಮೋಸಗೊಳಿಸುವ ಇಂತಹ ಬಂಡವಾಳಿಗರ ಪ್ರಯತ್ನವನ್ನು ಗುರುತಿಸಿ, ಪರಿಸರ ಸಂರಕ್ಷಣೆಯನ್ನು ಕೈಗೊಳ್ಳುವ ಪ್ರಯತ್ನವನ್ನು ಮಾಡಲು ಸಂಘಟನಾತ್ಮಕವಾಗಿ ಪರಿಸರ ಚಳವಳಿಗಳು ಮುಂದಾದವು.

ಪರಿಸರ ಶಿಕ್ಷಣ, ಜಾಗೃತಿ, ನಿರಂತರ ಕಟ್ಟೆಚ್ಚರ ಹಾಗೂ ಬದ್ಧತೆಗಳು ಪರಿಸರ ಸಂರಕ್ಷಣೆಗೆ ಅತ್ಯಗತ್ಯ. ಇವುಗಳನ್ನು ಜಗತ್ತಿನಾದ್ಯಂತ ಗುರುತಿಸಿ ಕಾರ್ಯೋನ್ಮುಖವಾಗಿರುವ ವ್ಯಕ್ತಿಗಳು, ಸಮೂಹಗಳು, ಸಂಘ ಸಂಸ್ಥೆಗಳು ಪರಿಸರ ಚಳವಳಿಗಳಿಗೆ ಪ್ರಮುಖ ಪ್ರೇರಕ ಅಂಶಗಳಾಗಿವೆ. ಈ ಪೈಕಿ ಅಮೆರಿಕಾದ ಭೌಗೋಳಿಕ ಸಮಾಜ, ಮಲೇಶಿಯಾದ ಭೂಗೆಳೆಯರು, ಯುರೋಪ್‌ನ ಗ್ರೀನ್‌ಪೀಸ್ ಸಂಘಟನೆ, ಕ್ಲಬ್ ಆಫ್ ರೋಮ್, ಹಸಿರು ಬಳಗಗಳು, ದೆಹಲಿಯಲ್ಲಿರುವ ವಿಜ್ಞಾನ ಮತ್ತು ಪರಿಸರ ಕೇಂದ್ರ, ಮುಂಬಯಿಯಲ್ಲಿರುವ ಪ್ರಕೃತಿ ವಿಜ್ಞಾನ ಸಮಾಜ, ಕರ್ನಾಟಕ ರಾಜ್ಯವಿಜ್ಞಾನ ಪರಿಷತ್ತು ಪ್ರಮುಖವಾದವುಗಳಾಗಿವೆ.[೨೩] ಇವುಗಳ ಕಾರ್ಯವ್ಯಾಪ್ತಿಯನ್ನು ಪರಿಸರ ಚಳವಳಿಗಳಲ್ಲಿ ಗುರುತಿಸಬಹುದು. ರುಡಾಲ್ಫ್ ಬಹ್ರೋ, ಸುಂದರ್‌ಲಾಲ್ ಬಹುಗುಣ, ಸಾಲುಮರದ ತಿಮ್ಮಕ್ಕ ಹಾಗೂ ಕುಸುಮ ಸೊರಬ ಮುಂತಾದ ಪರಿಸರ ಪ್ರೇಮಿಗಳು ಪರಿಸರದ ಬಗ್ಗೆ ಖಚಿತವಾದ ನಿರ್ಧಾರಗಳನ್ನು ತಳೆದಿದ್ದು, ಸರ್ಕಾರ ಮತ್ತು ಬಂಡವಳಿಗರ ಉದ್ದೇಶಗಳ ಬಗ್ಗೆ ಅನುಮಾನಗಳನ್ನು ಹೊಂದಿದ್ದಾರೆ. ಅಭಿವೃದ್ಧಿಯೋಜನೆಗಳ ಪ್ರಯೋಜನಗಳಷ್ಟೇ ಪ್ರಮಾಣದಲ್ಲಿ ಅಪಾಯಗಳೂ ಇರುತ್ತವೆ

ಎಂಬ ಅಭಿಪ್ರಾಯದೊಂದಿಗೆ ಪರಿಸರದ ಬಗ್ಗೆ ಖಚಿತ ನಿಲುವುಗಳನ್ನು ಹೊಂದಿರುವ ಇವರ ಮಾರ್ಗದರ್ಶನ, ಮುಂದಾಳುತನದಲ್ಲಿ ಪರಿಸರ ಚಳವಳಿಗಳು ಪ್ರೇರಣೆಗೊಂಡು ನಡೆದವು.

ಇಂದು ಪರಿಸರವನ್ನು ಕುರಿತ ಲಕ್ಷಾಂತರ ಪುಸ್ತಕಗಳು ಪ್ರಕಟಿತವಾಗಿವೆ. ಇವುಗಳಲ್ಲಿ ಅಮೆರಿಕಾದ ಪುಸ್ತಕಗಳೇ ಹೆಚ್ಚು. ಅನೇಕ ಭಾರತೀಯ ಕೃತಿಗಳೂ ಈ ಪಟ್ಟಿಯಲ್ಲಿವೆ. ೬೦ರ ದಶಕದ ನಂತರದಲ್ಲಿ ಭಾರತದಲ್ಲಿ ಪ್ರಕಟವಾದ ಪರಿಸರ ಸಾಹಿತ್ಯ ಅಚ್ಚರಿಪಡುವಷ್ಟಿದೆ.[೨೪] ರಾಖೆಲ್ ಕಾರ್ಸನ್‌ನ 'ಸೈಲೆಂಟ್ ಸ್ಪ್ರಿಂಗ್' ಎಂಬ ಕೃತಿಯು ಅಮೆರಿಕಾದ ಜನತೆಯಲ್ಲಿ ಅಭಿವೃದ್ಧಿವಾದಿಗಳ ವಿರೋಧಿ ಅಲೆ ಸೃಷ್ಟಿಸಿತು. ಮಾಧವ ಗಾಡ್ಗೀಳ ಮತ್ತು ರಾಮಚಂದ್ರ ಗುಹಾ ಅವರ 'ಇಕಾಲಜಿ ಅಂಡ್ ಈಕ್ವಿಟ' ಕೃತಿಯಲ್ಲಿ ಸ್ವಾರ್ಥಪರ ಸರ್ವಭಕ್ಷಕರು ಸಾಮಾನ್ಯ ಜನರಿಗೆ ಪರಿಸರ ಸಂರಕ್ಷಕರಾಗಿ ಕಾಣಿಸುತ್ತಾರೆ ಹೇಗೆ ? ಎಂದು ವಿವರಿಸಿದ್ದಾರೆ. ಪರಿಸರ ಸಾಹಿತ್ಯ ಕ್ಷೇತ್ರಕ್ಕೆ ಕರ್ನಾಟಕದ ಕೊಡುಗೆ ಪ್ರಮುಖವಾಗಿದೆ. ಪಂಪನಿಂದ ಹಿಡಿದು ಈವರೆವಿಗೂ ಪರಿಸರದ ಉಲ್ಲೇಖವಿರುವ ಕೃತಿಗಳು, ಕತೆಗಳು, ಕವಿತೆಗಳು, ಹಾಡುಗಳು ರಚಿತವಾಗಿವೆ. ಬೇಂದ್ರೆ, ಕುವೆಂಪು, ಶಿವರಾಮ ಕಾರಂತ, ಪೂರ್ಣಚಂದ್ರ ತೇಜಸ್ವಿ ಮುಂತಾದವರ ಪರಿಸರ ಸಾಹಿತ್ಯ ಬರವಣಿಗೆಗಳು ಪರಿಸರ ಮತ್ತು ಪರಿಸರವಾದಗಳ ಕುರಿತಾದ ವಿವರಣೆಗಳನ್ನು ಒಳಗೊಂಡಿವೆ. ಪರಿಸರ ಸಾಹಿತ್ಯವು ಇತರೆಲ್ಲ ವಿಷಯಗಳಿಗಿಂತ ಈ ಚಳವಳಿಗಳನ್ನು ದಾಖಲಿಸುವಲ್ಲಿ ಯಶಸ್ವಿಯಾಗಿರುವುದು ಕಡಿಮೆಯಾಗಿದ್ದರೂ ಪರಿಸರ ಚಳವಳಿಗಳಿಗೆ ಸ್ಫೂರ್ತಿ ನೀಡಿವೆ.

ಪರಿಸರ ಸಮಸ್ಯೆಗಳೆನಿಸಿರುವ ಭೂಮಿಯ ತಾಪಮಾನ ಏರಿಕೆ, ಓಝೋನ್ ಪದರದಲ್ಲಿ ರಂಧ್ರ, ಹಸಿರುಮನೆ ಪರಿಣಾಮ, ಆಮ್ಲಮಳೆ, ಸಮುದ್ರದ ನೀರಿನ ಮಟ್ಟದಲ್ಲಿ ಏರಿಕೆ, ಆಗಾಗ್ಗೆ ಹಬ್ಬುವ ಪ್ರಳಯವೆಂಬ ಸುದ್ದಿಯ ಭೀತಿ ಈ ಸಂಬಂಧ ನಡೆದ ವಿಶ್ವ ಶೃಂಗಸಮ್ಮೇಳನಗಳೇ ಮುಂತಾದವುಗಳು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ಪರಿಸರ ಚಳವಳಿಗಳಿಗೆ ಪ್ರೇರಕ ಅಂಶವಾಗಿವೆ. ಆಗಾಗ್ಗೆ ಜಾರಿಯಾದ ಪರಿಸರ ಸಂರಕ್ಷಣಾ ಕಾಯಿದೆಗಳು, ಅರಣ್ಯ ಸಂರಕ್ಷಣಾ ಕಾಯಿದೆಗಳು, ಭೂ ಹಿಡುವಳಿ ಕಾಯಿದೆಗಳು, ಸರ್ಕಾರಗಳು ಕಾಲ ಕಾಲಕ್ಕೆ ಜಾರಿಗೆ ತಂದ ನೀತಿಗಳು, ವನವಾಸಿಗಳು, ಬುಡಕಟ್ಟು ಜನರು, ರೈತರು, ಜನಸಾಮಾನ್ಯರು ಕ್ರಮೇಣ ಮಧ್ಯಮ ವರ್ಗದವರ ಭಾಗವಹಿಸುವಿಕೆ ಮುಂತಾದವುಗಳು ಪರಿಸರ ಚಳವಳಿಗಳಿಗೆ ಕಾರಣಗಳಾಗಿವೆ.

ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ಜಿಲ್ಲೆಯ ವಿಶಿಷ್ಟ ಭೌಗೋಳಿಕ ಅಂಶಗಳೂ ಸೇರಿದಂತೆ ಈ ಎಲ್ಲ ಬಗೆಯ ಪ್ರೇರಕ ಅಂಶಗಳಿಂದ ಪ್ರಭಾವಿತವಾಗಿರುವುದನ್ನು ಪ್ರಸ್ತುತ ಅಧ್ಯಯನದಲ್ಲಿ ವಿಶ್ಲೇಷಿಸಲಾಗಿದೆ. ಹಾಗೆಯೇ ಜಾಗತಿಕ ಪರಿಸರ ಚಳವಳಿಗಳು, ಭಾರತದ ಪರಿಸರ ಚಳವಳಿಗಳು ಹಾಗೂ ಕರ್ನಾಟಕದಲ್ಲಿನ ಪರಿಸರ ಚಳವಳಿಗಳನ್ನು ಮುಂದಿನ ಉಪಶೀರ್ಷಿಕೆಗಳಲ್ಲಿ ಸಮೀಕ್ಷೆ ಮಾಡಲಾಗಿದೆ.

೨.೩ ಅಂತಾರಾಷ್ಟ್ರೀಯ ಪರಿಸರ ಚಳವಳಿಗಳು

ಜಾಗತಿಕ ಪರಿಸರ ಚರಿತ್ರೆಯನ್ನು ಅವಲೋಕಿಸಿದರೆ ಪರಿಸರ ಪ್ರಜ್ಞೆ ಎಂಬುದು ಪ್ರಾಚೀನ ಕಾಲದಿಂದ ಸಮಕಾಲೀನ ಪ್ರಪಂಚದವರೆಗೂ ಇರುವ ಪರಿಸರವನ್ನು ಕುರಿತ ಅರಿವು ಅಥವಾ ತಿಳಿವಳಿಕೆಯಾಗಿದೆ. ಪರಿಸರದ ಅರಿವು ಒಂದು ತತ್ತ್ವರೂಪ

ಪಡೆದು ಪರಿಸರವಾದವಾಗಿ ರೂಪಗೊಂಡು ಚರ್ಚೆಯ ವಿಷಯವಾಗಿ ಬೆಳೆದು 'ಪರಿಸರಾಂದೋಲನ'ದ ರೂಪ ಪಡೆದದ್ದು ಅಮೆರಿಕಾದಲ್ಲಿ ೧೯೬೦ರಿಂದೀಚೆಗೆ. ಅಲ್ಲಿಂದ ಅರ್ಧಶತಮಾನ ಕಳೆದಿರುವ ಈ ಅವಧಿಯಲ್ಲಿ ವಿಶ್ವದ ಬಹುಪಾಲು ರಾಷ್ಟ್ರಗಳಲ್ಲಿ ವಿವಿಧ ರೀತಿಯ ಪರಿಸರವಾದಗಳು ರೂಪುಗೊಂಡಿವೆ ; ಅನೇಕ ಪರಿಸರ ಚಳವಳಿಗಳು ನಡೆದಿವೆ. ಇವುಗಳ ಪರಿಣಾಮಗಳೇನೋ ಎಂಬಂತೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಸರ ಸಮ್ಮೇಳನಗಳು, ಚರ್ಚೆಗಳೂ, ಒಪ್ಪಂದಗಳೂ ಏರ್ಪಟ್ಟಿವೆ. ಹಲವು ಪರಿಸರ ಸಂರಕ್ಷಣಾ ಯೋಜನೆಗಳು, ಕಾರ್ಯಕ್ರಮಗಳೂ ಹುಟ್ಟಿಕೊಂಡಿವೆ. ಪರಿಸರ ಚಳವಳಿಗಳು ಶ್ರೀಮಂತ ರಾಷ್ಟ್ರಗಳಲ್ಲಿ ಬಹುಪಾಲು ಯಶಸ್ವಿಯಾಗಿದ್ದರೆ ದ್ವಿತೀಯ ಜಗತ್ತಿನ ರಾಷ್ಟ್ರಗಳಲ್ಲಿ ಗೊಂದಲಮಯವಾಗಿವೆ. ಆದರೆ ತೃತೀಯ ಜಗತ್ತಿನಲ್ಲಿ ಪರಿಸರ ಯೋಜನೆ ಹಾಗೂ ಕಾರ್ಯಕ್ರಮಗಳು ಬಹುಪಾಲು ವಿಫಲವಾಗಿವೆ.[೨೪] ಈ ವಿಚಾರದಲ್ಲಿ ರಾಷ್ಟ್ರಗಳ ವಿಭಾಗೀಕರಣದಲ್ಲಿಯೇ ಗೊಂದಲವಿರುವುದರಿಂದ ಪರಿಸರ ಚಳವಳಿಗಳ ಯಶಸ್ಸು ಮತ್ತು ವಿಫಲತೆಯನ್ನು ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಆದರೂ ಈ ಮುಂದಿನ ಜಾಗತಿಕ ಪರಿಸರ ಚಳವಳಿಗಳ ಅಧ್ಯಯನದಿಂದ ಸ್ಪಷ್ಟತೆ ಹೊಂದುವುದು ಸಾಧ್ಯವಿದೆ.

ಅಮೆರಿಕಾದಲ್ಲಿ ನಡೆಸಿದ ಅಭಿಪ್ರಾಯ ಸಂಗ್ರಹಗಳ ಪ್ರಕಾರ ಅಲ್ಲಿನ ೨/೩ರಷ್ಟು ಭಾಗ ಸಾರ್ವಜನಿಕರು ಇನ್ನಷ್ಟು ಕಠಿಣ ಪಾರಿಸರಿಕ ನಿಯಂತ್ರಣಗಳನ್ನು ಬಯಸುತ್ತಾರೆ ; ಅದಕ್ಕಾಗಿ ಕಷ್ಟಪಟ್ಟು ಸಂಪಾದಿಸಿದ ಹಣವನ್ನು ಕೊಡಲು ಸಿದ್ಧರಿದ್ದಾರೆ.[೨೫] ಪ್ರತಿ ಏಳು ಜನರಲ್ಲಿ ಒಬ್ಬರು ಯಾವುದಾದರೂ ಪರಿಸರ ಸಂಘುಟನೆಯ ಸದಸ್ಯರಿರುತ್ತಾರೆ. ಈ ಮೇಲೆ ಹೇಳಿದ ದ್ವಿತೀಯ ಮತ್ತು ತೃತೀಯ ಜಗತ್ತಿನ ರಾಷ್ಟ್ರಗಳಲ್ಲಿ ಪಾರಿಸರಿಕ ನಿಯಂತ್ರಣಗಳಿಗಾಗಿ ಹಣ ಖರ್ಚುಮಾಡಿದ ಉದಾಹರಣೆಗಳು ಸೊನ್ನೆಗೆ ಸಮೀಪವಿರುವುದರಿಂದ ಶ್ರೀಮಂತ ರಾಷ್ಟ್ರಗಳಲ್ಲಿನ ಜನರ ಪರಿಸರ ಸಂಬಂಧಿ ಕಾಳಜಿಯು ಮೆಚ್ಚುವಂತಹುದಾಗಿದೆ. ಅಮೆರಿಕಾದಲ್ಲಿ ಪರಿಸರ ಸಂರಕ್ಷಣೆಯ ಕಾರ್ಯಕ್ರಮಗಳನ್ನು ತಮ್ಮ ಪಕ್ಷದ ಪ್ರಣಾಳಿಕೆಗಳಲ್ಲಿ ಸೇರಿಸಿಕೊಂಡಿರುವ ರಾಜಕೀಯ ಪಕ್ಷಗಳು ಜನಮನ್ನಣೆ ಗಳಿಸುತ್ತಿವೆ. ಭಾರತದ ಯಾವ ರಾಜಕೀಯ ಪಕ್ಷವೂ ಪರಿಸರ ಸಂರಕ್ಷಣೆ ವಿಚಾರವನ್ನು ಕುರಿತು ಪ್ರಣಾಳಿಕೆಯಲ್ಲಿ ತನ್ನ ನಿಲುವು ಪ್ರಕಟಿಸಿಲ್ಲದಿರುವುದನ್ನು ಇಲ್ಲಿಯೇ ಗಮನಿಸಬಹುದು. ಅಮೆರಿಕಾದಲ್ಲಿ ಸ್ಥಳೀಯ ಚುನಾವಣೆಗಳಿಂದ ಹಿಡಿದು ರಾಷ್ಟ್ರಾಧ್ಯಕ್ಷರ ಚುನಾವಣೆವರೆಗೆ ಪರಿಸರ ಬದ್ಧತೆಯನ್ನು ಕಾಣಬಹುದು. ಕ್ಯಾಲಿಫೋರ್ನಿಯಾದ ಕಾಳ್ಗಿಚ್ಚು ೨,೪೩,೦೦೦ ಎಕರೆ ವಿಸ್ತೀರ್ಣದ ಕಾಡನ್ನು ಸುಟ್ಟು ೨೭,೦೦೦ ಜನರನ್ನು ನಿರ್ವಸಿತರನ್ನಾಗಿಸಿತು. ರಾಷ್ಟ್ರಾಧ್ಯಕ್ಷ ಜಾರ್ಜ್ ಬುಷ್ ಅವರು ಇದನ್ನು 'ಚಾರಿತ್ರಿಕ ಬ್ಲಾಕ್ ಔಟ್' ಎಂದು ಕರೆದು ಎಲ್ಲರ ಸಹಕಾರದಿಂದ ಕಾಳ್ಗಿಚ್ಚು ನಂದಿಸಲು ಕ್ರಮಗಳನ್ನು ಕೈಗೊಂಡರು.

ಅಮೆರಿಕಾದ ರಾಜಕೀಯ ವಿಜ್ಞಾನಿ ರಿಚರ್ಡ್ ಆಂಡ್ರೂಸ್ "ಪರಿಸರಾಂದೋಲನದ ಪ್ರಭಾವವು ಸರ್ಕಾರದ ಎಲ್ಲ ಹಂತಗಳಲ್ಲಿ, ನಿಯಂತ್ರಣದಲ್ಲಿ ಮತ್ತು ಆಯ-ವ್ಯಯದ ಮೇಲೆ ಕಂಡು ಬರುತ್ತದಲ್ಲದೆ ಮಾಧ್ಯಮದ ಗಮನ ಅದರ ಮೇಲೆ ನಿರಂತರವಾಗಿದೆ. ನ್ಯೂಯಾರ್ಕ್ ಟೈಮ್ಸ್‌ನ ಸಂಪಾದಕ ಜಾನ್ ಓಕ್ಸ್ ಪರಿಸರಾಂದೋಲನದ ಶ್ರೇಷ್ಠ ಸಾಧನೆ ಬಗ್ಗೆ ಬರೆಯುತ್ತಾ 'ಅಮೆರಿಕನ್ನರಿಗೆ ರಾಷ್ಟ್ರಧ್ವಜ, ಮಾತೃತ್ವ ಮತ್ತು ಸೇಬಿನರಸದಷ್ಟೇ ಶ್ರೇಷ್ಠವಾದವು ರಾಷ್ಟ್ರೀಯ ಉದ್ಯಾನವನಗಳು' ಎನ್ನುತ್ತಾರೆ.[೨೬] ರಾಮಚಂದ್ರ ಗುಹಾ ಅವರು ಅಮೆರಿಕಾದಲ್ಲಿ ಅಧ್ಯಯನ ಮಾಡಿ ಸಂಗ್ರಹಿಸಿದ ಈ

ಅಭಿಪ್ರಾಯಗಳ ಪ್ರಭಾವವು ಜರ್ಮನಿ, ಇಂಗ್ಲೆಂಡ್ ಮುಂತಾದ ಇತರ ಮುಂದುವರಿದ ದೇಶಗಳಲ್ಲಿ ಆಗಿರುವುದನ್ನು ಗುರುತಿಸಬಹುದಾದರೂ ಭಾರತದ ಪರಿಸರಾಂದೋಲನದಲ್ಲಿ ಆಗಿಲ್ಲದಿರುವುದನ್ನು ಕಾಣಬಹುದು. ಇದಕ್ಕೆ ಭಾರತದ ಆರ್ಥಿಕಾಭಿವೃದ್ಧಿಯ ವ್ಯವಸ್ಥೆಯೇ ಕಾರಣವಾಗಿರಬಹುದು. ಪರಿಸರ ಆಂದೋಲನಗಳು ಆಸಕ್ತ ಸಂಘ ಸಂಸ್ಥೆಗಳು ಹಾಗೂ ವ್ಯಕ್ತಿಗಳು ನೇರ ಸಂಪರ್ಕವಿಲ್ಲದೆ ಜಗತ್ತಿನಾದ್ಯಂತ ಹರಡಿಕೊಂಡಿದ್ದರೂ ಅವು ಪರಸ್ಪರ ಒಂದಾಗಿಯೂ ಕೆಲವೊಮ್ಮೆ ತಮ್ಮೊಳಗೆ ಸ್ಪರ್ಧಿಸುತ್ತಲೂ ಕಾರ್ಯನಿರತವಾಗಿದ್ದು, ರಾಷ್ಟ್ರ-ರಾಷ್ಟ್ರಗಳ ನಡುವಣ ಗಡಿಗಳನ್ನು ಮೀರಿ ನಡೆಯುವ ಆಂದೋಲನಗಳಾಗಿವೆ.

ಜರ್ಮನಿಯಲ್ಲಿ ಪರಿಸರ ಸಮಸ್ಯೆಗಳನ್ನೇ ಆಧರಿಸಿದ ರಾಜಕೀಯ ಪಕ್ಷ 'ಗ್ರೀನ್ ಪಾರ್ಟಿ' ಎಂಬ ಹೆಸರಿನಿಂದ ೧೯೭೫ರ ಮಾರ್ಚ್‌ನಲ್ಲಿ ಅಸ್ತಿತ್ವಕ್ಕೆ ಬಂದಿದೆ. ಆರಂಭದಲ್ಲಿ ಚುನಾವಣೆಗಳಲ್ಲಿ ಸ್ಪರ್ಧಿಸಿ ಸೋಲುಂಡ ಪಕ್ಷವು ಪರಿಸರ ವಿಚಾರಗಳನ್ನೇ ಪ್ರತಿಪಾದಿಸುತ್ತಾ ಕ್ರಮೇಣ ಸಂಸತ್ತಿನಲ್ಲಿ ಕನಿಷ್ಟ ಸಂಖ್ಯೆಯ ಸದಸ್ಯರನ್ನು ಹೊಂದಿದೆ. ಜನರಿಂದ ಪರಿಸರ ದೇಣಿಗೆ ಸಂಗ್ರಹಿಸಿ ಮಾಲಿನ್ಯಮುಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುನ್ನಡೆದಿದೆ. ಜರ್ಮನಿಯಲ್ಲಿ 'ಪರಿಸರ'ವು ರಾಷ್ಟ್ರದ ರಾಜಕೀಯ ಭವಿಷ್ಯ ನಿರ್ಧರಿಸುವ ಅಂಶಗಳಲ್ಲಿ ಒಂದಾಗಿದೆ. ಅಲ್ಲಿನ ಪರಿಸರಾಂದೋಲನಗಳಲ್ಲಿ ಜನರ ಸಹಭಾಗಿತ್ವವನ್ನು ಗುರುತಿಸಬಹುದು.

ಫ್ರಾನ್ಸ್, ಬೆಲ್ಜಿಯಂ, ಇಟಲಿ, ಸ್ಪೇನ್‌ಗಳಲ್ಲಿ ಹಸಿರುಪಕ್ಷಗಳು ಸಂಸತ್ತುಗಳಲ್ಲಿ ಸ್ಥಾನ ಪಡೆದಿವೆ ; ಪರಿಸರವಾದವನ್ನು ಬಲವಾಗಿ ಪ್ರತಿಪಾದಿಸುತ್ತಿವೆ. ಮಾಲಿನ್ಯತಡೆ ಸಂಬಂಧ ಅನೇಕ ಪರಿಣಾಮಕಾರಿ ಕ್ರಮಗಳನ್ನು ಕೈಗೊಂಡಿವೆ. ಅಲ್ಲಿ ಇಪ್ಪತ್ತು ರೂಪಾಯಿ ಬೆಲೆಯ ಒಂದು ಚಾಕೊಲೇಟ್ ಜಗಿದು ಮೇಲಿನ ಪೇಪರನ್ನು ಎಲ್ಲೆಂದರಲ್ಲಿ ಎಸೆದರೆ ಬೆಲೆಯ ೪-೫ ಪಟ್ಟು ಮೊತ್ತವನ್ನು ದಂಡ ತರಬೇಕಾಗುತ್ತದೆ. ಅಲ್ಲಿನ ಇಂತಹ ಅನೇಕ ಕ್ರಮಗಳ ಕುರಿತು ಆ ರಾಷ್ಟ್ರಗಳಿಗೆ ಭೇಟಿ ಕೊಟ್ಟು ಬಂದ ಭಾರತೀಯರನೇಕರು ಮೆಚ್ಚಿಕೊಂಡು ಬರೆಯುತ್ತಾರೆ, ಭಾಷಣ ಮಾಡುತ್ತಾರೆ. ತಾವು ಪಾಲಿಸದಿರುವ ಪರಿಸರ ಪ್ರಜ್ಞೆಯನ್ನು ಮರೆಸುತ್ತಾರೆ.

ಇಂಗ್ಲೆಂಡಿನಲ್ಲಿ 'ಗ್ರೀನ್ ಪೀಸ್' ಇಂಟರ್‌ನ್ಯಾಷನಲ್ ಎಂಬುದು ಅಂತರರಾಷ್ಟ್ರೀಯ ಮಟ್ಟದಲ್ಲಿ ಪರಿಸರ ಮಾಲಿನ್ಯದ ವಿರುದ್ಧ ಹೋರಾಡುವ ಸಂಸ್ಥೆಯಾಗಿದೆ. ಇಂಗ್ಲೆಂಡ್‌ನ ಸೆಸೆಕ್ಸ್ ಎಂಬಲ್ಲಿ ಪ್ರಧಾನ ಕಛೇರಿ ಹೊಂದಿರುವ ಗ್ರೀನ್ ಪೀಸ್ ಸದಸ್ಯರು ಅರಣ್ಯನಾಶದ ತಡೆಗಾಗಿ ತಮಗೆ ತಾವೇ ಸರಪಳಿಯಿಂದ ಬಿಗಿದುಕೊಂಡು ಹೋರಾಡುತ್ತಾರೆ. ಇಂಗ್ಲೆಂಡಿನ 'ಸೆಲ್ಲಾಫೀಲ್ಡ್' ಎಂಬ ಅಣುಸ್ಥಾವರದಿಂದ ವಿಕಿರಣಯುಕ್ತ ಕೊಳಚೆ ನೀರನ್ನು ಐರಿಷ್ ಸಮುದ್ರಕ್ಕೆ ಸುರಿಯುವ ಎಪ್ಪತ್ತು ಅಡಿ ಆಳದ ಕೊಳವೆ ಬಾಯಿಗೆ ಬಟ್ಟೆ ಕಟ್ಟಿ ತಡೆಯುತ್ತಾರೆ. ಇದನ್ನು ಅಪರಾಧವೆಂದು ಬಗೆದ ಸರ್ಕಾರವು ಐವತ್ತು ಸಾವಿರ ಪೌಂಡ್ ಹಣವನ್ನು ದಂಡವನ್ನಾಗಿ ವಿಧಿಸಿದೆ. ಆದರೂ ಚಳವಳಿಗಾರರು ಎದೆಗುಂದದೆ ಪರಿಸರ ಸಂರಕ್ಷಣಾ ಚಳವಳಿ ಮುಂದುವರಿಸುತ್ತಿದ್ದಾರೆ.[೨೮] ಈ ಘಟನೆಯು ಉತ್ತರ ಕನ್ನಡ ಜಿಲ್ಲೆಯ ಬಿಣಗಾದ ಕಾಸ್ಟಿಕ್ ಸೋಡಾ ಕಾರ್ಖಾನೆಯವರು ತ್ಯಾಜ್ಯವನ್ನು ಹತ್ತಾರು ಮೀಟರ್ ಪೈಪ್ ಮೂಲಕ ಬಹಿರಂಗವಾಗಿ ಸಮುದ್ರಕ್ಕೆ ಬಿಟ್ಟಿರುವುದನ್ನು ಪ್ರಶ್ನಿಸಿಯೂ ವಿಫಲರಾದವರೊಂದಿಗೆ ಹೋಲಿಸಬಹುದಾದರೂ, ಎರಡೂ ಸಂದರ್ಭಗಳ ವ್ಯತ್ಯಾಸವನ್ನು ಗುರುತಿಸಲು ಸಾಧ್ಯವಿದೆ.

ದ್ವಿತೀಯ ಜಗತ್ತಿನ ರಾಷ್ಟ್ರಗಳೆಂದು ಗುರುತಿಸಲ್ಪಟ್ಟಿರುವ ಕಮ್ಯುನಿಸ್ಟ್ ರಾಷ್ಟ್ರಗಳು ನಿಖರವಾಗಿ 'ಪರಿಸರವಾದ, ಪರಿಸರ ಸಿದ್ಧಾಂತ, ಚಳವಳಿ, ಕಾರ್ಯಕ್ರಮ' ಎಂದು ಹೇಳದಿದ್ದರೂ, ತಮ್ಮ ಪ್ರಣಾಳಿಕೆಗಳಲ್ಲಿ ಅವುಗಳನ್ನು ನಿರ್ದಿಷ್ಟ ಪಡಿಸದಿದ್ದರೂ ಸಹ ಶ್ರೀಮಂತ ಹಾಗೂ ತೃತೀಯ ಜಗತ್ತಿನ ದೇಶಗಳಿಗಿಂತ ಭಿನ್ನವಾದ ತಮ್ಮದೇ ಆದ ಏಕಪಕ್ಷೀಯ ಪರಿಸರ ತತ್ತ್ವಗಳನ್ನು ಪಾಲಿಸುತ್ತಿವೆ.[೨೯] ಕೈಗಾರಿಕೆಗಳನ್ನು ಮತ್ತೆ ಕಟ್ಟುವುದರಲ್ಲಿ ಅಚಲವಾದ ನಂಬಿಕೆ ಇರುವ ಮಾರ್ಕ್ಸ್‌ವಾದವು ಖಾಸಗಿ ಬಂಡವಾಳಶಾಹಿಗಳು ಲಾಭಕ್ಕಾಗಿ ಮಾಲಿನ್ಯ ತುಂಬುತ್ತಿದ್ದಾರೆ, ಅವರೇ ಇಲ್ಲವಾದಲ್ಲಿ ಮಾಲಿನ್ಯದ ಪ್ರಶ್ನೆಯೇ ಬರುವುದಿಲ್ಲ ಎಂಬ ನಿಲುವನ್ನು ಹೊಂದಿದೆ. ರಷ್ಯಾ, ಚೀನಾ ದೇಶಗಳಲ್ಲಿ ಪರಿಸರಸಂಬಂಧೀ ಅಭಿಪ್ರಾಯ ಭೇದಗಳನ್ನು ನಿರ್ದಾಕ್ಷಿಣ್ಯವಾಗಿ ಹತ್ತಿಕ್ಕಿದ ಆಪಾದನೆಗಳು ಸಾಕಷ್ಟಿವೆ ಎಂಬುದನ್ನು ರಾಮಚಂದ್ರ ಗುಹಾ ತಮ್ಮ ಜಾಗತಿಕ ಪರಿಸರ ಚರಿತ್ರೆಯಲ್ಲಿ ದಾಖಲಿಸಿದ್ದಾರೆ.

ತೃತೀಯ ಜಗತ್ತಿನ ಅಭಿವೃದ್ಧಿ ಹೊಂದುತ್ತಿರುವ ದೇಶಗಳಲ್ಲಿನ ಬಡಜನರು ನಡೆಸಿದ ಪರಿಸರ ಆಂದೋಲನಗಳು ಪ್ರಮುಖವಾಗಿವೆ. ಮಲೇಷಿಯಾದ ಸಾರಾವಾಕ್ ಕಾಡುಗಳ ರಕ್ಷಣೆಗಾಗಿ ಕಾಡುಕಟುಕರ ವಿರುದ್ಧ ಪೆನನ್ ಜನಸಮುದಾಯದವರು ಹೋರಾಡಿ ಯಶಸ್ವಿಯಾದರು. ಥೈಲ್ಯಾಂಡ್‌ನ ಅರಣ್ಯ ಇಲಾಖೆಯು ನೀಲಗಿರಿ ತೋಪು ಬೆಳಸಿ ಜಪಾನಿನ ಕಾಗದ ಕಂಪನಿಗೆ ಪೂರೈಸುವ ಯೋಜನೆ ಸಲುವಾಗಿ ಸಾವಿರಾರು ಎಕರೆ ಸ್ವಾಭಾವಿಕ ಅರಣ್ಯವನ್ನು ಕತ್ತರಿಸಿತು. ಕಾಡಿನ ಜನರು ಬೌದ್ಧ ಸನ್ಯಾಸಿಗಳ ನೇತೃತ್ವದಲ್ಲಿ ವಿರೋಧಿಸಿದರು. ೧೯೯೫ರ ನವೆಂಬರ್‌ನಲ್ಲಿ ನೈಜೀರಿಯಾದ ಓಗೋನಿ ಜನರು ತೈಲಬಾವಿಗಳಿಂದ ಆಗುತ್ತಿರುವ ಪರಿಣಾಮಗಳ ವಿರುದ್ಧ ಚಳವಳಿಗಳನ್ನು ನಡೆಸಿ ಮಿಲಿಟರಿ ಸರ್ವಾಧಿಕಾರಿಗಳ ಗುಂಡಿಗೆ ಬಲಿಯಾದರು. ಕೀನ್ಯಾದ 'ಗ್ರೀನ್ ಬೆಲ್ಟ್ ಮೂವ್‌ಮೆಂಟ್' ಪರಿಸರದ ಪುನರ್ ನಿರ್ಮಾಣಕ್ಕೆ ಸಂಬಂಧಿಸಿದ ಆಂದೋಲನವಾಗಿದ್ದು, ವಿಶ್ವ ಪರಿಸರ ದಿನವಾದ ಜೂನ್, ೫, ೧೯೩೩ರಂದು ಏಳು ಸಸಿಗಳನ್ನು ನೆಡುವ ಮೂಲಕ ಪ್ರಾರಂಭವಾದ ಆಂದೋಲನವು ೧೯೯೨ರ ಹೊತ್ತಿಗೆ ೭೦ ಲಕ್ಷ ಸಸಿಗಳನ್ನು ನೆಟ್ಟು, ರಕ್ಷಿಸಿದ್ದು ಕೀನ್ಯಾದ ೨೨ ಜಿಲ್ಲೆಗಳ ಹೆಣ್ಣು ಮಕ್ಕಳೆಂಬುದು ಗಮನಾರ್ಹವಾಗಿದೆ. ಈ ಆಂದೋಲನವು ಆಫ್ರಿಕಾದಲ್ಲಿ ಮಣ್ಣಿನ ಸವೆತವನ್ನು ಗಮನಾರ್ಹವಾಗಿ ನಿಲ್ಲಿಸಲು ಸಹಕಾರಿಯಾಗಿದೆ. ಬಡವರ ಪರಿಸರಾಂದೋಲನಗಳು ಬ್ರೆಜಿಲ್, ಮಲೇಷಿಯಾ, ಮೆಕ್ಸಿಕೋ, ಭಾರತ ಮುಂತಾದ ದೇಶಗಳಲ್ಲಿ ನಡೆದಿವೆ. ಇವುಗಳ ಮುಖ್ಯ ವೈಶಿಷ್ಟ್ಯವೇ ಸ್ತ್ರೀಯರು, ಮಹಿಳಾ ಸಂಘಟನೆಗಳು ಭಾಗವಹಿಸಿದುದಾಗಿದೆ. ಈ ದೇಶಗಳಲ್ಲಿನ ಪರಿಸರ ಚಳವಳಿಗಳನ್ನು ಭಾರತದ ಪರಿಸರ ಚಳವಳಿಗಳೊಂದಿಗೆ ಹೋಲಿಸಿ ನೋಡಿದಾಗ ಗಾಂಧೀಜಿಯವರ 'ಗ್ರಾಮ ಸ್ವರಾಜ್ಯ' ಪರಿಕಲ್ಪನೆಯನ್ನು ಪಾಲಿಸಿರುವುದನ್ನು ಕಾಣಬಹುದು. ಅಲ್ಲಿನ ಪರಿಸರ ಚಳವಳಿಗಳ ಕಾಲದಲ್ಲಿ ನಗರಗಳ ಬೆಳವಣಿಗೆಯ ಅಪಾಯವನ್ನು ಮನಗಂಡಾಗ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಜಾರಿಗೊಳಿಸಲು ಪ್ರಯತ್ನಿಸಿರುವುದು ಕಂಡುಬರುತ್ತದೆ.

ಅಂತಾರಾಷ್ಟ್ರೀಯ ಪರಿಸರ ಚಳವಳಿಗಳು 'ಎಲ್ಲರಿಗೂ ಒಂದೇ ಭೂಮಿ' ಎನ್ನುವ ಪರಿಕಲ್ಪನೆಯು ರೂಪುಗೊಳ್ಳಲು ಸಹಕಾರಿಯಾದವು. ೧೯೭೨ರಲ್ಲಿ ಸ್ವೀಡನ್ನಿನ ಸ್ಟಾಕ್‌ಹೋಂನಲ್ಲಿ ನಡೆದ 'ಮಾನವ ಪರಿಸರ'ದ ಬಗೆಗೆ ಸಂಯುಕ್ತ ರಾಷ್ಟ್ರಗಳ ಪ್ರಥಮ ಸಮಾವೇಶಕ್ಕಾಗಿ ಬರೆದ ಪುಸ್ತಕ 'ಓನ್ಲಿಒನ್ ಅರ್ಥ್' ರಚಿಸಿದ ಲಂಡನ್ನಿನ ಅರ್ಥಶಾಸ್ತ್ರಜ್ಞ ಬಾರ್ಬರಾ

ವಾರ್ಡ್ ಮತ್ತು ನ್ಯೂಯಾರ್ಕ್‌ನ ಸೂಕ್ಷ್ಮಜೀವಿಶಾಸ್ತ್ರಜ್ಞ ರೆನೆಡ್ಯೂಬಾಸ್ ಅವರುಗಳು ಪ್ರತಿಯೊಬ್ಬ ಮನುಷ್ಯನೂ ಎರಡು ದೇಶಗಳನ್ನು ಹೊಂದಿದ್ದಾನೆ. ಒಂದು ಆತನು ಹುಟ್ಟಿದ ದೇಶ, ಇನ್ನೊಂದು ಭೂಗ್ರಹ. ಈ ಹಿನ್ನೆಲೆಯಲ್ಲಿ ಜೂನ್ ೧೯೯೨ರಲ್ಲಿ ಬ್ರೆಜಿಲ್‌ನ ರಿಯೋಡಿ ಜನ್ನೆರೋದಲ್ಲಿ ನಡೆದ ಭೂ ಶೃಂಗಸಭೆಯಲ್ಲಿ ೧೮೦ ದೇಶಗಳು ಭಾಗವಹಿಸಿದವು. ಈ ಭೂಶೃಂಗ ಸಭೆಯು ಪ್ರಪಂಚದ ಅತ್ಯಂತ ದೊಡ್ಡ ಮೊದಲ ಸಮಾವೇಶವಾಗಿತ್ತಲ್ಲದೆ, ವಿವಾದಾತ್ಮಕವೂ ಆಗಿತ್ತು. ಅರಣ್ಯನಾಶ, ಹವಾಮಾನ ಬದಲಾವಣೆ ಮತ್ತು ಜೈವಿಕ ವೈವಿಧ್ಯತೆಯ ನಷ್ಟ ಈ ಮೂರು ಮುಖ್ಯ ಜಾಗತಿಕ ಸಮಸ್ಯೆಗಳ ಕುರಿತು ಒಪ್ಪಂದಕ್ಕೆ ಬರಬೇಕೆಂದು ವಿಶ್ವಸಂಸ್ಥೆಯ ಪರಿಸರ ಮತ್ತು ಅಭಿವೃದ್ಧಿ ಸಂಸ್ಥೆಯು ಆಶಿಸಿತ್ತು. ಕೈಗಾರಿಕೀಕೃತ ಆರ್ಥಿಕ ವ್ಯವಸ್ಥೆಯ ಸಮೃದ್ಧ ದೇಶಗಳು ಮತ್ತು ಬಡದೇಶಗಳು ಎಂಬೆರಡು ಗುಂಪುಗಳಾಗಿ ಹವಾಮಾನ ಬದಲಾವಣೆ ಸಂಬಂಧದ ವಿಚಾರದಲ್ಲಿ ವಿವಾದಕ್ಕೆ ಕಾರಣವಾದವು. ಪರಿಸರ ತಿಳಿವಳಿಕೆ ವಿಚಾರದಲ್ಲಿ ಇಂದಿಗೂ ಒಂದು ತೀರ್ಮಾನಕ್ಕೆ ಬರಲಾಗದಿರುವುದು ಈ ಮೇಲಿನ ಅಂತಾರಾಷ್ಟ್ರೀಯ ಪರಿಸರ ಸಂಬಂಧೀ ವಿದ್ಯಮಾನಗಳಿಂದ ತಿಳಿದು ಬರುತ್ತದೆ. ಇಂತಹ ಜಾಗತಿಕ ಪರಿಸರ ಚಳವಳಿಗಳ ಸಂಬಂಧದ ಸಮೀಕ್ಷೆಗಳಿಂದ ಭಾರತದ ಪರಿಸರ ಚಳವಳಿಗಳ ಮೇಲಾಗಿರುವ ಪರಿಣಾಮಗಳನ್ನು ಗಮನಿಸಬಹುದಾಗಿದೆ. ಮುಂದುವರಿದ ದೇಶಗಳು ಸ್ವಹಿತಾಕಾಂಕ್ಷಿಗಳಾಗಿದ್ದು, ದ್ವಿತೀಯ ಹಾಗೂ ತೃತೀಯ ಜಗತ್ತಿನ ದೇಶಗಳಲ್ಲಿ ಬಂಡವಾಳ ಹೂಡುವುದನ್ನು ಹೊರತುಪಡಿಸಿ, ಪರಿಸರ ಚಳವಳಿಗಳಿಗೆ ಬೆಂಬಲ ನೀಡಿದ್ದು ಕಂಡುಬಂದಿಲ್ಲ. ಇದು 'ಇರುವುದೊಂದೇ ಭೂಮಿ'ಯ ಮೇಲಿನ ಅಸಮತೋಲನ ಜೀವನವಾಗಿದೆ ಎಂದು ಹೇಳಬಹುದಾಗಿದೆ.

೨.೪ ಭಾರತದ ಪರಿಸರ ಚಳವಳಿಗಳು

ಉತ್ತರದ ಹಿಮಾಲಯ ಪರ್ವತಗಳಿಂದ, ದಕ್ಷಿಣದ ಹಿಂದೂ ಮಹಾಸಾಗರದವರೆಗೆ ಪೂರ್ವದ ಬಂಗಾಳಕೊಲ್ಲಿಯಿಂದ ಪಶ್ಚಿಮದ ಅರಬ್ಬೀ ಸಮುದ್ರಗಳ ನಡುವಿನ ವಿಶಾಲವಾದ ಭೌಗೋಳಿಕ ವಿಸ್ತೀರ್ಣತೆಯುಳ್ಳ ಭಾರತವು ಏಷ್ಯಾ ಖಂಡದೊಳಗಿನ ಉಪಖಂಡ, ಪರ್ಯಾಯ ದ್ವೀಪ ಎಂದು ಕರೆಯಲ್ಪಟ್ಟಿದೆ. ಉಷ್ಣವಲಯದ ದೇಶವಾಗಿದ್ದರೂ ನದಿಗಳ ಬಯಲು ಪ್ರದೇಶಗಳು, ಪ್ರಸ್ಥಭೂಮಿಗಳು, ಪೂರ್ವಪಶ್ಚಿಮ ಘಟ್ಟಗಳು, ವಿಶಾಲವಾದ ಕರಾವಳಿ ತೀರ, ಥಾರ್ ಮರುಭೂಮಿ ಹಾಗೂ ಇತರ ವಿಶಿಷ್ಟ ಭೌಗೋಳಿಕ ಲಕ್ಷಣಗಳನ್ನು ಹೊಂದಿದ್ದು ವಿಪುಲವಾದ ನೈಸರ್ಗಿಕ ಸಂಪತ್ತಿನಿಂದ ಕೂಡಿದೆ. ಜನಸಂಖ್ಯೆಯಲ್ಲಿ ಜಗತ್ತಿನ ಎರಡನೇ ಸ್ಥಾನದಲ್ಲಿರುವ ದೇಶವಾಗಿದೆ. ಭಾರತದ ನೈಸರ್ಗಿಕ ಸಂಪತ್ತು ಅನೇಕ ವಿದೇಶಿ ದಾಳಿಗಳಿಗೆ ಅವಕಾಶ ಮಾಡಿಕೊಟ್ಟಿದ್ದು, ಅವುಗಳಿಂದಾದ ಪರಿಣಾಮಗಳು ದೇಶದ ಚರಿತ್ರೆಯಲ್ಲಿ ದಾಖಲುಗೊಂಡಿವೆ. ಅಂತಹವುಗಳಲ್ಲಿ ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ ಪರಿಣಾಮಗಳ ಕುರಿತು ಸುದೀರ್ಘವಾಗಿ ಮಾತಿನಲ್ಲಿ ಹಾಗೂ ಬರವಣಿಗೆಯಲ್ಲಿ ಪ್ರಸ್ತಾಪಿಸಿದಂತೆ ಪಾರಿಸರಿಕ ಸಂರಕ್ಷಣೆ ಸಂಬಂಧೀ ವಿಚಾರಗಳ ಪ್ರಸ್ತಾಪಿತ ಚರ್ಚೆ ಕಡಿಮೆಯೆಂದೇ ಹೇಳಬೇಕು.

ಪರಿಸರ ಸಂರಕ್ಷಣೆ - ಸಂಘರ್ಷಗಳನ್ನು ಖಚಿತ ದಾಖಲೆಗಳೊಂದಿಗೆ ಚಿತ್ರಿಸಿದ ಬರವಣಿಗೆಗಳು, ಕೃತಿಗಳು ಕಡಿಮೆ. ಕೆ. ಶಿವರಾಮ ಕಾರಂತರು ಅನುವಾದಿಸಿ ಕೊಟ್ಟ 'ಭಾರತದ ಪರಿಸರದ ಪರಿಸ್ಥಿತಿ' (ಮೂಲ : ದಿ ಸ್ಟೇಟ್ ಆಫ್ ಇಂಡಿಯಾಸ್

ಎನ್‌ವಿರಾನ್‌ಮೆಂಟ್, ೧೯೮೭) ಬ್ರಂಟ್ಲೆಂಡ್ ಆಯೋಗದ 'ನಮ್ಮೆಲ್ಲರಿಗೂ ಒಂದೇ ಭವಿಷ್ಯ', ಫುಕುವೊಕರ 'ಒಂದು ಹುಲ್ಲಿನ ಕ್ರಾಂತಿ', ಗಾಡ್ಗೀಳ್ ಮತ್ತು ಗುಹಾ ಅವರ 'ಪರಿಸರ ನ್ಯಾಯದ ತಕ್ಕಡಿಯಲ್ಲಿ', ಎನ್.ಆರ್. ರಾವ್ ಅವರ 'ಪರಿಸರ ಮತ್ತು ಅಭಿವೃದ್ಧಿ', ಕೆ. ಮೋಹನ್‌ಕೃಷ್ಣ ರೈ ಅವರ 'ಪರಿಸರ ಚಳವಳಿಗಳು' ವಂದನಾ ಶಿವ ಅವರ 'ಬತ್ತದ ಚಿಲುಮೆ' ನಾಗೇಶ್ ಹೆಗಡೆಯವರ 'ಇರುವುದೊಂದೇ ಭೂಮಿ', ಟಿ.ಎಸ್. ವಿವೇಕಾನಂದರ 'ಭೂಮಿಗೀತೆ' ಇಂತಹ ಹತ್ತಾರು ಇತ್ತೀಚಿನ ಕೃತಿಗಳು ಪರಿಸರ ಸಂಬಂಧೀ ವಿಚಾರಗಳನ್ನು ಚರ್ಚಿಸಿ, ವಿಶ್ಲೇಷಿಸಿವೆ.

ರಾಮಚಂದ್ರ ಗುಹಾ ಅವರು 'ಜಾಗತಿಕ ಪರಿಸರ ಚರಿತ್ರೆ'ಯಲ್ಲಿ ಭಾರತದ ಪರಿಸರ ಸಂರಕ್ಷಣೆಯ ಮೂರು ಹಂತಗಳನ್ನು ಗುರುತಿಸಿದ್ದಾರೆ.[೩೦] ಒಂದು ಪ್ರಾಚೀನ ಭಾರತದ ಪರಿಸರ ಪರಂಪರೆ, ಇನ್ನೊಂದು ವಸಾಹತುಶಾಹಿ ಕಾಲದ ಪರಿಸರ ಮತ್ತು ಮೂರನೆಯದು ಸ್ವಾತಂತ್ರ್ಯೋತ್ತರ ಭಾರತದ ಪರಿಸರ ರಕ್ಷಣಾ ಪರಿಶ್ರಮಗಳು. ಪ್ರಾಚೀನ ಭಾರತದ ಪರಿಸರ ಪರಂಪರೆಯನ್ನು ದಾಖಲಿಸುವವರು ವೇದಗಳ ಕಾಲದಿಂದಲೇ ಪ್ರಾರಂಭಿಸುತ್ತಾರೆ. ಮೌರ್ಯರು, ಗುಪ್ತರ ಆಡಳಿತ ಕಾಲದಲ್ಲಿ ರಾಜರು ಪರಿಸರ ಸಂರಕ್ಷಣೆಗೆ ಕ್ರಮಗಳನ್ನು ಕೈಗೊಂಡಿದ್ದರು, ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಅರಣ್ಯ ಸಂಪತ್ತಿನ ಕುರಿತು ವಿವರಿಸಿದ್ದಾನೆ ಎಂಬೆಲ್ಲ ವಿವರಣೆಗಳನ್ನು ನೀಡಿರುತ್ತಾರೆ. ಪರಿಸರ ಪ್ರಜ್ಞೆ ಭಾರತೀಯರಲ್ಲಿ ವಿಶಿಷ್ಟವಾಗಿ ಇತ್ತು ಎಂಬುದನ್ನು ಈ ಅಧ್ಯಯನದ ಸನಾತನವಾದದಡಿಯಲ್ಲಿ ಕಂಡುಕೊಳ್ಳಲಾಗಿದೆ.

ವಸಾಹತುಶಾಹಿಯ ಅವಧಿಯಲ್ಲಿ ಭಾರತದಿಂದ ನೈಸರ್ಗಿಕ ಸಂಪತ್ತು ಅಪಾರವಾಗಿ ಕಚ್ಚಾವಸ್ತುಗಳ ರೂಪದಲ್ಲಿ ಸಾಗಿಸಲ್ಪಟ್ಟವು. ಬ್ರಿಟಿಷ್ ಆಧಿಪತ್ಯದಲ್ಲಿ 'ದೇಶ'ದ ಕಲ್ಪನೆ ಸುಸ್ಪಷ್ಟವಾಯಿತು. 'ನಮ್ಮದು' ಎಂಬ ಪದಕ್ಕೆ ಭಾರತೀಯರಲ್ಲಿ ವಿಶಾಲವ್ಯಾಪ್ತಿ ದೊರೆಯಿತು. ಈ ಹಿಂದೆ ವಿದೇಶಿ ದಾಳಿಗಳ ಕಾಲದಲ್ಲಿ ಸಂಪತ್ತು ಲೂಟಿಯಾದಾಗ ಉಂಟಾಗದ ಪರಿಸರ ಸಂರಕ್ಷಣೆ ವಿಚಾರವು ಭಾರತೀಯರಲ್ಲಿ ಮೂಡಲು ಬ್ರಿಟಿಷ್ ಆಡಳಿತವೇ ಕಾರಣ. ಕಚ್ಚಾ ವಸ್ತುಗಳನ್ನು ಸಾಗಿಸಿ ಸಿದ್ಧವಸ್ತುಗಳನ್ನಾಗಿ ಮಾಡಿ ಪುನಃ ಭಾರತಕ್ಕೆ ತಂದು ಹೆಚ್ಚಿನ ಬೆಲೆಗೆ ಮಾರಾಟ ಮಾಡುವಾಗ, ಇಂಗ್ಲೆಂಡಿನ ಬಟ್ಟೆ ಕೈಗಾರಿಕೆಗಳಿಗೆ ಅಗತ್ಯವಿದ್ದ ನೈಸರ್ಗಿಕ ಬಣ್ಣ ಕೊಡುವ 'ನೀಲಿ' ಬೆಳೆಯನ್ನು ಬಂಗಾಳದ ರೈತರು ಕಡ್ಡಾಯವಾಗಿ ಬೆಳೆಯಲೇಬೇಕೆಂಬ ಆಜ್ಞೆ, ಬುಡಕಟ್ಟು, ವನವಾಸಿ ಜನರ ಮೇಲೆ ಜಾರಿಗೊಳಿಸಿದ ಶಸ್ತ್ರಾಸ್ತ್ರ ನಿಷೇಧ ಕಾಯಿದೆ, ಕಾಯ್ದಿಟ್ಟ ಅರಣ್ಯವೆಂಬ ನೀತಿ, ಖನಿಜ ಸಂಪತ್ತನ್ನು ಸಾಗಿಸಲು ಬಂದರುಗಳಿಗೆ ಮೊದಲು ರೈಲ್ವೆ ಸಂಪರ್ಕ ಮಾಡಿಕೊಂಡಿದ್ದು ಭಾರತೀಯರನ್ನು ಚಿಂತನೆಗೊಳಪಡಿಸಿತು.

ಮುಂದುವರಿದ ಭಾಗವಾಗಿ ಸ್ವಾತಂತ್ರ್ಯೋತ್ತರ ಭಾರತದ ಪರಿಸರ ರಕ್ಷಣಾ ಪರಿಶ್ರಮಗಳು ಕಾಣಿಸಿಕೊಳ್ಳಲು ದೇಶದ ಅರ್ಥ ವ್ಯವಸ್ಥೆ, ಜನಸಂಖ್ಯೆಯ ಹೆಚ್ಚಳ, ಯಾಂತ್ರೀಕರಣ ಮತ್ತು ತಾಂತ್ರಿಕತೆ, ಅರಣ್ಯನೀತಿ, ಬಡತನ, ಮಿಲಿಟರಿ ಮೇಲಾಟ ಮತ್ತು ಶಸ್ತ್ರಾಸ್ತ್ರಗಳ ಸಂಗ್ರಹ ಹಾಗೂ ಜಾಗತಿಕ ಆರ್ಥಿಕ ನೀತಿಗಳ ಒತ್ತಡಗಳು ಕಾರಣಗಳಾಗಿವೆ. ಈ ಕಾರಣಗಳಡಿಯಲ್ಲಿ ಪರಿಸರದ ಅವನತಿಯು ಎರಡು ರೀತಿಯಲ್ಲಿ ಘಟಿಸಬಹುದು : ಒಂದು ಪರಿಸರ ಮಾಲಿನ್ಯರೂಪ ಮತ್ತು ಇನ್ನೊಂದು ಪರಿಸರ ಸಂಪತ್ತಿನ ಸಂಗ್ರಹದ ಕ್ಷಯ. ಮಾಲಿನ್ಯವನ್ನು ತಡೆಗಟ್ಟಲು ವಿವಿಧ ಪ್ರಕಾರಗಳ ಚಿಕಿತ್ಸೆಗಳಿರಬಹುದು. ಆದರೆ ಪರಿಸರ ಸಂಪತ್ತಿನ ಕ್ಷಯವನ್ನು ಅಕ್ಷಯದ ಸ್ಥಿತಿಗೆ ತರುವುದು ಕಷ್ಟದ ಕೆಲಸ. ಬೆಳೆಯುತ್ತಿರುವ ಜನಸಂಖ್ಯೆಯಿಂದ ಪರಿಸರ ಸಂಪತ್ತನ್ನು ಬಳಸುವ ಪ್ರಮಾಣವು ಹೆಚ್ಚುತ್ತಾ ಹೋಗುತ್ತದೆ. ಸರ್ವಭಕ್ಷಕರೊಂದಿಗೆ ಸಾಮಾನ್ಯರು ಸ್ಪರ್ಧಿಸಲಾಗದಿರುವುದು,

ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳ ಅತಂತ್ರ ನಿಲುವುಗಳು ಭಾರತದ ಪರಿಸರ ಚಳವಳಿಗಳ ಹಿಂದೆ ಪೂರಕವಾಗಿ ಕೆಲಸ ಮಾಡುತ್ತಿಲ್ಲದಿರುವುದನ್ನು ಕಾಣಬಹುದು.

ಪರಿಸರ ಚಳವಳಿಗಳಲ್ಲಿ ಅಮೆರಿಕಾ, ಜರ್ಮನಿಗಳಲ್ಲಿ ಜನ ಬೆಂಬಲವು ನಿರ್ಣಾಯಕ ಮೂಲಮಾನ ಶೇಕಡಾ ೪೯-೫೧ ಆಗಿದ್ದರೆ, ಭಾರತದಲ್ಲಿ ಈ ಜನಬೆಂಬಲ ಅಥವಾ ಜನ ಸಹಭಾಗಿತ್ವ ವ್ಯತಿರಿಕ್ತವಾಗಿರುವುದು ಸ್ಪಷ್ಟವಾಗುತ್ತದೆ. ಅಕ್ಷರಶಃ ಇದೊಂದು ಸೋಜಿಗದ ಸಂಗತಿಯಾಗಿದೆ. ಏಕೆಂದರೆ ಅಮೆರಿಕಾದಲ್ಲಿ ಪರಿಸರವಾದವು ರಾಷ್ಟ್ರೀಯ ಉದ್ಯಾನವನಗಳಂತಹ ಮೇಲ್‌ಸ್ತರದ ಕಾಳಜಿಗಳನ್ನು ಆಧರಿಸಿದ್ದರೆ ಭಾರತದಲ್ಲಿ ಇದು 'ಸಾಮಾಜಿಕ ನ್ಯಾಯ'ದ ಪ್ರಶ್ನೆಯಾಗಿದೆ. ಸಾರ್ವಜನಿಕ, ಸಾಮಾನ್ಯ, ನೈಸರ್ಗಿಕ ಸಂಪತ್ತಿನ ಅಸಮಾನ ಹಂಚಿಕೆಯ ಪ್ರಶ್ನೆಯಾಗಿದೆ. ಅಂತಿಮವಾಗಿ ದೇಶದ ಶೇಕಡಾ ೯೬ ಭಾಗ ಜನರ ಅಳಿವು ಉಳಿವಿನ ಪ್ರಶ್ನೆಯಾಗಿದೆ.[೩೧] ಈ ವಿಚಾರದಲ್ಲಿ ಸಾಮಾಜಿಕ ನ್ಯಾಯದ ಪ್ರಶ್ನೆಯಾಗಿರುವುದನ್ನು ಒಪ್ಪಿಕೊಳ್ಳಬಹುದಾದರೂ, ಸಂಪತ್ತಿನ ಅಸಮಾನ ಹಂಚಿಕೆಯ ವಿಚಾರದಲ್ಲಿ ಜನರು ಎಚ್ಚೆತ್ತುಕೊಂಡಿರುವುದನ್ನು ಗುರುತಿಸಬಹುದಾಗಿದೆ. ಅತ್ಯಧಿಕ ವಿದ್ಯುತ್ ಉತ್ಪಾದನೆ ನೀಡುತ್ತಿರುವ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಜನರು ಜಿಲ್ಲೆಗೆ ನಿರಂತರ ವಿದ್ಯುತ್‌ಗಾಗಿ ಹೋರಾಟ ಮಾಡಿ ಭಾಗಶಃ ಯಶಸ್ವಿಯಾಗಿರುವುದನ್ನು ಕಾಣಬಹುದು.

ಜನಬೆಂಬಲ ಅಥವಾ ಜನ ಸಹಭಾಗಿತ್ವದ ಪ್ರಶ್ನೆಯು ಭಾರತದಲ್ಲಿ ಪರಿಸರ ಚಳವಳಿಗಳನ್ನು ಹೊರತುಪಡಿಸಿದರೆ ಇತರೆ ವಿಷಯಗಳಲ್ಲಿ ಕಡಿಮೆಯೇನಿಲ್ಲ. ಸ್ವಾತಂತ್ರ್ಯ ಚಳವಳಿಯ ಯಶಸ್ಸಿನ ಬಹುಪಾಲು ಜನರ ಸಹಭಾಗಿತ್ವಕ್ಕೆ ಸಲ್ಲಬೇಕಾಗಿದೆ. ಆನಂತರದ ಮೀಸಲಾತಿ ಚಳವಳಿಗಳಂತಹ ಭಾಷೆ, ಗಡಿಗಳಂತಹ ಸಾಂಸ್ಕೃತಿಕ ಆಂದೋಲನಗಳಿಗೂ ಜನಬೆಂಬಲ ದೊರೆತು ಯಶಸ್ವಿಯಾಗಿರುವುದನ್ನು ಕಾಣಬಹುದು. ಪರಿಸರ ಚಳವಳಿಗಳಿಗೆ ಇಷ್ಟೊಂದು ದೇಶವ್ಯಾಪಿ ಸಾಮೂಹಿಕ ಜನ ಬೆಂಬಲವಿಲ್ಲದಿದ್ದರೂ ಪರಿಸರ ಕಾಳಜಿ ಇರುವ ಜನರು ಬೆಂಬಲಿಸಿರುವುದನ್ನು ಗಮನಿಸಬಹುದಾಗಿದೆ.

ಅರಣ್ಯ ಸಂರಕ್ಷಣೆಗಾಗಿ ಅಪಾರವಾಗಿ ಹೋರಾಡಿ ಕೊಡಲಿಗೆ ಬಲಿಯಾದ ಅಮೃತದೇವಿ ಎಂಬ ಧೀರ ಪರಿಸರ ಪ್ರೇಮಿ ಮಹಿಳೆ ಸುಮಾರು ೩೫೦ ವರ್ಷಗಳ ಹಿಂದೆ ರಾಜಾಸ್ಥಾನದ ಜೋದ್‌ಪುರ್ ಎಂಬಲ್ಲಿ ಪ್ರತಿಭಟಿಸುತ್ತಾಳೆ. ಮರುಭೂಮಿಯ ಅಂಚಿನಲ್ಲಿರುವ ಮರಗಳನ್ನು ಕಡಿಯಲು ಬಂದ ಮಹಾರಾಜ ಅಜಿತ್‌ಸಿಂಗ್‌ನ ಆಳುಗಳನ್ನು ತಡೆದು, ಅದರ ಸುದ್ದಿ ಆ ರಾಜನಿಗೆ ತಲುಪಿ ಆತ ಆನಂತರ ಮರಗಳನ್ನು ಕಡಿಯಕೂಡದೆಂದು ಆದೇಶ ಹೊರಡಿಸುತ್ತಾನೆ. ಈ ಅಪೂರ್ವ ಘಟನೆಯೇ ಚಿಪ್ಕೋ ಚಳವಳಿಗೆ ಸ್ಫೂರ್ತಿ.[೩೨] ಭಾರತದ ಬೇರೆ ಬೇರೆ ಪ್ರದೇಶಗಳಲ್ಲಿ ಇಂತಹ ಪರಿಸರ ಪ್ರಜ್ಞೆ ಉಂಟುಮಾಡಿದ ಘಟನೆಗಳು ನಡೆದಿದ್ದು, ದಾಖಲಾತಿಗೊಳಪಡದಿರಬಹುದು.

ಆಧುನಿಕ ಭಾರತದ ಮೊದಲ ಪರಿಸರ ಹೋರಾಟ ನಡೆದುದು ೧೯೨೧ರಲ್ಲಿ ಪೂನಾ ಬಳಿಯ ಮುಲ್ಶಿ ಎಂಬ ಹಳ್ಳಿಯಲ್ಲಿ. ಇದು ವಿದ್ಯುತ್ ಉತ್ಪಾದನೆಯನ್ನು ಗುರಿಯಾಗಿಟ್ಟುಕೊಂಡಿದ್ದ ಅಣೆಕಟ್ಟೆಯ ನಿರ್ಮಾಣದ ವಿರುದ್ಧ ಸಂಘಟಿತವಾದ ಹೋರಾಟ.[೩೩] ಬೇರೆ ಕಾರಣಗಳಿಂದ ಯೋಜನೆಯನ್ನು ಕೈಬಿಟ್ಟರೂ ಯಶಸ್ಸು ಸಿಗಬೇಕಾಗಿರುವುದು ಆ

ಹಳ್ಳಿಯ ಜನರಿಗೆ. ಆದರೆ ೧೯೪೬ರಲ್ಲಿ ಹಿರಾಕುಡ್ ಜಲಾಶಯದ ವಿರುದ್ಧ ಎದ್ದ ಲಕ್ಷಾಂತರ ಜನರ ಹೋರಾಟವನ್ನು ಬ್ರಿಟಿಷ್ ಸರ್ಕಾರ ಹೊಸಕಿ ಹಾಕಿದ ಘಟನೆಯು ಸ್ವತಂತ್ರ ಭಾರತದ ಸರ್ಕಾರಗಳಿಗೆ ಚಳವಳಿ ಹತ್ತಿಕ್ಕಲು ಸ್ಫೂರ್ತಿಯಾಯಿತು!

ಚಿಪ್ಕೋ ಚಳವಳಿ ಪ್ರಾರಂಭವಾದದ್ದು ೧೯೭೩ರಲ್ಲಿ, ಉತ್ತರಪ್ರದೇಶದ ಚಮೋಲಿ ಜಿಲ್ಲೆಯ ಮಂಡಲ್ ಎಂಬ ಗ್ರಾಮದಲ್ಲಿ. ಗ್ರಾಮದ ಸುತ್ತ ಸರ್ಕಾರ ಘೋಷಿಸಿದ ಸಂರಕ್ಷಿತ ಅರಣ್ಯವಿದ್ದಿತು. ಅಲಹಾಬಾದ್‌ನ ಆಟದ ಸಾಮಾನುಗಳ ತಯಾರಕನೊಬ್ಬನಿಗೆ ಸರ್ಕಾರ ಮರ ಕಡಿಯಲು ಅನುಮತಿ ನೀಡಿತು. ಹಸಿರುಪಂಥದ ಸಂತರೆಂದೇ ಸುಪ್ರಸಿದ್ಧರಾಗಿದ್ದ ಸುಂದರ್‌ಲಾಲ್ ಬಹುಗುಣ ಅವರ ನೇತೃತ್ವದಲ್ಲಿ ಗ್ರಾಮದ ಮಹಿಳೆಯರೂ ಸೇರಿದಂತೆ, ಮರಗಳನ್ನು ಕಡಿಯದಂತೆ ರಕ್ಷಿಸಲು ಎಲ್ಲರೂ ಬಿಗಿಯಾಗಿ ಅಪ್ಪಿನಿಂತರು, ಯಶಸ್ವಿಯಾದರು. ಚಿಪ್ಕೊ ಚಳವಳಿಯು ಆನಂತರದಲ್ಲಿ ದೇಶದ ವಿವಿಧೆಡೆಗಳಲ್ಲಿ ನಡೆದ ಚಳವಳಿಗೂ, ಬ್ರೆಜಿಲ್‌ನಲ್ಲಿ ನಡೆದ 'ಚೀಕೋ' ಚಳವಳಿಗೂ ಸ್ಫೂರ್ತಿಯಾಯಿತು.

ಕೇರಳದ ಸೈಲೆಂಟ್ ವ್ಯಾಲಿ (ಮೌನಕಣಿವೆ) ಸಂರಕ್ಷಣಾ ಹೋರಾಟವು ಪ್ರಮುಖವಾದುದು. ಇಂದಿರಾಗಾಂಧಿ ಅವರು ಪ್ರಧಾನ ಮಂತ್ರಿಯಾಗಿದ್ದಾಗ 'ಶಾಂತಕೊಳ್ಳ'ದಲ್ಲಿ ೧೨೦ ಮೆಗಾವ್ಯಾಟ್ ವಿದ್ಯುತ್ ಸಾಮರ್ಥ್ಯದ ಅಣೆಕಟ್ಟು ಕಟ್ಟುವ ವಿಚಾರಬಂದಿತು. ಕೇರಳಶಾಸ್ತ್ರ ಸಾಹಿತ್ಯ ಪರಿಷತ್ತು ಅಣೆಕಟ್ಟಿನ ವಿರುದ್ಧ ಚಳವಳಿ ಆರಂಭಿಸಿತು. ಅಮೂಲ್ಯ ಜೀವಜಾಲ ಅಳಿಸಿ ಹೋಗುವುದನ್ನು ರಕ್ಷಿಸಬೇಕೆಂಬುದು ಚಳವಳಿಗಾರರ ಕೂಗು. ಜನಾಭಿಪ್ರಾಯವೂ ಯೋಜನೆಗೆ ವಿರೋಧವನ್ನು ಸೂಚಿಸಿತು. ಅದೇ ವೇಳೆಗೆ ೧೯೭೨ರಲ್ಲಿ ಸ್ಟಾಕ್‌ಹೋಂನಲ್ಲಿ ನಡೆದ ಸಂಯುಕ್ತ ರಾಷ್ಟ್ರಗಳ ಮೊತ್ತ ಮೊದಲ ಪರಿಸರ ಸಮಾವೇಶದಲ್ಲಿ ಪ್ರಧಾನಿ ಇಂದಿರಾಗಾಂಧಿಯವರು ಭಾಗವಹಿಸಿ 'ಮಾಲಿನ್ಯವು ಪ್ರಗತಿಗೆ ತೆರಬೇಕಾಗಿರುವ ಬೆಲೆಯಾಗಿದ್ದಲ್ಲಿ ನಮ್ಮ ಜನರು ಇನ್ನಷ್ಟು ಬೆಲೆ ತೆರಲು ಸಿದ್ಧರಿದ್ದಾರೆ' ಎಂದು ಹೇಳಿಕೆ ನೀಡಿ ಬಂದಿದ್ದರು. ಯಾರನ್ನು ನಮ್ಮ ಜನ ಎಂದು ಪ್ರಧಾನಿ ಹೇಳಿದ್ದರೋ ಅವರೇ ಮೌನಕಣಿವೆಯನ್ನು ಉಳಿಸಿ ಎಂದು ಕೂಗಿದಾಗ ಪ್ರಧಾನಿಯವರಿಗೆ ತಮ್ಮ ಪರಿಸರ ಪ್ರೇಮವನ್ನು ಅಂತಾರಾಷ್ಟ್ರೀಯವಾಗಿ ತೋರಿಸಿಕೊಳ್ಳುವ ಅವಕಾಶವೊಂದು ಅನಾಯಾಸವಾಗಿ ದೊರೆತಿತ್ತು. 'ಮೌನಕಣಿವೆ' ಜಲವಿದ್ಯುತ್ ಯೋಜನೆಯನ್ನು ಕೈಬಿಡಲಾಗಿದೆ ಎಂದು ಘೋಷಿಸಿದರು. ಕೇರಳದ ಹೋರಾಟಗಾರರು 'ಸೈಲೆಂಟ್ ವ್ಯಾಲಿ' ಯೋಜನೆ ವಿರುದ್ಧ ಜಯ ಸಾಧಿಸಿದರು. ಅವರ ಹೋರಾಟ ಸೈಲೆಂಟ್ ಆಗಿಲ್ಲದಿದ್ದುದು ಎಲ್ಲರ ಗಮನ ಸೆಳೆದಿತ್ತು.

'ನರ್ಮದಾ ಬಚಾವೋ' ಆಂದೋಲನ ಈಗಲೂ ನಡೆಯುತ್ತಿರುವ ಪರಿಸರ ಸಂರಕ್ಷಣಾಪರ ಘಟನೆಯಾಗಿದೆ. ನರ್ಮದಾ ನದಿಗೆ ಕಟ್ಟಲು ಉದ್ದೇಶಿಸಿದ್ದ ಅಣೆಕಟ್ಟುಗಳ ಸರಣಿಯಲ್ಲಿ ಈಗಾಗಲೇ ಎರಡು ದೊಡ್ಡ ಅಣೆಕಟ್ಟುಗಳ ನಿರ್ಮಾಣ ಆಗಿಹೋಗಿದ್ದು, ಈಗ ಅತಿಹೆಚ್ಚು ಗಮನ ಸೆಳೆದಿರುವುದು ಸರ್ದಾರ್ ಸರೋವರ ಅಣೆಕಟ್ಟು. ವಿಶೇಷವೆಂದರೆ ಅಣೆಕಟ್ಟು ಭರ್ತಿಯಾದರೆ ಮಧ್ಯಪ್ರದೇಶ ಮತ್ತು ಮಹಾರಾಷ್ಟ್ರ ರಾಜ್ಯಗಳ ೨೪೫ ಹಳ್ಳಿಗಳ ಮುಳುಗಡೆ, ಸುಮಾರು ಒಂದು ಲಕ್ಷ ಜನರ ಸ್ಥಾನಪಲ್ಲಟ. ನೀರಾವರಿ ಸೌಲಭ್ಯ ಮಾತ್ರ ಗುಜರಾತಿನ ಜನರಿಗೆ, ೧೯೭೭ರಿಂದಲೇ ಅಲ್ಲಿನ ಜನರು ಪ್ರತಿಭಟನೆ ಆರಂಭಿಸಿದರು. ಮೇಧಾ ಪಾಟ್ಕರ್ ಅವರು ಚಳವಳಿ ಹೂಡಿ ಹೋರಾಟ ಮಾಡುತ್ತಿರುವುದು, ವಿಷಯವು ನ್ಯಾಯಾಲಯದ

ಮೆಟ್ಟಿಲು ಹತ್ತಿರುವುದು, ಹಲವರು ಸರ್ದಾರ್ ಸರೋವರ ಅಣೆಕಟ್ಟು ಬೇಕೆಂದು ಪ್ರತಿಹೋರಾಟ ಮಾಡುತ್ತಿರುವುದು ಈಗಲೂ ನಡೆದೇ ಇದೆ ; ಅಣೆಕಟ್ಟು ನಿರ್ಮಾಣ ಕೆಲಸವೂ ನಡೆಯುತ್ತಲೇ ಇದೆ.

ಒರಿಸ್ಸಾ ರಾಜ್ಯದ (ಈಗಿನ ಒಡಿಸ್ಸಾ) ಬಲಸೋರ್ ಜಿಲ್ಲೆಯ ಬಲಿಯಾಪಾಲ ಎಂಬ ಸ್ಥಳದಲ್ಲಿ ದೇಶದ ರಕ್ಷಣಾ ಇಲಾಖೆಯು ಕ್ಷಿಪಣಿವಲಯ ನಿರ್ಮಿಸಲು ನಿರ್ಧರಿಸಿತು. ೧೯೦ ಚದರ ಕಿಲೋಮೀಟರ್ ಭೂಮಿಯನ್ನಾವರಿಸುವ ಇದು ಕನಿಷ್ಟ ೭೦,೦೦೦ ಜನರನ್ನು ಎತ್ತಂಗಡಿ ಮಾಡುವುದಿತ್ತು. ಈ ಫಲವತ್ತಾದ ಭೂಮಿಯಲ್ಲಿ ಕೃಷಿಕರು, ಮೀನುಗಾರರು ಸಾಕಷ್ಟಿದ್ದು ೧೯೮೭-೮೮ರಲ್ಲಿ ಹೋರಾಟಕ್ಕಿಳಿದರು. ಅಲ್ಲಿಗೆ ಬರುವ ಎಲ್ಲ ಮಾರ್ಗಗಳನ್ನು ಮುಚ್ಚಿ ಸರ್ಕಾರಿ ಅಧಿಕಾರಿಗಳು ಒಳಬರದಂತೆ ತಡೆದರು. ಕಂದಾಯ ಕೊಡುವುದನ್ನು ನಿಲ್ಲಿಸಿದರು. ಯೋಜನೆ ಸ್ಥಗಿತಗೊಂಡಿತು. ಅಲ್ಲಿನ 'ಜನಸಮಿತಿ'ಯ ಕಾರ್ಯದರ್ಶಿ ಹೇಳುವಂತೆ 'ಜಗತ್ತಿನಲ್ಲಿ ಪೂರ್ವಜರಿಂದ ಬಂದ ಭೂಮಿಯ ಬದಲಿಗೆ ಏನು ಕೊಟ್ಟರೂ ಅದು ಆ ತುಣುಕು ಭೂಮಿಗೆ ಸರಿತೂಗಲಾರದು.[೩೪] ದೊಡ್ಡ ಯೋಜನೆಗಳಿಂದ ಸ್ಥಳಾಂತರಗೊಳ್ಳುವವರೆಲ್ಲರ ದುಃಖ, ಚಿಂತೆ, ಕಳವಳಗಳು ಇವರ ಮಾತಿನಲ್ಲಿ ವ್ಯಕ್ತವಾಗಿರುವುದನ್ನು ಗಮನಿಸಬಹುದು.

ಪರಿಸರ ಚಳವಳಿಗಳನ್ನು ವಿಶ್ಲೇಷಿಸುತ್ತಾ ಹೋದರೆ ಸಂಪನ್ಮೂಲಗಳು ಕಡಿಮೆಯಾಗುತ್ತಿರುವುದರ ಬಗ್ಗೆ ಜನರಲ್ಲಿ ಕಳವಳ ಹೆಚ್ಚುತ್ತಿರುವುದನ್ನು ಗುರುತಿಸಬಹುದು. ಪರಿಸರ ಪ್ರಜ್ಞೆ ಹರಡುವಲ್ಲಿ ಆಯಾ ಕಾಲದಲ್ಲಿ ಜನರೊಂದಿಗೆ ಪತ್ರಿಕೆಗಳು, ಮಾಧ್ಯಮಗಳು ಸಹಕರಿಸಿವೆ. ಹಾಡು, ಭಾಷಣ, ಬೀದಿನಾಟಕ, ಜನಪದ ಗೀತೆಗಳು, ಯಕ್ಷಗಾನ- ಇನ್ನಿತರೆ ರೀತಿಗಳಿಂದ ಪರಿಸರ ಚಿಂತನೆ ಬಿತ್ತಲು ಶ್ರಮಿಸಲಾಗಿದೆ. ಚರ್ಚೆ ಮತ್ತು ಚಟುವಟಿಕೆಗಳನ್ನೊಳಗೊಂಡ ಪರಿಸರ ಅಭಿವೃದ್ಧಿ ಶಿಬಿರಗಳನ್ನು ಅರಣ್ಯೀಕರಣ ಮತ್ತಿತರ ಪರಿಸರಾತ್ಮಕ ಕಾರ್ಯಕ್ರಮಗಳಲ್ಲಿ ಗುರುತಿಸಬಹುದು. ಜನರಲ್ಲಿ ಜಾಗೃತಿ ಮೂಡಿಸಿ ಸಂಘಟಿಸುವಾಗ ಪಾದಯಾತ್ರೆಯನ್ನು ಅತ್ಯುತ್ತಮ ಕಾರ್ಯಕ್ರಮವನ್ನಾಗಿ ಬಳಸಿಕೊಳ್ಳಲಾಗಿದೆ.

ವಿನೋಬಾ ಭಾವೆಯವರ ಭೂದಾನ ಚಳವಳಿಯ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಅನುಯಾಯಿಗಳು ಮೊದಲ ಪರಿಸರ ಜಾಗೃತಿ ಪಾದಯಾತ್ರೆಯನ್ನು ೧೯೮೨-೮೩ರಲ್ಲಿ ಕಾಶ್ಮೀರದಿಂದ ಕೊಹಿಮಾದವರೆಗೆ ಹಿಮಾಲಯದಲ್ಲಿ ಸಾವಿರಾರು ಕಿ.ಮೀ. ದೂರ ಕೈಗೊಂಡರು. ಪರಿಸರ ಜಾಗೃತಿ ಜಾಥಾಗಳಲ್ಲಿ 'ಪಶ್ಚಿಮ ಘಟ್ಟ ಉಳಿಸಿ' ಅಭಿಯಾನ ೧೫೦ ಸ್ವಯಂ ಸೇವಾಸಂಸ್ಥೆಗಳು ಸಂಘಟಿಸಿದ್ದಾಗಿತ್ತು. ಬಹುದೊಡ್ಡ ಜನಾಭಿಪ್ರಾಯ ಸಂಘಟನೆಯ ಈ ಜಾಥಾದಂತೆಯೇ ಉದಕಮಂಡಲದಲ್ಲಿ 'ನೀಲಗಿರಿ ಬೆಟ್ಟ ಉಳಿಸಿ', ಕಾಶ್ಮೀರದಲ್ಲಿ 'ಸಿವಾಲಿ ಬೆಟ್ಟ'ಗಳನ್ನು ಉಳಿಸಿ, ಆಂಧ್ರ ಮತ್ತು ಒರಿಸ್ಸಾಗಳಲ್ಲಿ 'ಪೂರ್ವ ಘಟ್ಟ ಉಳಿಸಿ' ಜಾಥಾಗಳು ಪರಿಸರ ಸಂಬಂಧೀ ಜನಜಾಗೃತಿಯ ಚೈತನ್ಯ ಪಾದಯಾತ್ರೆಗಳೆನಿಸಿಕೊಂಡವು. ೧೯೯೩ರಲ್ಲಿ ಪಶ್ಚಿಮ ಗುಜರಾತ್ ರಾಜಸ್ಥಾನ, ಹರಿಯಾಣಗಳಲ್ಲಿ ಹಾದುಹೋಗುವ ಪರ್ವತ ಶ್ರೇಣಿಗಳಲ್ಲಿನ ಗಣಿಗಾರಿಕೆಯಿಂದಾಗುತ್ತಿರುವ ಅಪಾಯದತ್ತ ಜನರ ಗಮನ ಸೆಳೆಯಲು 'ಕರಾವಳಿ ಚೇತನಾ' ಪಾದಯಾತ್ರೆ ನಡೆಯಿತು.

ಚಾಂದೀ ಪ್ರಸಾದ ಭಟ್ಟ, ಅಣ್ಣಾ ಸಾಹೇಬ ಹಜಾರೆ ನೇತೃತ್ವದ ಗುಂಪು ಪಾದಯಾತ್ರೆಗಿಂತ ಒಂದು ಕಡೆ ನೆಲೆನಿಂತು ಗಾಯಗೊಂಡ ಪರಿಸರವನ್ನು ಸಂತೈಸುವ ಕೆಲಸ ಮಾಡಿತು. ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ರಾಳೆಗಣ ಸಮೀಪದ

ಶಾಪಗ್ರಸ್ಥ ಭೂಮಿಯನ್ನು ಸೈನ್ಯದಿಂದ ನಿವೃತ್ತಿ ಹೊಂದಿ ಬಂದ ಅಣ್ಣಾ ಹಜಾರೆ ತಮ್ಮ ಪರಿಶ್ರಮ ಹಾಗೂ ಪರಿಸರ ಪ್ರೀತಿಯಿಂದ ಹಚ್ಚಹಸಿರಾಗಿಸಿದರು. ಇವರು ರೈತರನ್ನು ಸಂಘಟಿಸಿ ಪಾನೀ ಪಂಚಾಯಿತಿ ಏರ್ಪಡಿಸಿ ನೀರಿನ ನಿರ್ವಹಣೆ, ಹಸಿರು ವನ ನಿರ್ಮಾಣ ಕಾರ್ಯಕ್ರಮಗಳನ್ನು ರೂಪಿಸಿದರು. ಪ್ರಭಾವಿತರಾದ ಹೊಸದುರ್ಗ - ರಾಮಪುರ (ಕರ್ನಾಟಕ-ಆಂಧ್ರಗಡಿಯ ಪಾವಗಡ ತಾಲೂಕು) ಹಳ್ಳಿಗಳ ಜನರು ತಮ್ಮ ಸಮೀಪದ ಬೋಳುಗುಡ್ಡಗಳನ್ನು ದಟ್ಟ ಕಾಡುಗಳನ್ನಾಗಿ ಪರಿವರ್ತಿಸಿದರು.

ಭೂಪಾಲ್ ಅನಿಲ ದುರಂತ ಉಂಟಾದ ಮೇಲೆ ಪರಿಸರಾಸಕ್ತರೆಲ್ಲ ಒಂದಾಗಿ 'ಜನವಿಕಾಸ' ಆಂದೋಲನವನ್ನು ಬೆಂಬಲಿಸುವ ರಾಷ್ಟ್ರೀಯ ಮಟ್ಟದ ಒಕ್ಕೂಟವನ್ನು ಹುಟ್ಟುಹಾಕಿದರು. ಈಗ ಜಾರಿಯಲ್ಲಿರುವ ಅಭಿವೃದ್ಧಿ ನೀತಿಗೆ ಸಂಪೂರ್ಣ ವಿರೋಧ ಸೂಚಿಸುವ ಈ ಆಂದೋಲನವು ಭಾರತದ ಭವಿಷ್ಯಕ್ಕಾಗಿ ಪರಿಸರಾತ್ಮಕವಾಗಿ ಸದಾ ಉಳಿಯುವಂತಹ ಸಾಮಾಜಿಕವಾಗಿ ನ್ಯಾಯಯುತವಾದ ಪರ್ಯಾಯ ಅಭಿವೃದ್ಧಿಯ ಚಿಂತನೆಯಲ್ಲಿ ತೊಡಗಿಸಿಕೊಂಡಿದೆ. ಘನ ಉದ್ದೇಶ ಹೊಂದಿರುವ ಇಂತಹ ಹೋರಾಟಗಾರ ಸಂಘಟನೆಗಳ ಕುರಿತು ಸರ್ವಭಕ್ಷಕರು ತಲೆಕೆಡಿಸಿಕೊಂಡಂತಿಲ್ಲ!

ಭಾರತದ ವಿವಿಧೆಡೆಗಳಲ್ಲಿ ಪರಿಸರ ಚಳವಳಿಗಳು (ನಕಾಶೆ-೧ರಲ್ಲಿ ಗುರುತಿಸಲಾಗಿದೆ)[೩೫] ಪ್ರಮಾಣದಲ್ಲಿ ಚಿಕ್ಕದಿರಲಿ, ದೊಡ್ಡದಿರಲಿ ನಡೆದಿವೆ ; ನಡೆಯುತ್ತಲೇ ಇವೆ. ಇನ್ನೂ ಕೆಲವು ಪರಿಸರ ಚಳವಳಿಗಳನ್ನು 'ಕರ್ನಾಟಕದ ಪರಿಸರ ಚಳವಳಿಗಳು' ಎಂಬ ಉಪಶೀರ್ಷಿಕೆಯಲ್ಲಿ ಅಧ್ಯಯನ ಮಾಡಲಾಗಿದೆ. ಭಾರತದ ಈ ಮೇಲ್ಕಂಡ ಪರಿಸರ ಚಳವಳಿಗಳ ಅಧ್ಯಯನವು ಸಾಮಾಜಿಕ ನ್ಯಾಯ, ಪ್ರತಿಷ್ಠೆ, ವೈಯಕ್ತಿಕ ಹಿತ, ಸಾಮೂಹಿಕ ಹೋರಾಟದ ಯಶಸ್ಸು - ಹೀಗೆ ಅನೇಕ ಅಂಶಗಳನ್ನು ಗಮನಿಸುವುದಾಗಿದ್ದು ಪರಿಸರ ಚಳವಳಿಗಳೂ ಗಂಭೀರ, ಗಮನಾರ್ಹ ಘಟನೆಗಳೆಂಬುದನ್ನು ಮನವರಿಕೆ ಮಾಡಿಕೊಳ್ಳುವುದಾಗಿರುತ್ತದೆ.

೨.೫ ಕರ್ನಾಟಕದಲ್ಲಿ ಪರಿಸರ ಚಳವಳಿಗಳು

ಭಾರತದ ದಕ್ಷಿಣದಲ್ಲಿ ಪಶ್ಚಿಮದ ಅರಬ್ಬೀ ಸಮುದ್ರದಿಂದ ಪೂರ್ವಾಭಿಮುಖವಾಗಿ ಸುಮಾರು ೪೦೦ ಕಿ.ಮೀ. ಉತ್ತರ - ದಕ್ಷಿಣಾಭಿಮುಖವಾಗಿ ಸುಮಾರು ೭೭೦ ಕಿ.ಮೀ. ಉದ್ದ - ಅಗಲವುಳ್ಳ ಕರ್ನಾಟಕವು, ೧,೯೧,೭೯೧ ಚ.ಕೀ. ವಿಸ್ತೀರ್ಣತೆ ಹೊಂದಿರುತ್ತದೆ. ೨೦೦೧ರ ಜನಗಣತಿ ವರದಿಯಂತೆ ಜನಸಂಖ್ಯೆಯು ೫,೨೭,೩೩,೯೫೮ ಆಗಿರುತ್ತದೆ. ಕರಾವಳಿ, ಪಶ್ಚಿಮಘಟ್ಟಗಳು, ಉತ್ತರ ಮತ್ತು ದಕ್ಷಿಣದ ಬಯಲು ಭೂಮಿಗಳು, ಚದುರಿದಂತೆ ಹರಡಿಕೊಂಡಿರುವ ಪೂರ್ವಘಟ್ಟಗಳು ಎಂಬ ಕರ್ನಾಟಕದ ಭೌಗೋಳಿಕ ಲಕ್ಷಣಗಳೊಳಗೆ ಮರುಭೂಮಿ ಇಲ್ಲ. ಸುಮಾರು ೩೦೦ ಕಿ.ಮೀ. ಉದ್ದದ ಕರಾವಳಿ ತೀರ, ಗರಿಷ್ಠ ೬,೫೦೦ ಅಡಿ ಎತ್ತರದ ಗಿರಿಬೆಟ್ಟಗಳು,ನಿತ್ಯ ಹರಿದ್ವರ್ಣತೆ ಹಾಗೂ ಅಪರೂಪದ ಜೀವ ವೈವಿಧ್ಯವುಳ್ಳ ಪಶ್ಚಿಮ ಘಟ್ಟಗಳು, ಪೂರ್ವಾಭಿಮುಖವಾಗಿ ಇಳಿಜಾರುತ್ತಾ ಉತ್ತರ ಭಾಗದಲ್ಲಿ ಕಪ್ಪು ಮಣ್ಣು, ದಕ್ಷಿಣ ಭಾಗದಲ್ಲಿ ಮರಳು ಮಿಶ್ರಿತ ಕೆಂಪು ಮಣ್ಣುಳ್ಳ ಬಯಲು ಭೂಮಿ, ಗಡಸು ಕಲ್ಲು ಬಂಡೆಗಳಿಂದ ಕೂಡಿರುವ ಪೂರ್ವ ಘಟ್ಟಗಳು, ಪ್ರಮುಖ ನದಿಗಳ ನೀರು ಹಾಗೂ ಮಳೆಯಾಶ್ರಯದಲ್ಲಿ ಕೃಷಿ ಮತ್ತು ನಿಸರ್ಗ ಸಂಪತ್ತನ್ನು ಹೇರಳವಾಗಿ ಹೊಂದಿವೆ.

ಸುಮಾರು ೨೦೦೦ ವರ್ಷಗಳ ಗತ ಚರಿತ್ರೆಯಲ್ಲಿ ಕರ್ನಾಟಕದ ಪರಿಸರ ಸಂಬಂಧೀ ವಿಚಾರಗಳು ವಿವಿಧ ರೀತಿಯಲ್ಲಿ ದಾಖಲಾಗಿವೆ. 'ಕಾವೇರಿಯಿಂದಮಾ ಗೋದಾವರಿವರಮಿರ್ಪ ನಾಡದಾ...' ಎನ್ನುವ ಕವಿರಾಜಮಾರ್ಗದಲ್ಲಿನ ಭೌಗೋಳಿಕ ವಿಶೇಷತೆಯ ಮಾತಿನಿಂದ, ಬ್ರಿಟಿಷ್ ಆಡಳಿತ ಕಾಲದಲ್ಲಿ ಮದ್ರಾಸಿನಿಂದ ಹೊರಟು ಕೂರ್ಗ್‌ಮಾರ್ಗವಾಗಿ ಕಾಲ್ನಡಿಗೆಯಲ್ಲಿ ಕ್ರಮಿಸಿ ಪಶ್ಚಿಮ ಘಟ್ಟಗಳ ಸಾಂಬಾರು ಪದಾರ್ಥಗಳು, ಇತರೆ ಭೌಗೋಳಿಕ ಅಂಶಗಳನ್ನು ದಾಖಲಿಸಿದ ಫ್ರಾನ್ಸಿಸ್ ಬುಕಾನಿನ್‌ವರೆಗಿನ ನೂರಾರು ಉದಾಹರಣೆಗಳನ್ನು ನೀಡಬಹುದಾಗಿದೆ. ವಸಾಹತುಶಾಹಿ ಆಡಳಿತ ಪೂರ್ವದಲ್ಲಿ ಕರ್ನಾಟಕದ ಪರಿಸರವು ಒಂದು ಸಮಸ್ಯೆಯಾಗಿ ಚರ್ಚಿತವಾಗಿರುವುದು ದಾಖಲಾಗಿರುವುದಿಲ್ಲ. ಬ್ರಿಟಿಷ್ ಆಡಳಿತ ವಿರೋಧಿ ಚಳವಳಿಗಳ ಪ್ರಭಾವಕ್ಕೊಳಪಟ್ಟು ಅಲ್ಲೊಂದು ಇಲ್ಲೊಂದು ಎಂಬಂತೆ ಕಾಯ್ದಿಟ್ಟ ಅರಣ್ಯದಿಂದ ಕಟ್ಟಿಗೆ ತರಬಾರದೆನ್ನುವುದರ ವಿರುದ್ಧವಾಗಿ ನಡೆದ ಹೋರಾಟಗಳೇ ಮೊದಲನೆಯವು. ಆದರೆ ಇವುಗಳನ್ನು ನೇರವಾಗಿ ಪರಿಸರ ಚಳವಳಿಗಳೆಂದು ಕರೆಯಲಾಗುವುದಿಲ್ಲ.

ಕರ್ನಾಟಕವು ಏಕೀಕರಣಗೊಂಡ ನಂತರದ ಎರಡು-ಮೂರು ದಶಕಗಳಲ್ಲಿ ಪರಿಸರವು ಜಾಗತಿಕ ನೆಲೆಯಲ್ಲಿ ಚರ್ಚೆಯ ವಸ್ತುವಾಗಿ ರೂಪುಗೊಂಡಿರಲಿಲ್ಲ. ಪರಿಸರಕ್ಕೆ ಸಂಬಂಧಪಟ್ಟ ಚಳವಳಿಗಳೂ ಅಷ್ಟಾಗಿ ನಡೆಯಲಿಲ್ಲ. ನಡೆದಿದ್ದರೂ ಅವುಗಳು ಚಳವಳಿಯ ಸ್ವರೂಪವನ್ನು ಹೊಂದಿರಲಿಲ್ಲ. ಹಾಗೆಯೇ ನಡೆದಿರುವ ಹೋರಾಟಗಳೆಲ್ಲವೂ ಪರಿಸರ ಚಳವಳಿಗಳೆನಿಸಿಕೊಳ್ಳುವುದಿಲ್ಲ. ಉದಾಹರಣೆಗೆ, ಕರ್ನಾಟಕ-ತಮಿಳುನಾಡುಗಳ ನಡುವಿನ ಕಾವೇರಿ ನದಿ ನೀರಿನ ಹಂಚಿಕೆ ಹೋರಾಟ. ದೇಶದೊಳಗೆ ವಿದೇಶಿ ಹೊಸ ಆರ್ಥಿಕ ನೀತಿ ಕಾಲಿಟ್ಟು, ಅಭಿವೃದ್ಧಿಯ ಗತಿಯಲ್ಲಿ ಆದ ವೇಗದ ಬದಲಾವಣೆಗಳು ಮತ್ತು ಬಂಡವಳಿಗರ ಲಾಭದಾಸೆ ಹೆಚ್ಚಾದಾಗ ಸುಮಾರು ಎಪ್ಪತ್ತರ ದಶಕದಿಂದೀಚೆಗೆ ಕರ್ನಾಟಕದಲ್ಲಿಯೂ ಪರಿಸರವು ಚರ್ಚೆಯ ವಸ್ತುವಾಯಿತು. ಆಗ ವಿಭಿನ್ನ ಸ್ವರೂಪದ ಪರಿಸರ ಚಳವಳಿಗಳು ಕಾಣಿಸಿಕೊಳ್ಳಲು ಪ್ರಾರಂಭಿಸಿದವು. ಅವುಗಳ ಹಿನ್ನೆಲೆ, ಸ್ವರೂಪ ಮತ್ತು ಸೈದ್ಧಾಂತಿಕತೆಗಳನ್ನು ಕುರಿತು ಅಧ್ಯಯನವನ್ನು ಈ ಮೊದಲು ಪ್ರಮುಖ ಭಾಗದಲ್ಲಿ ಮಾಡಲಾಗಿದೆ.

ಕರ್ನಾಟಕದಾದ್ಯಂತ ಏಕರೂಪದ ಪರಿಸರ ಚಳವಳಿಗಳು ನಡೆದಿಲ್ಲ. ಇದಕ್ಕೆ ಪ್ರತಿಯೊಂದು ಜಿಲ್ಲೆಯ ಭೌಗೋಳಿಕ ವೈಶಿಷ್ಟ್ಯ, ಸಾಮಾಜಿಕ ಅಸಮಾನತೆ, ಸಂಪತ್ತಿನ ತಾರತಮ್ಯದ ಹಂಚಿಕೆ ಹಾಗೂ ಉತ್ಪಾದನಾ ವಿಧಾನಗಳಲ್ಲಿನ ವ್ಯತ್ಯಾಸ, ಸರ್ಕಾರಗಳ ತಾರತಮ್ಯನೀತಿಗಳು ಪ್ರಮುಖ ಕಾರಣಗಳಾಗಿವೆ. ಕರ್ನಾಟಕದ ಉತ್ತರಭಾಗದಲ್ಲಿ ಸಂಪತ್ತಿನ ಹಂಚಿಕೆ ಸಮವಾಗಿಲ್ಲ ಎನ್ನುವುದನ್ನು ಡಿ.ಎಂ. ನಂಜುಂಡಪ್ಪ ಅವರ ವರದಿಯು ಸ್ಪಷ್ಟಪಡಿಸಿದೆ. ಎಲ್ಲಾ ಸೌಲಭ್ಯಗಳನ್ನು ಅನುಭವಿಸುವ ಶ್ರೀಮಂತವರ್ಗ, ಸೌಲಭ್ಯಗಳಿಂದ ವಂಚಿತವಾಗಿರುವ ಬಹುಸಂಖ್ಯಾತ ಬಡ ಜನವರ್ಗಗಳ ನಡುವೆ ಬಹಳ ವ್ಯತ್ಯಾಸವಿದೆ. ಯಾವುದೇ ಹೊಸ ಯೋಜನೆ ಬಂದರೂ ಸರ್ವಭಕ್ಷಕರ ಪಾಲಾಗುವುದರಿಂದ ಮತ್ತು ಅವರ ದಬ್ಬಾಳಿಕೆಯಿಂದ ಬಡವರು ಬಡತನ ನೀಗಿಸಿಕೊಳ್ಳುವ ಆತುರದಲ್ಲಿದ್ದಾಗ ಚಳವಳಿಗಳು ನಡೆಯುವ ಸಾಧ್ಯತೆ ತುಂಬಾ ಕಡಿಮೆ. ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಪ್ರಶ್ನಿಸುವ ಮಧ್ಯಮ ವರ್ಗದ ಗೈರು ಹಾಜರಿ ಸಮಾಜದಲ್ಲಿ ನಿರ್ಮಾಣಗೊಂಡ ಅಂತರದ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸಿದೆ.[೩೬] ಈ ವಿಚಾರವನ್ನು ಒಪ್ಪಬಹುದಾಗಿದ್ದು ಕರ್ನಾಟಕದ ಉತ್ತರ ಭಾಗದಲ್ಲಿ ಮಧ್ಯಮ ವರ್ಗದವರಿಂದಲೇ ಪ್ರಾರಂಭವಾದ ಚಳವಳಿ ಇದು ಎಂದು ಹೇಳುವಂತಹ ಉದಾಹರಣೆಗಳು ದಾಖಲು ಆಗಿರುವುದಿಲ್ಲ.

ಕರಾವಳಿಯ ಜಿಲ್ಲೆಗಳಲ್ಲಿ ಮಧ್ಯಮವರ್ಗ ಚುರುಕಾಗಿದ್ದರೂ, ಪ್ರತಿಸ್ಪರ್ಧಿಗಳಾಗಿ ಬಂಡವಾಳಶಾಹಿ ಮತ್ತು ಅಧಿಕಾರಶಾಹಿಗಳು ಪ್ರಾಬಲ್ಯದಲ್ಲಿವೆ. ಜಾತಿ ರಾಜಕೀಯ ಹಾಗೂ ಸಾಮಾಜಿಕ ಪ್ರತಿಷ್ಠೆಗಳು ಚಳವಳಿಗಳಲ್ಲಿ ನುಸುಳಿಕೊಂಡಿವೆ. ಇದರಿಂದಾಗಿ ಸಂಘಟಿತ ರೂಪದ ಚಳವಳಿಯ ಕೊರತೆ ಎದ್ದು ಕಾಣುತ್ತದೆ.[೩೨] ಈ ಅಭಿಪ್ರಾಯಕ್ಕೆ ಪೂರಕ ಎಂಬಂತೆ, ಇಲ್ಲಿ ನಡೆದ ಚಳವಳಿಗಳು ಆರಂಭದಲ್ಲಿ ಯಶಸ್ಸು ಕಂಡರೂ ಕ್ರಮೇಣ ವಿಫಲವಾಗಿರುವುದನ್ನು ಕಾಣಬಹುದು. ಉದಾಹರಣೆಗೆ ಸೀಬರ್ಡ್ ನೌಕಾನೆಲೆ ವಿರೋಧದ ಚಳವಳಿ.

ಕರ್ನಾಟಕದ ದಕ್ಷಿಣಭಾಗದ ಚಳವಳಿಗಳೂ ಸಂಖ್ಯೆಯಲ್ಲಿ ಗೌಣವೆನಿಸಿದರೂ, ಸ್ವರೂಪದಲ್ಲಿ ಭಿನ್ನವಾಗಿ ಕಾಣಿಸಿಕೊಳ್ಳುವುದಿಲ್ಲ. ವಿವಿಧ ಯೋಜನೆಗಳಿಂದಾಗಿ ನಡೆದ ಚಳವಳಿಗಳಲ್ಲಿ ಜನರ ಸಮಸ್ಯೆಗಳನ್ನು ಚರ್ಚಿಸುವುದು ಅಗತ್ಯವೆನಿಸಿದೆ. ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ನಡೆದ ಪ್ರಮುಖ ಪರಿಸರ ಸಂಬಂಧಿತ ಚಳವಳಿಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ವಿಶಿಷ್ಟತೆಯ ಅಧ್ಯಯನವನ್ನು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಲು ಪ್ರಧಾನವಾಗಿರಿಸಿಕೊಂಡು, ಇತರೆ ಒಂದೆರಡು ಚಳವಳಿಗಳನ್ನು ಕುರಿತು ಸಂಕ್ಷಿಪ್ತವಾಗಿ ಸಮೀಕ್ಷೆ ಮಾಡಲಾಗಿದೆ.

ಕರ್ನಾಟಕದ ಪರಿಸರ ಚಳವಳಿಗಳಲ್ಲಿ 'ಗಣಿಗಾರಿಕೆ', ವಿರೋಧದ ಪ್ರತಿಭಟನೆಗಳು ಪ್ರಮುಖವಾಗಿ ಕಾಣಿಸಿಕೊಳ್ಳುತ್ತವೆ. ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಗಣಿಗಾರಿಕೆ ವಿರುದ್ಧದ ಹೋರಾಟಗಳು ನಡೆದಿವೆ. ರಾಜ್ಯದ ಅಭಿವೃದ್ಧಿ ದೃಷ್ಟಿಯಿಂದ ಗಣಿಗಾರಿಕೆ ಅನಿವಾರ್ಯವೆನಿಸಿದರೂ ಅದು ನಡೆಯುತ್ತಿರುವ ರೀತಿಯು ಆಯಾ ಪ್ರದೇಶಗಳ ಅಭಿವೃದ್ಧಿಗೆ ಪೂರಕವಾಗಿಲ್ಲ. ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು ಇತಿ-ಮಿತಿಗಳಡಿಯಲ್ಲಿ ಚಿನ್ನ, ಬೆಳ್ಳಿ, ತಾಮ್ರ, ಬಾಕ್ಸೈಟ್, ಕಬ್ಬಿಣದ ಅದಿರುಗಳ ಗಣಿಗಾರಿಕೆ ನಡೆಸುತ್ತಿದ್ದರೆ, ಖಾಸಗಿ ಕಂಪನಿಗಳು ನೆಪ ಮಾತ್ರಕ್ಕೆ ಇತಿ-ಮಿತಿಗಳನ್ನು ತೋರ್ಪಡಿಸಿಕೊಂಡು ಕಡಿಮೆ ಖರ್ಚಿನ ಹೆಚ್ಚು ಲಭ್ಯವಿರುವ ಹಾಗೂ ಲಾಭದಾಯಕವಾಗಿರುವ ಕಬ್ಬಿಣ, ಮ್ಯಾಂಗನೀಸ್ ಖನಿಜಗಳ ಗಣಿಗಾರಿಕೆಯಲ್ಲಿ ತೊಡಗಿಸಿಕೊಂಡಿವೆ. ಉತ್ತರ ಕನ್ನಡ (ಬಿಸಗೋಡ) ಶಿವಮೊಗ್ಗ, ಚಿಕ್ಕಮಗಳೂರು (ಕುದುರೆಮುಖ), ಚಿತ್ರದುರ್ಗ (ಇಂಗಳದಾಳ), ತುಮಕೂರು (ಚಿಕ್ಕನಾಯಕನಹಳ್ಳಿ), ರಾಯಚೂರು (ಹಟ್ಟಿ), ಬಳ್ಳಾರಿ (ಸಂಡೂರು, ಹೊಸಪೇಟೆ) ಜಿಲ್ಲೆಗಳಲ್ಲಿ ಪ್ರಮುಖ ಗಣಿಗಾರಿಕೆ ಕೇಂದ್ರಗಳಿದ್ದರೂ, ಈಗ ಪ್ರಮುಖವಾಗಿ ತುಮಕೂರು ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ನಡೆಯುತ್ತಿರುವ ಗಣಿಗಾರಿಕೆಗಳು ಗಮನ ಸೆಳೆದಿವೆ. ಗಣಿಗಾರಿಕೆಯಿಂದಾಗಿ ಹಣ ಸಂದಾಯ ಕೆಲವರಿಗಾದರೆ ಹಸಿರು ವಿದಾಯ ಎಲ್ಲರದಾಗಿದೆ. ಬಗೆದು ತೆಗೆದ ಖನಿಜ ಮಾರಾಟಕ್ಕೆ, ಜೊತೆಗೆ ತೆಗೆದ ಮಣ್ಣಿನ ಧೂಳು ಮಾಲಿನ್ಯಕ್ಕೆ, ಭಾರತ ಸಂವಿಧಾನದ ೫೧ಎ ವಿಧಿಯಲ್ಲಿ ತಿಳಿಸಿರುವಂತೆ ಪರಿಸರ ಸಂರಕ್ಷಣೆ ಎಲ್ಲರ ಪ್ರಮುಖ ಕರ್ತವ್ಯಗಳಲ್ಲಿ ಒಂದು. ಅದರಂತೆ ಗಣಿಗಾರಿಕೆ ಸಂಬಂಧದ ರಾಷ್ಟ್ರೀಯ ನೀತಿ ರೂಪಿಸಿಲ್ಲದ್ದರಿಂದ ಗಣಿಗಾರಿಕೆ ಬೃಹತ್ ಉದ್ಯಮವಾಗಿಬಿಟ್ಟಿದೆ.

ಗಣಿಗಾರಿಕೆ ವಿರೋಧದ ಘಟನೆಗಳು ಇನ್ನೂ ಪ್ರತಿಭಟನೆಯ ರೂಪದಲ್ಲಿಯೇ ಇದ್ದು ಚಳವಳಿಯ ಸ್ವರೂಪ ಪಡೆದಿಲ್ಲ. ಮಲೆನಾಡಿನುದ್ದಕ್ಕೂ ಗಣಿಗಾರಿಕೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿರುವ ಕಂಪನಿಗಳ ವಿರುದ್ಧ ನಾಯಕರಿಲ್ಲದ, ನೋಂದಣಿಯಾಗದ ಗಣಿವಿರೋಧದ ವೇದಿಕೆಗಳು ತರ್ಕ-ತಕರಾರು ತೆಗೆದಿವೆ. ಅರಣ್ಯನಾಶ ತಡೆಯ

ಜೊತೆಗೆ ಸ್ವಂತ ಫಲವತ್ತಾದ ತೋಟಗಳನ್ನು ಉಳಿಸಿಕೊಳ್ಳುವ ಹಿತಾಸಕ್ತಿ ಹೊಂದಿವೆ. ಕರ್ನಾಟಕದ ಪೂರ್ವಭಾಗದ ಬಳ್ಳಾರಿ ಜಿಲ್ಲೆಯ ಗಣಿಗಾರಿಕೆಯಿಂದ ಕರಗುತ್ತಿರುವ ಮ್ಯಾಂಗನೀಸ್ ಗುಡ್ಡಗಳ ಕೆಂಧೂಳಿನಡಿಯಲ್ಲಿ ಬದುಕುತ್ತಿರುವ ಯಾರೂ ಸಂಘಟನಾತ್ಮಕವಾಗಿ ಪರಿಸರ ಸಂಬಂಧೀ ಚಳವಳಿಯಲ್ಲಿ ಭಾಗವಹಿಸಿರುವುದಿಲ್ಲ. ಅಷ್ಟೊಂದು ಪ್ರಬಲವಾಗಿ ಹತೋಟಿ ಸಾಧಿಸಿದೆ ಅಲ್ಲಿನ ಸರ್ವಭಕ್ಷಕರ ಗುಂಪು. ಗಣಿಗಾರಿಕೆಯ ಲಾಭ ಮತ್ತು ಪರಿಸರ ನಷ್ಟಗಳ ಲೆಕ್ಕಾಚಾರವನ್ನು ನಿರ್ದಿಷ್ಟವಾಗಿ ಗೊತ್ತುಪಡಿಸಿಕೊಳ್ಳದಿರುವ ಸರ್ಕಾರಗಳು, ಗೊತ್ತುಪಡಿಸಿಕೊಡಲು ಶ್ರಮಿಸದಿರುವ ಸಂಸ್ಥೆಗಳು ಇರುವವರೆಗೂ ಗಣಿಗಾರಿಕೆಗಳನ್ನು ತಡೆಯುತ್ತೇವೆಂಬ ಪರಿಸರ ಹೋರಾಟಗಳು ಕೇವಲ ತಾತ್ಕಾಲಿಕವೆಂದೇ ಹೇಳಬಹುದಾಗಿದೆ.

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೧೯೯೪ರಲ್ಲಿ ಸುಮಾರು ೩೪ ಬೃಹತ್ ಕೈಗಾರಿಕೆಗಳು ಕರ್ನಾಟಕ ಸರ್ಕಾರದಿಂದ ಘೋಷಿಸಲ್ಪಟ್ಟವು.[೩೮] ಅದರಂತೆ ಪ್ರಮುಖ ಯೋಜನೆಗಳಾದ ಮಂಗಳೂರ್ ರಿಫೈನರೀಸ್ ಎಂಡ್ ಪೆಟ್ರೋಕೆಮಿಕಲ್ಸ್ ಲಿಮಿಟೆಡ್, ಅಮೆರಿಕಾ ಮೂಲದ ಕೊಜೆಂಟ್ರಿಕ್ಸ್ ಸಂಸ್ಥೆಯ ನಂದಿಕೂರು ಉಷ್ಣವಿದ್ಯುತ್ ಸ್ಥಾವರ, ಹೈದರಾಬಾದ್ ನೆಲೆಯ ನಾಗಾರ್ಜುನ ಪವರ್ ಕಂಪನಿಯ ಉಷ್ಣವಿದ್ಯುತ್ ಸ್ಥಾವರ (ನಂದಿಕೂರಿಗೆ ಅನತಿದೂರದಲ್ಲಿ) ಅಮೆರಿಕಾ ಮೂಲದ ಸ್ಮಿತ್‌ಕೋ ಜನರೇಶನ್ ಸಂಸ್ಥೆಯ ಬೆಂಗ್ರೆ ವಿದ್ಯುತ್ ಸ್ಥಾವರ, ಸರಪಾಡಿ (ಬಂಟ್ವಾಳ ತಾಲೂಕು) ಅಣೆಕಟ್ಟು ಯೋಜನೆ, ಕಡಂದಲೆ (ಮಂಗಳೂರು ಸಮೀಪ) ರಾಸಾಯನಿಕ ಬಣ್ಣ ಉತ್ಪಾದನಾ ಘಟಕ ಸ್ಥಾಪನೆಯ ವಿರುದ್ಧದ ಹೋರಾಟಗಳು ನಡೆದೇ ಇದ್ದು, ಇವುಗಳ ಕುರಿತು ಪ್ರತ್ಯೇಕವಾಗಿ ಅಧ್ಯಯನ ಮಾಡಲು ಅವಕಾಶವಿರುವುದನ್ನು ಕಂಡುಕೊಳ್ಳಲಾಗಿದೆ. ಕರ್ನಾಟಕದ ಪರಿಸರ ಚಳವಳಿಗಳ ಈ ಸ್ಥೂಲ ನೋಟವು ಅಭಿವೃದ್ಧಿಪರವೂ ಅಲ್ಲದ, ಪರಿಸರ ವಿರೋಧಿಯೂ ಅಲ್ಲದ ಅತಂತ್ರ ಸ್ಥಿತಿಯನ್ನು ತೋರ್ಪಡಿಸುತ್ತದೆ. ಹೋರಾಟಗಳ ಗೊತ್ತುಗುರಿಗಳ ಖಚಿತತೆಯ ಕೊರತೆಯು ಎದ್ದುಕಾಣುತ್ತದೆ. ಸಂಖ್ಯಾದೃಷ್ಟಿಯಿಂದ ದೇಶದಲ್ಲಿಯೇ ಹೆಚ್ಚು ಪರಿಸರ ಹೋರಾಟಗಳನ್ನು ಕರ್ನಾಟಕದಲ್ಲಿ ಗುರುತಿಸಬಹುದು.[೩೯] ಈ ಎಲ್ಲಾ ಅಂಶಗಳನ್ನು ಕೂಲಂಕಶವಾಗಿ ವಿಶ್ಲೇಷಣೆ ಮಾಡುವ ಉದ್ದೇಶ ಹೊಂದಿ, 'ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳತ್ತ ಅಧ್ಯಯನವು ಮುಂದುವರಿಯುತ್ತದೆ.

೨.೬. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು

ಉತ್ತರ ಕನ್ನಡ ಜಿಲ್ಲೆಯನ್ನು ಭೌಗೋಳಿಕ ಲಕ್ಷಣಗಳ ದೃಷ್ಟಿಯಿಂದ 'ದೇಶದೊಳಗಿನ ದೇಶ'ವೆಂದು ಗುರುತಿಸಬಹುದಾಗಿದೆ. ಜಗತ್ತಿನಲ್ಲಿ ಗುರುತಿಸಲ್ಪಟ್ಟಿರುವ 'ಜೀವ ವೈವಿಧ್ಯತೆ'ಯ ತಾಣಗಳಲ್ಲಿ ಒಂದಾಗಿರುವ ಉತ್ತರ ಕನ್ನಡ ಜಿಲ್ಲೆಯು ಅತಿಹೆಚ್ಚು ನೈಸರ್ಗಿಕ ಸಂಪತ್ತು ಹೊಂದಿರುವ ಪ್ರದೇಶವಾಗಿದೆ. ಬರಗಾಲವನ್ನೇ ಕಾಣದ ಜಿಲ್ಲೆ ಎಂದು ದಾಖಲುಗೊಂಡಿರುವುದಕ್ಕೆ ಅಲ್ಲಿನ ಪ್ರಾಕೃತಿಕ ಸವಲತ್ತುಗಳು ಕಾರಣವೆಂಬುದನ್ನು ಗಮನಿಸಬಹುದಾಗಿದೆ. ದಿನಕರ ದೇಸಾಯಿ ಅವರು ಜಿಲ್ಲೆಯ ಪರಿಸರವನ್ನು 'ಒಂದು ಬದಿ ಸಹ್ಯಾದ್ರಿ, ಒಂದು ಬದಿ ಕಡಲು, ನಡುಮಧ್ಯದಲ್ಲಿ ಅಡಕೆ ತೆಂಗುಗಳ ಮಡಲು' ಎಂದು ಚುಟುಕಾಗಿ ಬರೆದರು. ಅತ್ಯಂತ ವಿರಳ ಜನಸಂಖ್ಯೆಯುಳ್ಳ ಜಿಲ್ಲೆಯು ಜನಸಾಂದ್ರತೆಯಲ್ಲಿ ರಾಜ್ಯದಲ್ಲಿ, ಈಗಲೂ ಮೂವತ್ತನೆಯ (ಸದ್ಯ ಜಿಲ್ಲೆಗಳ ಸಂಖ್ಯೆ ೩೦) ಸ್ಥಾನದಲ್ಲಿದೆ.

ಸಂಪತ್ತಿನ ಲೂಟಿ ಹಾಗೂ ಅಭಿವೃದ್ಧಿ ಯೋಜನೆಗಳಿಗಾಗಿಯೇ ಮೀಸಲಾಗಿದೆ ಎಂದು ತಿಳಿದ ವಸಾಹತು ಆಡಳಿತ, ಆನಂತರದ ಸರ್ಕಾರಗಳು, ಸರ್ವಭಕ್ಷಕರು ತಮ್ಮ ಗಮನವನ್ನೆಲ್ಲಾ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೇಂದ್ರೀಕರಿಸಿದರು. ಅದರ ಫಲವಾಗಿ ವಿವಿಧ ಬೃಹತ್ ಯೋಜನೆಗಳು ನಿರ್ಮಾಣಗೊಂಡವು. ನೆಲ ಮತ್ತು ಜಲ ಎರಡರ ಸಂಪೂರ್ಣ ಬಳಕೆಗೆ ಕ್ರಮಗಳನ್ನು ಕೈಗೊಂಡಿದ್ದರಿಂದ ಸಾವಿರಾರು ಎಕರೆ ಅರಣ್ಯ ಹಾಗೂ ಕೃಷಿ ಭೂಮಿ ಮುಳುಗಡೆ ಆಗಿದೆ, ಇಲ್ಲವೇ ಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರಿಂದ ಸಾವಿರಾರು ಜನರ ನಿರ್ವಸತಿ, ಪರಿಹಾರ ಪಡೆದವರು ಸಾಕಾಗಲಿಲ್ಲವೆಂದು, ಪರಿಹಾರ ಪಡೆಯದವರು ಪರಿಹಾರ ಕೊಡಿ ಎಂದು ಹೋರಾಟ ಮಾಡಿದರು. ಈ ಮಧ್ಯದಲ್ಲಿ ಪರಿಸರ ಪ್ರೇಮಿಗಳು, ಪರಿಸರವಾದಿಗಳು, ಪ್ರವೇಶಿಸಿ ಪರಿಸರ ಚಳವಳಿಗಳಾಗಿ ರೂಪುಗೊಳ್ಳುವಂತೆ ಮಾಡಿದರು. ಮಧ್ಯಮವರ್ಗದವರ ಪ್ರಭಾವ ಕಾಣಬಹುದಾಗಿದ್ದರೂ ಸರ್ವಭಕ್ಷಕರು ಎಲ್ಲರನ್ನು ಮೆಟ್ಟಿನಿಂತುದನ್ನು ನೋಡಬಹುದಾಗಿದೆ.

ಒಂದಾದ ಮೇಲೊಂದರಂತೆ ಅಭಿವೃದ್ಧಿ ಯೋಜನೆಗಳು ಜಾರಿಯಾದವು. ಪೂರಕವಾಗಿ ಜೀವ ವೈವಿಧ್ಯ ನಾಶ, ಧಾರಣಶಕ್ತಿಯ ಅಸಾಧ್ಯತೆ, ಯೋಜನೆಗಳಿಂದ ಜಿಲ್ಲೆಗೆಷ್ಟು ಲಾಭವಾಗಿದೆ ಎಂಬ ವಿಷಯಗಳನ್ನು ಮುಂದೆ ಮಾಡಿಕೊಂಡು ನಡೆದ ಚಳವಳಿಗಳು ಸಂಖ್ಯಾದೃಷ್ಟಿಯಿಂದ ರಾಷ್ಟ್ರಮಟ್ಟದಲ್ಲಿ ಗಮನ ಸೆಳೆದವು. ಹಾಗೆಯೇ ರಾಷ್ಟ್ರಮಟ್ಟದ ಯೋಜನೆಗಳು ಯಶಸ್ವಿಯಾದವು. ಉದಾಹರಣೆಗೆ ಸೀಬರ್ಡ್ ನೌಕಾನೆಲೆ, ಕೈಗಾ ಅಣುವಿದ್ಯುತ್ ಸ್ಥಾವರಗಳು.

ದೇಶದಲ್ಲಿಯೇ ಮೊದಲ ಮತ್ತು ಹೆಚ್ಚಿನ ಸಂಖ್ಯೆಯಲ್ಲಿ ನಡೆದ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ವಿಶಿಷ್ಟತೆಯನ್ನು ಪ್ರಮುಖ ಅಧ್ಯಾಯಗಳಲ್ಲಿ ಒಂದೊಂದಾಗಿ ಅಧ್ಯಯನ ಮಾಡುವುದಾಗಿದೆ. ಒಟ್ಟಾರೆ ಚಳವಳಿಗಳನ್ನು ಯಶಸ್ವಿಯಾದವುಗಳು, ಬಹುಪಾಲು ಯಶಸ್ವಿಯಾದವುಗಳು, ವಿಫಲವಾದವುಗಳು ಎಂದು ಗುರುತಿಸುವ ಪ್ರಯತ್ನವಿದೆ. ಸಂಶೋಧನಾ ವಿಧಿವಿಧಾನಗಳನ್ನು ಗಮನದಲ್ಲಿರಿಸಿಕೊಂಡು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರಶ್ನಾವಳಿ ಬಳಸಿ, ಪಡೆಯಲಾದ ದತ್ತಾಂಶಗಳ ಸಹಾಯದಿಂದ ಗುರುತಿಸಲಾಗಿದೆ. ಪರಿಸರ ಚಳವಳಿಗಳು ಸಮಕಾಲೀನ ವಾದವುಗಳಾಗಿರುವುದರಿಂದ ಸಂಶೋಧನೇತರ ಸಾಮಾನ್ಯಗ್ರಹಿಕೆಯೂ ಸಹಾಯಕವಾಗಿದೆ. ಜಿಲ್ಲೆಯಲ್ಲಿ ಅಭಿವೃದ್ಧಿ ಯೋಜನೆಗಳ ಸಂಬಂಧವಾಗಿ ವಿಶೇಷವಾಗಿ ಚಳವಳಿಯೇ ನಡೆಯದ ಸಂದರ್ಭಗಳ ಕಾರಣಗಳನ್ನೂ ವಿಶ್ಲೇಷಿಸಲಾಗಿದೆ. ಉದಾಹರಣೆಗೆ ಕೊಂಕಣ ರೈಲ್ವೇ ಯೋಜನೆ, ಟಿಬೆಟಿಯನ್ ನಿರಾಶ್ರಿತರಿಗೆ ನಾಲ್ಕು ಸಾವಿರ ಎಕರೆ ಅರಣ್ಯಭೂಮಿ ನೀಡಿರುವುದು. ಹೀಗೆ ವಿವಿಧ ಆಯಾಮಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ಕುರಿತು ಅಧ್ಯಯನ ಮಾಡುವ ಪೂರ್ವದಲ್ಲಿ, ಪೂರಕವಾಗಿರುವ ಜಿಲ್ಲೆಯ ಭೌಗೋಳಿಕ ಲಕ್ಷಣಗಳನ್ನು ಮುಂದಿನ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ. ಏಕೆಂದರೆ ಈ ಜಿಲ್ಲೆಯ ಭೌಗೋಳಿಕ ಲಕ್ಷಣಗಳೇ ಪರಿಸರ ಹಾಗೂ ಈ ಸಂಬಂಧದ ಚಳವಳಿಯ ಕಾಳಜಿಗೆ ಮೂಲಮಾತೃಕೆಯಾಗಿವೆ.

ಕೊನೆ ಟಿಪ್ಪಣಿಗಳು

೧. ರಾಮಚಂದ್ರ ಗುಹಾ, ಜಾಗತಿಕ ಪರಿಸರ ಚರಿತ್ರೆ, ಪುಟ ೧೪

೨. ಅದೇ, ಪುಟ ೧೫

೩. ಅದೇ, ಪುಟ ೧೬

೪. ಕೆ. ಮೋಹನ್‌ಕೃಷ್ಣ ರೈ, ಪರಿಸರ ಚಳವಳಿಗಳು ಪುಟ ೫

೫. ರಾಮಚಂದ್ರ ಗುಹಾ, ಪೂರ್ವೋಕ್ತ, ಪುಟ ೧೬೭

೬. ಕೆ. ಮೋಹನ್‌ಕೃಷ್ಣ ರೈ, ಪರಿಸರ ಚಳವಳಿಗಳು, ಪುಟ ೭

೭. ರಾಮಚಂದ್ರ ಗುಹಾ, ಪೂರ್ವೋಕ್ತ, ಪುಟ ೧೭೯

೮. ಕೆ. ಮೋಹನ್‌ಕೃಷ್ಣ ರೈ, ಪೂರ್ವೋಕ್ತ, ಪುಟ ೮

೯. ರಾಮಚಂದ್ರ ಗುಹಾ, ಪೂರ್ವೋಕ್ತ, ಪುಟ ೧೬

೧೦. ಎನ್.ಆರ್. ರಾವ್, ಪರಿಸರ ಮತ್ತು ಅಭಿವೃದ್ಧಿ, ಪುಟ ೨೬

೧೧. ಅದೇ, ಪುಟ ೨೭

೧೨. ರಾಮಚಂದ್ರಗುಹಾ, ಪೂರ್ವೋಕ್ತ, ಪುಟ ೧೮

೧೩. ಎನ್.ಆರ್. ರಾವ್, ಪರಿಸರ ಮತ್ತು ಅಭಿವೃದ್ಧಿ, ಪುಟ ೨೮

೧೪. ಅದೇ, ಪುಟ ೨೯

೧೫. ಟಿ.ಎಸ್. ವಿವೇಕಾನಂದ, ಭೂಮಿಗೀತೆ, ಪುಟ ೩೩

೧೬. ಅದೇ, ಪುಟ ೩೩

೧೭. ಶಾರದಾ ಗೋಪಾಲ, ಪರಿಸರ ನ್ಯಾಯದ ತಕ್ಕಡಿಯಲ್ಲಿ, ಪುಟ ೧೦೫

೧೮. ಅದೇ, ಪುಟ ೧೦೫

೧೯. ಶಾರದಾ ಗೋಪಾಲ, ಪೂರ್ವೋಕ್ತ, ಪುಟ ೧೦೮

೨೦. ಟಿ.ಎಸ್. ವಿವೇಕಾನಂದ, ಪೂರ್ವೋಕ್ತ, ಪುಟ ೩೪

೨೧. ಎನ್.ಪಿ. ಶಂಕರನಾರಾಯಣ ರಾವ್, ಸ್ವಾತಂತ್ರ್ಯ ಗಂಗೆಯ ಸಾವಿರ ತೊರೆಗಳು, ಪುಟ ೬೮

೨೨. ಕೆ. ಮೋಹನ್‌ಕೃಷ್ಣ ರೈ, ಪೂರ್ವೋಕ್ತ, ಪುಟ ೬

೨೩. ಕೆ. ಭೈರಪ್ಪ, ಪರಿಸರ ಪ್ರಜ್ಞೆ, ಪುಟ ೧೮೯

೨೪. ಟಿ.ಎಸ್. ವಿವೇಕಾನಂದ, ಪೂರ್ವೋಕ್ತ, ಪುಟ ೩೯

೨೫. ಅದೇ, ಪುಟ ೨

೨೬. ರಾಮಚಂದ್ರ ಗುಹಾ, ಪೂರ್ವೋಕ್ತ, ಪುಟ ೧೪

೨೭. ಅದೇ, ಪುಟ ೧೪

೨೮. ಕೆ. ಭೈರಪ್ಪ, ಪೂರ್ವೋಕ್ತ, ಪುಟ ೧೪೯

೨೯. ಟಿ.ಎಸ್. ವಿವೇಕಾನಂದ, ಪೂರ್ವೋಕ್ತ, ಪುಟ ೩

೩೦. ರಾಮಚಂದ್ರ ಗುಹಾ, ಪೂರ್ವೋಕ್ತ, ಪುಟ ೧೬೬

೩೧. ಟಿ.ಎಸ್. ವಿವೇಕಾನಂದ, ಪೂರ್ವೋಕ್ತ, ಪುಟ ೪

೩೨. ಕೈ. ಭೈರಪ್ಪ, ಪರಿಸರ ಪ್ರಜ್ಞೆ, ಪುಟ ೧೪೯

೩೩. ಟಿ.ಎಸ್. ವಿವೇಕಾನಂದ, ಭೂಮಿಗೀತೆ, ಪುಟ ೫

೩೪. ಶಾರದಾ ಗೋಪಾಲ, ಪೂರ್ವೋಕ್ತ, ಪುಟ ೭೩

೩೫. ನಕಾಶೆ - ೧, ಅನುಬಂಧ - ಒಂದು

೩೬. ಕೆ. ಮೋಹನ್‌ಕೃಷ್ಣ ರೈ, ಪರಿಸರ ಚಳವಳಿಗಳು, ಪುಟ ೨೭

೩೭. ಅದೇ, ಪುಟ ೨೮

೩೮. ಸಬಿಹಾ ಭೂಮಿಗೌಡ, ನಾವು ಮತ್ತು ನಮ್ಮ ಪರಿಸರ, ಪುಟ ೯೭

೩೯. ನಕಾಶೆ-೨, ಅನುಬಂಧ - ಒಂದು

❑ ❑ ❑

ಅಧ್ಯಾಯ - ೩

ಉತ್ತರ ಕನ್ನಡ ಜಿಲ್ಲೆ - ಭೌಗೋಳಿಕ ಲಕ್ಷಣಗಳು

೩.೧ ಕರಾವಳಿ

೩.೨ ಘಟ್ಟ ಪ್ರದೇಶ

೩.೩ ಬಯಲು ಭೂಮಿ

೩.೪ ಇನ್ನಿತರ ಲಕ್ಷಣಗಳು

ಉತ್ತರ ಕನ್ನಡ ಜಿಲ್ಲೆ - ಭೌಗೋಳಿಕ ಲಕ್ಷಣಗಳು

✦

ಪ್ರಾಕೃತಿಕಾಂಶಗಳಿಂದ ಕೂಡಿದ ಭೌಗೋಳಿಕ ಪರಿಸರವು ಸಾಮಾಜಿಕ ಪರಿಸರವನ್ನು ರೂಪಿಸಿ, ನಿರ್ಧರಿಸುತ್ತದೆ.[೧] ಈ ಅಭಿಪ್ರಾಯಕ್ಕೆ ಪೂರಕವೆಂಬಂತೆ ಭೂಗೋಳದ ಸಹಾಯ, ಸಹವಾಸದಿಂದ ಎಲ್ಲರ, ಎಲ್ಲದರ ಚರಿತ್ರೆ ನಿರ್ಮಾಣವಾಗುತ್ತದೆ. ಚರಿತ್ರೆಯು ಎಲ್ಲಾ ಅಧ್ಯಯನ ಶಿಸ್ತುಗಳೊಂದಿಗೆ ನಿರಂತರ ಸಂಬಂಧವನ್ನು ಹೊಂದಿರುತ್ತದೆ. ಅದರಂತೆ ಚರಿತ್ರೆ ಮತ್ತು ಭೂಗೋಳ ಶಾಸ್ತ್ರಗಳು ಅವಿನಾಭಾವ ಸಂಬಂಧಗಳನ್ನು ಹೊಂದಿವೆ. ಚರಿತ್ರೆಯ ಯಾವುದೇ ಘಟನಾವಳಿಗಳು ಎಲ್ಲಿ ನಡೆದವು ಎನ್ನುವಾಗ ಅಲ್ಲಲ್ಲಿನ ಭೂಗೋಳದ ಪರಿಚಯ ಅತ್ಯಗತ್ಯ. 'ಭೌಗೋಳಿಕ ವಾತಾವರಣ ಮನುಷ್ಯನ ಮೇಲೆ ಅಚ್ಚಳಿಯದ ಪ್ರಭಾವವನ್ನು ಬೀರುತ್ತದೆ' ಎಂದು ಅರಿಸ್ಟಾಟಲ್ ಹೇಳುವಂತೆ ಭೌಗೋಳಿಕ ಅಂಶಗಳು ಕೇವಲ ಆಹಾರ ಮತ್ತು ಹವಾಗುಣಕ್ಕೆ ಸೀಮಿತವಾಗಿರದೆ ನೂರಾರು ವಿಧಗಳಲ್ಲಿ ಪ್ರಭಾವಿತವಾಗಿರುವುದನ್ನು ಗಮನಿಸಬಹುದಾಗಿದೆ.

ಉಷ್ಣಾಂಶ, ತೇವಾಂಶ ಮುಂತಾದ ಭೌಗೋಳಿಕಾಂಶಗಳು ಮನುಷ್ಯನ ಸ್ವಭಾವದ ಮೇಲೆ ಗಂಭೀರ ಪರಿಣಾಮವನ್ನುಂಟುಮಾಡುತ್ತವೆ. ಅದಕ್ಕೆ ಅನುಗುಣವಾಗಿ ವೈಯಕ್ತಿಕ ಹಾಗೂ ಪ್ರಾದೇಶಿಕ ಪ್ರಗತಿಗಳನ್ನು ಗುರುತಿಸಬಹುದಾಗಿದೆ. ಉದಾಹರಣೆಗೆ ಕರ್ನಾಟಕದ ಪೂರ್ವ ಮತ್ತು ಪಶ್ಚಿಮಗಳಲ್ಲಿ ವಾಸಿಸುತ್ತಿರುವ ಜನರ ಸ್ವಭಾವಗಳಲ್ಲಿ ಹೋಲಿಕೆ ಮತ್ತು ವ್ಯತ್ಯಾಸಗಳಿರುವುದನ್ನು ಕಾಣಬಹುದು. ಕರ್ನಾಟಕದ ಪೂರ್ವ ಜಿಲ್ಲೆಗಳಲ್ಲಿ ಬಹುಪಾಲು ಜನರ ಬಣ್ಣ ಕಪ್ಪಾಗಿರುವುದಕ್ಕೆ, ಪಶ್ಚಿಮದ ಜಿಲ್ಲೆಗಳಲ್ಲಿ ಬಹುಪಾಲು ಜನರು ಬಿಳಿಯರಾಗಿರುವುದಕ್ಕೆ (ವಾಡಿಕೆಯಂತೆ) ವಾತಾವರಣದಲ್ಲಿನ ಉಷ್ಣಾಂಶವೂ ಒಂದು ಪ್ರಮುಖ ಪ್ರೇರಕ ಅಂಶವಾಗಿದೆ. ಅದರಂತೆ ಯಾವುದೇ ಪ್ರದೇಶದ ಅಭಿವೃದ್ಧಿಯ ಹಿನ್ನೆಲೆಯಲ್ಲಿಯೂ ಭೌಗೋಳಿಕ ಲಕ್ಷಣಗಳು ಪೂರಕ-ಪ್ರೇರಕ ಅಂಶಗಳಾಗಿರುತ್ತವೆ. ಹಾಗೆಯೇ ಈ ಅಧ್ಯಯನ ವಿಷಯದ ಚೌಕಟ್ಟಿನೊಳಗಿನ ಉತ್ತರ ಕನ್ನಡ ಜಿಲ್ಲೆಯ ವಿಶಿಷ್ಟವಾದ ಭೌಗೋಳಿಕ ಲಕ್ಷಣಗಳನ್ನು ವಿವರವಾಗಿ ವಿಶ್ಲೇಷಿಸುವುದು ಔಚಿತ್ಯಪೂರ್ಣವೆನಿಸುತ್ತದೆ.

ಕರ್ನಾಟಕದ ವಾಯುವ್ಯ ಭಾಗದಲ್ಲಿರುವ ಈ ಜಿಲ್ಲೆಯು, ಉತ್ತರ ಕರ್ನಾಟಕದ ಜಿಲ್ಲೆಗಳಲ್ಲಿ ಒಂದು ಎಂಬುದಾಗಿ ಗುರುತಿಸಲ್ಪಟ್ಟಿದೆ. ಸರ್ಕಾರದ ಸವಲತ್ತುಗಳ ಹಂಚಿಕೆ ವಿಚಾರದಲ್ಲಿ ಕರ್ನಾಟಕದ ಉತ್ತರದ ಇತರ ಜಿಲ್ಲೆಗಳಿಗಿಂತ ಕಡೆಗಣಿಸಲ್ಪಟ್ಟಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 'ಅಭಿವೃದ್ಧಿ ವರದಿ' ಎಂದೇ ಹೆಸರಾಗಿರುವ ಡಾ. ಡಿ.ಎಂ. ನಂಜುಂಡಪ್ಪ ಅವರ ವರದಿಯಲ್ಲೂ ಉತ್ತರ ಕನ್ನಡ ಜಿಲ್ಲೆಗೆ ಆದ್ಯತೆ ಇಲ್ಲವೆಂಬುದು ವಿಚಾರಣೀಯ.

ಕರ್ನಾಟಕ ರಾಜ್ಯದ ಮೂವತ್ತು (೨೦೧೦ ರವರೆಗಿನ ವಿಂಗಡಣೆಯಂತೆ) ಜಿಲ್ಲೆಗಳಲ್ಲಿ 'ಕಾರವಾರ' ಜಿಲ್ಲಾ ಕೇಂದ್ರ ಸ್ಥಳವಾಗಿದ್ದರೂ 'ಕಾರವಾರ ಜಿಲ್ಲೆ' ಎಂದು ಗುರುತಿಸಿಕೊಂಡಿಲ್ಲ. ಕರ್ನಾಟಕದ ಕಲೆ-ಸಾಹಿತ್ಯ-ಸಂಸ್ಕೃತಿಗಳ ನೆಲೆವೀಡು ಈ

ನೆಲವಾದ್ದರಿಂದ 'ಕನ್ನಡ ಜಿಲ್ಲೆ' ಎಂಬ ಸಾಂಕೇತಿಕ ಹೆಸರಿನಿಂದ ಕರೆಸಿಕೊಂಡಿದೆ.[೨] ಜಿಲ್ಲೆಯೊಳಗಿನ 'ಬನವಾಸಿ'ಯು ಕನ್ನಡದ ಮೊದಲ ರಾಜಮನೆತನ 'ಕದಂಬರ' ರಾಜಧಾನಿಯಾಗಿತ್ತು ಎಂಬುದು ವಿವಾದಾತೀತ ಬೆಂಬಲದ ಮಾತಾಗಿದೆ. ಹೀಗೆಯೇ ಹತ್ತು ಹಲವು ಸಾಹಿತ್ಯಕ, ಸಾಂಸ್ಕೃತಿಕ ಉದಾಹರಣೆಗಳನ್ನು ಹೊತ್ತಿದೆ ಉತ್ತರ ಕನ್ನಡ ಜಿಲ್ಲೆ. ಪುರಾಣಗಳು, ಪ್ರಾಚೀನ ಇತಿಹಾಸ ಕಾಲವೂ ಸೇರಿದಂತೆ ಕದಂಬರಿಂದ ಟಿಪ್ಪುವಿನ ಆಡಳಿತದವರೆಗೆ ವಿವಿಧ ಸ್ವತಂತ್ರ - ಸಾಮಂತ ಪ್ರಭುತ್ವಗಳ ಕಾಲದಲ್ಲಿ ಪರಶುರಾಮ ಸೃಷ್ಟಿ, ಕುಂತಲದೇಶ, ಕೊಂಕಣ, ಹೈವೆ, ಕಾನಡಾ ಮೊದಲಾದ ವಿವಿಧ ಹೆಸರುಗಳಿಂದ ಕರೆಸಿಕೊಂಡಿದೆ.[೩]

ಕರಾವಳಿಯ ಚೆಲುವು, ಮಲೆನಾಡಿನ ಮೈಸಿರಿ ಮತ್ತು ಬೈಲು ಸೀಮೆಯ ಬೆಡಗುಗಳ ಸಂಗಮವಾಗಿ ಶೋಭಿಸುವ ಈ ಜಿಲ್ಲೆಯ ಪ್ರಾಕೃತಿಕ ಸ್ವರೂಪವು ಸುಂದರವಾಗಿದ್ದು ವಿಶಿಷ್ಟತೆಗಳಿಂದ ಕೂಡಿದೆ. ಹೊಳೆ, ಹಳ್ಳ, ಗಿರಿ, ಝರಿ, ಬೆಟ್ಟ-ಬಯಲು, ಕಂದರ-ಕುಮರಿ, ಕೂರ್ವೆ, ದ್ವೀಪ, ದಿನ್ನೆ, ಅಳಿವೆ, ಜಲಪಾತ, ಕಡಲುಗಳಾದಿಯಾಗಿ ಒಂದೊಂದೂ ಅತಿಮಧುರ-ರಮಣೀಯ. ನಿತ್ಯ ಹರಿದ್ವರ್ಣವುಳ್ಳ ವಿವಿಧ ರೀತಿಯ ಸಸ್ಯಸಂಕುಲ, ಅವಲಂಬಿಸಿರುವ ಖಗ-ಮೃಗಗಳು, ನೆಲ-ಜಲದ ನೋಟ ಒಂದಕ್ಕಿಂತ ಒಂದು ಸುಂದರ. 'ಗುಂಡ ಬಳೆ'ಯ ಒಂದು ಶಾಸನವು ಈ ನಿಸರ್ಗರಮ್ಯ ಪ್ರದೇಶವನ್ನು 'ಕೊಂಕಣ ಶ್ರೀಮುಖ ದರ್ಪಣಂ' ಎಂದು ನಿರೂಪಿಸಿದೆ.[೪] ಶಾಸನದ ಸಾಲಿಗೆ ಪೂರಕವೆಂಬಂತೆ ಕಾರವಾರದ ಜಿಲ್ಲಾ ನ್ಯಾಯಾಧೀಶರಾಗಿದ್ದ ಚಿಕ್ಕಪ್ಪ ಸತ್ಯೇಂದ್ರನಾಥ ಟಾಗೂರರಿಂದಾಗಿ ೧೮೮೩ರಲ್ಲಿ ಇಲ್ಲಿಗೆ ಬಂದಿದ್ದ ೨೩ರ ಹರೆಯದ ಕವಿ ರವೀಂದ್ರನಾಥ ಟಾಗೋರರ 'ನಿಸರ್ಗ ಸೌಂದರ್ಯವೆಂಬುದು ಬರೀ ಕಾಲ್ಪನಿಕ ಭ್ರಮೆಯಲ್ಲ. ಅದು ನಮ್ಮ ಮೈಮರೆಸಿ ತನ್ನೊಳಗೆ ಲೀನಗೊಳಿಸಿಕೊಳ್ಳುವ ಅನಂತತೆಯ ನಲಿವಿನ ಪ್ರತಿಬಿಂಬ ಎಂಬುದನ್ನು ಮನಗಾಣಲು ಕಾರವಾರದ ಕಡಲತೀರ ಅತ್ಯಂತ ಯೋಗ್ಯಸ್ಥಳ.....' ಎಂಬ ನುಡಿಗಳನ್ನು ಉಲ್ಲೇಖಿಸಲಾಗಿದೆ. 'ಟಾಗೂರ್ ಬೀಚ್' ಎಂದೇ ಹೆಸರಾಗಿರುವ ಕಾರವಾರದ ಕಡಲತೀರದಲ್ಲಿರುವ ಕವಿ ರವೀಂದ್ರರ ಪುತ್ಥಳಿಯು ಈ ನುಡಿ ಫಲಕವನ್ನು ಹೊತ್ತು ಪ್ರವಾಸಿಗರ ಗಮನ ಸೆಳೆಯುತ್ತಿದೆ.

'ದೇಶದೊಳಗಿನ ದೇಶ'ವೆನ್ನಲು ಅತ್ಯಾವಶ್ಯಕ ಮೂಲಾಂಶಗಳನ್ನು ಹೊಂದಿರುವ ಉತ್ತರ ಕನ್ನಡ ಪ್ರದೇಶಕ್ಕೆ ಬಂದು ನೋಡಿ, ಮೆಚ್ಚಿ ಆನಂದಿಸಿದ್ದ ಆದಿಕವಿ ಪಂಪನು ಹಾಡಿದ-

"ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಂಪುಗ
ಳ್ಗಾಗರಮಾದ ಮಾನಸರೆ ಮಾನಸರಂತವರಾಗಿ ಪುಟ್ಟಲೇ
ನಾಗಿಯುಮೇನೊ ತೀರ್ದಪುದೆ ತೀರದೊಡಂ ಮರಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿ ದೇಶದೊಳ್"

"ತೆಂಕಣಗಾಳಿ ಸೋಂಕಿದೊಡಮೊಳ್ನುಡಿಗೇಳ್ದೊಡಮಿಂಪನಾಳ್ದ ಗೇ
ಯಂ ಕಿವಿವೊಕ್ಕೊಡಂ ಬಿರಿದ ಮಲ್ಲಿಗೆಗಂಡೊಡಮಾದ ಕೆಂದಲಂ
ಪಂ ಗೆಡೆಗೊಂಡೊಡಂ ಮಧುಮಹೋತ್ಸವಮಾದೊಡಮೇನನೆಂಬೆನಾ
ರಂಕುಸವಿಟ್ಟೊಡಂ ನೆನೆವುದೆನ್ನ ಮನಂ ವನವಾಸಿ ದೇಶಮಂ"

ಈ ಕವಿತೆಗಳು ಉತ್ತರ ಕನ್ನಡಕ್ಕೆ ಪ್ರಶಸ್ತಿ ಪತ್ರಗಳಂತೆ ಇವೆ.[೫] ಕೋಗಿಲೆಯಾಗಿ ಆದರೂ ಈ ನೆಲದಲ್ಲಿ ಹುಟ್ಟಲು ಬಯಸಿದ ಮಹಾಕವಿಯ ಆಶಯದಂತೆಯೇ ಇಲ್ಲಿನ ಕವಿ-ಬರಹಗಾರರನೇಕರು ಇಚ್ಛಿಸುತ್ತಾರೆ. ರಂಗನಾಥ ದಿವಾಕರರು

ಈ ಜಿಲ್ಲೆಯ ನಿರಾಡಂಬರ ಸೌಂದರ್ಯವನ್ನು ಕಂಡು 'ಸಿಂಡರೆಲ್ಲಾ ಜಿಲ್ಲೆ' ಎಂದು ಕರೆದರೆ, ದಿನಕರ ದೇಸಾಯಿಯವರು 'ಸಿರಿಗನ್ನಡ ಚಪ್ಪರವೆ ನನ್ನ ಜಿಲ್ಲೆ, ಇಲ್ಲಿಯೇ ಇನ್ನೊಮ್ಮೆ ಹುಟ್ಟುವೆನು ನಲ್ಲೆ' ಎಂಬುದಾಗಿ ಹಂಬಲಿಸಿದ್ದಾರೆ. ಇಂತಹ ಇನ್ನೂ ಅನೇಕ ವರ್ಣನೆಗಳು ಅತಿಶಯೋಕ್ತಿಯಲ್ಲವೆನ್ನುವುದಕ್ಕೆ ಇತ್ತೀಚಿನ ಅಭಿವೃದ್ಧಿ ಯೋಜನೆಗಳ ಮಾಲಿನ್ಯದಿಂದ ಜಿಲ್ಲೆಯ ಪ್ರಕೃತಿ ಸಿರಿದೇವಿಯ ಸೊಬಗು ನಲುಗಿದ್ದರೂ, ಸೊರಗಿಲ್ಲದಿರುವುದನ್ನು ಯಾರಾದರೂ ಸ್ವತಃ ನೋಡಿಯೇ ಸಾಕ್ಷೀಕರಿಸಿಕೊಳ್ಳಬಹುದಾಗಿದೆ.

ಕರ್ನಾಟಕದ ಅರಬ್ಬೀ ಸಮುದ್ರ ತೀರದ ಉದ್ದಕ್ಕೂ ಇರುವ ಕರಾವಳಿ, ಪಶ್ಚಿಮಘಟ್ಟಗಳು ಸೇರಿದಂತೆ ವಿಶಾಲ ಪ್ರದೇಶವನ್ನು ಪೋರ್ಚುಗೀಸರು 'ಕ್ಯಾನರಿನ್ಸ್' ಎಂದು ಕರೆದರು.[೬] ೧೭೯೯ರಲ್ಲಿ ಟಿಪ್ಪುವಿನ ಮರಣಾನಂತರ ವಶಪಡಿಸಿಕೊಂಡ ಈ ಪ್ರದೇಶವನ್ನು ಬ್ರಿಟಿಷರು 'ಕೆನರಾ' ಎಂದು ಕರೆದರು. ೧೮೦೦ರಲ್ಲಿ ಕೆನರಾ ಪ್ರದೇಶವನ್ನು 'ನಾರ್ತ್ ಕೆನರಾ', 'ಸೌತ್‌ಕೆನರಾ' ಎಂದು ವಿಭಜಿಸಿದರು. ೧೮೬೨ರವರೆವಿಗೂ ಹೊನ್ನಾವರವು 'ನಾರ್ತ್ ಕೆನರಾ'ದ ಜಿಲ್ಲಾ ಕೇಂದ್ರವಾಗಿತ್ತು. ಹತ್ತಿ ಬೆಳೆಯುತ್ತಿದ್ದ ಪ್ರದೇಶಗಳಿಗೆ ಕಾರವಾರ ಬಂದರು ಹತ್ತಿರವಿದ್ದುದರಿಂದ ಬೊಂಬಾಯಿಗೆ ಸಾಗಿಸಲು ಅನುಕೂಲವಾಗುತ್ತದೆಂದು ತಿಳಿದು ೧೮೬೨ ಅಕ್ಟೋಬರ್ ೨೭ ರಂದು ಕಾರವಾರವನ್ನೇ ಜಿಲ್ಲಾ ಕೇಂದ್ರವನ್ನಾಗಿ ಮಾಡಿದ ಬ್ರಿಟಿಷರು ನಾರ್ತ್ ಕೆನರಾವನ್ನು ಬೊಂಬಾಯಿ ಪ್ರಾಂತ್ಯಕ್ಕೆ ಸೇರಿಸಿಕೊಂಡು ತಮ್ಮ ನೇರ ಆಳ್ವಿಕೆಗೊಳಪಡಿಸಿದರು. ಸ್ವಾತಂತ್ರ್ಯಾನಂತರದಲ್ಲಿ ಕರ್ನಾಟಕ ಸರ್ಕಾರವು ೩೧-೧-೧೯೭೭ ರಿಂದ ನಾರ್ತ್ ಕೆನರಾವನ್ನು 'ಉತ್ತರ ಕನ್ನಡ'ವೆಂದು ಹೆಸರಿಸಿತು.[೭] ಈಗ ಉತ್ತರ ಕನ್ನಡ ಜಿಲ್ಲೆಯೆಂದೇ ಕರೆಯಲ್ಪಡುತ್ತಿದೆ.

ಕರ್ನಾಟಕದ ನಾಲ್ಕು ಆಡಳಿತ ವಿಭಾಗಗಳಲ್ಲಿಯೇ ದೊಡ್ಡದೆನಿಸಿರುವ ಬೆಳಗಾಂ ಆಡಳಿತ ವಿಭಾಗಕ್ಕೆ ಸೇರಿರುವ ಸದ್ಯದ ಏಳು ಜಿಲ್ಲೆಗಳಲ್ಲಿ ಉತ್ತರ ಕನ್ನಡ ಜಿಲ್ಲೆಯೂ ಒಂದು. ೧೩°೫೫ ರಿಂದ ೧೫°೩೧ ಮತ್ತು ೭೪°೯ ರಿಂದ ೭೫°೧೦ರ ನಡುವಿನ ಊಹಾತ್ಮಕ ಅಕ್ಷಾಂಶ ರೇಖಾಂಶಗಳೊಳಗೆ ಜಿಲ್ಲೆಯ ವ್ಯಾಪ್ತಿಯಿದೆ. ಸಿರಸಿ ತಾಲೂಕಿನ ಬಕ್ಕಳ ಗ್ರಾಮದ ಬಳಿ ಈ ರೇಖೆಗಳು ಸಂದಿಸಿರುವ ಕೌತುಕದ ಜಾಗದಲ್ಲಿ ನಿರ್ಮಿಸಲ್ಪಟ್ಟ ಶಾಸ್ತ್ರೀಯ ಉದ್ಯಾನವನ ಹೊಂದಿರುವುದು ವಿಶೇಷವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಉತ್ತರ ಭಾಗದಲ್ಲಿ ಗೋವಾ ಮತ್ತು ಮಹಾರಾಷ್ಟ್ರ ರಾಜ್ಯಗಳು, ಸುತ್ತುವರಿದು ಬೆಳಗಾಂ, ಧಾರವಾಡ, ಹಾವೇರಿ, ಶಿವಮೊಗ್ಗ, ಉಡುಪಿ ಜಿಲ್ಲೆಗಳು, ಪಶ್ಚಿಮ ಭಾಗದಲ್ಲಿ ಅರಬ್ಬೀ ಸಮುದ್ರ ಮೇರೆಗಳಾಗಿವೆ.[೮] ಸುಮಾರು ೧೦,೨೯೧ ಚ.ಕಿ.ಮೀ. ವಿಸ್ತೀರ್ಣ ಹೊಂದಿದ್ದು, ೧೯೮೩ರಲ್ಲಿ ಬೆಳಗಾಂ ಜಿಲ್ಲೆಯಿಂದ ಸುಮಾರು ೩೬ ಚ.ಕಿ.ಮೀ. ಪ್ರದೇಶವು ವರ್ಗಾಯಿಸಲ್ಪಟ್ಟ ಮೇಲೆ ಒಟ್ಟು ೧೦,೩೨೭ ಚ.ಕಿ.ಮೀ. ಭೌಗೋಳಿಕ ವಿಸ್ತೀರ್ಣತೆ ಹೊಂದಿ ರಾಜ್ಯದಲ್ಲಿ ಮೂರನೇ ಅತಿದೊಡ್ಡ (ಬೆಳಗಾಂ, ತುಮಕೂರು ನಂತರ) ಜಿಲ್ಲೆಯಾಗಿದೆ. ೨೦೦೧ರ ಜನಗಣತಿ ಪ್ರಕಾರ ೧೩,೫೩,೬೪೪ ಜನಸಂಖ್ಯೆ ಜಿಲ್ಲೆಯದಾಗಿದ್ದು, ಪ್ರತಿ ಚದರ ಕಿ.ಮೀ.ಗೆ ೧೩೨ ರಂತೆ ಜನಸಾಂದ್ರತೆ ಹೊಂದಿ ರಾಜ್ಯದ ಸದ್ಯದ ಮುವತ್ತು ಜಿಲ್ಲೆಗಳಲ್ಲಿ ಕೊನೆಯ ಸ್ಥಾನದಲ್ಲಿದೆ. ರಾಜ್ಯದ ಜನಸಾಂದ್ರತೆ ಸರಾಸರಿ ೨೭೫ ಆಗಿದ್ದು, ಅತೀ ಕಡಿಮೆ ಜನಸಾಂದ್ರತೆ ಮತ್ತು ವಿಪುಲ ನೈಸರ್ಗಿಕ ಸಂಪತ್ತಿರುವ ಜಿಲ್ಲೆಯಲ್ಲಿ, ಪ್ರಭುತ್ವ ಮತ್ತು ಬಂಡವಾಳಶಾಹಿಗಳು ಬಂಡವಾಳ ಹೂಡಲು ಮುಂದಾಗಿರುವುದನ್ನು ಕಾಣಬಹುದು. ಪಕ್ಕದ ಹಾಗೂ ಪೂರ್ವಭಾಗದಲ್ಲಿರುವ ಹಾವೇರಿ ಜಿಲ್ಲೆಯ ಹೆಚ್ಚಿದ ಜನಸಾಂದ್ರತೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಕೊರತೆ ನಡುವೆ ಬಂಡವಾಳ ಹೂಡಲು ಪೈಪೋಟಿ ಕಾಣಲಾಗುವುದಿಲ್ಲ. ಈಗಲೂ

ಶೇ. ೭೦ ರಿಂದ ೮೦ ರಷ್ಟು ಅರಣ್ಯವು ಜಿಲ್ಲೆಯಲ್ಲಿ ಉಳಿದಿರುವುದು ಜನಸಂಖ್ಯೆಯ ತೀವ್ರತೆ ಕಡಿಮೆಯಾಗಿರುವುದಕ್ಕೆ ಪ್ರಮುಖ ಕಾರಣವಾಗಿದೆ. ಇದು ಜಿಲ್ಲೆಯಲ್ಲಿ ಅಭಿವೃದ್ಧಿ ಯೋಜನೆಗಳಿಗೆ ಪೂರಕವೂ ಪರಿಸರ ಚಳವಳಿಗಳ ಹಿನ್ನಡೆಗೆ ಕಾರಣವೂ ಆಗಿರುವುದನ್ನು ಕಂಡುಕೊಳ್ಳಬಹುದು.

ಉತ್ತರ ಕನ್ನಡ ಜಿಲ್ಲೆಯು ಆಡಳಿತಾತ್ಮಕವಾಗಿ ೧೧ ತಾಲೂಕುಗಳನ್ನು, ಮೂರು ಆಡಳಿತ ವಿಭಾಗಗಳನ್ನು (ಕಾರವಾರ, ಕುಮಟ, ಸಿರಸಿ), ೩೫ ಹೋಬಳಿಗಳನ್ನು, ೧೨೮೯ ಹಳ್ಳಿಗಳನ್ನು ಒಳಗೊಂಡಿರುತ್ತದೆ. ವಿಸ್ತೀರ್ಣದಲ್ಲಿ ಚಿಕ್ಕ ತಾಲೂಕು ಭಟ್ಕಳ, ದೊಡ್ಡದು ಜೋಯಿಡಾ ತಾಲೂಕು. ಒಂದೇ ಒಂದು ಮನೆ ಇರುವುದನ್ನು ಇಲ್ಲಿ ಒಂದು ಹಳ್ಳಿ ಎಂದು ಕರೆಯಲಾಗುತ್ತಿದೆ. ಹಾಗಾಗಿಯೇ ಸಂಖ್ಯಾ ಬಲದಲ್ಲಿ ಹಳ್ಳಿಗಳ ಸಂಖ್ಯೆ ಜಾಸ್ತಿ ಎನಿಸಿದರೂ ಮನೆಗಳ ಸಂಖ್ಯೆ ಹಾಗೂ ಜನಸಂಖ್ಯೆ ಅತಿವಿರಳ. ಈ ವಿವರಗಳನ್ನು ೨೦೦೧ ರ ಜನಗಣತಿ ಅಂಕಿ-ಅಂಶಗಳ ಆಧಾರದ ಮೇಲೆ ಸಿದ್ಧಪಡಿಸಿದ ಪಟ್ಟಿ - ೧ ರಲ್ಲಿ ನೋಡಬಹುದಾಗಿದೆ.[೯]

ಪಟ್ಟಿ - ೧

ಕ್ರ.ಸಂ.	ತಾಲೂಕುಗಳು	ವಿಸ್ತೀರ್ಣ ಚ.ಕಿ.ಮೀ.	ಹೋಬಳಿಗಳ ಸಂಖ್ಯೆ	ಗ್ರಾಮಗಳ ಸಂಖ್ಯೆ	ಜನಸಂಖ್ಯೆ
೧*	ಕಾರವಾರ	೭೩೨.೧	೦೪	೫೨	೧,೪೭,೮೯೦
೨	ಅಂಕೋಲ	೯೧೮.೭	೦೪	೮೧	೧,೦೧,೫೪೯
೩	ಕುಮಟ	೫೯೦.೦	೦೪	೧೧೮	೧,೪೫,೮೨೬
೪	ಹೊನ್ನಾವರ	೭೫೬.೮	೦೩	೯೩	೧,೬೦,೩೩೧
೫	ಭಟ್ಕಳ	೩೫೫.೯	೦೨	೬೦	೧,೪೯,೩೩೮
೬*	ಸಿದ್ಧಾಪುರ	೮೫೯.೩	೦೩	೧೯೬	೧,೦೦,೮೭೦
೭	ಸಿರಸಿ	೧೩೨೨.೧	೦೪	೨೨೨	೧,೭೫,೫೫೦
೮	ಯಲ್ಲಾಪುರ	೧೩೦೧.೧	೦೨	೧೨೭	೭೩,೯೯೭
೯	ಜೋಯಿಡಾ	೧೯೭೫.೫	೦೩	೧೨೦	೪೮,೯೧೪
೧೦*	ಹಳಿಯಾಳ	೮೪೭.೪	೦೪	೧೨೯	೧,೫೯,೧೪೧
೧೧	ಮುಂಡಗೋಡ	೬೬೮.೧	೦೨	೯೧	೯೦,೭೩೮
	ಒಟ್ಟು	೧೦೩೨೭.೦	೩೫	೧೨೮೯	೧೩,೫೩,೬೪೪

* ಕ್ರ.ಸಂ. ೧ ರಿಂದ ೫ ಕರಾವಳಿ ತಾಲೂಕುಗಳು

* ಕ್ರ.ಸಂ. ೬ ರಿಂದ ೯ ಘಟ್ಟದ ಮೇಲಿನ ತಾಲೂಕುಗಳು

* ಕ್ರ.ಸಂ. ೧೦ ಮತ್ತು ೧೧ ಬಯಲು ತಾಲೂಕುಗಳೆಂದು ಗುರುತಿಸಿಕೊಳ್ಳಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ವಿಸ್ತೀರ್ಣವನ್ನು ಜಗತ್ತಿನ ಲಭ್ಯವಿರುವ ೧೬೬ ದೇಶಗಳ ವಿಸ್ತೀರ್ಣತೆಯೊಂದಿಗೆ ತುಲನೆ ಮಾಡಿದರೆ ೩೨ ರಾಷ್ಟ್ರಗಳು ಉತ್ತರ ಕನ್ನಡ ಜಿಲ್ಲೆಗಿಂತ ಚಿಕ್ಕವು.[೧೦] ಉದಾಹರಣೆಗೆ ಮಾರಿಷಸ್ ದೇಶ ೫ ಪಟ್ಟು, ಸಿಂಗಪುರ ೧೭ ಪಟ್ಟು ಚಿಕ್ಕವುಗಳಾಗಿವೆ. ನಮ್ಮ ದೇಶದ ಸಿಕ್ಕಿಂ ರಾಜ್ಯಕ್ಕಿಂತ ಒಂದೂವರೆ ಪಟ್ಟು ಮತ್ತು ಗೋವಾ ರಾಜ್ಯಕ್ಕಿಂತ ಎರಡೂವರೆ ಪಟ್ಟು ದೊಡ್ಡದು ಉತ್ತರ ಕನ್ನಡ ಜಿಲ್ಲೆ. ವಿಚಿತ್ರವೆಂದರೆ ನೆರೆಯ ಗೋವಾ ರಾಜ್ಯದಲ್ಲಿ ೪೦ ಎಂ.ಎಲ್.ಎ. ಗಳು ಮತ್ತು ಇಬ್ಬರು ಎಂ.ಪಿ.ಗಳು. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಆರು ಎಂ.ಎಲ್.ಎ.ಗಳು ಹಾಗೂ ಒಂದು ಎಂ.ಪಿ. ಸ್ಥಾನಕ್ಕೆ ಜನಸಂಖ್ಯೆ ಸಾಕಾಗದೇ ಪಕ್ಕದ ಬೆಳಗಾಂ ಜಿಲ್ಲೆಯ ಕಿತ್ತೂರು, ಖಾನಾಪುರಗಳನ್ನು ಸೇರಿಸಿ ಈಗಲೂ ಉತ್ತರ ಕನ್ನಡ ಲೋಕಸಭಾಕ್ಷೇತ್ರದ (೨೦೦೯ ರವರೆಗೆ 'ಕೆನರಾ' ಲೋಕಸಭಾ ಕ್ಷೇತ್ರ) ಚುನಾವಣೆ ನಡೆಯುತ್ತಿದೆ. ಈ ಅಂಶಗಳನ್ನು ಜಿಲ್ಲೆಯ ಪರಿಸರ ಚಳವಳಿಗಳ ಯಶಸ್ಸು - ವಿಫಲತೆಗಳ ಸಂದರ್ಭದಲ್ಲಿ ಪ್ರಭುತ್ವವನ್ನು ಪ್ರತಿನಿಧಿಸುವ ಜನಪ್ರತಿನಿಧಿ ವರ್ಗದ ಬೆಂಬಲ ಹಾಗೂ ಭಾಗವಹಿಸುವಿಕೆಯ ಹಿನ್ನೆಲೆಯಲ್ಲಿ ಅತ್ಯಂತ ಪ್ರಮುಖವಾಗಿ ಗಮನಿಸಬೇಕಾಗುತ್ತದೆ.

ವರ್ಷದಲ್ಲಿ ಅತೀ ಹೆಚ್ಚು ಮಳೆ ಸೆಳೆಯುವ ಪಶ್ಚಿಮ ಘಟ್ಟಗಳ ನಿತ್ಯಹರಿದ್ವರ್ಣತೆ, ಪ್ರಮುಖ ನದಿಗಳು ಹರಿದು ಸೃಷ್ಟಿಸುವ ಜಲಪಾತಗಳು, ಕನಿಷ್ಟ ೨೪° ಯಿಂದ ಗರಿಷ್ಟ ೩೪° ಸೆಲ್ಸಿಯಸ್ ಉಷ್ಣಾಂಶ, ಕರಾವಳಿಯ ಸಮುದ್ರಹವೆ, ಹತ್ತಿ ಬೆಳೆಯಲು ಯೋಗ್ಯವಾಗಿರುವ ಕಪ್ಪು ಮಣ್ಣಿನ ಭೂಮಿ, ಭತ್ತ ಬೆಳೆಯಲು ಯೋಗ್ಯವಾದ ನೀರಾವರಿ ಅನುಕೂಲ, ಸಾಂಬಾರು - ತೋಟದ ಬೆಳೆಗಳಾದ ಅಡಿಕೆ, ತೆಂಗು, ಏಲಕ್ಕಿ, ಕಾಳುಮೆಣಸು ಮುಂತಾದವುಗಳ ಸಮೃದ್ಧತೆ ಕರಾವಳಿಯ ಮತ್ಸ್ಯ ಕೃಷಿ ಮುಂತಾದವುಗಳು ಸಾಮಾನ್ಯ ಅಂಶಗಳಾಗಿವೆ. 'ಪರಿಸರವನ್ನು ಉಳಿಸಿ, ಅಭಿವೃದ್ಧಿಯನ್ನು ನಡೆಸಿ' ಎನ್ನುವ ಅಧ್ಯಯನ ನೆಲೆಯಿಂದ ಈ ಸಾಮಾನ್ಯ ಅಂಶಗಳೂ ಸೇರಿದಂತೆ ಎಲ್ಲಾ ಭೌಗೋಳಿಕ ಲಕ್ಷಣಗಳನ್ನು ಪ್ರಮುಖವಾಗಿ ಈ ಮುಂದಿನಂತೆ ವಿಭಾಗಿಸಿಕೊಂಡು ವಿಶ್ಲೇಷಿಸಲಾಗಿದೆ.

೩.೧ ಕರಾವಳಿ

ಉತ್ತರ ಕನ್ನಡ ಜಿಲ್ಲೆಯ 'ಪಶ್ಚಿಮದ ಕರಾವಳಿ'ಯು ಸುಮಾರು ೧೪೪ ಕಿ.ಮೀ. ಉದ್ದವಾಗಿದ್ದು, ಕರ್ನಾಟಕದ ಒಟ್ಟು ಕರಾವಳಿಯ ಸರಿಸುಮಾರು ಅರ್ಧದಷ್ಟಿದೆ. ಜಿಲ್ಲೆಯ ಕರಾವಳಿಯು ಉತ್ತರದಲ್ಲಿ ಮಾಜಾಳಿ ಗ್ರಾಮದಿಂದ ದಕ್ಷಿಣದಲ್ಲಿ ಭಟ್ಕಳದ ಕೋಟೆ ಸಮೀಪದ ಗೊರ್ಟೆ ಎಂಬ ಹಳ್ಳಿಯವರೆಗೂ ಹಬ್ಬಿದೆ. ೨೦೦೧ ರ ಜನಗಣತಿ ವರದಿಯಂತೆ ಕರಾವಳಿಯಲ್ಲಿ ೪೦೪ ಹಳ್ಳಿಗಳು ಹಾಗೂ ೭,೦೪,೯೩೪ ಜನಸಂಖ್ಯೆಯು ಇದೆ. ಅರಬ್ಬೀ ಸಮುದ್ರ ತೀರದಿಂದ ಪಶ್ಚಿಮ ಘಟ್ಟಗಳ ಮಧ್ಯೆ ೧೬ ರಿಂದ ೪೮ ಕಿ.ಮೀ. ವಿಸ್ತೀರ್ಣವುಳ್ಳ ಇಳಿಜಾರು, ಅಳಿವೆ, ಗಜನಿಭೂಮಿ, ಕೆಲವೆಡೆ ಸಮತಟ್ಟು, ಅಂಕು-ಡೊಂಕು, ಕೊಲ್ಲಿ ಪ್ರದೇಶಗಳನ್ನು ಹೊಂದಿರುವ ಕರಾವಳಿಯನ್ನು 'ಕೊಂಕಣ ತೀರ'ವೆಂದು ಕರೆಯಲಾಗುತ್ತಿದೆ.[೧೧] ಪಶ್ಚಿಮಘಟ್ಟ ಪ್ರದೇಶವನ್ನೂ ಒಳಗೊಂಡಿದ್ದರೂ ಜಿಲ್ಲಾ ಕೇಂದ್ರ ಕಾರವಾರ, ತಾಲೂಕು ಕೇಂದ್ರಗಳಾಗಿರುವ ಅಂಕೋಲ, ಕುಮಟ, ಹೊನ್ನಾವರ ಹಾಗೂ ಭಟ್ಕಳ ಇವುಗಳು, ಸದಾಶಿವಗಡ, ಬೈತಕೋಲ್, ಬೇಲಿಕೇರಿ, ಗೋಕರ್ಣ, ತದಡಿ, ಮಿರ್ಜಾನ, ಮುರುಡೇಶ್ವರ ಮುಂತಾದ ಐತಿಹಾಸಿಕ, ವ್ಯಾಪಾರಿ ಹಾಗೂ ಸಾಂಸ್ಕೃತಿಕ ಕೇಂದ್ರಗಳು ಕರಾವಳಿ ತೀರದಲ್ಲಿಯೇ ಇವೆ.

ಕಾರವಾರದಲ್ಲಿರುವ 'ನೈಸರ್ಗಿಕ ಬಂದರು' ಸೇರಿದಂತೆ ಬೇಲಿಕೇರಿ, ಸಾಣಿಕಟ್ಟ, ಕುಮಟ, ಹೊನ್ನಾವರ, ಭಟ್ಕಳ ಬಂದರುಗಳು ಪ್ರಮುಖವಾಗಿದ್ದರೂ, ಈಗ ಕಾರವಾರ ಮತ್ತು ಬೇಲಿಕೇರಿಯಲ್ಲಿ ಪ್ರಮುಖ ವಾಣಿಜ್ಯ ಬಂದರುಗಳಿದ್ದರೆ, ಉಳಿದ ಹನ್ನೆರಡು ಮೀನುಗಾರಿಕೆಗಷ್ಟೇ ಸೀಮಿತಗೊಂಡಿವೆ.[೧೨] ಕಾರವಾರ, ಗೋಕರ್ಣ, ಕುಮಟ, ಭಟ್ಕಳಗಳ ಸಮೀಪ ಸುಂದರ ಕಡಲ ಕಿನಾರೆಗಳಿವೆ. ಪ್ರವಾಸೋದ್ಯಮಕ್ಕೆ ಕರಾವಳಿಯು ಅತ್ಯುತ್ತಮವಾಗಿದೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯು ನೈಸರ್ಗಿಕವಾಗಿ ಸಂರಕ್ಷಿಸಲ್ಪಟ್ಟಿದೆ. ಸದಾಶಿವಗಡ, ದೇವಭಾಗ, ಕೂರ್ಮಗಡ, ದೇವಗಡ (ಲೈಟ್ ಹೌಸ್), ಬೈತಕೋಲ್, ಅಂಜದೀವ, ನೇತ್ರಾಣಿ ನಡುಗಡ್ಡೆಗಳು ಸಮುದ್ರದಲ್ಲಿ ತೀರದುದ್ದಕ್ಕೂ ಅಲ್ಲಲ್ಲಿ ಎದ್ದು ನಿಂತಿರುವುದರಿಂದ ಬಿರುಗಾಳಿ, ಸುನಾಮಿ ಮತ್ತಿತರ ಅವಘಡಗಳು ಸಂಭವಿಸುವುದು ಕಡಿಮೆ. ಆದರೆ ಸೀಬರ್ಡ್ ನೌಕಾನೆಲೆಯಿಂದ ನಿರ್ಮಿಸಲ್ಪಟ್ಟ ತಡೆಗೋಡೆಗಳಿಂದ ಹೊರಳಿದ ಸಮುದ್ರದ ಅಲೆಗಳು ಕಾರವಾರದ ಸುಂದರ ಕಡಲತೀರಕ್ಕೆ ಅಪ್ಪಳಿಸಿ ಹಾನಿಯುಂಟು ಮಾಡಿರುವುದನ್ನು ಗುರುತಿಸಬಹುದು. ಕಾಳಿ, ಅಘನಾಶಿನಿ, ಗಂಗಾವಳಿ, ಶರಾವತಿಯಂತಹ ಪ್ರಮುಖ ನದಿಗಳು, ಇನ್ನಿತರ ಹೊಳೆಗಳು ಕರಾವಳಿಯಲ್ಲಿ ಅರಬ್ಬೀ ಸಮುದ್ರ ಸೇರುತ್ತವೆ. 'ಅಳಿವೆ'ಗಳೆಂದು ಕರೆಸಿಕೊಳ್ಳುವ ನದಿಗಳು ಸೇರುವ ಜಾಗಗಳು ಜೀವವೈವಿಧ್ಯತೆಯ ತಾಣಗಳಾಗಿವೆ. ಇಲ್ಲಿರುವ ಕಾಂಡ್ಲಾ ವನಗಳಿಂದ ಸಮುದ್ರಕೊರೆತದ ತಡೆಯುಂಟಾಗಿ, ಮೀನುಗಳ ಸಂತಾನೋತ್ಪತ್ತಿಗೆ ಅವಕಾಶವಾಗಿದೆ.

ಕರಾವಳಿಯಿಂದ ಅಣಸಿ, ಅರಬೈಲು, ದೇವಿಮನೆ, ಮಾವಿನಗುಂಡಿ ಎಂಬ ಹೆಸರಿನ ಘಟ್ಟಗಳ ಮೂಲಕ ಹಾದು ಹೋಗಿರುವ ರಸ್ತೆಗಳ ಮೂಲಕ ಜಿಲ್ಲೆಯು ರಾಜ್ಯದ ಇತರ ಭಾಗಗಳಿಗೆ ಸಂಪರ್ಕ ಹೊಂದಿದೆ. ೬೩ನೇ ಸಂಖ್ಯೆಯ ರಾಷ್ಟ್ರೀಯ ಹೆದ್ದಾರಿಯು ಅರಬೈಲು ಘಟ್ಟದ ಮೂಲಕ ಹಾದು ಕರಾವಳಿಯನ್ನು ಸಂಪರ್ಕಿಸಿದರೆ, ರಾಷ್ಟ್ರೀಯ ಹೆದ್ದಾರಿ ೧೭ ಕರಾವಳಿಯ ಐದು ತಾಲೂಕುಗಳನ್ನು ಉತ್ತರ ಭಾಗದಲ್ಲಿರುವ ಗೋವಾ ರಾಜ್ಯ ಮತ್ತು ದಕ್ಷಿಣ ಭಾಗದಲ್ಲಿರುವ ಕೇರಳ ರಾಜ್ಯಗಳೊಡನೆ ಸಂಪರ್ಕಿಸುವಂತೆ ಮಾಡಿವೆ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಕೊಂಕಣ ರೈಲ್ವೆಯು ೧೩೦ ಕಿ.ಮೀ. ಹಾದು ಹೋಗಿರುತ್ತದೆ. ಕೊಂಕಣ ರೈಲ್ವೆಗೆ ಸಂಪರ್ಕಿಸುವ ಅಂಕೋಲ-ಹುಬ್ಬಳ್ಳಿ ಹಾಗೂ ತಾಳಗುಪ್ಪ-ಹೊನ್ನಾವರ ರೈಲುಮಾರ್ಗ ನಿರ್ಮಾಣ ಕಾರ್ಯಗಳು ಪರಿಸರ ಚಳವಳಿಯ ಕಾರಣಗಳಿಂದಾಗಿ ನೆನೆಗುದಿಗೆ ಬಿದ್ದಿವೆ.

ಕರಾವಳಿಯ ಜನರು ಆರ್ಥಿಕವಾಗಿ ಮೀನುಗಾರಿಕೆ, ಉಪ್ಪು ತಯಾರಿಕೆ, ಉಸುಕು ಸಾಗಾಣಿಕೆ, ಸೀಗಡಿ ಮೀನು ಕೃಷಿ, ಭತ್ತ, ಶೇಂಗ, ಈರುಳ್ಳಿ, ಮಾವು, ಗೋಡಂಬಿ ಬೆಳೆಗಳನ್ನು ಅವಲಂಬಿಸಿದ್ದಾರೆ. ಕಲ್ಲು ಗಣಿಗಾರಿಕೆ, ಚೀರೆಕಲ್ಲು ಕೊರೆದು ಮಾರುವ ಕೆಲಸ, ದೋಣಿಕಟ್ಟುವುದು ಇವರ ಇತರ ಲಾಭದಾಯಕ ಕೆಲಸಗಳು. ಗುಡಿಗಾರರ ಮರದ ಕೆತ್ತನೆ ಕೆಲಸಗಳು (ಕುಮಟ), ಸೋನಗಾರರ ಚಿನ್ನ, ಬೆಳ್ಳಿ, ಕುಸುರಿ ಕೆಲಸಗಳು (ಕಾರವಾರ) ವಿದೇಶಿ ಸಂಪರ್ಕ ಹೊಂದಿರುವ ಭಟ್ಕಳದ ವ್ಯಾಪಾರ ಮೊದಲಿನಿಂದಲೂ ನಂಬಿದ ಉದ್ಯೋಗಾಧಾರಿತ ಕೆಲಸಗಳು. ಸಾರಿಗೆ ಸಂಪರ್ಕದ ಖಾಸಗೀಕರಣವಿಲ್ಲದ್ದರಿಂದ ಸರ್ಕಾರಿ ಸಾರಿಗೆ ಮತ್ತು ರೈಲ್ವೇ ಸಂಪರ್ಕವನ್ನಷ್ಟೇ ಅವಲಂಬಿಸಲಾಗಿದೆ. ಮೀನುಗಾರಿಕೆ ಹಾಗೂ ಬಂದರು ವ್ಯವಹಾರ - ವಹಿವಾಟುಗಳು ನಿರಂತರ ಆರ್ಥಿಕ ಚಟುವಟಿಕೆಗಳಾಗಿವೆ. ಕರಾವಳಿಯ ಕುಮಟದಲ್ಲಿ ದಕ್ಷಿಣ ಕನ್ನಡ ಮೂಲದ ರಾಷ್ಟ್ರೀಕೃತ ಸಿಂಡಿಕೇಟ್ ಬ್ಯಾಂಕ್‌ನ ಮೊದಲ ಶಾಖೆ ಆರಂಭಿಸಲ್ಪಟ್ಟಿದ್ದನ್ನು ಗಮನಿಸಬಹುದಾಗಿದೆ.[೧೩]

ಉತ್ತರ ಕನ್ನಡ ಜಿಲ್ಲೆಯ ಕರಾವಳಿಯು ರಾಜಕೀಯ ಚಟುವಟಿಕೆಗಳಲ್ಲಿಯೂ ದೇಶದ ಗಮನ ಸೆಳೆದಿದೆ. ಸ್ವಾತಂತ್ರ್ಯ ಚಳವಳಿ ಕಾಲದ ಜಂಗಲ್ ಸತ್ಯಾಗ್ರಹ, ಉಪ್ಪಿನ ಸತ್ಯಾಗ್ರಹ, ರೈತ ಹೋರಾಟಗಳು ಇಲ್ಲಿ ಯಶಸ್ವಿಯಾಗಿ ನಡೆದವು. ಗಾಂಧೀಜಿಯವರ ನಾಯಕತ್ವವನ್ನು ಬೆಂಬಲಿಸಿ ನಡೆದ ಅಂಕೋಲ ಉಪ್ಪಿನ ಸತ್ಯಾಗ್ರಹವು ದೇಶದ ಗಮನಾರ್ಹ ಉದಾಹರಣೆ ಎನಿಸಿತು. ೧೯೩೨ರ ಕರನಿರಾಕರಣೆ ಚಳವಳಿಯಲ್ಲಿ ಅಂಕೋಲವು ಭಾರತದ ಎರಡನೆಯ ಬಾರ್ದೋಲಿ ಎಂದು ಪ್ರಸಿದ್ಧವಾಯಿತು.[೧೪] ಇವುಗಳನ್ನು ಅನುಸರಿಸಿಯೇ ದಿನಕರ ದೇಸಾಯಿಯವರೇ ಮೊದಲಾದವರ ನಾಯಕತ್ವದ ರೈತ ಹೋರಾಟಗಳು ಕರಾವಳಿಯ ಗಂಭೀರ ಘಟನೆಗಳಾಗಿದ್ದವು.[೧೫]

ಇವುಗಳಿಂದ ಪ್ರೇರಿತರಾದ ಜನರು ಚಲೇಜಾವ್ ಚಳವಳಿಯ ಕಾಲದಲ್ಲಿ ಜಂಗಲ್ ಸುಡುವ ಸಾಹಸದ ಕೆಲಸಕ್ಕೆ ಮುಂದಾಗಿದ್ದರು. ಸ್ವಾತಂತ್ರ್ಯೋತ್ತರದ ಕಾಲದಲ್ಲಿ ಇಂತಹ ಯಾವ ಮಹತ್ವದ ರಾಜಕೀಯ ಚಳವಳಿಗಳಿಗೂ ಕರಾವಳಿಯಲ್ಲಿ ನಡೆದಿಲ್ಲ. ನಡೆದಿದ್ದರೆ ಅವು ಪರಿಸರ ಚಳವಳಿಗಳು ಮಾತ್ರ ! ಆದರೂ ಪರಿಸರವನ್ನು ಕಡೆಗಣಿಸಿ ಅಭಿವೃದ್ಧಿ ಯೋಜನೆಗಳಾದ ಬಿಣಗಾದ ಕಾಸ್ಟಿಕ್ ಸೋಡಾ ಕಾರ್ಖಾನೆ, ಕೊಂಕಣ ರೈಲ್ವೆ, ಕಾರವಾರ ಬಂದರು, ಸೀಬರ್ಡ್ ನೌಕಾನೆಲೆ ಇವುಗಳು ಕರಾವಳಿಯಲ್ಲಿ ತಲೆ ಎತ್ತಿನಿಂತಿವೆ. ಈ ಕುರಿತಾದ ಚರ್ಚೆಗಳು ಮುಂದಿನ ಅಧ್ಯಾಯಗಳಲ್ಲಿ ನಡೆದಿವೆ.

ಕರಾವಳಿಯು ಸಾಮಾಜಿಕವಾಗಿ ವಿವಿಧ ಭಾಷೆ - ಜಾತಿ ಜನಾಂಗಗಳ ನೆಲೆಯಾಗಿದೆ. ನಾಡವರು, ನಾಮಧಾರಿಗಳು, ಹಾಲಕ್ಕಿ ವಕ್ಕಲಿಗರು, ಕೋಮಾರ ಪಂಥದವರು, ವಿವಿಧ ಉಪಜಾತಿಗಳುಳ್ಳ ಮೀನುಗಾರರು, ಸೋನಗಾರರು, ವಲಸೆ ಬಂದು ವ್ಯಾಪಾರೀ ವೃತ್ತಿಯಲ್ಲಿ ತೊಡಗಿಸಿಕೊಂಡಿರುವ ಕೊಂಕಣಿಗರು, ಮುಸ್ಲಿಮರು, ಕ್ರಿಶ್ಚಿಯನ್ನರು, ವಿದೇಶಗಳಿಂದ ಬಂದು ನೆಲೆ ನಿಂತವರೆಂದು ಗುರುತಿಸಿಕೊಂಡಿರುವ ಭಟ್ಕಳದ ನವಾಯತರು, ಹವ್ಯಕರು, ಶೆಟ್ಟಿಗಳು ಹಾಗೂ ಉದ್ಯೋಗ ಅರಸಿ ಬಂದ ಬೇರೆ ಬೇರೆ ಪ್ರದೇಶಗಳವರು ಪ್ರಮುಖವಾಗಿದ್ದಾರೆ. ಇವರೆಲ್ಲರ ಭಾಷೆ, ಆಚಾರ-ವಿಚಾರ-ಆಹಾರ ಪದ್ಧತಿಗಳು ವಿಭಿನ್ನವಾಗಿವೆ. ಶೈಕ್ಷಣಿಕ ಪ್ರಗತಿ ಇತ್ತೀಚಿನ ವರ್ಷಗಳಲ್ಲಿ ಉತ್ತಮವಾಗುತ್ತಿದೆ. ಎಲ್ಲರಲ್ಲೂ ಶ್ರೀಮಂತಿಕೆಯನ್ನು ಗುರುತಿಸಲಾಗದಿದ್ದರೂ ಮೀನು, ಗಂಜಿ-ಊಟಕ್ಕೆ ಕೊರತೆ ಇಲ್ಲದಿರುವುದನ್ನು ಕರಾವಳಿಯುದ್ದಕ್ಕೂ ಕಾಣಬಹುದು. ಆದರೆ ಇದು ಪ್ರತಿಯೊಬ್ಬರ ತಲಾದಾಯದ ಮಾನದಂಡವಾಗುವುದಿಲ್ಲ. ಪರಿಸರವನ್ನು ಲೆಕ್ಕಿಸದ ಸರ್ವಭಕ್ಷಕರ ಯಶಸ್ಸಿಗೆ ಈ ಮೇಲ್ಕಂಡ ಅಂಶಗಳು ಪೂರಕವಾದವು ಎಂಬುದೇ ವಿಶೇಷ. ವರ್ಷವಿಡೀ ಯಾವುದಾದರೊಂದು ನಂಬಿಕೆಗಳ ಹಾದಿಯಲ್ಲೇ ನಡೆಯುವ ಕರಾವಳಿಗರು ದಿನ-ದಿನ ಹಬ್ಬ-ಹರಿದಿನಗಳಲ್ಲಿ ತೊಡಗಿಸಿಕೊಂಡವರು. ಬಂಡಿಹಬ್ಬ, ಸುಗ್ಗಿಕುಣಿತ, ಪುಗಡಿ ಕುಣಿತ, ಗುಮಟೆಪದ, ಡೊಳ್ಳು ಕುಣಿತ, ಯಕ್ಷಗಾನ, ಕರಾವಳಿ ಉತ್ಸವ ಇವೇ ಮುಂತಾದವುಗಳು ನಂಬಿಕೆಯ, ಜನಾಕರ್ಷಣೆಯ ಆಚರಣೆಗಳಾಗಿ ನಡೆಯುತ್ತಲೇ ಇವೆ. ಕರಾವಳಿಯುದ್ದಕ್ಕೂ ಕಂಡುಬರುವ ಅಸಂಖ್ಯಾತ ವಿವಿಧ ದೇವಾಲಯಗಳು ಇದನ್ನು ಸಾಕ್ಷೀಕರಿಸುತ್ತವೆ.

ಭೌಗೋಳಿಕವಾಗಿ ಕರಾವಳಿಯ ಜನರು ಉತ್ತರ ಕನ್ನಡ ಜಿಲ್ಲೆಯ ಇತರ ಸ್ಥಳಗಳಿಗೆ ದೂರದಲ್ಲಿದ್ದಾರೆ. ಜಿಲ್ಲಾ ಕೇಂದ್ರ ಕಾರವಾರದಿಂದ ಪಶ್ಚಿಮ ಘಟ್ಟಗಳ ಮೂಲಕ ಹಾದು ದೂರದ ಮುಂಡಗೋಡ, ಸಿದ್ದಾಪುರ ತಾಲೂಕು ಕೇಂದ್ರಗಳನ್ನು ತಲುಪಲು ಗಂಟೆಗಟ್ಟಲೆ ಪ್ರಯಾಣ ಮಾಡಿ, ಪ್ರಯಾಸ ಪಡಬೇಕು. ಜಿಲ್ಲೆಯು

ಭೌಗೋಳಿಕವಾಗಿ ವಿಶಾಲವಾಗಿರುವುದು ಹಾಗೂ ಜಿಲ್ಲಾ ಕೇಂದ್ರ ಕಾರವಾರವು ಜಿಲ್ಲೆಯ ಒಂದು ಮೂಲೆಯಲ್ಲಿರುವುದು 'ಭಾವನಾತ್ಮಕ ಒಂದುಗೂಡುವಿಕೆಗೆ ಅಡ್ಡಿಯಾಗಿರುವುದನ್ನು ಗುರುತಿಸಬಹುದು. ಸಿರಸಿಯು ಆಡಳಿತಾತ್ಮಕವಾಗಿ ಮತ್ತೊಂದು ಹೊಸ ಜಿಲ್ಲಾಕೇಂದ್ರವಾಗಬೇಕೆನ್ನುವ ಕೂಗು ಎದ್ದಿದೆ. ೨೦೦೮ ರಲ್ಲಿ ಸಿರಸಿ ಮತ್ತು ಕಾರವಾರಗಳನ್ನು ಕೇಂದ್ರ ಸ್ಥಳಗಳನ್ನಾಗಿರಿಸಿಕೊಂಡು ಎರಡು ಶೈಕ್ಷಣಿಕ ಜಿಲ್ಲೆಗಳನ್ನು ಅಸ್ತಿತ್ವಕ್ಕೆ ತರಲಾಗಿದೆ. ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ಒಟ್ಟಾರೆ ಅರಣ್ಯವನ್ನು ಐದು ಅರಣ್ಯ ಜಿಲ್ಲೆಗಳನ್ನಾಗಿ ವಿಭಾಗೀಕರಿಸಿರುವ ವಿಚಾರ ಹಳೆಯದು. ಈ ರೀತಿಯ ವಿಂಗಡಣೆಗಳು 'ಘಟ್ಟದ ಮೇಲಿನ ಜನರು, ಘಟ್ಟದ ಕೆಳಗಿನ (ಕರಾವಳಿಯ) ಜನರು' ಎಂಬ ವರ್ಗೀಕರಣಕ್ಕೆ ಕಾರಣವಾಗಿರುವುದನ್ನು ವಿವಿಧ ಸಂದರ್ಭಗಳಲ್ಲಿ ಗುರುತಿಸಬಹುದು. ಉದಾಹರಣೆಗೆ ಅಭಿವೃದ್ಧಿಗಾಗಿಯೇ ಇರುವ ಜಿಲ್ಲಾ ಪಂಚಾಯತ್‌ನ ಅಧ್ಯಕ್ಷ-ಉಪಾಧ್ಯಕ್ಷ ಹುದ್ದೆಗಳಿಗೆ ಅಥವಾ ವಿವಿಧ ಯೋಜನೆಗಳಿಗೆ ಹಣ ಮೀಸಲಿಡುವಾಗ ಘಟ್ಟದ ಮೇಲಿನ, ಘಟ್ಟದ ಕೆಳಗಿನವರಿಗೆ ಆದ್ಯತೆ ನೀಡಬೇಕೆಂಬ ವಿಚಾರವು ಬಹಿರಂಗವಾಗಿ ಚರ್ಚೆಯಾಗುವುದನ್ನು ಪತ್ರಿಕಾ ಮಾಧ್ಯಮವು ದಾಖಲಿಸಿದೆ.[೧೬] ಇಂತಹ 'ಭಾವನಾತ್ಮಕ ಬಿರುಕು' ಪರೋಕ್ಷವಾಗಿ ಪರಿಸರ ಚಳವಳಿಗಳ ಮೇಲೆ ಪರಿಣಾಮ ಉಂಟುಮಾಡಿದೆ. ಉದಾಹರಣೆಗೆ ಕೈಗಾ ಅಣುಸ್ಥಾವರ ವಿರೋಧದ ಹೋರಾಟದಲ್ಲಿ ವಿಶೇಷವೆಂದರೆ ಕರಾವಳಿಗರಿಗಿಂತ ಘಟ್ಟದ ಮೇಲಿನವರ ಪಾತ್ರ ಹೆಚ್ಚಾಗಿರುವುದನ್ನು ಕಾಣಬಹುದು.

ಕಡಲ ತೀರ, ಅಳಿವೆಯ ಪರಿಸರ ವ್ಯವಸ್ಥೆಯನ್ನು ರಕ್ಷಿಸುವ ಉದ್ದೇಶದಿಂದ ಭಾರತ ಸರ್ಕಾರವು 'ಕಡಲ ತೀರ ನಿಯಂತ್ರಣ ಅಧಿಸೂಚನೆ'ಯನ್ನು ೧೯೯೧ರಲ್ಲಿ ಹೊರಡಿಸಿತು.[೧೭] ಈ ಅಧಿಸೂಚನೆಯ ಪ್ರಕಾರ ಕರಾವಳಿ ತೀರದ ೫೦೦ ಮೀಟರ್‌ವರೆಗಿನ ಜಮೀನಿನಲ್ಲಿ ಅಭಿವೃದ್ಧಿಪರ ಯಾವುದೇ ರೀತಿಯ ಚಟುವಟಿಕೆಗಳಿಗೆ ಅವಕಾಶವಿಲ್ಲ. ಅನುಬಂಧ ಎರಡು ಎಂಬುದರಲ್ಲಿ ಕರಾವಳಿ ಕಾನೂನಿನ ವಿವರ ಒದಗಿಸಲಾಗಿದೆ. ಸರ್ಕಾರ ಮತ್ತು ಸರ್ವಭಕ್ಷಕರು ಈ ಸಿ.ಆರ್.ಜಡ್. ೧೯೯೧ರ ಕಾಯಿದೆಯನ್ನು ಉಲ್ಲಂಘಿಸಿದ ಸಂದರ್ಭಗಳಿವೆ. ಈ ಕಾಯಿದೆಯ ಉಪಬಂಧಗಳಂತೆ ಕೊಂಕಣ ರೈಲ್ವೆಯಾಗಲಿ, ಸೀಬರ್ಡ್ ನೌಕಾ ನೆಲೆಯಾಗಲೀ ನಿರ್ಮಾಣವಾಗುವಂತೆಯೇ ಇಲ್ಲ. ನಿಧಾನವಾಗಿಯಾದರೂ ಕಡಲತೀರದ ಚಟುವಟಿಕೆಗಳ ಮೇಲೆ ಈ ಕಾಯಿದೆಯು ಜನ ಜಾಗೃತಿ ಉಂಟು ಮಾಡುವುದನ್ನು ಪರಿಸರ ಚಳವಳಿಗಳ ಚರ್ಚೆಯ ಕಾಲದಲ್ಲಿ ಗಮನಿಸಬಹುದಾಗಿದೆ. ಈಗ ಕರಾವಳಿಗೆ ಹೊಂದಿಕೊಂಡಿರುವ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ಜಿಲ್ಲೆಯೊಳಗಿನ ಘಟ್ಟ ಪ್ರದೇಶದ ಭೌಗೋಳಿಕಾಂಶಗಳ ಅಧ್ಯಯನವು ಈ ಮುಂದಿನ ಭಾಗವಾಗಿದೆ.

೩.೨ ಘಟ್ಟ ಪ್ರದೇಶ

ಉತ್ತರ ಕನ್ನಡ ಜಿಲ್ಲೆಯ ಪಶ್ಚಿಮ ಕರಾವಳಿಯಿಂದ ಪೂರ್ವ ದಿಕ್ಕಿಗೆ ಏರುತ್ತಾ ಸಾಗಿದರೆ ಜೀವವೈವಿಧ್ಯತೆಗೆ ಹೆಸರಾಗಿರುವ ಜಿಲ್ಲೆಯ ಮತ್ತೊಂದು ಭೌಗೋಳಿಕ ಲಕ್ಷಣವಾಗಿರುವ ಘಟ್ಟ ಪ್ರದೇಶದ ಸಂಪರ್ಕ ಉಂಟಾಗುತ್ತದೆ. ಜಿಲ್ಲೆಯ ಘಟ್ಟ ಪ್ರದೇಶವು ಪಶ್ಚಿಮ ಘಟ್ಟಗಳ ವಿಶಿಷ್ಟವಾದ ಭಾಗವಾಗಿದೆ. ಗುಜರಾತಿನ ಸೂರತ್‌ನಿಂದ ದಕ್ಷಿಣದ ಕನ್ಯಾಕುಮಾರಿಯವರೆಗೆ ಹಬ್ಬಿರುವ ಸುಮಾರು ೧೬೦೦ ಕಿ.ಮೀ. ಉದ್ದದ ನಿಸರ್ಗ ನಿರ್ಮಿತ ಗೋಡೆಯಂತಿವೆ

ಪಶ್ಚಿಮಘಟ್ಟಗಳು. ಮಲೆನಾಡು, ಸಹ್ಯಾದ್ರಿ ಶ್ರೇಣಿ ಎಂಬ ಹೆಸರುಗಳಿಂದ ಕರೆಯಲ್ಪಡುವ ಪಶ್ಚಿಮ ಘಟ್ಟಗಳ ಶ್ರೇಣಿಯು ಸಂಕೀರ್ಣವೂ ವೈವಿಧ್ಯವೂ ರಮಣೀಯವೂ ಆದ ಪ್ರದೇಶ, ಉನ್ನತ ಗಿರಿಶಿಖರಗಳ, ನಿಮ್ನ ಬೆಟ್ಟಗಳಿಂದ ಕೂಡಿದ ಬಹುರೀತಿ ರಚನೆಗಳ ಒಂದು ಸಂಯುಕ್ತ ವ್ಯವಸ್ಥೆಯಾಗಿದೆ.[೧೮]

ಉತ್ತರ ಕನ್ನಡ ಜಿಲ್ಲೆಯ ದಕ್ಷಿಣೋತ್ತರದ ಉದ್ದಕ್ಕೂ ಕರಾವಳಿಯಿಂದ ಅನತಿ ದೂರದಲ್ಲಿಯೆ ಇರುವ ಸಹ್ಯಾದ್ರಿಶ್ರೇಣಿಯ ಸರಾಸರಿ ಎತ್ತರ ಸಮುದ್ರ ಮಟ್ಟದಿಂದ ೬೦೦ ರಿಂದ ೭೦೦ ಮೀಟರ್‌ಗಳು. ಸುಮಾರು ೯೦೦ ಮೀಟರ್ ಎತ್ತರದ ಗಿರಿಶಿಖರಗಳೂ ಇಲ್ಲಿವೆ. ಸಾಮಾನ್ಯವಾಗಿ ೭೦ ರಿಂದ ೯೦ ಮೀಟರ್‌ಗಳಷ್ಟು ಎತ್ತರದ ಗುಡ್ಡಗಳು, ದಿನ್ನೆಗಳು ಎಲ್ಲೆಲ್ಲೂ ಹಬ್ಬಿವೆ. ಸುಮಾರು ೭೭೭೦ ಚದರ ಕಿ.ಮೀ. ವಿಸ್ತೀರ್ಣವುಳ್ಳ ಘಟ್ಟ ಪ್ರದೇಶವು ಸಂಪೂರ್ಣವಾಗಿ ಅರಣ್ಯಾವೃತವಾಗಿದೆ.[೧೯] ಅರಣ್ಯವು ನಿತ್ಯಹರಿದ್ವರ್ಣ, ಅರೆ-ನಿತ್ಯಹರಿದ್ವರ್ಣ, ಹುಲ್ಲುಗಾವಲುಗಳೆಂಬ ಪ್ರಮುಖ ಭಾಗಗಳಿಂದ ಕೂಡಿದೆ.[೨೦] ಪಶ್ಚಿಮಘಟ್ಟಗಳು ಕೇವಲ ಕಲ್ಲು ಬಂಡೆಗಳ, ಗುಡ್ಡಬೆಟ್ಟಗಳ, ಹಾಗೂ ಅರಣ್ಯಗಳ ಭೂಭಾಗವಷ್ಟೇ ಅಲ್ಲ, ಕಬ್ಬಿಣ, ಮ್ಯಾಂಗನೀಸ್, ಸಿಲಿಕಾ, ಯುರೇನಿಯಂ ಮೊದಲಾದ ಖನಿಜಗಳಿರುವ ಆಗರ ; ವೈವಿಧ್ಯಪೂರ್ಣ ಭೂ ದೃಶ್ಯಗಳ ಸಂಗಮವಾಗಿದೆ. ಜಗತ್ಪ್ರಸಿದ್ಧ ಜೋಗ ಜಲಪಾತವೂ ಸೇರಿದಂತೆ ಅಲ್ಲಲ್ಲಿ ಧುಮುಕುವ ಜಲಧಾರೆಗಳಿಂದಾಗಿ 'ಜಲಪಾತಗಳ ಜಿಲ್ಲೆ' ಎಂದು ಕರೆಯಲ್ಪಟ್ಟಿದೆ.[೨೧] ಘಟ್ಟ ಪ್ರದೇಶವು ಪ್ರವಾಸೋದ್ಯಮಕ್ಕೆ ಸೂಕ್ತ ಪ್ರದೇಶವಾಗಿದ್ದರೂ ಅಭಿವೃದ್ಧಿ ಕಂಡಿಲ್ಲ. ತೀವ್ರ ಸೆಕೆಯೂ ಇಲ್ಲದ, ಅತೀ ಚಳಿಯೂ ಅಲ್ಲದ ಹಿತಕರವಾದ ವಾತಾವರಣ, ಸಮಾರು ೩೫೦ ಸೆಂ.ಮೀ. ಗೂ ಮಿಕ್ಕ ಧಾರಾಳವಾದ ಮಳೆ ಪಶ್ಚಿಮ ಘಟ್ಟವನ್ನು ಶ್ರೀಮಂತಗೊಳಿಸಲು ನೆರವಾಗಿವೆ. ಸುಮಾರು ಮೂರು ಸಾವಿರದ ಐದುನೂರು·ವಿವಿಧ ರೀತಿಯ ಸಸ್ಯ ಸಂಕುಲಗಳ ತವರೂರು ಸಹ್ಯಾದ್ರಿ ಶ್ರೇಣಿ. ಜಗತ್ತಿನ ಜೀವ ವೈವಿಧ್ಯದ ಇಪ್ಪತ್ತೈದು ಅಗ್ರತಾಣಗಳಲ್ಲಿ ಪಶ್ಚಿಮಘಟ್ಟವು ಹದಿನೆಂಟನೆಯ ಸ್ಥಾನ ಹೊಂದಿದ್ದು, ಅಪೂರ್ವ ಭೂಭಾಗವೆನಿಸಿದೆ.[೨೨]

ಘಟ್ಟ ಪ್ರದೇಶದಲ್ಲಿ ಜೋಯಿಡಾ, ಯಲ್ಲಾಪುರ, ಸಿರಸಿ ಹಾಗೂ ಸಿದ್ಧಾಪುರ ತಾಲೂಕುಗಳು ಇವೆ. ಅತಿವಿರಳ ಜನಸಾಂದ್ರತೆಯು ಜೋಯಿಡಾ, ಯಲ್ಲಾಪುರ ತಾಲೂಕುಗಳಲ್ಲಿ, ಹೆಚ್ಚು ಜನಸಾಂದ್ರತೆಯು ಸಿರಸಿ, ಸಿದ್ಧಾಪುರ ತಾಲೂಕುಗಳಲ್ಲಿರುವುದನ್ನು ಈಗಾಗಲೇ ಒದಗಿಸಲಾಗಿರುವ ಪಟ್ಟಿ - 1 ರಲ್ಲಿ ಗಮನಿಸಲಾಗಿದೆ. ಶತಮಾನಗಳ ಕಾಲದ ಐತಿಹಾಸಿಕ ಘಟನೆಗಳಿಗೆ ಕಾರಣವಾಗಿರುವ ಘಟ್ಟ ಪ್ರದೇಶ ಸ್ಥಳಗಳು ರಾಮಾಯಣ, ಮಹಾಭಾರತಗಳಲ್ಲಿ ಉಲ್ಲೇಖಿತಗೊಂಡಿವೆ. ಮೌರ್ಯರು, ಶಾತವಾಹನರು ಮುಂತಾಗಿ ಅನೇಕ ರಾಜಮನೆತನಗಳವರ ಕಾಲದಲ್ಲಿ ಘಟ್ಟ ಪ್ರದೇಶದಲ್ಲಿರುವ ಬನವಾಸಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದರು. ಈ ಪ್ರದೇಶವನ್ನು ಆದಿಕವಿ ಪಂಪನು ಬನವಾಸಿ ದೇಶವೆಂದಿರುವುದನ್ನು ಈಗಾಗಲೇ ಉಲ್ಲೇಖಿಸಲಾಗಿದೆ. ಅವನೇ ಇಲ್ಲಿನ ಪ್ರಕೃತಿ ಸೌಂದರ್ಯವನ್ನು ಹಾಡಿ ಹೊಗಳಿರುವುದನ್ನು ನೆನಪಿಸಿಕೊಳ್ಳಬಹುದಾಗಿದೆ. ಯುರೋಪಿಯನ್ನರು ಆಗಮಿಸಿ, ಆಕರ್ಷಿತವಾದದ್ದು ಇಲ್ಲಿನ ಘಟ್ಟ ಪ್ರದೇಶಗಳಲ್ಲಿ ಬೆಳೆದಿರುವ ಕಾಳುಮೆಣಸು, ಏಲಕ್ಕಿ ಮುಂತಾದ ಸಾಂಬಾರು ಪದಾರ್ಥಗಳಿಂದ ಎಂಬುದು ಸತ್ಯವಾಗಿದೆ. ಭತ್ತ ಪ್ರಮುಖ ಆಹಾರ ಬೆಳೆ, ಅಡಿಕೆ, ಕಾಳುಮೆಣಸು ಇಲ್ಲಿನ ಪ್ರಮುಖ ವಾಣಿಜ್ಯ ಬೆಳೆಗಳಾಗಿವೆ.[೨೩] ಸ್ವಾತಂತ್ರ್ಯ ಚಳವಳಿಯ ಕಾಲದಲ್ಲಿ ಸ್ವದೇಶಿ, ಕರನಿರಾಕರಣೆ ಚಳುವಳಿಗಳು ಸಿರಸಿ,

ಸಿದ್ಧಾಪುರಗಳಲ್ಲಿ ಯಶಸ್ವಿಯಾಗಿ ನಡೆದವು. ಗಾಂಧೀಜಿಯವರ ಬೆಂಬಲಕ್ಕೆ ನಿಂತ ಈ ಜಿಲ್ಲೆಯನ್ನು 'ಗಾಂಧಿ ಜಿಲ್ಲೆ' ಎಂದೂ ಕರೆಯಲಾಗುತ್ತಿತ್ತು.[೨೪]

ತೇಗ, ಬೀಟೆ, ಹೊನ್ನೆ, ಮತ್ತಿ, ಬೆತ್ತ, ಬಿದಿರು ಮುಂತಾದ ನೈಸರ್ಗಿಕ ಮರಮಟ್ಟುಗಳು ಯಥೇಚ್ಛವಾಗಿ ಬೆಳೆದಿರುವ ಘಟ್ಟ ಪ್ರದೇಶಗಳ ವಿವಿಧ ರೀತಿಯ ಆರ್ಥಿಕ ಚಟುವಟಿಕೆಗಳಿಗೆ ಕಾರಣಗಳಾಗಿವೆ. ಅಣಸಿ, ದಾಂಡೇಲಿಗಳಲ್ಲಿ ಅಭಯಾರಣ್ಯಗಳಿದ್ದು, ಖಗ-ಮೃಗಗಳ ಆಶ್ರಯ ತಾಣಗಳಾಗಿವೆ. ಅರಣ್ಯ ನಿರ್ವಹಣೆ, ವನ್ಯಜೀವಿ ಸಂರಕ್ಷಣೆ ಮುಂತಾದ ಅರಣ್ಯ ಸಂಬಂಧೀ ಚಟುವಟಿಕೆಗಳ ಜವಾಬ್ದಾರಿಯನ್ನು ಅರಣ್ಯ ಇಲಾಖೆಯಡಿಯಲ್ಲಿರುವ ಕೆನರಾವೃತ್ತವು ನಿರ್ವಹಿಸುತ್ತಿದೆ. ಸಿರಸಿಯಲ್ಲಿ ಕೇಂದ್ರ ಸ್ಥಾನ ಹೊಂದಿರುವ ಕೆನರಾ ವೃತ್ತವು ಐದು ಪ್ರಾದೇಶಿಕ ವಿಭಾಗಗಳನ್ನು (ಹಳಿಯಾಳ, ಯಲ್ಲಾಪುರ, ಸಿರಸಿ, ಕಾರವಾರ ಹಾಗೂ ಹೊನ್ನಾವರ) ಹೊಂದಿದ್ದು ಹದಿನಾಲ್ಕು ಉಪವಿಭಾಗಗಳು, ಮೂವತ್ತೆಂಟು ಪ್ರಾದೇಶಿಕ ವಲಯ, ೧೪೭ ಶಾಖೆಗಳು ಮತ್ತು ೪೭೦ ಬೀಟುಗಳನ್ನು ಒಳಗೊಂಡಿದೆ. ಹದಿಮೂರು ಮರಮುಟ್ಟು ಕೋಡಿಗಳಿದ್ದು, ಇಪ್ಪತ್ತೆಂಟು ತನಿಖಾ ಠಾಣೆಗಳು ಅರಣ್ಯ ಉತ್ಪನ್ನಗಳ ಸಾಗಣೆಯನ್ನು ಪರೀಕ್ಷಿಸಲು ಇವೆ.[೨೫] ಕೆನರಾವೃತ್ತವು ಒಟ್ಟು ೨೮೯೨.೯೫ ಚದರ ಕಿ.ಮೀ. ಅರಣ್ಯ ಕ್ಷೇತ್ರವನ್ನು ಹೊಂದಿದ್ದು ವಿವಿಧ ಅಭಿವೃದ್ಧಿ ಯೋಜನೆಗಳಿಗಾಗಿ ೧೯೫೫ರ ನಂತರ ಮಂಜೂರು ಮೂಡಿರುವ ಒಟ್ಟು ೬೬೪೬.೭೫೩ ಹೆಕ್ಟೇರ್ ಅರಣ್ಯ ಪ್ರದೇಶವನ್ನು ವಿವರವಾಗಿ ಪ್ರಬಂಧ ಕೊನೆಯಲ್ಲಿ ಒದಗಿಸಿರುವ ಅನುಬಂಧ ಎರಡರಲ್ಲಿ ನೋಡಬಹುದಾಗಿದೆ. ಜಿಲ್ಲೆಯಲ್ಲಿ ಅರಣ್ಯ ಅತಿಕ್ರಮಣವು ನಿರಂತರವಾಗಿ ನಡೆದಿದ್ದು, ಉದಾಹರಣೆಗೆ ಸಿರಸಿ ತಾಲೂಕಿನಲ್ಲಿ ಅರಣ್ಯ ಇಲಾಖೆಯು ೨೦೦೬-೦೭ ರಲ್ಲಿ ಪ್ರಕಟಿಸಿರುವ ಅಂದಾಜಿನ ಪ್ರಕಾರ ಸುಮಾರು ೪೨೪೧ ಹೆಕ್ಟೇರ್ ಅರಣ್ಯವು ಅತಿಕ್ರಮಣವಾಗಿದೆ. ಸಕ್ರಮಗೊಳಿಸಿಕೊಳ್ಳಲು ಅತಿಕ್ರಮಣದಾರರು ಮೆರವಣಿಗೆ, ಕಾನೂನಿನ ಹೋರಾಟ ನಡೆಸುತ್ತಲೇ ಇದ್ದಾರೆ. ಅಭಿವೃದ್ಧಿಯೋಜನೆಗಾಗಿ ಅರಣ್ಯನಾಶವಾಗುವುದು ಬೇಡವೆನ್ನುವಾಗ, ಅತಿಕ್ರಮಣದಿಂದ ಅರಣ್ಯನಾಶ ವಾಗುವುದಿಲ್ಲವೇ ? ಎಂಬ ವಿಚಾರವನ್ನು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಕಾಲದಲ್ಲಿ ಗಮನಿಸಲಾಗಿದೆ. ೧೯೭೪-೭೫ರಲ್ಲಿ ಆರಂಭಿಸಲ್ಪಟ್ಟ 'ಪಶ್ಚಿಮಘಟ್ಟಗಳ ಅಭಿವೃದ್ಧಿ ಯೋಜನೆ' ೨೦೦೮ರಲ್ಲಿ ಆರಂಭಗೊಂಡ 'ಪಶ್ಚಿಮಘಟ್ಟ ಕಾರ್ಯಪಡೆ' ಇವೆರಡು ಪ್ರಮುಖ ಕಾರ್ಯಯೋಜನೆಗಳು. ಪರಿಸರ ಚಳವಳಿಗೂ ಇದಕ್ಕೂ ಸಹ ಸಂಬಂಧವಿದೆಯೆ ? ಇಲ್ಲವೆ ? ಎಂಬ ಅಂಶವನ್ನು ಗೊತ್ತುಪಡಿಸಿಕೊಂಡು ಆಯಾ ಅಧ್ಯಾಯಗಳ ಚೌಕಟ್ಟಿನೊಳಗೇ ಚರ್ಚಿಸಲಾಗಿದೆ.

ಘಟ್ಟ ಪ್ರದೇಶವು ಎತ್ತರವಾದ ಹಚ್ಚ ಹಸುರಿನ ಗಿರಿ ಶಿಖರಗಳನ್ನು ಹೊಂದಿದ್ದಂತೆಯೇ ಇಳಿಜಾರು ಹಾಗೂ ಆಳವಾದ ಕಣಿವೆಗಳನ್ನೂ ಹೊಂದಿದೆ. ಉತ್ತರ ಭಾಗದಲ್ಲಿ ಕಾಳೀನದಿ, ಮಧ್ಯಭಾಗದಲ್ಲಿ ಬೇಡ್ತಿ, ವರದಾ ಹಾಗೂ ದಕ್ಷಿಣದಲ್ಲಿ ಶರಾವತಿ ನದಿಗಳು ಪೂರ್ವಾಭಿಮುಖವಾಗಿ ಹರಿದು ಅರಬ್ಬೀ ಸಮುದ್ರ ಸೇರುತ್ತವೆ. ವಿವಿಧ ಜಲವಿದ್ಯುತ್ ಯೋಜನೆಗಳಿಗೆ ಅನುಕೂಲಕರವಾಗಿವೆಯೇ ವಿನಾ ಕೃಷಿ - ನೀರಾವರಿ ಯೋಗ್ಯವಾಗಿರುವುದಿಲ್ಲ.[೨೬] ಘಟ್ಟ ಪ್ರದೇಶದ ಮಧ್ಯಭಾಗದಲ್ಲಿ ಹರಿಯುವ ಬೇಡ್ತಿ ಮತ್ತು ವರದಾ

ನದಿಗಳನ್ನು ಜೋಡಿಸಿ ಪೂರ್ವಾಭಿಮುಖವಾಗಿ ತಿರುಗಿಸಿ ರಾಯಚೂರು ಜಿಲ್ಲೆಗೆ ನೀರು ಒದಗಿಸುವ ಯೋಜನೆ ಪ್ರಸ್ತಾಪಿತಗೊಂಡಿದ್ದು, ಜಿಲ್ಲೆಯ ಜನರ ವಿರೋಧಕ್ಕೆ ಕಾರಣವಾಗಿದೆ. ಕಣಿವೆಗಳಲ್ಲಿ ಕುಮರಿ ಬೇಸಾಯವೆಂದು ಕರೆಯಲ್ಪಡುವ ಭತ್ತ, ಕಬ್ಬು, ಅಡಿಕೆ, ಬಾಳೆ ಬೆಳೆಯಲಾಗುತ್ತಿದೆ. ರೈತರ ಇಂತಹ ಕೃಷಿ ಜಮೀನಿಗೆ ಸೊಪ್ಪು, ಗೊಬ್ಬರ ಪಡೆಯಲು, ದನಕರುಗಳನ್ನು ಮೇಯಿಸಲು ಅನುಕೂಲವಾಗುವಂತೆ ಇಳಿಜಾರಿನಲ್ಲಿರುವ ಅರಣ್ಯ ಭೂಮಿಯನ್ನು ವಿಶೇಷ ಕಾನೂನಿನಡಿಯಲ್ಲಿ 'ಸೊಪ್ಪಿನ ಬೆಟ್ಟ'ವೆಂದು ಕೊಡಮಾಡಲಾಗಿದೆ. ಈಗಲೂ ಘಟ್ಟ ಪ್ರದೇಶದ ಕೃಷಿಕರು ಅನುಭವಿಸುತ್ತಿರುವ 'ಬೆಟ್ಟ ಲ್ಯಾಂಡ್'ನ ವಿವರಗಳನ್ನು ಪ್ರಬಂಧದ ಕೊನೆಯಲ್ಲಿರುವ ಅನುಬಂಧ - ಎರಡರಡಿಯಲ್ಲಿ ವಿವರವಾಗಿ ಒದಗಿಸಲಾಗಿದೆ. ಸೊಪ್ಪಿನ ಬೆಟ್ಟಗಳಿಗೂ ಪರಿಸರ ಚಳವಳಿಗಳಿಗೂ ಸಂಬಂಧವಿರುವುದನ್ನು ಮುಂದೆ ಗುರುತಿಸಲಾಗಿದೆ. ವಿಶಿಷ್ಟ ಲಕ್ಷಣಗಳನ್ನು ಹೊಂದಿರುವ 'ದೇವರ ಕಾಡು'ಗಳ ಕುರಿತು ಜನರಿಗೆ ಪೂಜನೀಯ ಭಾವನೆ ಇದ್ದುದನ್ನು ೧೮೦೧ ರಲ್ಲಿ ಭೇಟಿ ಕೊಟ್ಟ ಫ್ರಾನ್ಸಿಸ್ ಬುಕಾನಿಸ್ ಗುರುತಿಸಿದ್ದಾನೆ.[೨೨] ದೇವರ ಕಾಡುಗಳ ಕುರಿತಾಗಿ ಉತ್ತರ ಕನ್ನಡ ಜಿಲ್ಲೆಯ ಇನ್ನಿತರೆ ಭೌಗೋಳಿಕ ಲಕ್ಷಣಗಳ ಅಡಿಯಲ್ಲಿ ವಿವರಿಸಲಾಗಿದೆ. ಘಟ್ಟ ಪ್ರದೇಶಗಳ ನದೀಯೋಜನೆಗಳಿಂದ ಮುಳುಗಡೆಯಾದ, ಆಗಬಹುದಾದ ಕುಮರಿ ಜಮೀನು, ತೋಟಗಳ ರಕ್ಷಣೆಗಾಗಿಯೇ ರೈತರು ಪರಿಸರ ಚಳವಳಿಗಳಲ್ಲಿ ಭಾಗವಹಿಸಿದುದನ್ನು ಮುಂದಿನ ಅಧ್ಯಾಯಗಳಲ್ಲಿ ವಿಶ್ಲೇಷಿಸಲಾಗಿದೆ.

ಪಶ್ಚಿಮ ಘಟ್ಟ ಪ್ರದೇಶವು ಸಾಮಾಜಿಕವಾಗಿಯೂ ವಿಭಿನ್ನತೆಯನ್ನು ಹೊಂದಿದೆ. ವಿರಳ ಜನಸಾಂದ್ರತೆ ಹೊಂದಿದ್ದರೂ ವಿವಿಧ ಭಾಷಿಕ, ಸಂಸ್ಕೃತಿ-ಸಂಪ್ರದಾಯ ಆಚರಣೆಗಳುಳ್ಳ ಜನಾಂಗಗಳನ್ನು ಒಳಗೊಂಡಿದೆ. ಗೌಳಿಗರು, ಕುಣಬಿಗಳು, ಹಾಲಕ್ಕಿಗರು, ಸಿದ್ದಿಗಳು, ಮರಾಠಿಗರು, ದಲಿತರು, ದೈವಜ್ಞ ಬ್ರಾಹ್ಮಣರು, ಗುಡಿಗಾರರು, ಮುಸಲ್ಮಾನರು, ಕ್ರಿಶ್ಚಿಯನ್ನರು ಒಟ್ಟೂ ಸಂಖ್ಯಾಬಲದಲ್ಲಿ ಅಲ್ಪಸಂಖ್ಯಾತರಾಗಿದ್ದರೆ, ಹವ್ಯಕ ಬ್ರಾಹ್ಮಣರು ಈ ಭಾಗದಲ್ಲಿ ಬಹುಸಂಖ್ಯಾತರಾಗಿರುತ್ತಾರೆ. ಬೇರೆ ಇನ್ನಾವ ಜಿಲ್ಲೆಗಳಲ್ಲೂ ಕಾಣಸಿಗದ ಗೌಳಿಗರು ಪಶುಪಾಲನೆಯನ್ನು, ಕುಣಬಿಗಳು ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರುವ, ಸಿದ್ದಿಗಳು ಜೇನು ಸಂಗ್ರಹಿಸುವ, ಕೃಷಿ ಕೂಲಿ ಮಾಡುವ ಕೆಲಸಗಳಲ್ಲಿ ನಿರತರಾಗಿದ್ದಾರೆ. ದೈವಜ್ಞ ಬ್ರಾಹ್ಮಣರು ವ್ಯಾಪಾರಸ್ಥರಾಗಿಯೂ, ಗುಡಿಗಾರರು ಮರ ಕೆತ್ತನೆ ಕೆಲಸಗಾರರಾಗಿಯೂ, ಇನ್ನುಳಿದ ಮುಸಲ್ಮಾನರು, ಕ್ರಿಶ್ಚಿಯನ್ನರು, ಸಾಗಾಣಿಕೆ, ಮರಮುಟ್ಟು ವ್ಯಾಪಾರ, ಶಿಕ್ಷಣ ಸಂಸ್ಥೆಗಳ ನಿರ್ವಹಣೆ ಇನ್ನಿತರ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಹವ್ಯಕ ಬ್ರಾಹ್ಮಣರು ಮುಖ್ಯವಾಗಿ ಕೃಷಿಕರೂ (ಭತ್ತ, ಅಡಿಕೆ, ಕಾಳು ಮೆಣಸು, ಏಲಕ್ಕಿ, ರೇಷ್ಮೆ ಮುಂತಾದ ಬೆಳೆ ಬೆಳೆಯುವವರು) ವಿವಿಧೆಡೆಗಳಲ್ಲಿ ಹಾಗೂ ವಿದೇಶಗಳಲ್ಲಿ ಉದ್ಯೋಗಸ್ಥರೂ ಆಗಿರುತ್ತಾರೆ. ಕಾಡಿನೊಳಗೆ ಬೆರೆತು ಬದುಕುತ್ತಿರುವ ಗೌಳಿಗರು, ಕುಣಬಿಗಳು, ಸಿದ್ದಿಗಳು ಇತ್ತೀಚಿನ ಸಾಕ್ಷರತಾ ಆಂದೋಲನದ ಪ್ರಚಾರ ಪರಿಣಾಮದಿಂದಾಗಿ ಅಕ್ಷರ ಕಲಿತು ಹೊರಜಗತ್ತಿನ ಸಂಪರ್ಕ ಹೊಂದುತ್ತಿದ್ದಾರೆ. ಅವರು ಆಡುವ ಬಹುಭಾಷಾ ಮಿಶ್ರಿತ ಮಾತಿಗೆ ಲಿಪಿಯೇ ಇಲ್ಲ ! ಇಂದಿಗೂ ಅವರು ತಮ್ಮ ವಿಶಿಷ್ಟ ಆಚರಣೆ ಸಂಪ್ರದಾಯಗಳಲ್ಲಿಯೇ ಮೈಮರೆಯುತ್ತಾರೆ. ಸುಗ್ಗಿ ಕುಣಿತ, ಗುಮಟೆಪಾಂಗ್, ಯಕ್ಷಗಾನ, ಮಾರಿಹಬ್ಬ,

ಜಾತ್ರೆಗಳು, ಬನವಾಸಿ ಉತ್ಸವ ಮುಂತಾದವು ಘಟ್ಟ ಪ್ರದೇಶಗಳ ಜನರ ಸಾಂಸ್ಕೃತಿಕ ಆಚರಣೆಗಳು. ಅತಿಥಿ ಸತ್ಕಾರಕ್ಕೆ ಹೆಸರುವಾಸಿಯಾದ ಹವ್ಯಕ ಬ್ರಾಹ್ಮಣರು ಸ್ಥಿತಿವಂತರಾಗಿದ್ದು, ಘಟ್ಟ ಪ್ರದೇಶದ ವಿವಿಧ ರೀತಿಯ ಚಟುವಟಿಕೆಗಳ ಮೇಲೆ ಹಿಡಿತ ಸಾಧಿಸಿರುವುದನ್ನು ಕಾಣಬಹುದು. ಮಠಗಳನ್ನು ಸ್ಥಾಪಿಸಿಕೊಂಡು ಧಾರ್ಮಿಕ ಸಲಹೆ ಸೂಚನೆಗಳನ್ನು ಪಡೆಯಲು ಗುರುಗಳ ಬಳಿಗೆ ತೆರಳುತ್ತಾರೆ.[೨೮] ಸಿರಸಿಯು ಪ್ರತ್ಯೇಕ ಜಿಲ್ಲೆಯಾಗಬೇಕೆಂಬ ಧ್ವನಿಗೆ ಅವರಿಂದ ವಿರೋಧವಿಲ್ಲ. ಘಟ್ಟದ ಕೆಳಗಿನ ಜಿಲ್ಲಾ ಕೇಂದ್ರಕ್ಕೆ ಹೋಗಿಬರಲೇಬೇಕಾದಾಗ, ಸರ್ಕಾರಿ ಸೌಲಭ್ಯಗಳನ್ನು ಪಡೆಯುವಾಗ 'ಘಟ್ಟದ ಮೇಲಿನ' ಮತ್ತು 'ಘಟ್ಟದ ಕೆಳಗಿನ' ಎಂಬ ಭಾವನಾತ್ಮಕ ಭಿನ್ನಾಭಿಪ್ರಾಯಗಳನ್ನು ಮೇಲ್ನೋಟದಲ್ಲೇ ಗುರುತಿಸಬಹುದಾಗಿದೆ. ಸಾರಿಗೆ ಸಂಪರ್ಕ ವೃದ್ಧಿಯಾಗಿರುವ ಈ ದಿನಮಾನಗಳಲ್ಲಿ ಘಟ್ಟ ಪ್ರದೇಶಗಳ ಜನರು ಜಿಲ್ಲೆಯ ಕರಾವಳಿಗಿಂತ ಪೂರ್ವದ ಬಯಲು ಸೀಮೆಯ ವಾಣಿಜ್ಯ ನಗರ ಹುಬ್ಬಳ್ಳಿ ಹಾಗೂ ದೂರದ ಬೆಂಗಳೂರಿನೊಂದಿಗೆ ಸಂಪರ್ಕ ಬೆಳೆಸಿರುವುದನ್ನು ಗಮನಿಸಬಹುದಾಗಿದೆ. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ಯಶಸ್ಸು ಹಾಗೂ ಸ್ಥಗಿತತೆ ಮತ್ತು ವಿಫಲತೆಗಳ ಸಂದರ್ಭಗಳಲ್ಲಿ ಈ ಎಲ್ಲಾ ಅಂಶಗಳು ಪ್ರೇರಕವಾಗಿರುವುದನ್ನು ಮುಂದೆ ಗುರುತಿಸಲಾಗಿದೆ. ಈ ಜಿಲ್ಲೆಯ ಘಟ್ಟ ಪ್ರದೇಶಗಳ ಕಡೆಗೆ ಬೇರೆಡೆಗಳಿಂದ ಜನರು ಆಹಾರಕ್ಕಾಗಿ ವಲಸೆ ಬಂದರೂ, ಇಲ್ಲಿಂದ ವಲಸೆ ಹೋಗಿಲ್ಲ. ವರ್ಷವಿಡೀ ಯಾವುದಾದರೊಂದು ನೈಸರ್ಗಿಕ ಆಹಾರ ದೊರೆತು ಬಡತನ ನೀಗಿಸದಿದ್ದರೂ ಹಸಿವಿಗೆ ಕಾರಣವಾಗಿಲ್ಲ. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಹಿಂದೆ ಈ ಬಡತನ ಅಥವಾ ಹಸಿವು ವಹಿಸಿದ ಪಾತ್ರಗಳೇನು ಎಂಬುದನ್ನು ಚಳವಳಿಗಳ ಕಾಲದಲ್ಲಿ ಗಮನಿಸಬೇಕಾಗುತ್ತದೆ. ಏಕೆಂದರೆ ಜಗತ್ತಿನಲ್ಲಿ ಹಸಿವಿನ ವಿರುದ್ಧ ಹೋರಾಟ, ಕ್ರಾಂತಿಗಳು ನಡೆದಿರುವಷ್ಟು ಬಡತನದ ವಿರುದ್ಧ ನಡೆದಿವೆಯೇ ? ಎಂಬ ಪ್ರಶ್ನೆಯು ಚರ್ಚೆಗೆ ಯೋಗ್ಯವೆಂದು ಭಾವಿಸಿ, ಉ.ಕ. ಜಿಲ್ಲೆಯ ಮತ್ತೊಂದು ಪ್ರಮುಖ ಭೌಗೋಳಿಕ ಲಕ್ಷಣ 'ಬಯಲು ಭೂಮಿ'ಯತ್ತ ಅಧ್ಯಯನ ಮುಂದುವರಿಯುತ್ತದೆ.

೩.೩ ಬಯಲು ಭೂಮಿ

ಉತ್ತರ ಕನ್ನಡ ಜಿಲ್ಲೆಯ ಘಟ್ಟ ಪ್ರದೇಶವನ್ನು ಪೂರ್ವಾಭಿಮುಖವಾಗಿ ಇಳಿಯುತ್ತಾ ಸಾಗಿದರೆ ಎದುರಾಗುವುದೇ ವಿಶಾಲವಾದ, ಸಮತಟ್ಟಾದ ಬಯಲು ಭೂಮಿ. ಅರೆಮಲೆನಾಡು ಎನಿಸಿಕೊಂಡರೂ ಬಯಲು ಭೂಮಿ ಎನ್ನುವುದೇ ಭೌಗೋಳಿಕವಾಗಿ ಸೂಕ್ತವೆನ್ನಬಹುದಾಗಿದೆ. ಜಿಲ್ಲೆಯ ಹನ್ನೊಂದು ತಾಲೂಕುಗಳಲ್ಲಿ ಹಳಿಯಾಳ ಮತ್ತು ಮುಂಡಗೋಡ ಈ ಎರಡು ತಾಲೂಕುಗಳು ಬಯಲು ಭೂಮಿಯಲ್ಲಿವೆ. ಬಯಲು ಭೂಮಿಯ ಪಶ್ಚಿಮಕ್ಕೆ ಘಟ್ಟ ಪ್ರದೇಶದ ನಿತ್ಯಹರಿದ್ವರ್ಣ ಕಾಡುಗಳು ಹದಿನೈದು - ಇಪ್ಪತ್ತು ಕಿ.ಮೀ.ಗಳಷ್ಟು ವ್ಯಾಪಿಸಿದ್ದು, ಕ್ರಮೇಣ ಎಲೆ ಉದುರುವ ಕಾಡುಗಳಾಗಿ ವಿರಳವಾಗುತ್ತವೆ. ಕಾಡು ಇಲ್ಲದ ಬಯಲು ಭೂಮಿಯು ಪೂರ್ವದಿಕ್ಕಿನಲ್ಲಿ ಧಾರವಾಡ, ಕಲಘಟಗಿ, ಹಾವೇರಿ, ಹಾನಗಲ್ ತಾಲೂಕುಗಳ ಬಯಲು ಭೂಮಿಗೆ ಸೇರಿಕೊಂಡಿದೆ. ಹಳಿಯಾಳ ತಾಲೂಕಿನಲ್ಲಿ ಕಪ್ಪು ಮರಳು ಮಿಶ್ರಿತ ಬಯಲು ಭೂಮಿ ಇದ್ದರೆ, ಮುಂಡಗೋಡ ತಾಲೂಕಿನಲ್ಲಿ ಕೆಂಪು - ಮರಳು ಮಿಶ್ರಿತ ಬಯಲು ಭೂಮಿ ಇದ್ದರೆ, ಮುಂಡಗೋಡ ತಾಲೂಕಿನಲ್ಲಿ ಕೆಂಪು - ಮರಳು ಮಿಶ್ರಿತ ಬಯಲು ಭೂಮಿ ಇದೆ. ಸಮುದ್ರ ಮಟ್ಟಕ್ಕಿಂತ

ಸುಮಾರು ೫೬೦ ಮೀಟರ್ ಎತ್ತರವಿರುವ ಈ ಪ್ರದೇಶವು ಒಟ್ಟು ೧,೫೧೫.೦೬ ಚದರ ಕಿ.ಮೀ. ವ್ಯಾಪಿಸಿದೆ. ೨೦೦೧ರ ಜನಗಣತಿಯ ಪ್ರಕಾರ ೨,೪೯,೮೭೯ ಜನಸಂಖ್ಯೆ ಇದ್ದು, ಜನಸಾಂದ್ರತೆಯು ಜಿಲ್ಲೆಯ ಉಳಿದೆಡೆಗಳಿಗಿಂತ ಅಧಿಕವಾಗಿದೆ.[೨೯]

ಹಳಿಯಾಳ ತಾಲೂಕಿಗೆ ಸೇರಿರುವ ಸುಮಾರು ೫,೭೨೯ ಹೆಕ್ಟೇರ್ ವಿಸ್ತೀರ್ಣವುಳ್ಳ ದಾಂಡೇಲಿ ಅರಣ್ಯವನ್ನು ೧೯೫೬ರಲ್ಲಿ 'ಅಭಯಾರಣ್ಯ'ವೆಂದು ಘೋಷಿಸಲಾಗಿದೆ. ಈ ಅಭಯಾರಣ್ಯವು ಖಗ-ಮೃಗಗಳ ಆವಾಸಸ್ಥಾನವಾಗಿರುತ್ತದೆ. ಅರಣ್ಯ ಇಲಾಖೆಯ ವನಪಾಲಕರ ತರಬೇತಿ ಶಾಲೆಯು ಇಲ್ಲಿದೆ. ಪಕ್ಷಿಧಾಮಗಳು, ಜಲಪಾತಗಳು, ಮನಮೋಹಕ ಪ್ರವಾಸಿ ತಾಣಗಳು ಸಮೃದ್ಧವಾಗಿರುವ ಬಯಲು ಭೂಮಿಯನ್ನು 'ಬೆಂಗಾಡು' ಎನಿಸಿಕೊಳ್ಳಲು ಬಿಟ್ಟಿಲ್ಲ. ವಾರ್ಷಿಕ ಸರಾಸರಿ ೧,೩೦೦ ಮಿ.ಮೀ. ವಾಡಿಕೆ ಮಳೆಯಾಗುವ ಬಯಲು ಭೂಮಿಯಲ್ಲಿ ಭತ್ತ, ಕಬ್ಬು, ಹತ್ತಿ, ರಾಗಿ, ಶೇಂಗಾ, ತರಕಾರಿ, ಮಾವು ಬೆಳೆಯಲಾಗುತ್ತಿದೆ. ಕಾಳಿ, ಬೇಡ್ತಿ ನದಿಗಳು ಹರಿಯುತ್ತಿದ್ದರೂ ನೀರಾವರಿಗೆ ಅನುಕೂಲವಾಗಿಲ್ಲ. ಧರ್ಮಾ ಹೊಳೆ, ಕೆರೆ-ಕಾಲುವೆಗಳು, ಹಳ್ಳ-ಕೊಳ್ಳಗಳು, ಕೆಲವೆಡೆ ಬೋರ್‌ವೆಲ್‌ಗಳು ವ್ಯವಸಾಯಕ್ಕೆ ನೀರು ಒದಗಿಸುತ್ತವೆ. ಇಲ್ಲಿರುವ ಅರಣ್ಯದಲ್ಲಿ ವಿಶೇಷವಾಗಿ ತೇಗ, ಬಿದಿರು ಯಥೇಚ್ಛವಾಗಿದ್ದು, ಬ್ರಿಟಿಷರು ಹತ್ತಿ, ತೇಗ, ಬಿದಿರು ಸಾಗಿಸಲು ದಾಂಡೇಲಿಯಿಂದ ಧಾರವಾಡ ಜಿಲ್ಲೆಯ ಅಳ್ನಾವರಕ್ಕೆ ಅಲ್ಲಿಂದ ಮುಂದೆ ಗೋವಾಕ್ಕೆ ರೈಲ್ವೆ ಸಂಪರ್ಕ ಏರ್ಪಡಿಸಿಕೊಂಡಿದ್ದರು. ಇದು ಜಿಲ್ಲೆಯ ಮೊದಲ ರೈಲ್ವೆ ಸಂಪರ್ಕವಾಗಿತ್ತು. ರೈಲ್ವೆ ಸಂಪರ್ಕದ ಜೊತೆಗೆ ಸಾಕಷ್ಟು ಬಿದಿರು ಮತ್ತು ಕಾಗದ ಉತ್ಪಾದನೆಗೆ ಬೇಕಾದ ಕಚ್ಚಾ ವಸ್ತುಗಳು ಇಲ್ಲಿ ಸಿಗುವುದಾದ್ದರಿಂದ ಕಾಳಿನದಿಯ ಎಡ ದಂಡೆಯಲ್ಲಿರುವ ದಾಂಡೇಲಿಯಲ್ಲಿ ವೆಸ್ಟ್‌ಕೋಸ್ಟ್ ಕಂಪನಿಯವರು ೧೯೫೮ರಲ್ಲಿ ಪೇಪರ್ ಮಿಲ್ ಸ್ಥಾಪಿಸಿದರು.[೩೦] ಸಾವಿರಾರು ಜನರಿಗೆ ಉದ್ಯೋಗ ನೀಡಿರುವ ಈ ಕಾರ್ಖಾನೆಯು ಖಾಸಗಿ ಬಂಡವಾಳಿಗರ ಸ್ವತ್ತಾಗಿದ್ದು, ಕ್ರಮೇಣ ಅರಣ್ಯನಾಶ, ಪರಿಸರ ಮಾಲಿನ್ಯ (ಕಾಳಿನದಿಗೆ ಕಾರ್ಖಾನೆಯ ನೀರು ಬಿಡುವುದು) ಗಳಿಗೆ ಕಾರಣವಾಗಿ, ಪರಿಸರ ಚಳವಳಿಗಾರರ ಕೂಗಿಗೆ ಕಾರಣವಾಯಿತು. ಖಾಸಗಿಯವರ ಇಂಡಿಯನ್ ಪ್ಲೈವುಡ್ ಕಾರ್ಖಾನೆ, ರೈಲ್ವೆ ಹಳಿಗಳಿಗೆ ಬೇಕಾಗುವ ಸ್ಲೀಪರ್‌ಗಳನ್ನು ಕೊಯ್ಯುವ ಸರ್ಕಾರಿ ಸ್ವಾಮ್ಯದ ಕಾರ್ಖಾನೆಗಳು ಸ್ಥಾಪನೆಯಾಗಿದ್ದವು. ಈಗ ಅವುಗಳು ಕಾರ್ಯ ನಿರ್ವಹಿಸುತ್ತಿಲ್ಲ.

ಬಯಲು ಭೂಮಿಯಲ್ಲಿರುವ ಮುಂಡಗೋಡ ತಾಲೂಕಿನಲ್ಲಿ ಅನುಬಂಧ ಎರಡರಲ್ಲಿ ತೋರಿಸಿರುವ ಪಟ್ಟಿಯಂತೆ ೪,೦೦೦ ಹೆಕ್ಟೇರ್ ಭೂಮಿಯನ್ನು ಟಿಬೇಟಿಯನ್ ನಿರಾಶ್ರಿತರಿಗೆ ಭಾರತ ಸರ್ಕಾರವು ತಾತ್ಕಾಲಿಕವಾಗಿ ನೀಡಿದೆ. ಕೃಷಿಯನ್ನೇ ಬಹುಪಾಲು ಅವಲಂಬಿಸಿರುವ ಹಾಗೂ ಸಾಂಸ್ಕೃತಿಕ ವಿಭಿನ್ನತೆ ಹೊಂದಿರುವ ಟಿಬೇಟಿಯನ್ನರ ೯ ಕ್ಯಾಂಪುಗಳೂ ಸೇರಿ ಉತ್ತರ ಕನ್ನಡ ಜಿಲ್ಲೆಯೊಳಗೊಂದು ಪುಟ್ಟ ಜಿಲ್ಲೆಯಂತಾಗಿದೆ. ಜಿಲ್ಲೆಯ ಬೃಹತ್ ಮೊತ್ತದ ಅರಣ್ಯ ಭೂಮಿಯನ್ನು ಅವರಿಗೆ ನೀಡಿದುದರ ಬಗೆಗೆ ಚಳವಳಿ ದಾಖಲಾಗಿಲ್ಲ. ಆದರೆ ಯಾವುದಾದರೂ ಬೃಹತ್ ಯೋಜನೆಗಳನ್ನು ತಂದು ಜಿಲ್ಲೆಯಲ್ಲಿ ಹೇರುವಾಗ ಪರಿಸರ ಚಳವಳಿಗಾರರು ಜಿಲ್ಲೆಯು ಇನ್ನೂ ಎಷ್ಟು ಭೂಮಿಯನ್ನು ತ್ಯಾಗ ಮಾಡಬೇಕಾಗಿದೆ ಎನ್ನುವ ಪ್ರಶ್ನೆಗೆ ಪ್ರಮುಖ ಉದಾಹರಣೆಯಾಗಿದೆ.[೩೧]

ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಅಭಿವೃದ್ಧಿ ಹೊಂದುತ್ತಿರುವ ಬಯಲು ಭೂಮಿಯ ಜನರು ಸಾಂಸ್ಕೃತಿಕವಾಗಿ ಜಿಲ್ಲೆಯ ಇತರ ಕಡೆಗಳಿಗಿಂತ ವಿಭಿನ್ನತೆ ಹೊಂದಿರುತ್ತಾರೆ. ಗೌಳಿಗರು, ಕುಣಬಿಗಳು, ಸಿದ್ಧಿಗಳು, ಮರಾಠಿಗರು, ಟಿಬೇಟಿಯನ್ನರು, ಮುಸ್ಲಿಮರು, ಕ್ರಿಶ್ಚಿಯನ್ನರು, ಕಾರ್ಖಾನೆಗಳಲ್ಲಿ ದುಡಿಯಲು ಬಂದ ಹೊರಗಿನವರು ಇಲ್ಲಿ ಅಲ್ಪಸಂಖ್ಯಾತರು. ವೀರಶೈವ ಲಿಂಗಾಯಿತರು, ಹವ್ಯಕರು, ಕೊಂಕಣಿ ಬ್ರಾಹ್ಮಣರು ಕೃಷಿ, ವ್ಯಾಪಾರ, ವ್ಯವಹಾರಗಳಲ್ಲಿ ಮುಂಚೂಣಿಯಲ್ಲಿದ್ದಾರೆ. ಆಹಾರ ಪದ್ಧತಿ, ವೇಷ-ಭೂಷಣ, ಹಬ್ಬ-ಹರಿದಿನಗಳ ಆಚರಣೆ ಮುಂತಾದವುಗಳಲ್ಲಿಯೂ ವಿವಿಧತೆ ಮತ್ತು ವಿಶೇಷತೆಗಳಿವೆ. ಉದಾಹರಣೆಗೆ ಈ ಜಿಲ್ಲೆಯ ಕರಾವಳಿ ಜನರ ಪ್ರಮುಖ ಆಹಾರ ಸಾಮಾನ್ಯವಾಗಿ ಮೀನು, ಉಪ್ಪುಗಂಜಿ, ಘಟ್ಟ ಪ್ರದೇಶದವರಲ್ಲಿ ಅನ್ನ, ದೋಸೆ-ಬೆಲ್ಲ, ಬಯಲು ಭೂಮಿಯವರ ಆಹಾರ ರೊಟ್ಟಿ - ಖಾರಪಲ್ಯೆಗಳಾಗಿವೆ.

ಬಯಲು ಭೂಮಿಯ ಜನರಿಗೆ ಜಿಲ್ಲಾ ಕೇಂದ್ರವಾಗಿರುವ ಕಾರವಾರವು ಸುಮಾರು ೧೭೦ ಕಿ.ಮೀ. ದೂರವಿದ್ದು, ತೀರಾ ಅತ್ಯಗತ್ಯ ಕೆಲಸಗಳನ್ನು ಹೊರತುಪಡಿಸಿ ಬಹುಪಾಲು ಕೆಲಸಗಳಿಗಾಗಿ ಕೇವಲ ೭೦ಕಿ.ಮೀ. ದೂರವ್ಯಾಪ್ತಿಯೊಳಗಿರುವ ಹುಬ್ಬಳ್ಳಿ, ಧಾರವಾಡ ಹಾಗೂ ಬೆಳಗಾಂಗಳಿಗೆ ಹೋಗುತ್ತಾರೆ. ಬಯಲು ಸೀಮೆಯ ಎಷ್ಟೋ ಜನರಿಗೆ ಹುಬ್ಬಳ್ಳಿ ಮತ್ತು ಧಾರವಾಡಗಳಷ್ಟು ಪರಿಚಯ ಜಿಲ್ಲಾ ಕೇಂದ್ರವಾಗಿರುವ ಕಾರವಾರ, ಮತ್ತೊಂದು ತುದಿಯಲ್ಲಿರುವ ಭಟ್ಕಳ ಈ ಸ್ಥಳಗಳು ತಿಳಿದೇ ಇಲ್ಲ. ವಿಶಾಲವಾದ ಭೂ ಪ್ರದೇಶ, ವಿರಳವಾದ ಜನಸಾಂಧ್ರತೆ, ವಿಪುಲವಾದ ನೈಸರ್ಗಿಕ ಸಂಪತ್ತು ಹೊಂದಿರುವ ಜಿಲ್ಲೆಯೊಳಗೆ ಒಂದಾದ ಮೇಲೆ ಒಂದರಂತೆ ಅಭಿವೃದ್ಧಿ ಯೋಜನೆಗಳು ಜಾರಿಯಾದಾಗ ನಡೆದ ಪರಿಸರ ಚಳವಳಿಗಳ ತೀವ್ರತೆ - ವಿಫಲತೆಗಳ ಹಿಂದೆ ಈ ಮೇಲಿನ ಅಂಶಗಳನ್ನು ಗಂಭೀರವಾಗಿ ಪರಿಗಣಿಸಬೇಕಾಗುತ್ತದೆ. ಉದಾಹರಣೆಗೆ ಕರಾವಳಿಯಲ್ಲಿ ಉತ್ಸವ, ಘಟ್ಟ ಪ್ರದೇಶದಲ್ಲಿ ಸಿರಸಿ ಮಾರಿಕಾಂಬ ಜಾತ್ರೆ ಹಾಗೂ ಬಯಲು ಸೀಮೆಯ ಉಳವಿ ಚನ್ನಬಸವೇಶ್ವರಸ್ವಾಮಿ ಜಾತ್ರೆಗೆ ಸೇರಿದಷ್ಟು ಸಂಖ್ಯೆಯಲ್ಲಿ ಜನರು ನಡೆದಿರುವ ಯಾವೊಂದು ಪರಿಸರ ಚಳವಳಿಯಲ್ಲೂ ಸೇರಿಲ್ಲದಿರುವುದನ್ನು ಗುರುತಿಸಲಾಗಿದೆ. ಅಂದರೆ ದೀರ್ಘಕಾಲದ ಸಾಂಸ್ಕೃತಿಕ ಮನೋಭಾವನೆಗಳುಳ್ಳ ಉತ್ತರ ಕನ್ನಡ ಜಿಲ್ಲೆಯ ಜನರು ಆಧುನಿಕತೆ, ಅಭಿವೃದ್ಧಿ, ಪರಿಸರ ಚಳವಳಿಗಳ ಕುರಿತು ಯಾವ ನಿಲುವು ತಳೆದಿದ್ದಾರೆಂಬುದನ್ನು ಈ ಅಧ್ಯಯನವು ಮುಂದಿನ ಅಧ್ಯಾಯಗಳಲ್ಲಿ ಚರ್ಚಿಸಿದೆ. ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಭೌಗೋಳಿಕ ಅಂಶಗಳ ಪ್ರಭಾವ ಪರಿಣಾಮಗಳನ್ನು ಗುರುತಿಸಿಕೊಂಡ ಮೇಲೆ ಇನ್ನಿತರೆ ವಿಶಿಷ್ಟ ಲಕ್ಷಣಗಳನ್ನು ಪಟ್ಟಿ ಮಾಡಿ ವಿಶ್ಲೇಷಿಸುತ್ತ ಗಮನ ಹರಿಸಲಾಗಿದೆ.

೩.೪ ಇನ್ನಿತರ ಲಕ್ಷಣಗಳು

ಉತ್ತರ ಕನ್ನಡ ಜಿಲ್ಲೆಯ ಈ ಮೇಲಿನ ಮೂರು ಪ್ರಮುಖ ಭೌಗೋಳಿಕ ಲಕ್ಷಣಗಳ ಒಳಗೇ ಗುರುತಿಸಲ್ಪಡುವ, ಪ್ರತ್ಯೇಕತೆಯನ್ನು ಕಾಯ್ದುಕೊಳ್ಳಲು ಅರ್ಹತೆ ಹೊಂದಿರುವ ಕೆಲವು ವಿಶಿಷ್ಟ ಅಂಶಗಳು ಉಪ ಶೀರ್ಷಿಕೆಗಳಡಿಯಲ್ಲಿ ಅಧ್ಯಯನ ಮಾಡುವಷ್ಟು ಮಹತ್ವ ಪಡೆದುಕೊಂಡಿವೆ. ಫ್ರಾನ್ಸಿಸ್ ಬುಕಾನಿನ್ ಎಂಬ ವಿದೇಶಿ ಪ್ರವಾಸಿಗ ಕ್ರಿ.ಶ. ೧೮೦೧ರ ಫೆಬ್ರುವರಿ ೧೮ ರಿಂದ ಮಾರ್ಚ್ ೧೬ ರವರೆಗೆ ಭಟ್ಕಳದಿಂದ ಬನವಾಸಿಯವರೆಗೆ ಸಂಚರಿಸಿ ಜಿಲ್ಲೆಯ ಕೃಷಿ-ಕಾಡು-ಜನ

ಜೀವನದ ಬಗೆಗೆ ಅಧ್ಯಯನ ನಡೆಸಿದ್ದಾನೆ. ಸರಿಯಾಗಿ ೨೦೦ ವರ್ಷಗಳ ತರುವಾಯ ೨೦೦೧ ಫೆಬ್ರವರಿ ೧೮ ರಿಂದ ಮಾರ್ಚ್ ೧೬ ರವರೆಗೆ ಜಿಲ್ಲೆಯವರೇ ಆದ ಶಿವಾನಂದ ಕಳವೆ ಅವರು ಬುಕಾನಿನ್ ಮಾರ್ಗದಲ್ಲಿಯೇ ಪ್ರಯಾಣ ಮಾಡಿ ದಾಖಲಿಸಿದ ಅಂಶಗಳಲ್ಲಿ ಇನ್ನೂ ಕೆಲವು ಭೌಗೋಳಿಕ ಅಂಶಗಳು ಪ್ರಮುಖವಾದವುಗಳಾಗಿವೆ.[೩೨] ರಾಜ್ಯದ ಇತರ ಜಿಲ್ಲೆಗಳಲ್ಲಿ ಎಲ್ಲಿಯೂ ಕಾಣಸಿಗದ ವಿಶೇಷ, ವಿಶಿಷ್ಟ ಭೌಗೋಳಿಕ ಅಂಶಗಳನ್ನು ಈ ಅಧ್ಯಯನದ ವಿಷಯವ್ಯಾಪ್ತಿಗೆ ಒಳಪಟ್ಟಂತೆ ನೋಡಲಾಗಿದೆ.

ಪವಿತ್ರವನಗಳು : ಯುನೆಸ್ಕೋದ ಘಾನಾ ಯೋಜನೆಯ ಪ್ರಕಾರ ಸ್ಥಳೀಯ ಆಚರಣೆ ಮತ್ತು ಅಂಗೀಕಾರಗಳ ಮೂಲಕ ಧಾರ್ಮಿಕ ಮತ್ತು ಪರಿಸರ ಮೌಲ್ಯಗಳ ಕುರುಹುಗಳಾಗಿ ಸಂರಕ್ಷಿಸಲಾಗುತ್ತಿರುವ ನೈಸರ್ಗಿಕ ಅರಣ್ಯ ಪ್ರದೇಶಗಳನ್ನು ಪವಿತ್ರವನಗಳು ಎನ್ನಬಹುದು. ಸ್ಥಳೀಯ ಪರಿಸರವು ಮಹತ್ವದ ಮತ್ತು ಪ್ರಾತಿನಿಧಿಕ, ಜೈವಿಕ ಸಂಪನ್ಮೂಲಗಳನ್ನು ಹಲವಾರು ತಲೆಮಾರುಗಳ ತನಕ ಸಂರಕ್ಷಿಸಲು ನೆರವಾಗುವ ಪಾರಂಪರಿಕ ಜೈವಿಕ ನಿರ್ವಹಣಾ ವ್ಯವಸ್ಥೆಯೇ ಪವಿತ್ರವನಗಳು.[೩೩]

ಪ್ರಕೃತಿ ಅಥವಾ ಜೈವಿಕ ಶಕ್ತಿಗಳ ಜೊತೆಗಿನ ನಮ್ಮ ಪವಿತ್ರ ಸಂಬಂಧವನ್ನು ಪ್ರತಿನಿಧಿಸುತ್ತವೆ ಎನ್ನುವ ನಂಬಿಕೆಯ ಹಿನ್ನೆಲೆಯಲ್ಲಿ ಸ್ಥಳೀಯ ಸಮುದಾಯ ಅಥವಾ ಸಂಸ್ಕೃತಿಗಳು ಜೈವಿಕ ಮತ್ತು ಭೌಗೋಳಿಕ ಅನನ್ಯತೆಯ ಲಕ್ಷಣಗಳನ್ನು ಪ್ರತಿಬಿಂಬಿಸುವ ಪ್ರದೇಶಗಳನ್ನು ಗುರುತಿಸಿ, ಅಲ್ಲಿನ ಜೀವಸಂಕುಲಗಳು ಮತ್ತು ಆರಾಧ್ಯ ದೈವಗಳನ್ನು ರಕ್ಷಿಸುವ ಪರಂಪರೆಯೇ ಪವಿತ್ರವನಗಳ ಪರಿಕಲ್ಪನೆ ಎನ್ನುವ ಅಭಿಪ್ರಾಯ ಎಂ.ಡಿ. ಸುಭಾಶ್ಚಂದ್ರನ್ ಅವರದ್ದಾಗಿದೆ.[೩೪]

ಭಾರತದ ಎಲ್ಲ ರಾಜ್ಯಗಳಲ್ಲಿಯೂ ಪವಿತ್ರವನಗಳು ಹರಡಿಕೊಂಡಿದ್ದು ಒಂದು ಸಮಗ್ರ ಅಂದಾಜಿನ ಪ್ರಕಾರ ದೇಶದಲ್ಲಿ ೧.೫ ಲಕ್ಷ ಹೆಕ್ಟೇರ್‌ಗಳಷ್ಟಿರಬಹುದೆಂದು ಅಂದಾಜಿಸಲಾಗಿದೆ. ರಾಜ್ಯದಿಂದ ರಾಜ್ಯಕ್ಕೆ ಜಿಲ್ಲೆಯಿಂದ ಜಿಲ್ಲೆಗೆ ಇವುಗಳ ಸ್ಥಳೀಯ ನಿರ್ವಹಣೆ, ಸಾಂಪ್ರದಾಯಿಕ ಆಚರಣೆಗಳು ಬದಲಾಗುತ್ತವೆ. ಉದಾಹರಣೆಗೆ ಉತ್ತರ ಕನ್ನಡ ಜಿಲ್ಲೆಯ ದೇವರ ಕಾಡುಗಳು ಹುಲಿದೇವರು, ಭೂತಪ್ಪ, ಜಟಕಪ್ಪ, ಚೌಡಿ ಮೊದಲಾದ ಸ್ಥಳೀಯ ಬೇಟೆ ಪ್ರತಿನಿಧಿಸುವ ಆರಾಧನಾ ಶಕ್ತಿಗಳಿಗೆ ಮೀಸಲಾಗಿದ್ದರೆ, ದಕ್ಷಿಣ ಕನ್ನಡದ ಬನಗಳು ಭೂತ ದೈವಗಳಿಗೆ, 'ನಾಗ'ನಿಗೆ (ನಾಗರಹಾವು) ಮೀಸಲಾಗಿವೆ. ಉತ್ತರ ಕನ್ನಡ ಜಿಲ್ಲೆಯ ಘಟ್ಟ ಪ್ರದೇಶದಲ್ಲಿ ಸಿರಸಿ, ಸಿದ್ದಾಪುರ ತಾಲೂಕುಗಳಲ್ಲಿ ದೇವರ ಕಾಡುಗಳಿದ್ದು, ಅಪರೂಪದ ಸಸ್ಯ ಸಂಕುಲಗಳನ್ನು ಹಾಳಾಗದಂತೆ ಉಳಿಸಿಕೊಂಡಿವೆ. ಉದಾಹರಣೆಗೆ ಧೂಪದ ಮರಗಳು.

ಆಧುನೀಕರಣ, ಅಭಿವೃದ್ಧಿಯ ಓಟದಲ್ಲಿ ಪರಂಪರಾಗತ ಆಚರಣೆಗಳಲ್ಲಿ ಆಸಕ್ತಿ ಇಲ್ಲವಾಗಿ ಪವಿತ್ರವನಗಳು ಅಳಿವಿನಂಚಿಗೆ ತಲುಪಿವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಅಭಿವೃದ್ಧಿ ಯೋಜನೆಗಳ ಜಾರಿಯ ವಿರೋಧದ ಸಂದರ್ಭದಲ್ಲಿ 'ಪಶ್ಚಿಮ ಘಟ್ಟಗಳನ್ನು ಉಳಿಸಿ' ಆಂದೋಲನ ಕಾಲದಲ್ಲಿ ಚಳವಳಿಗಾರರು ದೇವರ ಕಾಡುಗಳ ರಕ್ಷಣೆಗೆ ಒತ್ತಾಯಿಸಿದರು. ಅದರ ಫಲವಾಗಿ ಒಂದಷ್ಟು ಅರಣ್ಯ ಪ್ರದೇಶ ಸಂರಕ್ಷಿಸಲ್ಪಟ್ಟಿತು. ಪವಿತ್ರವನಗಳ ಕುರಿತು ಅನೇಕರು ಗಮನ ಹರಿಸುವಂತಾಯಿತು.

ಅಳಿವೆಗಳು : ನದಿಗಳು ಸಾಗರವನ್ನು ಸೇರುವ ಪ್ರದೇಶದಲ್ಲಿ ಭರತದ ಪರಿಣಾಮವಾಗಿ ಸಿಹಿನೀರು ಮತ್ತು ಉಪ್ಪುನೀರು ಮಿಶ್ರಿತವಾಗುವ ಪ್ರದೇಶವನ್ನು 'ಅಳಿವೆ' ಎಂದು ಕರೆಯಲಾಗುವುದು.[೩೫] ನದಿಗಳು ತಮ್ಮ ಹರಿವಿನ ಉದ್ದಕ್ಕೂ ಲಭ್ಯ ಮೇಲ್ಮಣ್ಣು ಮತ್ತು ಸಾವಯವ ಆಹಾರ ಪದಾರ್ಥಗಳನ್ನು ಮಳೆಗಾಲದಲ್ಲಿ ಹೊತ್ತು ತಂದು ಈ ಪ್ರದೇಶದಲ್ಲಿ ಹರಡುವುದರಿಂದ ಅಳಿವೆಗಳು ಫಲವತ್ತಾಗುತ್ತವೆ. ಜಿಲ್ಲೆಯ ಕಾಳಿ, ಅಘನಾಶಿನಿ, ಶರಾವತಿ ನದಿಗಳು ಸೇರುವ ಕಡೆಗಳಲ್ಲಿ ಅಳಿವೆಗಳಿವೆ. ಈ ಪ್ರದೇಶದಲ್ಲಿ ಅತಿಸೂಕ್ಷ್ಮ ಜೀವಿಗಳಿಂದ, ಮೀನುಗಳವರೆಗೆ ಹೆಚ್ಚಿನ ಜೀವರಾಶಿಗಳು ನೆಲೆ ಮಾಡಿಕೊಂಡಿವೆ. ಕಡಲ ತೀರದ ಮೀನುಗಾರಿಕೆಗೆ ಅಳಿವೆಗಳು ಸಹಕಾರಿಯಾಗಿವೆ. ನದಿಗಳಿಗೆ ಅಣೆಕಟ್ಟು ನಿರ್ಮಿಸುವುದರಿಂದ ಅಳಿವೆಗಳು ಅಳಿಸಿ ಹೋಗುವ ಅಪಾಯವನ್ನು ಅಭಿವೃದ್ಧಿ ಯೋಜನೆಗಳ ವಿರೋಧದ ಪರಿಸರ ಚಳವಳಿಗಳು ಪ್ರಸ್ತಾಪಿಸಿ, ಅಳಿವೆಗಳ ಸಂರಕ್ಷಣೆಗಾಗಿ ಒತ್ತಾಯಿಸುತ್ತಿವೆ.

ಕಾಂಡ್ಲಾ ತೋಪುಗಳು : ಕರಾವಳಿ ತೀರದಲ್ಲಿ ಅಳಿವೆ ಮತ್ತು ಹಿನ್ನೀರಿನ ಪ್ರದೇಶದಲ್ಲಿರುವ ಉಪ್ಪುನೀರಿನ ವ್ಯಾಪ್ತಿಯಲ್ಲಿ ವಿಫುಲವಾಗಿ ಬೆಳೆದು ಹಸಿರು ಕಂಗೊಳಿಸುತ್ತಿದ್ದರೆ ಅದನ್ನು 'ಕಾಂಡ್ಲಾ ಕಾಡು' ಎಂದು ಕರೆಯಬಹುದು.[೩೬] ಕಾಂಡ್ಲಾ ಪ್ರದೇಶ ಸಸ್ಯ ಮತ್ತು ಪ್ರಾಣಿ ಜೀವ ಸಂಕುಲಗಳಿಗೆ ಅತ್ಯುತ್ತಮ ನೆಲೆಗಳಾಗಿವೆ. ಉತ್ತರ ಕನ್ನಡ ಜಿಲ್ಲೆಯ ಕಾಳಿ, ಅಘನಾಶಿನಿ ನದಿಗಳ ಅಳಿವೆಗಳಲ್ಲಿ ವಿಶಾಲ ಪ್ರದೇಶಗಳಲ್ಲಿ ಬೆಳೆದು ನಿಂತಿರುವ ಈ ಕಾಂಡ್ಲಾ ಸಸ್ಯಗಳು ಕರಾವಳಿ ತೀರದುದ್ದಕ್ಕೂ ಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರುತ್ತವೆ. ವಿವಿಧ ತಳಿಗಳ ಕಾಂಡ್ಲಾ ತೋಪುಗಳು ಪರಿಸರ ಮತ್ತು ಮೀನುಗಾರಿಕೆಯ ಮೇಲೆ ಬೀರುವ ಪ್ರಭಾವವನ್ನು ಪರಿಗಣಿಸಿ ಅವುಗಳನ್ನು ಸಂರಕ್ಷಿಸಲು, ಕಡಲ ತೀರ ನಿಯಂತ್ರಣ ಅಧಿಸೂಚನೆ (೧೯೯೧)ರಲ್ಲಿ ಕಾಂಡ್ಲಾ ಪ್ರದೇಶವನ್ನು ಅತಿಸೂಕ್ಷ್ಮ ಪ್ರದೇಶವೆಂದು ಘೋಷಿಸಲಾಗಿದೆ.

ಕೂರ್ವೆಗಳು : ನದಿಯ ನಡುವೆ ನೆಲೆಸಿದ ನಡುಗಡ್ಡೆಗಳಿಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ 'ಕೂರ್ವೆ'ಗಳೆಂದು ಕರೆಯುವರು. ಈ ಕೂರ್ವೆಗಳು ತುಂಬಾ ಸುಂದರವಾಗಿದ್ದು, ವಿವಿಧ ರೀತಿಯ ಸಸ್ಯಗಳಿಂದಾವೃತವಾಗಿ ಅತ್ಯುತ್ತಮ ವಿಹಾರ ತಾಣಗಳಾಗಿವೆ. ದೊಡ್ಡ ಕೂರ್ವೆಗಳಲ್ಲಿ ಊರನ್ನು ಕಟ್ಟಿಕೊಂಡು, ಹೊಲತೋಟಗಳನ್ನು ಬೆಳೆಸಿಕೊಂಡು ಜನರು ವಾಸಿಸುತ್ತಿದ್ದಾರೆ. ಕಾಳಿ ನದಿಯ ದೇವ ಭಾಗ ಕೂರ್ವೆ, ಗಂಗಾವಳಿ ನದಿಯ ಹಿಚ್ಚಡ ಕೂರ್ವೆ, ಮೋಟಿನ ಕೂರ್ವೆ, ಅಘನಾಶಿನಿ ನದಿಯ ಮಾಸೂರ ಕೂರ್ವೆ, ಹಳಕಾರ, ಐಗಳ ಕೂರ್ವೆಗಳು ಜನವಸತಿ ಪ್ರದೇಶಗಳಾಗಿವೆ. ಶರಾವತಿ ನದಿಯಲ್ಲಿ ಹೈಗುಂದ, ಮಾಳ್ಕೋಡ, ಮಾವಿನ ಮುಂತಾದ ವಿಶಾಲವಾದ ಕೂರ್ವೆಗಳಿದ್ದು ಶಾಲೆ, ದೇವಾಲಯ, ಚರ್ಚು ಮೊದಲಾದವುಗಳನ್ನು ಹೊಂದಿ ಸಾಮಾನ್ಯವಾಗಿ ದೊಡ್ಡ ಹಳ್ಳಿಗಳಂತೆ ಶೋಭಿಸುತ್ತಿವೆ.[೩೭] ದೋಣಿವಿಹಾರ, ಜಲಕ್ರೀಡೆಗಳಿಗೆ ಯೋಗ್ಯವಾಗಿರುವ ಕೂರ್ವೆಗಳು ಕೆಲವೊಮ್ಮೆ ನದಿಗಳು ತುಂಬಿ ಹರಿಯುವ ಸಂದರ್ಭಗಳಲ್ಲಿ ಹೊರ ಪ್ರಪಂಚದ ಸಂಪರ್ಕ ಕಡಿದುಕೊಳ್ಳುತ್ತವೆ. ಹಾಗಾಗಿ ಜಿಲ್ಲೆಯಲ್ಲಿಯೇ ನಡೆಯುವ ಎಷ್ಟೋ ವಿಚಾರಗಳು ಈ ಜನರಿಗೆ ತಿಳಿದಿರುವುದೇ ಇಲ್ಲ !

ನಡುಗಡ್ಡೆಗಳು : ಕರಾವಳಿ ತೀರದಲ್ಲಿ ನಿಂತು ನೋಡಿದಾಗ ಸಾಗರದಲ್ಲಿ ನಮಗೆ ಅಲ್ಲಲ್ಲಿ ಕಿರುಗುಡ್ಡಗಳು ಕಾಣುತ್ತವೆ. ಜನ ವಸತಿಯಿಲ್ಲದ ಈ ಗುಡ್ಡಗಳು ವಿವಿಧ ಜೀವಿಗಳ ನೆಲೆಗಳಾಗಿವೆ.[೩೮] ದೇವಗಡ, ಕೂರ್ಮಗಡ,

ಅಂಜದೀವ, ನೇತ್ರಾಣಿ ಎಂಬಿತ್ಯಾದಿ ಹೆಸರುಗಳಿಂದ ಕೂಡಿದ ನಡುಗಡ್ಡೆಗಳು ಸಾಗರವನ್ನು ಶಾಂತವಾಗಿರಿಸಿ, ಕಡಲತೀರಕ್ಕೆ ಆಗುವ ಅಪಾಯವನ್ನು ತಡೆಯುತ್ತವೆ. ಹದ್ದುಗಳ, ಪಕ್ಷಿಗಳ, ಪಾರಿವಾಳಗಳ ವಾಸಸ್ಥಾನವಾಗಿರುವ ನಡುಗಡ್ಡೆಗಳು ನೌಕಾಸೇನೆಯ ಯುದ್ಧಾಭ್ಯಾಸಕ್ಕೆ ಬಳಕೆಯಾಗುತ್ತಿವೆ. ಇದನ್ನು ವಿರೋಧಿಸುವ ಧ್ವನಿಗಳು ನಡುಗಡ್ಡೆಗಳ ರಕ್ಷಣೆಗೆ ಪ್ರಯತ್ನಿಸುತ್ತಿವೆ.

ಉತ್ತರ ಕನ್ನಡ ಜಿಲ್ಲೆಯ ಇನ್ನಿತರ ಭೌಗೋಳಿಕ ಲಕ್ಷಣಗಳ ಅಡಿಯಲ್ಲಿ ಸೇರುವ ಅಂಶಗಳನ್ನೆಲ್ಲಾ ಪಟ್ಟಿ ಮಾಡುತ್ತಾ ಹೋದರೆ ಸುಂದರ ಕಡಲ ತೀರಗಳು, ಜಲಪಾತಗಳು, ನದಿಗಳ ವಿಹಂಗಮ ನೋಟ, ಸರೋವರಗಳು, ಸೂರ್ಯಾಸ್ತಮಾನ, ಘಜನಿ ಭೂಮಿ ಹೀಗೆ ಇನ್ನೂ ಎಷ್ಟೋ ವಿಶೇಷತೆಗಳನ್ನು ಸೇರಿಸಲೇಬೇಕಾಗುತ್ತದೆ. ಜಿಲ್ಲೆಯಲ್ಲಿರುವ ಇಂತಹ 'ಜೀವ ವೈವಿಧ್ಯತೆಯ ಕುರಿತು ಅಧ್ಯಯನ' ಸಾಕಷ್ಟು ಆಗಲೇಬೇಕೆಂಬ ಒತ್ತಾಯ ಪರಿಸರ ಚಳವಳಿಗಳ ಪರಿಣಾಮವಾಗಿ ಬಲಗೊಳ್ಳುತ್ತಿದೆ. ಜಿಲ್ಲೆಯ ಇಂತಹ ಎಲ್ಲ ಭೌಗೋಳಿಕ ಅಂಶಗಳ ವಿವರವಾದ ಅಧ್ಯಯನವು ವಿವಿಧ ಪರಿಸರ ಚಳವಳಿಗಳ ಹಿನ್ನೆಲೆಯಲ್ಲಿ ವಿಶ್ಲೇಷಿಸುವುದು ಅಗತ್ಯವಾಗಿತ್ತು. ಮುಂದಿನ ಅಧ್ಯಾಯಗಳಲ್ಲಿ ಲಕ್ಷಣಗಳನ್ನು ಆಧರಿಸಿಯೇ ನೆಲಸಂಬಂಧಿ ಪರಿಸರ ಚಳವಳಿಗಳು ಮತ್ತು ಜಲಸಂಬಂಧಿ ಪರಿಸರ ಚಳವಳಿಗಳು ಎಂಬುದಾಗಿ ಪ್ರತ್ಯೇಕಿಸಿಕೊಂಡು ಅಧ್ಯಯನವು ಮುಂದುವರಿಯುವುದೆಂದು ಸ್ಪಷ್ಟವಾಗಿರಿಸಿಕೊಳ್ಳಲಾಗಿದೆ.

ಕೊನೆ ಟಿಪ್ಪಣಿಗಳು

೧. ಸಿದ್ಧಲಿಂಗಯ್ಯ, ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ ಭವ್ಯತೆ, ಕರಾವಳಿ ಕಾಶ್ಮೀರ (ಸಂ.ಗ್ರಂ) ಪುಟ ೩೯

೨. ಗೋಪಾಲಕೃಷ್ಣ ಪಿ. ನಾಯಕ, ಉತ್ತರ ಕನ್ನಡ ದರ್ಶನ, ಪುಟ ೧

೩. ಅದೇ, ಪುಟ ೩

೪. ಅದೇ, ಪುಟ ೧

೫. ಅದೇ, ಪುಟ ೨

೬. ಸೂರ್ಯನಾಥ ಯು. ಕಾಮತ್, ಉತ್ತರ ಕನ್ನಡ ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ ೧

೭. ಅದೇ, ಪುಟ ೨

೮. ಅನುಬಂಧ, ನಕಾಶೆ -೩

೯. ಉತ್ತರ ಕನ್ನಡ ಜಿಲ್ಲಾ ಸಂಖ್ಯಾಸಂಗ್ರಹಣಾಧಿಕಾರಿಗಳ ಅಂಕಿ-ಅಂಶಗಳ ವರದಿ ೨೦೦೮-೦೯

೧೦. ಸಿದ್ಧಲಿಂಗಯ್ಯ, ಪೂರ್ವೋಕ್ತ, ಪುಟ ೪೦

೧೧. ಜೇಮ್ ಎಂ. ಕ್ಯಾಂಬೆಲ್ (ಸಂ) ಗೆಜೆಟಿಯರ್ ಆಫ್ ಬಾಂಬೆ ಪ್ರೆಸಿಡೆನ್ಸಿ, ಪುಟ ೬

೧೨. ಟಿ.ಬಿ. ಹರಿಕಾಂತ (ಸಂ), ಹಸಿರ್ಗ್ಗಡಲು, ಪುಟ ೬೪

೧೩. ಸಿದ್ಧಲಿಂಗಯ್ಯ, ಹಿಸ್ಟರಿ ಆಫ್ ಬ್ಯಾಂಕಿಂಗ್ ಇನ್ ಮೈಸೂರ್ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ದಿ ಬ್ಯಾಂಕ್ ಆಫ್ ಮೈಸೂರ್ ಲಿ. ೧೮೬೯-೧೯೫೫, ಪುಟ ೨೫

೧೪. ಟಿ.ಬಿ. ಹರಿಕಾಂತ (ಸಂ), ಹಸಿರ್ಗ್ಗಡಲು ಪುಟ ೫೪

೧೫. ವಿಷ್ಣುನಾಯ್ಕ, ದುಡಿಯುವ ಕೈಗಳ ಹೋರಾಟದ ಕತೆ, ಪುಟ ೧೧೮

೧೬. ಕರಾವಳಿ ಮುಂಜಾವು (ಪತ್ರಿಕೆ), ಏಪ್ರಿಲ್೨೦೦೯

೧೭. ವಿ.ಎನ್. ನಾಯಕ್, ಸಾಗರಕ್ಕೆ ಸಾವುಂಟೆ ? ಪುಟ ೮೭

೧೮. ಕೆ.ಜೆ. ವಾಸುಕಿ (ಸಂ), ಕನ್ನಡ ಅಧ್ಯಯನ, ಕರ್ನಾಟಕದ ಪರಿಸರ, ಪುಟ ೧೩೩

೧೯. ಸೂರ್ಯನಾಥ ಯು. ಕಾಮತ್, ಪೂರ್ವೋಕ್ತ, ಪುಟ ೭

೨೦. ನರೇಂದ್ರ ಹೆಗಡೆ, ಉತ್ತರ ಕನ್ನಡ ಡಿಸ್ಟ್ರಿಕ್ಟ್ : ಎ ಪ್ರೊಫೈಲ್ ಆಫ್ ಡೆವಲಪ್‌ಮೆಂಟ್, ಪುಟ ೩

೨೧. ಕೆ.ಜೆ. ವಾಸುಕಿ (ಸಂ), ಕನ್ನಡ ಅಧ್ಯಯನ, ಕರ್ನಾಟಕದ ಪರಿಸರ, ಪುಟ ೧೩೩

೨೨. ಅನುಬಂಧ - ಎರಡು, ಜೀವ ವೈವಿಧ್ಯತಾಣಗಳ ಪಟ್ಟಿ

೨೩. ಎಂ.ಡಿ. ಸುಭಾಶ್‌ಚಂದ್ರನ್, ಕರೆಂಟ್ ಸೈನ್ಸ್, ವಾಲ್ಯೂಂ ೭೩, ಪುಟ ೧೫೦

೨೪. ಭರತ್ ಲಾಲ್ ಮೀನಾ (ಪ್ರ.ಸಂ.), ಸ್ವರ್ಣದರ್ಪಣ, ಪುಟ ೭೦

೨೫. ಅದೇ, ಪುಟ ೧೪೧

೨೬. ಪ್ರಜಾವಾಣಿ, ೨೨ನೇ ಜೂನ್ ೨೦೦೮

೨೭. ಬುಕಾನಿನ್ ಎಫ್. ಡಿ., ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್, ಕೆನರಾ ಅಂಡ್ ಮಲಬಾರ್, ವಾಲ್ಯೂಂ ೨

೨೮. ಭರತ್‌ಲಾಲ್ ಮೀನಾ (ಪ್ರ.ಸಂ.), ಸ್ವರ್ಣದರ್ಪಣ, ಪುಟ ೫

೨೯. ಉತ್ತರ ಕನ್ನಡ ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳ ಅಂಕಿ-ಅಂಶಗಳ ವರದಿ ೨೦೦೮-೦೯

೩೦. ಭರತ್‌ಲಾಲ್ ಮೀನಾ (ಪ್ರ.ಸಂ.), ಸ್ವರ್ಣದರ್ಪಣ, ಪುಟ ೫೯

೩೧. ಅನುಬಂಧ -೨, ಅರಣ್ಯ ಭೂಮಿಯು ವಿವಿಧ ಯೋಜನೆಗಳಿಗೆ ಹಂಚಿಕೆಯಾದ ವಿವರ ಪಟ್ಟಿ.

೩೨. ಶಿವಾನಂದ ಕಳವೆ, ಕಾಡು ನೆಲದ ಕಾಲಮಾನ, ಪುಟ - ಕಾಲಮಾನದ ಮೊದಲು ಅಡಿಯಲ್ಲಿ.

೩೩. ಜಯಕರ ಭಂಡಾರಿ ಎಂ., ಪವಿತ್ರವನಗಳು - ಪರಿಸರ ಸಂರಕ್ಷಣೆಯ ಪರಂಪರಾಗತ ತಾಣಗಳು, ಸಮೃದ್ಧಿ (ಸಂ.ಗ್ರಂ.) ಪುಟ ೪೫

೩೪. ಎಂ.ಡಿ. ಸುಭಾಶ್‌ಚಂದ್ರನ್, ಕರೆಂಟ್ ಸೈನ್ಸ್, ವಾಲ್ಯೂಂ ೭೩ ಪುಟ ೧೫೦

೩೫. ವಿ.ಎನ್. ನಾಯಕ, ಕರಾವಳಿ ತೀರದ ಸೂಕ್ಷ್ಮ ಜೀವಾವಾಸಗಳು, ಸಮೃದ್ಧಿ (ಸಂ.ಗ್ರಂ.) ಪುಟ ೫೨

೩೬. ಅದೇ, ಪುಟ ೫೩

೩೭. ಗೋಪಾಲಕೃಷ್ಣ ಪಿ. ನಾಯಕ, ಪೂರ್ವೋಕ್ತ, ಪುಟ ೧೨೧

೩೮. ವಿ.ಎನ್. ನಾಯಕ, ಪೂರ್ವೋಕ್ತ, ಪುಟ ೫೫

❑ ❑ ❑

ಅಧ್ಯಾಯ - ೪

ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧಿ ಪರಿಸರ ಚಳವಳಿಗಳು

ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧಿ ಪರಿಸರ ಚಳವಳಿಗಳು

✦

"ರಿಯೋ ಶೃಂಗಸಭೆಯಲ್ಲಿ ಪರಿಸರ ಸಂರಕ್ಷಣೆಗೆಂದು ವಿಶ್ವನಾಯಕರು ಏನೇನು ಕರೆಗಳನ್ನು ಕೊಟ್ಟರೋ ಆ ಎಲ್ಲ ಕರೆಗಳನ್ನು ಉತ್ತರ ಕನ್ನಡದ ರೈತರು ಕಳೆದೊಂದು ದಶಕದಿಂದ ಕೊಡುತ್ತಲೇ ಬಂದಿದ್ದಾರೆ. ಆದರೂ ಈ ಜಿಲ್ಲೆಯ ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡುವ ಯೋಜನೆಗಳೇ ಒಂದರ ಹಿಂದೊಂದು ಬರುತ್ತಿವೆಯೇ ಹೊರತು ಇಲ್ಲಿನ ಪರಿಸರ ಸಂವರ್ಧನೆಯಲ್ಲೇ ಉದ್ಯೋಗಾವಕಾಶ ಸೃಷ್ಟಿಸಬಲ್ಲ ಯಾವ ಯತ್ನವೂ ನಡೆದಿಲ್ಲ. ದೇಶದಲ್ಲೇ ಅತಿ ಹೆಚ್ಚು ಪರಿಸರ ಹೋರಾಟಗಳನ್ನು ಈ ಜಿಲ್ಲೆ ನಡೆಸಿದೆ."[೧] - ಪರಿಸರ ಪತ್ರಕರ್ತ ನಾಗೇಶ ಹೆಗಡೆ

ವಿಶಿಷ್ಟ ಭೌಗೋಳಿಕ ಅಂಶಗಳು ಹಾಗೂ ವಿರಳ ಜನಸಂಖ್ಯೆ ಹೊಂದಿರುವ ಉತ್ತರ ಕನ್ನಡ ಜಿಲ್ಲೆಯು ದೇಶದಲ್ಲಿಯೇ ಅತಿ ಹೆಚ್ಚು ಪರಿಸರ ಹೋರಾಟಗಳನ್ನು ನಡೆಸಿದೆ ಎಂಬ ನಾಗೇಶ ಹೆಗಡೆ ಅವರ ಈ ಮೇಲಿನ ಅಭಿಪ್ರಾಯವು ಸರಿಯಾದುದಾಗಿದೆ. ಆದರೆ ಈ ಜಿಲ್ಲೆಯ 'ಪ್ರಾಕೃತಿಕ ಸಂಪತ್ತನ್ನು ಲೂಟಿ ಮಾಡುವ ಯೋಜನೆಗಳೇ ಒಂದರ ಹಿಂದೊಂದು ಬರುತ್ತಿವೆಯೇ ಹೊರತು, ಇಲ್ಲಿನ ಪರಿಸರ ಸಂವರ್ಧನೆಯಲ್ಲೇ ಉದ್ಯೋಗವಕಾಶ ಸೃಷ್ಟಿಸಬಲ್ಲ ಯಾವ ಯತ್ನವೂ ನಡೆದಿಲ್ಲ ಎಂಬ ಅವರ ಅಭಿಪ್ರಾಯದೊಳಗಿನ ವಿಚಾರಗಳು ಚರ್ಚಿತವಾಗಬೇಕಾಗಿದೆ.

'ಪ್ರಾಕೃತಿಕ ಸಂಪತ್ತನ್ನು ನಾಶ ಮಾಡುವ ಯೋಜನೆಗಳು' ಎಂಬ ಬಹಳ ಮುಖ್ಯವಾದ ವಿಚಾರವನ್ನು ಈ ಅಧ್ಯಯನವು ವಿಶ್ಲೇಷಿಸಬಯಸುತ್ತದೆ. ಯೋಜನೆಗಳ ಹೆಸರಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಪ್ರಾಕೃತಿಕ ಸಂಪತ್ತಿನ ನಾಶವು ಹೊರಗಿನ ಬ್ರಿಟಿಷರೂ ಸೇರಿ ಇತರರಿಂದ ಆಯಿತು ಎಂಬುದು ಒಂದು ಕಡೆಯಾದರೆ, ಯೋಜನೆಗಳಿಂದಾಗಿ ಪ್ರಾಕೃತಿಕ ಸಂಪತ್ತು ನಾಶವಾಗಿಲ್ಲ, ನೈಸರ್ಗಿಕವಾಗಿಯೇ ಮುಳುಗಡೆ ಮಾಡಲಾಯಿತು ಎಂಬ ಮತ್ತೊಂದು ಅಂಶ ಗಮನಾರ್ಹವಾದುದಾಗಿದೆ. ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರು ಭಾರತದಿಂದ ಸಂಪತ್ತನ್ನು ಸಾಗಿಸುವಾಗ, ಭಾರತದೊಳಗಿನ ಒಂದು ಭಾಗವೆನಿಸಿರುವ ಉತ್ತರ ಕನ್ನಡದ ಸಂಪತ್ತನ್ನು ಲೂಟಿ ಮಾಡಿದರು ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಸ್ವಾತಂತ್ರ್ಯಾನಂತರದಲ್ಲಿ ಉತ್ತರ ಕನ್ನಡ ಜಿಲ್ಲೆಯ ಸಂಪತ್ತನ್ನು ವಿದ್ಯುತ್, ಮರಮಟ್ಟು, ಮೀನು, ಖನಿಜ ಮತ್ತಿತರ ರೂಪದಲ್ಲಿ ಕೊಂಡೊಯ್ದು ಬಳಸುತ್ತಿರುವುದನ್ನು ನಾಶ ಎನ್ನಬಹುದೇ ? ಭಾರತದ ಅಖಂಡತೆಯ ಪ್ರಶ್ನೆ ಎದುರಾದಾಗ ಉತ್ತರ ಕನ್ನಡ ಜಿಲ್ಲೆಯನ್ನು ಪ್ರತ್ಯೇಕಿಸಿ ನೋಡುವುದು ಸಾಧ್ಯವಾಗುವುದಿಲ್ಲವಾದರೂ ಪ್ರಾದೇಶಿಕ ಸ್ವಾಯತ್ತತೆ ಹಾಗೂ ಅಭಿವೃದ್ಧಿ ಸಂಬಂಧಿತವಾದ ಕೂಗು ದೇಶದ ಇತರೆಡೆಗಳಲ್ಲಿ ಎದ್ದಿರುವುದನ್ನು ಗಮನಿಸಬಹುದಾಗಿದೆ. ಉದಾಹರಣೆಗೆ ನಕ್ಸಲ್‌ಬಾರಿ ಚಟುವಟಿಕೆಗಳು, ಕೊಡಗಿನ ಪ್ರತ್ಯೇಕತೆಯ ಹೋರಾಟ ಇತ್ಯಾದಿ.

'ವಿವಿಧ ಅಭಿವೃದ್ಧಿ ಯೋಜನೆಗಳಿಂದಾಗಿ ಪ್ರಾಕೃತಿಕ ಸಂಪತ್ತು ಲೂಟಿಯಾಗಿಲ್ಲ, ನೈಸರ್ಗಿಕವಾಗಿಯೇ ಮುಳುಗಡೆ ಮಾಡಲಾಯಿತು' ಎಂಬ ಗಮನಾರ್ಹವಾದ ಅಂಶವು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ನೆಲಸಂಬಂಧಿ ಹಾಗೂ ಜಲಸಂಬಂಧಿ ಪರಿಸರ ಚಳವಳಿಗಳೆಂದು ವಿಭಾಗಿಸಿಕೊಂಡು ಅಧ್ಯಯನವನ್ನು ಕೈಗೊಳ್ಳಲು ಪ್ರೇರಕವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ ಲಕ್ಷಣಗಳು ಸರಿಸಮನಾಗಿ ನೆಲ-ಜಲ ಪ್ರಾಮುಖ್ಯತೆ ಹೊಂದಿರುವುದನ್ನು ಈಗಾಗಲೇ ಗಮನಿಸಲಾಗಿದೆ. ಈ ಜಿಲ್ಲೆಯ ಕರಾವಳಿ, ಘಟ್ಟ ಪ್ರದೇಶ, ಬಯಲು ಭೂಮಿ ಹಾಗೂ ಇನ್ನಿತರ ಲಕ್ಷಣಗಳೆಲ್ಲವೂ ನೆಲ ಮತ್ತು ಜಲ ಸಂಪರ್ಕವನ್ನು ಹೊಂದಿವೆ. ಅಂದರೆ ಪಶ್ಚಿಮ ಕರಾವಳಿಯಲ್ಲಿ ಬಯಲು, ನದಿಗಳು, ಅರಣ್ಯ, ಅಳಿವೆಗಳು, ಕೂರ್ವೆಗಳು, ನಡುಗಡ್ಡೆಗಳು ಮುಂತಾದವುಗಳಿವೆ. ಪೂರ್ವದ ಬಯಲು ಭೂಮಿಯು ಅರಣ್ಯ, ನದಿಗಳು ಇಲ್ಲದೆ ಪೂರ್ಣವಾಗಿ ಬಯಲೇ ಆಗಿಲ್ಲ. ಮಧ್ಯದ ಘಟ್ಟ ಪ್ರದೇಶದಲ್ಲಿ ಬರೀ ಅರಣ್ಯವಷ್ಟೇ ಇಲ್ಲ, ನದಿಗಳು, ಜಲಪಾತಗಳು, ಕುಮರಿಗಳು, ಕಣಿವೆಗಳು. ಈ ಯಾವ ಲಕ್ಷಣಗಳೂ ಒಟ್ಟಿಗೆ ಇಲ್ಲದ ಕರ್ನಾಟಕದ ಇತರೆ ಜಿಲ್ಲೆಗಳಿಗಿಂತ ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕಾಂಶಗಳು ವಿಶಿಷ್ಟವೆನಿಸಿಕೊಂಡಿವೆ.

ವೈವಿಧ್ಯತೆಯ ಭೌಗೋಳಿಕಾಂಶಗಳನ್ನು ಹೊಂದಿರುವ ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗೊಂಡಿರುವ ವಿವಿಧ ರೀತಿಯ ಅಭಿವೃದ್ಧಿ ಯೋಜನೆಗಳು ನೆಲ ಹಾಗೂ ಜಲಸಂಬಂಧಿತವಾಗಿವೆ. ಉದಾಹರಣೆಗೆ ಕೈಗಾ ಅಣುಸ್ಥಾವರ ಯೋಜನೆಯು ಸಂಪೂರ್ಣವಾಗಿ ಅರಣ್ಯದೊಳಗೆ ನಿರ್ಮಿಸಲ್ಪಟ್ಟು, ನೆಲಸಂಬಂಧಿತವಾಗಿದೆ. ಅಣುವಿಕಿರಣಗಳಿಂದ ಪಕ್ಕದಲ್ಲಿಯೇ ಹರಿಯುವ ಕಾಳಿ ನದಿಯನ್ನು ಮಲಿನಗೊಳಿಸುತ್ತಿದೆ ಎಂಬ ಆಪಾದನೆ ಹೊಂದಿರುವುದರಿಂದ ಜಲಸಂಬಂಧಿತವಲ್ಲ ಎನ್ನಲಾಗದು. ನೆಲಸಂಬಂಧದ ಯೋಜನೆಗಳಿಂದುಂಟಾಗುವ ಸಮಸ್ಯೆಗಳು ಮೇಲ್ನೋಟಕ್ಕೆ ಒಂದೇ ಎನಿಸಿದರೂ ಬೇರೆ ಬೇರೆಯಾಗಿರುವುದು ಯೋಜನಾ ಪ್ರದೇಶಗಳಿಗೆ ಕ್ಷೇತ್ರಕಾರ್ಯ ಕೈಗೊಂಡಾಗ ತಿಳಿದುಬಂದಿದೆ. ನೆಲಸಂಬಂಧದ ಯೋಜನೆಯಾಗಿರುವ ಸೀಬರ್ಡ್ ನೌಕಾನೆಲೆಗೆ ಹದಿಮೂರು ಹಳ್ಳಿಗಳ ಜನರನ್ನು ಸ್ಥಳಾಂತರಿಸಿ ೮೩೨೦ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳಲಾಗಿದೆ.[೨] ಈ ಯೋಜನೆಯ ಹಾಗೂ ನಿರಾಶ್ರಿತರ ತಾಣಗಳ ಎರಡೂ ಕಡೆ ಅರಣ್ಯನಾಶ, ಭೂಮಿನಾಶ ಗಣನೀಯ ಪ್ರಮಾಣದಲ್ಲಿ ಆಗದೆ ಅಷ್ಟೇ ನೆಲವು ಈಗಲೂ ಇದೆ. ಆದರೆ ನಿರಾಶ್ರಿತರಿಗೆ ತಾವು ಅನುಭವಿಸುತ್ತಿದ್ದ ಭೂಮಿ ಭಾವನಾತ್ಮಕ ಸಂಬಂಧ ಹೊಂದಿ ವಾಸಿಸುತ್ತಿದ್ದ ಮನೆ ಇಲ್ಲವಾಗಿ ಏನು ಕೊಟ್ಟರೂ, ಎಷ್ಟು ಪರಿಹಾರ ಕೊಟ್ಟರೂ ಸಮಾಧಾನ ತರಲು ಸಾಧ್ಯವಾಗಿಲ್ಲ. ಪರಿಹಾರ ಪಡೆಯುವ ಸಂಬಂಧಿತವಾಗಿ ನಡೆಯುತ್ತಿರುವ ಹೋರಾಟಗಳನ್ನು ನಿಲ್ಲಿಸಲಾಗಿಲ್ಲ. ಸೀಮಿತ ಪ್ರಮಾಣದಲ್ಲಿ ಅರಣ್ಯ ಕಡಿದು, ಗುಡ್ಡ ಕೊರೆದು, ಸೇತುವೆಗಳನ್ನು ಕಟ್ಟಿ ನಿರ್ಮಿಸಲಾದ ನೆಲಸಂಬಂಧದ ಕೊಂಕಣ ರೈಲ್ವೆ ಯೋಜನೆಯು ಪರಿಸರಕ್ಕೆ ಹೆಚ್ಚು ಹಾನಿ ಮಾಡದೇ ಅಭಿವೃದ್ಧಿ ಪೂರಕವಾಗಿಯೇ ಇದೆ. ಬಹುಸಂಖ್ಯಾತರಿಗೆ ಹೆಚ್ಚಾಗಿ ಅನುಕೂಲವಾಗಿರುವ ಈ ರೈಲ್ವೆ ಯೋಜನೆಯನ್ನು ಭೂಮಿ ತ್ಯಾಗ ಮಾಡಿದ ನಿರಾಶ್ರಿತರು ಎಂದಿಗೂ ಒಪ್ಪಿಕೊಳ್ಳುವುದಿಲ್ಲವೆಂಬ ವಿಚಾರವೂ ಗೌಣವಾಗಿಲ್ಲ. ಹೀಗೆಯೆ ಗಣಿಗಾರಿಕೆ, ಬಂದರುಗಳ ಅಭಿವೃದ್ಧಿ, ಕೈಗಾರಿಕೆಗಳ ಸ್ಥಾಪನೆ ಮುಂತಾದ ಇನ್ನಿತರ ಯೋಜನೆಗಳನ್ನು ಗುರುತಿಸಬಹುದು.

ಜಲಸಂಬಂಧಿ ಪರಿಸರ ಚಳವಳಿಗಳನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೊಳಪಡಿಸಲಾಗುವುದು. ಏಕೆಂದರೆ ಜಲಸಂಬಂಧಿ ಯೋಜನೆಗಳು ನೆಲಸಂಬಂಧಿ ಯೋಜನೆಗಳಿಗಿಂತ ಭಿನ್ನವಾಗಿವೆ, ನೈಸರ್ಗಿಕವಾಗಿ ಹರಿಯುವ ನದಿಗೆ ಅಣೆಕಟ್ಟು ಕಟ್ಟಿ ಜಲವಿದ್ಯುತ್ ಯೋಜನೆಯನ್ನು ಜಾರಿಗೊಳಿಸಿದರೆ ಸಾವಿರಾರು ಹೆಕ್ಟೇರ್ ಫಲವತ್ತಾದ ಅರಣ್ಯ-ಕೃಷಿ ಭೂಮಿಗಳು, ತೋಟಗಳು ಮುಳುಗಡೆಯಾಗುತ್ತವೆ. ಅಲ್ಲಿಂದ ನಿರಾಶ್ರಿತರಾದವರು ಇನ್ನೊಂದು ಕಡೆ ಅರಣ್ಯ ಭೂಮಿಯಲ್ಲಿಯೇ ಆಶ್ರಿತರಾಗುತ್ತಾರೆ. ಮುಳುಗಡೆಯಾದಾಗ ಅಪರೂಪದ ಪ್ರಾಣಿ-ಪಕ್ಷಿ, ಸಸ್ಯ ಸಂಕುಲಗಳು ಹೇಳ ಹೆಸರಿಲ್ಲದಾಗುತ್ತವೆ. ಅರಣ್ಯ ಭೂಮಿ ಮುಳುಗಿ ನಾಶವಾದಾಗ ಪ್ರಕೃತಿ ಅಸಮತೋಲನದಿಂದ ಪರಿಸರದ ಮೇಲೆ ಕೆಟ್ಟ ಪರಿಣಾಮವುಂಟಾಗುತ್ತದೆ.

ನೆಲಸಂಬಂಧದ ಯೋಜನೆಗಳು ಒಂದಲ್ಲ ಒಂದು ರೀತಿಯಲ್ಲಿ ನಿರಾಶ್ರಿತರು ಹಾಗೂ ಜಿಲ್ಲೆಯ ಜನರ ಸಂಪರ್ಕದಲ್ಲಿರುತ್ತವೆ. ಸೀಬರ್ಡ್ ನೌಕಾನೆಲೆಯಲ್ಲಿ ಬಂದಿಳಿದಿರುವ ಸೈನಿಕರು, ಅಧಿಕಾರಿಗಳು ಕಾರವಾರದ ಪೇಟೆಗೆ ಬರುತ್ತಾರೆ. ನೌಕಾನೆಲೆಯ ಕೇಂದ್ರೀಯ ಶಾಲೆಗೆ ಸುತ್ತಮುತ್ತಲಿನ ಮಕ್ಕಳು ಹೋಗುತ್ತಾರೆ. ನೆಲಸಂಬಂಧದ ಯೋಜನೆಗಳೊಳಗಿನ ಜನರು ಸುತ್ತಮುತ್ತಲಿನ ಜನರೊಂದಿಗೆ ಸಾಂಸ್ಕೃತಿಕ ಸಂಬಂಧ ಬೆಳೆಸಿದ್ದಾರೆ. ಕೈಗಾ ಅಣುವಿದ್ಯುತ್ ಸ್ಥಾವರದಲ್ಲಿ ಕನ್ನಡ ಸಂಘವು ಅನೇಕ ಕಾರ್ಯಕ್ರಮಗಳನ್ನು ಜಿಲ್ಲೆಯ ಎಲ್ಲರಿಗಾಗಿ ನಡೆಸುತ್ತಿದೆ. ಬಿಣಗಾದಲ್ಲಿರುವ ಕಾಸ್ಟಿಕ್ ಸೋಡಾ ಕಾರ್ಖಾನೆಯವರು ಸಮಾಜೋಪಯೋಗಿ ಕೆಲಸಗಳಿಗೆ ದೇಣಿಗೆ ಕೊಡುತ್ತಾರೆ. ಇಂತಹ ತಾತ್ಕಾಲಿಕ ಸಮಾಧಾನಗಳಿಂದ ಶಾಶ್ವತವಾಗಿ ಕಳೆದುಕೊಂಡಿದ್ದು ಸಿಗುತ್ತದೆ ಎಂದು ನೆಲಸಂಬಂಧಿ ಯೋಜನೆಗಳಿಂದ ನಿರಾಶ್ರಿತರಾಗಿರುವ ಯಾರೂ ಭಾವಿಸಿಲ್ಲದಿರುವುದನ್ನು ಗುರುತಿಸಲಾಗಿದೆ. ಹಾಗೆಯೇ ವಿವಿಧ ಕಾರಣಗಳಿಂದಾಗಿ ನೆಲಸಂಬಂಧಿ ಪರಿಸರ ಚಳವಳಿಗಳು ನಡೆದಿವೆ ಎಂಬುದನ್ನು ಗಮನಿಸಲಾಗಿದೆ.

ತಾತ್ತ್ವಿಕ ನೆಲೆಯಲ್ಲಿ ಅರ್ಥಮಾಡಿಕೊಳ್ಳುವ ಸುಲಭ ಸಾಧನವಾಗಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ನೆಲಸಂಬಂಧಿ ಹಾಗೂ ಜಲಸಂಬಂಧಿ ಎಂದು ವಿಭಜಿಸಿ ನೋಡಬೇಕಾಗಿದೆಯೇ ವಿನಾ ಪರಿಸರ ಚಳವಳಿಗಳಲ್ಲಿ ಈ ಚಳವಳಿ ಹೆಚ್ಚು ; ಇನ್ನೊಂದು ಚಳವಳಿ ಕಡಿಮೆ ಎಂಬ ಯಾವುದೇ ರೀತಿಯ ಧೋರಣೆಯನ್ನು ಈ ಅಧ್ಯಯನವು ಹೊಂದಿಲ್ಲವೆಂಬುದನ್ನು ಸ್ಪಷ್ಟವಾಗಿರಿಸಿಕೊಳ್ಳಲಾಗಿದೆ. ಲಭ್ಯವಿರುವ ದಾಖಲೆಗಳ ಪ್ರಕಾರ ಉತ್ತರ ಕನ್ನಡ ಜಿಲ್ಲೆಯ ಜನರು ಆರಂಭಿಕವಾಗಿ ನೆಲಸಂಬಂಧದ (ಅರಣ್ಯ, ಕೃಷಿ ಭೂಮಿ) ಹಕ್ಕುಗಳಿಗಾಗಿ ಹೋರಾಡಿದರು. ಕ್ರಮೇಣ ನೆಲಸಂಬಂಧದ ಯೋಜನೆಗಳ ಅನಾಹುತಗಳ ವಿರುದ್ಧ ಹೋರಾಟಕ್ಕಿಳಿದರು. 'ಪರಿಸರವನ್ನು ಉಳಿಸಿ ಅಭಿವೃದ್ಧಿಯನ್ನು ನಡೆಸಿ' ಎನ್ನುವ ನೆಲೆಯಿಂದಲೇ, 'ನೆಲವಿದ್ದರೆ ಜಲ' ಎಂಬ ತತ್ತ್ವವನ್ನಾಧರಿಸಿ ಮೊದಲಿಗೆ ನೆಲಸಂಬಂಧಿ ಪರಿಸರ ಚಳವಳಿಗಳನ್ನು ಕಾಲಾನುಕ್ರಮದಲ್ಲಿ ಹೊಂದಿಸಿಕೊಂಡು ಅಧ್ಯಯನವು ಮುಂದುವರಿಯುತ್ತದೆ.

೪.೧ ಆರಂಭಿಕ ನೆಲಸಂಬಂಧಿ ಚಳವಳಿಗಳು

ಟಿಪ್ಪುವಿನ ಮರಣಾನಂತರ (೧೭೯೯) ಉತ್ತರ ಕನ್ನಡ ಜಿಲ್ಲೆಯು ೧೮೦೦ ರಿಂದ ೧೮೬೨ರವರೆಗೆ ದೂರದ ಮದ್ರಾಸ್ ಪ್ರಾಂತ್ಯಕ್ಕೂ, ೧೮೬೨ರ ನಂತರದಲ್ಲಿ ಮುಂಬಯಿ ಪ್ರಾಂತ್ಯಕ್ಕೂ ಸೇರಿತ್ತು, ಬಹುದೂರದ ಬ್ರಿಟಿಷ್ ದೊರೆಗಳಿಗೆ

ಇಲ್ಲಿನ ಜನರ ಕೂಗು ಕೇಳಿಸದು ; ಅಲ್ಲಿದ್ದ ಪ್ರಭುಗಳಿಗೆ ಇಲ್ಲಿಯವರ ಕೊರಗು ಕಾಣಿಸದು. ಇಂತಹ ಪರಿಸ್ಥಿತಿಯಲ್ಲಿ ಜಿಲ್ಲೆಯ ಜನರ ಕಷ್ಟಕೋಟಲೆಗಳನ್ನು ಅರಿತು ನಿವಾರಿಸುವ ಯತ್ನ ಸರಿಯಾಗಿ ಎಂದೂ ಆಗಲಿಲ್ಲ.[೩] ರಾಷ್ಟ್ರೀಯ ಚಳವಳಿಯ ಜೊತೆಗೆ ನೆಲಸಂಬಂಧಿ ಚಳವಳಿಗಳಲ್ಲಿ ಜಿಲ್ಲೆಯ ಜನರು ಸಕ್ರಿಯವಾಗಿ ಭಾಗವಹಿಸಲು ಕಾರಣ ಇಲ್ಲಿ ಬಹು ಹಿಂದಿನಿಂದಲೂ ಬೆಳೆದು ಬಂದ ಬ್ರಿಟಿಷ್ ವಿರೋಧಿ ಭಾವನೆ. ರಾಷ್ಟ್ರೀಯ ಚಳವಳಿಯ ಘಟನೆಗಳೆಂದು ಗುರುತಿಸಲ್ಪಟ್ಟ ಕರನಿರಾಕರಣೆ, ಸ್ವದೇಶಿ, ಉಪ್ಪಿನ ಸತ್ಯಾಗ್ರಹಗಳ ಸಂದರ್ಭದಲ್ಲಿಯೇ ಅರಣ್ಯ ಸತ್ಯಾಗ್ರಹ, ಹುಲ್ಲುಬನ್ನಿ ಸತ್ಯಾಗ್ರಹ, ಕಟ್ಟಿಗೆ ಚಳವಳಿಗಳು ಜಿಲ್ಲೆಯಲ್ಲಿ ನಡೆದವು.

ಅರಣ್ಯ ಸಂಬಂಧದ ಬ್ರಿಟಿಷ್ ನೀತಿಗಳು ಜನರನ್ನು ಸಂಕಷ್ಟಗಳಿಗೆ ಗುರಿ ಮಾಡಿದವು ; ಹಾಗೆಯೇ ಜನರಲ್ಲಿ ಜಾಗೃತಿ ಮೂಡಿಸಲು ಸಹಾಯಕವಾದವು. ಸರ್ಕಾರಿ ಅರಣ್ಯಗಳನ್ನು ಗುರುತಿಸುವ ೧೮೬೮ರ ಕಾನೂನು ಹಾಗೂ ೧೮೭೮ರ ಭಾರತೀಯ ಅರಣ್ಯಗಳ ಕಾನೂನುಗಳ ಪ್ರಕಾರ ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ೬೮೩.೬೭ ಚದರ ಮೈಲಿ ಪ್ರದೇಶವು 'ಕಾದಿಟ್ಟ' ಅರಣ್ಯವೆಂದೂ ೨೮೬೫ ಚದರ ಮೈಲು ಪ್ರದೇಶ 'ರಕ್ಷಿತ' ಅರಣ್ಯವೆಂದೂ ಘೋಷಿತವಾಗಿತ್ತು. ಬ್ರಿಟಿಷ್ ಸರ್ಕಾರಕ್ಕೆ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಕಾದಿಟ್ಟ ಅರಣ್ಯದಲ್ಲಿ ಜನಸಾಮಾನ್ಯರು ಪ್ರವೇಶಿಸಲು ನಿರ್ಬಂಧ ಹೇರಲಾಗಿತ್ತು. 'ರಕ್ಷಿತ' ಅರಣ್ಯ ಪ್ರದೇಶದಲ್ಲಿ ಸಾಂಪ್ರದಾಯಿಕವಾಗಿ ಸವಲತ್ತುಗಳನ್ನು ಅನುಭವಿಸಬಹುದಾಗಿತ್ತು. ಹೀಗೆ ಜನರು ಅನುಭವಿಸಿದ್ದ ಅರಣ್ಯ ಹಕ್ಕುಗಳನ್ನು ಕಿತ್ತುಕೊಳ್ಳಲಾಯಿತು. ಮೀಸಲಿಟ್ಟ ಅರಣ್ಯ ಪ್ರದೇಶವನ್ನು ಬೆಳೆಸಬೇಕೆಂಬ ಬ್ರಿಟಿಷರ ಒಲವು ಅರಣ್ಯದಿಂದ ಸೌದೆ-ಹುಲ್ಲು ತಂದ, ಇಲ್ಲವೇ ಅರಣ್ಯಕ್ಕೆ ಬೆಂಕಿ ಹಚ್ಚಿದ ಗುಮಾನಿಯ ಮೇಲೆ ನಿರಪರಾಧಿಗಳನ್ನೂ ಹಿಂಸಿಸಲು ಕಾರಣವಾಯಿತು. ದಿನವಿಡೀ ಕಷ್ಟಪಟ್ಟು ದುಡಿದು ತಂದ ಅಕ್ಕಿಯನ್ನು ಬೇಯಿಸಲು ಉರುವಲು ಸಮಸ್ಯೆಯನ್ನು ಎದುರಿಸುವ ಚಿಂತಾಜನಕ ಸ್ಥಿತಿ ತಲೆದೋರಿತ್ತು. 'ಜನರು ಅರಣ್ಯಕ್ಕಾಗಿ ವಿನಾ ಅರಣ್ಯ ಜನರಿಗಾಗಿ ಇಲ್ಲ' ಎನ್ನುವ ವಾತಾವರಣವನ್ನು ಉಂಟು ಮಾಡಲಾಯಿತು. ಲಿಂಗಾಯಿತರ ಮನೆಯಲ್ಲಿ ಮರಣ ಸಂಭವಿಸಿದರೂ ಅಂತಹವರ ಮೇಲೆ ಸುಳ್ಳು ಖಟ್ಲೆ ಹಾಕಿ ಅರಣ್ಯಕ್ಕೆ ಬೆಂಕಿ ತಗುಲಿಸಿದ ಆಪಾದನೆಯನ್ನು ಹೊರಿಸಲಾಯಿತು. ವಾಸ್ತವವಾಗಿ ಲಿಂಗಾಯಿತರು ಸತ್ತವರ ಸಮಾಧಿ ಮಾಡುತ್ತಾರೆ, ಸುಡುವುದಿಲ್ಲ. ಬ್ರಿಟಿಷರ ಇಂತಹ ನೀತಿಯ ವಿರುದ್ಧವಾಗಿ ಜಿಲ್ಲೆಯಲ್ಲಿ 'ವನದುಃಖ ನಿವಾರಣಾ ಸಭೆ-ಸಂಘಟನೆಗಳು' ಜಾಗೃತಗೊಂಡವು.[೪] ಅವು ರಾಷ್ಟ್ರೀಯ ಚಳವಳಿ ಮತ್ತು ನೆಲಸಂಬಂಧದ ಚಳವಳಿಗಳಿಗೆ ಪ್ರೇರಣೆಯಾದವು.

ರೈತರು ತಲಾಂತರದಿಂದ ಅನುಭವಿಸುತ್ತಿದ್ದ ಅರಣ್ಯ ಸೌಲಭ್ಯ ಪಡೆಯಲು ೧೮೮೬ರಲ್ಲಿಯೇ ವನ ದುಃಖ ನಿವಾರಣಾ ಸಂಘಟನೆ ರೂಪುಗೊಂಡು ೧೮೮೭ರಲ್ಲಿ ಮೊದಲ ಸಭೆಯು ಶಿರಸಿಯಲ್ಲಿ ಜರುಗಿತು. ತೋಟಗಾರಿಕೆ, ಕೃಷಿಯನ್ನು ಅಭಿವೃದ್ಧಿ ಪಡಿಸಲು ಅವಶ್ಯಕವಾದ ಬೆಟ್ಟಪ್ರದೇಶವನ್ನು ಹುಲ್ಲು ಬೆಳೆಸಲು ಮತ್ತು ಹಿಂದಿನಿಂದ ಅನುಭವಿಸಿದ ಸೌಲಭ್ಯಗಳನ್ನು ಹೊಂದಲು, ಅರಣ್ಯವನ್ನು ಉಚಿತ ಸೌದೆ ಸೊಪ್ಪು ತರಲು ಮುಕ್ತ ಅವಕಾಶ ಕೊಡಬೇಕೆಂದೂ, ಕಾಡು ಪ್ರಾಣಿಗಳ ಹಾವಳಿಯನ್ನು ತಪ್ಪಿಸಲು ಬಂದೂಕು ಪರವಾನಗಿಯನ್ನು ನೀಡಬೇಕೆಂದೂ ಠರಾವು ಪಾಸು ಮಾಡಲಾಯಿತು. ೧೯೧೯ರ ಮೇ ೧೮ರಂದು

ಯಲ್ಲಾಪುರದಲ್ಲಿ ಬೃಹತ್ ವನದುಃಖ ನಿವಾರಣಾ ಸಭೆ ಏರ್ಪಡಿಸಲಾಗಿತ್ತು. ಮುಖ್ಯ ಅರಣ್ಯಾಧಿಕಾರಿ ಕೊಪೆಲ್‌ಸ್ಟೋನ್ ಮತ್ತು ಜಿಲ್ಲಾಧಿಕಾರಿ ಟಪ್ಪರ್ ಅವರೂ ಹಾಜರಿದ್ದರು. ಮಲೆನಾಡು ಪ್ರದೇಶದಲ್ಲಿ ಜನಸಂಖ್ಯೆಯ ಸ್ಥಿತಿಗತಿಗಳು ಹಾಗೂ ಕೃಷಿಯಲ್ಲಿನ ಏರುಪೇರುಗಳನ್ನು ಸರ್ಕಾರಿ ಧೋರಣೆಯ ಹಿನ್ನೆಲೆಯಲ್ಲಿ ಸಾಕಷ್ಟು ಚರ್ಚಿಸಲಾಯಿತು. ಅಂಕಿ ಸಂಖ್ಯೆ ಸಮೇತ ವನ ದುಃಖ ನಿವಾರಣೆಗೆ ಬಂದ ಅಧಿಕಾರಿಗಳ ಮುಂದಿಡಲಾಯಿತು. ಜನನಿಬಿಡ ಹಳ್ಳಿಯ ಸುತ್ತಲೂ ಆರೋಗ್ಯದ ದೃಷ್ಟಿಯಿಂದ ಕೆಲವು ಪ್ರದೇಶಗಳನ್ನು ಅರಣ್ಯಪ್ರದೇಶದಿಂದ ಮುಕ್ತಗೊಳಿಸಲು ಠರಾಯಿಸಲಾಯಿತು. ೧೯೨೯ ಮಾರ್ಚ್ ೧೧ ರಂದು ಹೊನ್ನಾವರದ ಎಂ.ಡಿ. ಕರ್ಕಿಯವರು ಅರಣ್ಯ ನೀತಿಯು ಕೃಷಿಯ ಮೇಲೆ ಮಾಡಿದ ದುಷ್ಪರಿಣಾಮವನ್ನು ಕುರಿತು ಮುಂಬಯಿ ಗವರ್ನರ್ ಲ್ಯೊಡ್ ಜಾರ್ಜ್ ಅವರಿಗೆ ಮನವಿ ಕಳಿಸಿದ್ದರು. ಇವೆಲ್ಲವುಗಳನ್ನು ಮನಗಂಡು ಬ್ರಿಟಿಷ್ ಸರ್ಕಾರ ರೈತರಿಗೆ ಕೆಲವು ಸವಲತ್ತುಗಳನ್ನು ತನ್ನ ಬಿಗು ಅರಣ್ಯ ನೀತಿಯನ್ನು ಸಡಿಲಿಸಿ ನೀಡಿತು. ಸೌಲಭ್ಯಗಳನ್ನು ಪಡೆಯಲು ಸಾಧ್ಯವಾದರೂ ರೈತರ ಅಳಲು ನೀಗಲಿಲ್ಲ ; ಬ್ರಿಟಿಷ್ ವಿರೋಧಿ ಭಾವನೆ ನಿಲ್ಲಲಿಲ್ಲ.

ಕರನಿರಾಕರಣೆ ಚಳವಳಿಯ ಅಂಗವಾಗಿ 'ಹುಲ್ಲುಬನ್ನಿ' ಯನ್ನು ಕೊಡಬಾರದೆಂಬ ಆಂದೋಲನ ಜರುಗಿತು. ಅಂದರೆ ಪ್ರತಿದಿನಕ್ಕೆ ಸರ್ಕಾರಿ ಅರಣ್ಯದಲ್ಲಿ ಮೇಯಲು ಎರಡು ಆಣೆಯಂತೆ ಸರ್ಕಾರ ವಿಧಿಸಿದ್ದ ಕರವನ್ನು ನೀಡದೇ ಇರುವುದೇ 'ಹುಲ್ಲುಬನ್ನಿ' ಚಳವಳಿ.[೫] ಇದು ಮುಂದೆ ಶಿರಸಿ, ಸಿದ್ದಾಪುರಗಳಲ್ಲಿ ನಡೆದ 'ಜಂಗಲ್ ಸತ್ಯಾಗ್ರಹ'ಕ್ಕೆ ಪ್ರೇರಣೆಯಾಯ್ತಿತು. ಕೆ.ಎ. ವೆಂಕಟರಾಮಯ್ಯನವರ ನೇತೃತ್ವದಲ್ಲಿ ಜಂಗಲ್ ಸತ್ಯಾಗ್ರಹವು ಘಟ್ಟದ ಮೇಲಿನ ಪ್ರದೇಶದಲ್ಲಿ ಜರುಗಿತು. ಕಾದಿಟ್ಟ ಅರಣ್ಯಗಳಲ್ಲಿನ ಬಲಿತ ಗಂಧದ ಗಿಡಗಳು ಮತ್ತು ಇನ್ನಿತರ ಕೈಗೆ ಸಿಕ್ಕ ಮರಗಳ ಕೊಂಬೆಗಳನ್ನು ಕಡಿದು ಕಾಯಿದೆ ಭಂಗಗೊಳಿಸಿ, ೧೯೩೦ರ ಆಗಸ್ಟ್ ೪ ರಂದು ಶಿರಸಿಯಲ್ಲಿ ಮೆರವಣಿಗೆ ನಡೆಸಲಾಯಿತು. ಜಂಗಲ್ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು. ಇದನ್ನು ವಿರೋಧಿಸಿ ೬೨ ಗ್ರಾಮಗಳ ಪಟೇಲರು ಸಾಮೂಹಿಕ ರಾಜೀನಾಮೆ ನೀಡಿ ಬ್ರಿಟಿಷ್ ಸರ್ಕಾರಕ್ಕೆ ಧಿಕ್ಕಾರ ಸೂಚಿಸಿದರು. ದಿನಕರ ದೇಸಾಯಿಯವರು ೧೯೩೬-೩೭ ರಲ್ಲಿ ರೈತರ ಹೋರಾಟ ಪ್ರಾರಂಭಿಸಿದ್ದು, 'ಭೂಮಾಲೀಕರಿಗೆ ಗೇಣಿ ಕೊಡುವುದನ್ನು ತಪ್ಪಿಸಿ ಉಳುವವನೇ ಭೂ ಮಾಲೀಕನನ್ನಾಗಿ' ಮಾಡುವ ಚಳವಳಿ ರೂಪಿಸಿದರು. ಇದೂ ಒಂದು ವಿಶಿಷ್ಟ ರೀತಿಯ ನೆಲಸಂಬಂಧಿ ಚಳವಳಿಯೆಂದೇ ಗುರುತಿಸಲ್ಪಟ್ಟಿತು.[೬]

ಸ್ವಾತಂತ್ರ್ಯಾನಂತರದಲ್ಲಿಯೂ ಬ್ರಿಟಿಷ್ ಅರಣ್ಯನೀತಿಯು ಮುಂದುವರಿಯಿತು. ಹಾಗೆಯೇ ನೆಲಸಂಬಂಧದ ಚಳವಳಿಗಳೂ ಮುಂದುವರಿದವು. ಅವುಗಳಲ್ಲಿ ಪ್ರಥಮವಾಗಿ ನಡೆದುದೇ 'ಕಟ್ಟಿಗೆ ಚಳವಳಿ'. ೧೯೬೨ರಲ್ಲಿ ಶಿರಸಿಯಲ್ಲಿ ಒಂದು ತಿಂಗಳ ಕಾಲ ನಡೆದ ಚಳವಳಿ ವ್ಯಾಪಕ ಜನಬೆಂಬಲ ಪಡೆಯಿತು. ಆಧುನಿಕತೆಯನ್ನು ಕಾಣದ ಶಿರಸಿಯ ಬಹುತೇಕ ಎಲ್ಲರಿಗೂ ಅಡುಗೆ ಮಾಡಲು, ನೀರು ಕಾಯಿಸಲು ಕಟ್ಟಿಗೆ ಉರುವಲಾಗಿತ್ತು. 'ಕಟ್ಟಿಗೆಯಿಲ್ಲದೆ ಅನ್ನವಿಲ್ಲ' ಎನ್ನುವ ಸ್ಥಿತಿ ಇದ್ದಿತು. ಪ್ರತಿವರ್ಷ ರೈತರು ತಮ್ಮ ಗದ್ದೆ ತೋಟದ ಕೆಲಸ ಮುಗಿದ ಮೇಲೆ ಎತ್ತಿನ ಗಾಡಿಗಳಲ್ಲಿ ಕಾಡಿಗೆ ಹೋಗಿ ಅಲ್ಲಿ ಒಣಗಿ ಬಿದ್ದಿದ್ದ ಕಟ್ಟಿಗೆ ಸಂಗ್ರಹಿಸಿ, ಶಿರಸಿ ಪೇಟೆಗೆ ತಂದು ಮಾರಾಟ ಮಾಡುತ್ತಿದ್ದರು. ಒಂದು ಚಕ್ಕಡಿ ಗಾಡಿ ಕಟ್ಟಿಗೆ ತರುವುದಕ್ಕೆ ನಾಲ್ಕು ಆಣೆ ಶುಲ್ಕವನ್ನು ಪಾವತಿಸಬೇಕಾಗಿತ್ತು.

[illegible]

ಅರಣ್ಯ ಇಲಾಖೆಯು ಈ ಶುಲ್ಕವನ್ನು ಎಂಟು ಆಣೆಗೆ ಏರಿಸಿ ಆದೇಶ ಹೊರಡಿಸಿತು. ಈ ಆದೇಶಕ್ಕೆ ರೈತರಿಂದ ತೀವ್ರ ಪ್ರತಿಭಟನೆ ವ್ಯಕ್ತವಾಯಿತು. ಅರಣ್ಯ ಇಲಾಖೆಯವರು ಹೆಚ್ಚಿಸಿದ ಶುಲ್ಕವನ್ನು ಪಾವತಿಸದವರ ಚಕ್ಕಡಿ ಗಾಡಿಗಳನ್ನು ವಶಕ್ಕೆ ತೆಗೆದುಕೊಂಡು, ರೈತರ ಮೇಲೆ ಪ್ರಕರಣಗಳನ್ನು ದಾಖಲಿಸಿದರು. ಬಿಸಿ ವಾತಾವರಣ ಸೃಷ್ಟಿಯಾಗಿ ಪ್ರತಿಭಟನೆಯು ಹುರಿಗೊಳ್ಳತೊಡಗಿತು. ಈ ಹಂತದಲ್ಲಿ ಎಂ.ಎಸ್. ಧಾರೇಶ್ವರ ಎಂಬ ವಕೀಲರು ರೈತರ ಪರವಾಗಿ ಹೋರಾಟಕ್ಕಿಳಿದರು. ರೈತರು ಕಟ್ಟಿಗೆ ಚಳವಳಿಯನ್ನು ಬಿಡಕಿ ಮೈದಾನದ ಸಮೀಪ ಬಹಿರಂಗವಾಗಿ ಕಟ್ಟಿಗೆ ಮಾರಾಟ ಮಾಡುವ ಮೂಲಕ ಮುಂದುವರಿಸಿದರು. ತಾಲೂಕಿನ ಇತರ ಹಳ್ಳಿಯವರೂ, ಹೆಣ್ಣು ಮಕ್ಕಳೂ ಭಾಗವಹಿಸಿ ಬೆಂಬಲಕ್ಕೆ ನಿಂತರು. ಸುಮಾರು ೩೦೦ರಷ್ಟು ಎತ್ತಿನಗಾಡಿಗಳ ಸಮೇತ ರೈತರು ಅರಣ್ಯ ಇಲಾಖೆ ಕಛೇರಿಗೆ ಮುತ್ತಿಗೆ ಹಾಕಿದರು. ಅರಣ್ಯ ಇಲಾಖೆಯ ಬಿಗಿಯು ಸಡಿಲಗೊಂಡಿತು. ಅರಣ್ಯ ಅಧಿಕಾರಿಗಳು ಪ್ರಕರಣಗಳನ್ನು ಹಿಂದಕ್ಕೆಪಡೆದು, ವಶಪಡಿಸಿಕೊಂಡಿದ್ದ ಚಕ್ಕಡಿಗಾಡಿಗಳನ್ನು ಬಿಟ್ಟುಕೊಟ್ಟರು. ರೈತರ ಇತರ ಬೇಡಿಕೆಗಳ ಕುರಿತು ಸರ್ಕಾರಕ್ಕೆ ತಿಳಿಸಲಾಗುವುದೆಂಬ ಆಶ್ವಾಸನೆ ನೀಡಿದರು. ಸುಮಾರು ಒಂದು ತಿಂಗಳ ಕಾಲ ನಡೆದ ಕಟ್ಟಿಗೆ ಚಳವಳಿ ಕೊನೆಗೂ ಜನಪರ ಜಯವನ್ನು ಸಾಧಿಸಿತು.[೭]

ಉತ್ತರ ಕನ್ನಡ ಜಿಲ್ಲೆಯ ಈ ಆರಂಭಿಕ ನೆಲಸಂಬಂಧಿ ಚಳವಳಿಗಳು ಜಿಲ್ಲೆಯಲ್ಲಿ ಕಾಯ್ದಿಟ್ಟ ಅರಣ್ಯ ಪ್ರದೇಶವು ಹೆಚ್ಚಾಗಿ, ಕೃಷಿಯು ಅವನತಿಯನ್ನು ಹೊಂದಿ ಜನರು ಅನಿವಾರ್ಯವಾಗಿ ಕೃಷಿ ಭೂಮಿಗಾಗಿ ಹೋರಾಡಿದುದನ್ನು ದಾಖಲಿಸುತ್ತವೆ. ಕ್ರಮೇಣ ನಡೆದ ಚಳವಳಿಗಳು ಅಭಿವೃದ್ಧಿ ಯೋಜನೆಗಳ ನೆಪದಲ್ಲಿ ಹಾಳಾಗುತ್ತಿರುವ ಕಾಯ್ದಿಟ್ಟ ಅರಣ್ಯವನ್ನು ರಕ್ಷಿಸಬೇಕೆಂದು ಹೋರಾಡುವ 'ಪರಿಸರ ಚಳವಳಿಗಳಾಗಿ' ಮುನ್ನಡೆದಿವೆ.[೮] ಅರಣ್ಯ ಸೌಲಭ್ಯಗಳನ್ನು ಪಡೆಯಲು ಹೋರಾಡಿದ ಈ ಜಿಲ್ಲೆಯ ಜನರು ಸೌಲಭ್ಯಗಳನ್ನು ಪಡೆದು ಅನುಭವಿಸುವಲ್ಲಿ ಯಶಸ್ವಿಯಾಗಿದ್ದಾರೆ. ಉದಾಹರಣೆಗೆ ಸೊಪ್ಪಿನ ಬೆಟ್ಟ ಸೌಲಭ್ಯ.[೯] ಎಲ್ಲರಿಗೂ ಈ ಸೌಲಭ್ಯ ಸಿಗದಿರುವುದನ್ನು ಪ್ರಶ್ನಿಸುವವರು ಒಂದು ಕಡೆ ಇರುವಾಗಲೇ ಅಭಿವೃದ್ಧಿ ನೆಪದಲ್ಲಿ ಕಳೆದುಕೊಳ್ಳುತ್ತಿರುವ ನೆಲ-ಜಲ ಸಂಪತ್ತಿನ ರಕ್ಷಣೆಗಾಗಿ ಹೋರಾಟವು ನಡೆದಿರುವುದನ್ನು ಈ ಮುಂದಿನ ಪರಿಸರ ಚಳವಳಿಗಳಲ್ಲಿ ಗುರುತಿಸಬಹುದು.

೪.೨ 'ಅಪ್ಪಿಕೋ' ಚಳವಳಿ

ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧದ ಪರಿಸರ ಚಳವಳಿಗಳಲ್ಲಿ ಅಪ್ಪಿಕೋ ಚಳವಳಿ ಮೊದಲನೆಯದೆಂದು ಗುರುತಿಸಿಕೊಂಡಿದೆ. ಆಗ ಕಾಯ್ದಿಟ್ಟ ಅರಣ್ಯದಲ್ಲಿ ಕೃಷಿಗೂ ಸ್ವಲ್ಪ ಜಾಗ ಕೊಡಿ ಎಂದು ಹೋರಾಡಿದ ಜನರು, ಈಗ ಕಾಯ್ದಿಟ್ಟ ಅರಣ್ಯವನ್ನು ಕಡಿದು ನಾಶಗೊಳಿಸಬೇಡಿ ಎಂದು ಹೋರಾಟ ಮಾಡಿದರು. ಈ ಹೋರಾಟವೇ ಅಪ್ಪಿಕೋ ಚಳವಳಿ. ನೈಸರ್ಗಿಕ ಅರಣ್ಯ ಕಡಿದು ಸಾಗವಾನಿ, ನೀಲಗಿರಿ, ಅಕೇಷಿಯಾದಂತಹ ಏಕಜಾತಿಯ ನೆಡು ತೋಪುಗಳನ್ನು ನಿರ್ಮಿಸಲು ಹೊರಟ ಅರಣ್ಯ ಇಲಾಖೆಯ ಧೋರಣೆಯನ್ನು ಖಂಡಿಸಿ, ಮರಗಳನ್ನು ಕಡಿಸಲು ಗುತ್ತಿಗೆದಾರರು ಬಂದಾಗ ಮರ ಕಟುಕರ ಕೊಡಲಿಯಿಂದ ರಕ್ಷಿಸಲು 'ಮರಗಳನ್ನು

ತಬ್ಬಿಕೊಂಡು ನಿಲ್ಲುವುದೇ' ಅಪ್ಪಿಕೋ ಚಳವಳಿ.[೧೦] ಹಿಮಾಲಯದ ಗೊಂಡಾರಣ್ಯದಲ್ಲಿ ಸುಂದರಲಾಲ ಬಹುಗುಣ ಅವರ ನೇತೃತ್ವದಲ್ಲಿ ನಡೆದ 'ಚಿಪ್ಕೋ' ಚಳವಳಿಯು ಅಪ್ಪಿಕೋ ಚಳವಳಿಗೆ ಸ್ಫೂರ್ತಿಯಾಗಿತ್ತು. ಸುಂದರಲಾಲ ಬಹುಗುಣರ ಮಾತು, ಮಾರ್ಗದರ್ಶನ ಹಾಗೂ ಸುಮಾರು ೩೫೦ ವರ್ಷಗಳ ಹಿಂದೆ ಜೋಧಪುರ (ರಾಜಸ್ಥಾನ)ದಲ್ಲಿ ಅಮೃತಾದೇವಿ ಎಂಬ ಮಹಿಳೆ ಗುತ್ತಿಗೆದಾರರಿಂದ ಅರಣ್ಯ ರಕ್ಷಿಸಲು ಹೋಗಿ ಮರ ತಬ್ಬಿಕೊಂಡು ಅನುಯಾಯಿಗಳಾಗಿದ್ದ ೩೬೩ಮಂದಿ ಹಳ್ಳಿಗರೊಂದಿಗೆ ಮರ ಕಟುಕರ ಕೊಡಲಿಗೆ ಬಲಿಯಾದುದು, ಆಮೇಲೆ ಅಲ್ಲಿನ ಮಹಾರಾಜನಿಂದ ಮರ ಕಡಿಯದಂತೆ ತಡೆಯಾಜ್ಞೆ ನೀಡಿದ ವಿವರಗಳು ಅಪ್ಪಿಕೋ ಚಳವಳಿಯ ಸಂಘಟನೆಗೆ ಪ್ರೇರಣೆಯಾದವು.[೧೧] ಬಹುಗುಣರ ನೇತೃತ್ವದ ಚಿಪ್ಕೋ ಚಳವಳಿಯಲ್ಲಿ ಶಿರಸಿಯಿಂದ ಪಾಂಡುರಂಗ ಹೆಗಡೆ ಭಾಗವಹಿಸಿ ಬಂದಿದ್ದು, ಈ ಭಾಗದ ಯುವಕ ಸಂಘದ ಒಬ್ಬಿಬ್ಬರು ಬಹುಗುಣರ ಚಿಪ್ಕೋ ಭಾಷಣ ಕೇಳಿದ್ದುದು ಇಲ್ಲಿಯ ಅಪ್ಪಿಕೋ ಚಳವಳಿಯ ಸಂಘಟನೆಗೆ ದಾರಿಯಾಯಿತು.

ಉತ್ತರ ಕನ್ನಡ ಜಿಲ್ಲೆಯ ಅರಣ್ಯ ವಿಭಾಗಗಳ ವೃತ್ತ ಕಛೇರಿಯು ಶಿರಸಿಯಲ್ಲಿದ್ದು, ಅಲ್ಲಿನ ಅರಣ್ಯಾಧಿಕಾರಿಗಳು ಸರ್ವಭಕ್ಷಕರ ಭಂಡಾರಕ್ಕೆ ನಾಟಾ ಒದಗಿಸಲು, ನಗರಗಳ ಸೌದೆ ಭಕ್ಷಕರಿಗೆ ಉರುವಲು ಬೇಕೆಂದು ಘಟ್ಟಪ್ರದೇಶದ ನೈಸರ್ಗಿಕ ಅರಣ್ಯದಲ್ಲಿ ಇದ್ದ ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಮರಗಳನ್ನು ಕಡಿದು ಸಾಗಿಸಲು ಅನುಮತಿ ನೀಡಿದ್ದರು. ಮರಗಳು ಖಾಲಿಯಾದ ಜಾಗದಲ್ಲಿ ಆದಾಯ ಮತ್ತು ಶೀಘ್ರ ಉತ್ಪನ್ನ ನಿರೀಕ್ಷೆಯಲ್ಲಿ ಏಕಜಾತಿಯ ಸಸ್ಯಗಳ ನೆಡುತೋಪು (ಕೃತಕ ಕಾಡು) ಗಳನ್ನು ಬೆಳೆಸುವ ತೀರ್ಮಾನ ಕೈಗೊಂಡರು. ಇಂತಹ ಸಕಾರಣಗಳು 'ತಲೆಮಾರಿನ ನೆಡುತೋಪು' ಬೆಳೆಸಿದವೇ ಹೊರತು ತಲತಲಾಂತರವಾಗಿ ಉಳಿಯಬಲ್ಲ ಅರಣ್ಯವನ್ನು ಪೋಷಿಸುವಲ್ಲಿ ಹೆಚ್ಚಿನ ಲಕ್ಷ್ಯ ಹರಿಸಿಲ್ಲ[೧೨] ಎಂಬ ಮಾತಿಗೆ ಬೆಂಬಲವಾಗಿ ನಿಂತು ನಡೆದ ಘಟನೆಯೇ 'ಅಪ್ಪಿಕೋ ಚಳವಳಿ'.

೧೯೮೩ ಸೆಪ್ಟಂಬರ್ ೮ ಉತ್ತರ ಕನ್ನಡ ಜಿಲ್ಲೆಯಲ್ಲಿ ಅರಣ್ಯ ರಕ್ಷಣಾ ಜಾಗೃತಿಗೆ ಬುನಾದಿ ಹಾಕಿ, ಇತಿಹಾಸ ಬರೆದ ಮಹತ್ವದ ಅಪ್ಪಿಕೋ ಚಳವಳಿ ಆರಂಭಿಸಿದ ದಿನ.[೧೩] ಶಿರಸಿ ತಾಲೂಕಿನ ಬಾಳೆಗದ್ದೆ ಬಿಳಗಲ್ ಅರಣ್ಯದಲ್ಲಿ ನೈಸರ್ಗಿಕ ಅರಣ್ಯ ಕಡಿದು ಸಾಗವಾನಿ ನೆಡುತೋಪು ನಿರ್ಮಿಸುವ ನಿರ್ಧಾರವನ್ನು ಅರಣ್ಯ ಇಲಾಖೆಯು ಕೈಗೊಂಡಿತ್ತು. ಈ ನೆಡುತೋಪಿನಿಂದ ನೀರಿನ ಸೆಲೆ ಬತ್ತುವುದನ್ನು, ಜಾನುವಾರುಗಳಿಗೆ ಮೇವಿಲ್ಲದಂತೆ ಆಗುವುದನ್ನು ಹಾಗೂ ಕೃಷಿಗೆ ಪೂರಕವಾದ ಗಿಡಮರಗಳು ನಾಶವಾಗುವುದನ್ನು ಮನಗಂಡು ಗ್ರಾಮಸ್ಥರು ಬಾಳೆಗದ್ದೆ ಯುವಕ ಮಂಡಳದ ನೇತೃತ್ವದಲ್ಲಿ ಇದನ್ನು ಖಂಡಿಸಿ ಪತ್ರ ಬರೆದು ನಿರ್ಧಾರ ಕೈ ಬಿಡುವಂತೆ ಮನವಿ ಮಾಡಿಕೊಂಡರು.[೧೪] ಅರಣ್ಯ ಇಲಾಖೆಯು ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಲಿಲ್ಲ. ತನ್ನ ನಿರ್ಧಾರವನ್ನು ಬದಲಿಸದೆ ಕಾರ್ಯೋನ್ಮುಖವಾಯಿತು. ಅನಿವಾರ್ಯವಾಗಿ ಜನರು ಚಳವಳಿಗೆ ಮುಂದಾದರು. ಇದರಿಂದ, ಆತುರವೂ ಅಲ್ಲದ, ಆಕಸ್ಮಿಕವೂ ಆಗಿರದ ಅಪ್ಪಿಕೋ ಚಳವಳಿಯು ಆರಂಭವಾಯಿತು.

ಅಪ್ಪಿಕೋ ಚಳವಳಿಗೆ ಬೆಂಬಲ ಸೂಚಿಸಲು ೧೯೮೩ರ ಆಗಸ್ಟ್ ತಿಂಗಳಿನಲ್ಲಿ ಸುಂದರಲಾಲ್ ಬಹುಗುಣ ಅವರು ಶಿರಸಿಗೆ ಬಂದು ಬಾಳೆಗದ್ದೆ ಶಾಲೆಯಲ್ಲಿ ಸಭೆ ನಡೆಸಿ ಅಹಿಂಸಾತ್ಮಕ ಹೋರಾಟದ ಮಾರ್ಗಗಳನ್ನು

ಬೋಧಿಸಿದರು.[೧೫] ಗ್ರಾಮಸ್ಥರು ಮರಗಿಡಗಳನ್ನು ರಕ್ಷಿಸಲು ತಾವು ಜೀವ ತ್ಯಾಗಕ್ಕೂ ಸಿದ್ಧ ಎಂದು ಪ್ರತಿಜ್ಞೆ ಮಾಡಿದರು. ಚಳವಳಿಗೆ ಸಿದ್ಧರಾಗಿ ಬೆಳಗ್ಗೆಯೇ ಮನೆಯಿಂದ ಹೊರಟ ಜನರು ಮೂರು ಗಂಟೆ ಪಾದಯಾತ್ರೆ ಮಾಡಿ ಸಾಲ್ಕಣಿ ಎಂಬ ಊರಿನ ಹತ್ತಿರದ ಅರಣ್ಯ ತಲುಪಿದಾಗ ಮಧ್ಯಾಹ್ನವಾಗುತ್ತಿತ್ತು. ಮರಕಡಿಯುವ ಕೆಲಸ ನಡೆದಿತ್ತು. ನೂರಾರು ಜನರು 'ಹೋ' ಎಂದು ಕೂಗುತ್ತಾ ಅರೆಕಡಿದ ಮರಗಳನ್ನು ತಬ್ಬಿಕೊಂಡರು.[೧೬] ತಬ್ಬಿಬ್ಬಾದ ಕೂಲಿಗಳಿಗೆ ಮರಕಡಿಯಕೂಡದೆಂದೂ, ಬಿಡಾರಗಳಿಗೆ ಹಿಂತಿರುಗಬೇಕೆಂದು ತಿಳಿಸಿದರು. ದೂರದ ಕಲಬುರ್ಗಿ, ಬಿಜಾಪುರದಿಂದ ದುಡಿಮೆಗೆಂದು ಬಂದಿದ್ದ ಬಡಪಾಯಿ ಕೂಲಿಗಳು ವನ ಸಂರಕ್ಷಣೆಯ ಬಗ್ಗೆ ಚಳವಳಿಗಾರರ ಕಳಕಳಿಯನ್ನು ತಿಳಿದು, ಕೆಲವರು ಹೆದರಿ ಕೊಡಲಿ, ಗರಗಸಗಳೊಂದಿಗೆ ಹಿಂತಿರುಗಿದರು ಭಾರತದ ದಕ್ಷಿಣದಲ್ಲಿರುವ ಪಶ್ಚಿಮ ಘಟ್ಟಗಳ ಸಾಲಿನಲ್ಲಿ ನಡೆದ ಸಾಲ್ಕಣಿಯ ಈ ಚಿಪ್ಕೋ (ಅಪ್ಪಿಕೋ) ಚಳವಳಿಯು ಮಲೆನಾಡಿನ ಇತರ ಕಡೆಗಳಿಗೂ ಹಬ್ಬಿತು. ಕೊಡಗಿನ ಗಡಿಭಾಗ ಉಡುಂಬೆ ಅರಣ್ಯ, ದಕ್ಷಿಣ ಕನ್ನಡದ ಪಟ್ರಮೆ (ಬೆಳ್ತಂಗಡಿ ತಾಲ್ಲೂಕಿನಲ್ಲಿ ದಟ್ಟ ಕಾಡಿನೊಳಗಿರುವ ಗ್ರಾಮ) ಶಿವಮೊಗ್ಗ ಹಾಗೂ ಚಿಕ್ಕಮಗಳೂರಿನ ಕಾಡುಗಳಲ್ಲಿ ಸ್ವಯಂ ಪ್ರೇರಣೆಯಿಂದ ಜನರು ಅಪ್ಪಿಕೋ ಚಳವಳಿ ಕೈಗೊಂಡು ಮರ ಕಡಿತಕ್ಕೆ ತಡೆ ಹಾಕಿದರು. ಸಾಲ್ಕಣಿಯ ನಂತರದಲ್ಲಿ ಕಳಾಸೆ, ಕುದ್ರಗೋಡದಲ್ಲಿ ಚಳವಳಿ ನಡೆದು ಹೆಂಗಸರೂ, ಗಂಡಸರೂ ಭಾಗವಹಿಸಿ ಕಲಬುರ್ಗಿಯಿಂದ ಬಂದಿದ್ದ ಕೂಲಿಯಾಳುಗಳಿಂದ 'ಸೌದತ್ತಿ ಎಲ್ಲಮ್ಮನ ಆಣೆಯಾಗಿ ನಾವಿನ್ನು ಈ ಕಾಡಿನಲ್ಲಿ ಮರ ಕಡಿಯಾಕಿಲ್ರೀ' ಎಂಬ ಪ್ರಮಾಣವಚನ ಮಾಡಿಸಿ, ಮರಕಡಿತವನ್ನು ತಾತ್ಕಾಲಿಕವಾಗಿ ನಿಲ್ಲಿಸಿದರು.[೧೭] ಅಲ್ಲಿಂದ ಸುಮಾರು ೬೦ ಕಿ.ಮೀ. ದೂರದ ಜಡ್ಡಿಹಳ್ಳಿಯವರಿಗೆ ಸುದ್ದಿಯಾಗಿ ಅಲ್ಲಿನ ಜನರು 'ಕಾಡು ಕಡಿಯುತ್ತಿದ್ದಾರೆ, ರಕ್ಷಿಸೋಣ ಬನ್ನಿ' ಎಂದು ಹೊರಟರು. ಗುತ್ತಿಗೆದಾರರು ಪರವಾನಗಿಯ ಪ್ರಕಾರ ೫೨ ಮರಗಳನ್ನು ಕಡಿಯಬೇಕಾದಲ್ಲಿ ೨೪೨ ಮರಗಳು ಉರುಳಿದ್ದನ್ನು ನೋಡಿ ಆಶ್ಚರ್ಯಚಕಿತರಾದರು. 'ಇನ್ನೂ ಕಡಿಯಬೇಕಾದರೆ ನಮ್ಮ ಸಮೇತ ಕಡಿಯಿರಿ' ಎಂದು ಮರಗಳನ್ನು ತಬ್ಬಿ ನಿಂತರು. ಗುತ್ತಿಗೆದಾರರು ಅಲ್ಲಿಂದ ಕಾಲ್ತೆಗೆಯುವವರೆಗೆ ಕಾದು ನಿಂತರು. ಅಲ್ಲಿಗೆ ಸುಮಾರು ೪೦ ಕಿ.ಮೀ. ದೂರದ ನಿಡಗೋಡ್ ಎಂಬಲ್ಲಿ ಅರಣ್ಯ ಹತ್ಯೆ ಸಾಗಿತ್ತು. ಅಲ್ಲಿನ ಹಿಂದುಳಿದ ಜನಾಂಗದವರೆಲ್ಲಾ ವೃಕ್ಷರಕ್ಷಣೆಗೆ ಹೊರಟಿದ್ದೊಂದು ಮಹತ್ವದ ಘಟನೆಯಾಯಿತು. ಅರಣ್ಯ ಉಳಿಸುವುದರ ಜೊತೆಗೇ ಅರಣ್ಯ ಬೆಳೆಸುವುದೂ ಹೇಗೆಂಬ ಬಗ್ಗೆ ಕಾಡಿನಲ್ಲಿ ಚರ್ಚೆ, ಗೋಷ್ಠಿಗಳೂ ನಡೆದವು.[೧೮]

ಸುಂದರಲಾಲ ಬಹುಗುಣ ಅವರು ಉತ್ತರ ಕನ್ನಡ, ದಕ್ಷಿಣ ಕನ್ನಡ ಹಾಗೂ ಕೊಡಗಿನ ಅರಣ್ಯ ಪ್ರದೇಶಗಳಲ್ಲಿ ಪಾದಯಾತ್ರೆ ಮಾಡಿ ಜನಜಾಗೃತಿ ಮೂಡಿಸಿದರು. ಪಾಂಡುರಂಗ ಹೆಗಡೆ, ನರಸಿಂಹ ಭಾಗ್ವತ್ ಹಾಗೂ ಗುಬ್ಬಿಗದ್ದೆ ಈಶಣ್ಣ ಮೊದಲಾದವರು ಶಿರಸಿ ಮಾತ್ರವಲ್ಲದೇ ತಲಕಾವೇರಿಯಿಂದ ಕಾಳಿ ಮೂಲವೆಂದು ಗುರುತಿಸಲ್ಪಟ್ಟಿರುವ ಡಿಗ್ಗಿಯವರೆಗೆ ಸುಮಾರು ಎರಡು ತಿಂಗಳ ಕಾಲ ಅಪ್ಪಿಕೋ ಪಾದಯಾತ್ರೆ ಮಾಡಿ ಜನರಲ್ಲಿ ಅರಣ್ಯ ಮೂಡಿಸಿದರು. ಹೆಗ್ಗೋಡಿನ ನೀನಾಸಂನ ಚಿದಂಬರರಾವ್ ಜಂಬೆ ನೇತೃತ್ವದಲ್ಲಿ ಅಪ್ಪಿಕೋ ಬೀದಿ ನಾಟಕ ಪ್ರದರ್ಶಿತವಾಯಿತು. ಹೊಸತೋಟ ಮಂಜುನಾಥ ಭಾಗವತರು 'ನಿಸರ್ಗ ಸಂಧಾನ' ಎಂಬ ಯಕ್ಷಗಾನದ ಮೂಲಕ ಅಪ್ಪಿಕೋ ಚಳವಳಿಯ ಸಂದೇಶವನ್ನು ಜನತೆಗೆ ಮುಟ್ಟಿಸುವಲ್ಲಿ ಯಶಸ್ವಿಯಾದರು. ಶಿರಸಿ ತಾಲ್ಲೂಕಿನ

ಸ್ಥಳೀಯ ಮುಖಂಡರಾದ ಸಾಲ್ಕಣಿ ಪ್ರದೇಶದ ರಾಮಜ್ಜ ಮಣದೂರ, ವೆಂಕಟ್ರಮಣ ಉಪಾಧ್ಯಾಯ ಸಾಲ್ಕಣಿ, ಆರ್.ವಿ. ಹೆಗಡೆ ನೇಗಾರ, ಆರ್.ಜಿ. ಹೆಗಡೆ ಸಾಲ್ಕಣಿ, ಬಾಳೆಗದ್ದೆ ಮಹಾಬಲೇಶ್ವರ ಹೆಗಡೆ, ಜಿ.ಜಿ. ಹೆಗಡೆ ಹುಲೇಮಳಗಿ, ಅನಂತ ವಿ. ಹೆಗಡೆ ಮಾಗೋಡ ಗದ್ದೆ ಮುಂತಾದ ಸಾವಿರಾರು ಸ್ವಯಂಪ್ರೇರಿತ ಕಾರ್ಯನಿರತರಿಂದ ಚಳವಳಿಯು ಯಶಸ್ವಿಯಾಯಿತು.[೧೯]

ನೈಸರ್ಗಿಕ ಅರಣ್ಯ ಉಳಿಸುವುದು ; ನೆಡುತೋಪಿನಲ್ಲಿ ವಿವಿಧ ಜಾತಿಯ ಗಿಡಗಳನ್ನು ಬೆಳೆಸುವುದು ; ಅರಣ್ಯದ ಮೇಲಿನ ಒತ್ತಡ ಕಡಿಮೆ ಮಾಡುವ ಉದ್ದೇಶದಿಂದ ಸುಧಾರಿತ ಅಸ್ತ್ರ ಒಲೆಗಳು, ಗೋಬರ್‌ಗ್ಯಾಸ್, ಸೌರವಿದ್ಯುತ್ ಬಳಸುವ ಸಂದೇಶದೊಂದಿಗೆ ಚಳವಳಿಯ ಜನಜಾಗೃತಿ ಮೂಡಿಸುವಲ್ಲಿ 'ಅಪ್ಪಿಕೋ' 'ಉಳಿವಿನ ಮಂತ್ರ'ವಾಗಿ ಮನದಟ್ಟಾಗುವಂತೆ ಮಾಡಿತು. ಆ ವರ್ಷಗಳಲ್ಲಿ ದೇಶ ವಿದೇಶಗಳಲ್ಲಿ ಅಪ್ಪಿಕೋ ಚಳವಳಿ ಸುದ್ದಿಯಾಯಿತು.

ಸುದ್ದಿಯಲ್ಲಿದ್ದ ಅಪ್ಪಿಕೋ ಚಳವಳಿಯನ್ನು ಸದ್ದಿಲ್ಲದೆ ಗಮನಿಸುತ್ತಿದ್ದ ಅರಣ್ಯ ಇಲಾಖೆಯು ನಿರ್ಲಕ್ಷ್ಯ ತಾಳಿದ್ದು ಕಂಡುಬರುತ್ತದೆ. ಪ್ರತ್ಯಕ್ಷವಾಗಿ ಚಳವಳಿಯನ್ನು ಹತ್ತಿಕ್ಕಲು ಸಾಧ್ಯವಿಲ್ಲದಷ್ಟು ಅಹಿಂಸಾತ್ಮಕ ಚಳವಳಿಯಾಗಿತ್ತು. ಅಲ್ಲದೆ ಅರಣ್ಯ ಇಲಾಖೆಯೇ ಸ್ವತಃ ಮಾಡಬೇಕಾಗಿದ್ದ 'ಅರಣ್ಯ ಜಾಗೃತಿ' ಕಲ್ಯಾಣ ಕಾರ್ಯಕ್ರಮಗಳನ್ನು ಚಳವಳಿಗಾರರು ಮಾಡಿದ್ದರು. ಆದರೂ ಈ ಚಳವಳಿಯನ್ನು ಹತ್ತಿಕ್ಕಲು ಪರೋಕ್ಷ ಪ್ರಯತ್ನಗಳು ನಡೆದಿರುವುದನ್ನು ಗಮನಿಸಿದರೆ ನಿಡಗೋಡ ಕಾಡಿನಲ್ಲಿ ೩೫೦ ಮಂದಿ 'ಅಪ್ಪಿಕೋ' ಚಳವಳಿ ಮಾಡುತ್ತಿದ್ದಾಗ, ಸ್ವತಃ ರೇಂಜರ್ ಸಾಹೇಬರೇ ಅಲ್ಲಿಗೆ ಬಂದು "ಇದು ಬ್ರಾಹ್ಮಣರ ಬಂಡಾಯ, ಹಿಂದುಳಿದ ವರ್ಗದವರಾದ ನೀವೇಕೆ ಸಹಕಾರ ಕೊಡುತ್ತಿದ್ದೀರಿ ?" ಎಂದು ಅಶಿಕ್ಷಿತ ಗುಡಿಸಲು ವಾಸಿ ಸತ್ಯಾಗ್ರಹಿಗಳಿಗೆ ಮನದಟ್ಟು ಮಾಡಿಕೊಡಲು ಯತ್ನಿಸಿದ್ದಾಗಿ ತಿಳಿದು ಬಂದಿದೆ.[೨೦] ಚಳವಳಿಗಾರರನ್ನು ಒಡೆಯುವ ಕುಟಿಲಯತ್ನ ವಿಫಲವಾದ ಮೇಲೆ, ಅರಣ್ಯ ಇಲಾಖೆಯವರು ಚಳವಳಿಗಾರ ರೈತರಿಗೆ ಕೃಷಿ ಕೆಲಸಕ್ಕೆ ಬೇಕಾದ ನೇಗಿಲು, ಬೇಲಿಗೂಟಕ್ಕೆ 'ನಾಟಾ ಪರ್ಮಿಟ್' ಕೊಡದೆ ಸತಾಯಿಸಿದರು. ಅರಣ್ಯ ಇಲಾಖೆಯ ಆಶ್ರಯದಲ್ಲಿ ಭಕ್ಷಿಸುತ್ತಿದ್ದ ಗುತ್ತಿಗೆದಾರರು, ಕಳ್ಳ ಸಾಗಾಣಿಕೆದಾರರು, ವನ್ಯಜೀವಿ ಹಂತಕರು, ಭ್ರಷ್ಟ ಅಧಿಕಾರಿಗಳೂ ಈ ಚಳವಳಿಯಿಂದ ಕಂಗಾಲಾಗಿದ್ದರು. ಇದೇ ಸಮಯದಲ್ಲಿ ಚಳವಳಿಗೂ ನಮಗೂ ಸಂಬಂಧವಿಲ್ಲ ಎನ್ನುವವರೂ ಇದ್ದರು. ಚಳವಳಿಯ ಕಾಲದ ನೋಂದಾಯಿತ ಸಂಘ - ಸಂಸ್ಥೆಗಳು ಯಾವುವೂ ನಂತರದ ದಿನಗಳಲ್ಲಿ ಸಂಘಟನಾತ್ಮಕವಾಗಿ ನೀತಿ-ನಿಯಮಗಳನ್ನು ರೂಪಿಸಿಕೊಂಡು ಅರಣ್ಯ ಇಲಾಖೆಯೊಡನೆ ಜೊತೆಗೂಡಿಯಾಗಲಿ ಇಲ್ಲವೇ ಖಾಸಗಿಯಾಗಿ ಆಗಲಿ ಅಪ್ಪಿಕೋ ಚಳವಳಿಯ ವರ್ಷಾಚರಣೆ ಮಾಡುವ ಮೂಲಕ ಜಿಲ್ಲೆಯಾದ್ಯಂತ ಕಾರ್ಯಕ್ರಮಗಳನ್ನು ನಡೆಸಿ ಅರಣ್ಯನಾಶ ತಡೆದ ಘಟನೆಗಳು ನಡೆದಿಲ್ಲದಿರುವುದನ್ನು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಪ್ರಶ್ನಾವಳಿಯ ಮೂಲಕ ಕಂಡುಕೊಳ್ಳಲಾಗಿದೆ.

೧೯೮೩ ರಿಂದ ೧೯೮೯ ರವರೆಗಿನ ಅಪ್ಪಿಕೋ ಚಳವಳಿಯ ಪ್ರಭಾವದಿಂದಾಗಿ ಸರ್ಕಾರವು ತನ್ನ ಸಮಗ್ರ ಅರಣ್ಯ ನೀತಿಯಲ್ಲಿ ಬದಲಾವಣೆ ತಂದುಕೊಂಡು ಪಶ್ಚಿಮ ಘಟ್ಟದ ಅರಣ್ಯದಲ್ಲಿ ಹಸಿರುಮರಗಳನ್ನು ಕಡಿಯದಂತೆ ನಿಷೇಧಾಜ್ಞೆ ಜಾರಿಗೊಳಿಸಿತು. ಉದ್ದಿಮೆಗಳಿಗೆ ಕಡಿಮೆ ದರದಲ್ಲಿ ಗುತ್ತಿಗೆ

ಆಧಾರದ ಮೇಲೆ ಮರ ಕಡಿಯಲು ನೀಡಿದ್ದ ಅನುಮತಿಯನ್ನು ಹಿಂದೆ ಪಡೆಯಿತು. ೨೦೦೮ರ ಸೆಪ್ಟಂಬರ್ ೭ ಮತ್ತು ೮ ರಂದು ೨೫ ವರ್ಷಗಳನ್ನು ಪೂರೈಸಿದ ಉತ್ತರ ಕನ್ನಡ ಜಿಲ್ಲೆಯ ಈ ನೆಲಸಂಬಂಧದ ಪರಿಸರ ಚಳವಳಿಯನ್ನು 'ಪರಿಸರ ಉಳಿಸಿ, ಅಭಿವೃದ್ಧಿ ನಡೆಸಿ' ಎಂಬ ನೆಲೆಯಿಂದ ವಿಶ್ಲೇಷಿಸಬಹುದಾದರೆ ಆ ಕಾಲಘಟ್ಟದ ಯಶಸ್ವಿ ಚಳವಳಿಯಾಗಿತ್ತು ಎಂದು ಹೇಳಬಹುದು. ಸಮಕಾಲೀನವಾಗಿ ಇಲ್ಲವೆ ಆನಂತರದಲ್ಲಿ ನಡೆದ ಚಳವಳಿಗಿಂತ ಭಿನ್ನವಾಗಿದ್ದ ಈ ಚಳವಳಿಯ ಪ್ರಭಾವವು 'ಶರಾವತಿ ಟೇಲ್‌ರೇಸ್' ವಿರೋಧದ ಚಳವಳಿ ಕಾಲದಲ್ಲಿ ಮತ್ತೊಮ್ಮೆ ಬಿರುಸುಗೊಂಡಿತು. ಸಮಕಾಲೀನವಾಗಿ ಜಿಲ್ಲೆಯ ಹೊರಗಡೆ ಪ್ಲಾಂಟೇಷನ್ ಕಾರ್ಪೋರೇಷನ್ ಅಡಿಯಲ್ಲಿ ನೀಲಗಿರಿ ಪ್ಲಾಂಟೇಶನ್ ಬೆಳೆಸುವ ಕಾರ್ಯಕ್ರಮಗಳು ನಡೆದವು. ರೈತ ಸಂಘವೂ ಸೇರಿದಂತೆ ಅನೇಕ ಜನ ಸಂಘಟನೆಗಳು ನೀಲಗಿರಿಯನ್ನು ಕಿತ್ತೆಸೆಯಲು ಪ್ರಾರಂಭಿಸಿದರು. ಕುಸನೂರಿನ ಬಳಿ ನೆಡುತೋಪಿಗಾಗಿ ಗೋಮಾಳ ಕಬಳಿಕೆ ವಿರುದ್ಧ 'ಕಿತ್ತಿಕೋ ಹಚ್ಚಿಕೋ' ಚಳವಳಿ ನಡೆಯಿತು.[೨೧] ೯೦ರ ದಶಕದಲ್ಲಿ ನಡೆದ ಏಕಜಾತಿಯ ನೆಡುತೋಪಿನ ಸಂಬಂಧದ ಘಟನೆಗಳು ಕ್ರಮೇಣ ಬಲ ಕಳೆದುಕೊಂಡವು.

ಸರ್ಕಾರ ಮತ್ತು ಅರಣ್ಯ ಇಲಾಖೆಯ ನೀತಿಗಳ ವಿರುದ್ಧ ಸಾಮೂಹಿಕವಾಗಿ ನಡೆದ ಅಪ್ಪಿಕೋ ಚಳವಳಿಯು ಜಿಲ್ಲೆಯ ಸಂಘಸಂಸ್ಥೆಗಳವರ ಚಟುವಟಿಕೆಗಳಿಗೆ, ಜಿಲ್ಲೆಯೊಳಗೆ ಸಾವಿರಾರು ದೇವಾಲಯಗಳು ನಿರ್ಮಾಣವಾಗುವಾಗ, ಅರಣ್ಯವಾಸಿಗಳು ಕೇವಲ ತಮ್ಮ ಒಂದೇ ಮನೆಗೆ ರಸ್ತೆ ನಿರ್ಮಿಸಿಕೊಳ್ಳಲು ಮರಗಳನ್ನು ಕಡಿಯುವಾಗ ಅಪ್ಪಿಕೋ ಚಳವಳಿಯ ನೆನಪಾಗದಿರುವುದನ್ನು ಕಂಡುಕೊಂಡಿರುವ ಈ ಅಧ್ಯಯನವು ಇತರ ನೆಲಸಂಬಂಧದ ಚಳವಳಿಗಳತ್ತ ಗಮನ ಹರಿಸುತ್ತದೆ.

೪.೩ ಕೈಗಾ ಅಣುವಿದ್ಯುತ್ ಸ್ಥಾವರ

ಉತ್ತರ ಕನ್ನಡ ಜಿಲ್ಲೆಯ ಕೈಗಾ ವಿರೋಧದ ಪರಿಸರ ಚಳವಳಿಯನ್ನು ವಿಶೇಷವಾಗಿ ಹೆಸರಿಸಲೇಬೇಕಾದ ಅಗತ್ಯವಿದೆ. ಏಕೆಂದರೆ ಅಭಿವೃದ್ಧಿ ಶೀಲ ದೇಶಗಳಲ್ಲಿ ಅಣುಶಕ್ತಿಯ ವಿರುದ್ಧ ತಲೆ ಎತ್ತಿದ ಮೊದಲ ಪ್ರತಿಭಟನೆ ಇದು. ಚಿಪ್ಕೋದ ನಂತರ ಎಂಭತ್ತರ ದಶಕದಲ್ಲಿ ಅತಿ ಹೆಚ್ಚಿನ ಅಂತಾರಾಷ್ಟ್ರೀಯ ಪ್ರಸಿದ್ಧಿ ಪಡೆದ ಚಳವಳಿಯೂ ಇದೇ ಆಗಿದೆ.[೨೨] ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚು ಚರ್ಚೆಗೆ ಒಳಗಾಗಿರುವ ಯೋಜನೆಗಳಲ್ಲಿ ಕೈಗಾ ಅಣುಸ್ಥಾವರವು ಮುಖ್ಯವಾದುದಾಗಿದೆ.

ಭಾರತದ ದಕ್ಷಿಣದಲ್ಲಿ ಮದ್ರಾಸಿನ (ಈಗಿನ ಚೆನ್ನೈ) ಕಲ್ಪಾಕಮ್ ಬಿಟ್ಟರೆ ಬೇರೆಡೆ ಅಣುಸ್ಥಾವರವಿರಲಿಲ್ಲ. ಅಣುಶಕ್ತಿ ಇಲಾಖೆಯ ಮಹಾಯೋಜನೆಯ ಪ್ರಕಾರ ದೇಶದ ಈ ಭಾಗದಲ್ಲಿ ಇನ್ನೂ ಒಂದೆರಡು ಘಟಕ ಸ್ಥಾಪಿಸಬೇಕು ಎಂಬುದಾಗಿತ್ತು. ಕೇರಳದ ಕೊತ್ತಮಂಗಲಮ್ ಎಂಬಲ್ಲಿ ಅಣುಸ್ಥಾವರ ಸ್ಥಾಪಿಸಲು ೧೯೮೮ರಲ್ಲಿ ಮುಂದಾದಾಗ ಕೊಚ್ಚಿನ್‌ನಲ್ಲಿ ಜನಮೇಳ ಜರುಗಿಸಿ ಅಣುಶಕ್ತಿ ಇಲಾಖೆಯನ್ನು ಹೊರದೂಡಿದರು. 'ಅಣು ಘಟಕ ನಮಗೆ ಬೇಕು' ಎಂಬ ಕರ್ನಾಟಕದ ಜನತಾ

ಸರ್ಕಾರ ಕೇಂದ್ರಕ್ಕೆ ೧೯೮೩ ರಿಂದಲೇ ದುಂಬಾಲು ಬಿದ್ದಿತ್ತು.[೨೩] ಕೇರಳದಲ್ಲಿ ಚುರುಕು ಮುಟ್ಟಿಸಿಕೊಂಡ ಅಣುಶಕ್ತಿ ಇಲಾಖೆ ಬೇರೆಲ್ಲಾದರೂ ಕಾಲೂರಲು ಹವಣಿಸುತ್ತಿತ್ತು. ಕರ್ನಾಟಕ ಕರೆಯಿತು, ಉತ್ತರ ಕನ್ನಡ ಜಿಲ್ಲೆಯ 'ಕೈಗಾ' ಎಂಬ ಹಳ್ಳಿಯಲ್ಲಿ ನೆಲೆಯೂರಿತು.

ಮೂರು ಕಡೆ ದಟ್ಟ ಕಾಡಿನ ಬೆಟ್ಟಗಳ ಮಧ್ಯೆ ಬೋಗುಣಿಯಂತಿರುವ ಕೈಗಾ ತಾಣ ತುಂಬಿ ಹರಿಯುವ ಕಾಳಿ ನದಿಯ ಎಡದಂಡೆಯಲ್ಲಿದೆ. ಅತಿ ವಿರಳ ಜನಸಾಂಧ್ರತೆ ಇರುವ ಸುಮಾರು ೧೨೦೦ ಹೆಕ್ಟೇರ್ ಸ್ಥಳದಲ್ಲಿ ಸ್ಥಾಪಿಸಲ್ಪಟ್ಟಿರುವ ಕೈಗಾ ಅಣುಸ್ಥಾವರವು ಕಾರವಾರ ಜಿಲ್ಲಾ ಕೇಂದ್ರ ಹಾಗೂ ಬಂದರಿನಿಂದ ಸುಮಾರು ೪೦ ಕಿ.ಮೀ. ದೂರವಿದ್ದು (ಕಾರವಾರ ತಾಲೂಕಿಗೆ ಸೇರಿದೆ) ಭಾರಿ ಯಂತ್ರಗಳನ್ನು ಸಾಗಿಸಿಕೊಳ್ಳಲು ಅನುಕೂಲಕರವಾದ ಸ್ಥಳದಲ್ಲಿದೆ. ಮೂಲತಃ ಆ ಸ್ಥಳದಲ್ಲಿ ಅಣುಸ್ಥಾವರ ಬೇಡವೆಂದು ಪ್ರತಿಭಟಿಸುವ ಜನರೇ ಇರಲಿಲ್ಲ. ಅಂಕಿ-ಅಂಶಗಳ ಪ್ರಕಾರ ಕೈಗಾದಲ್ಲಿ ೩೧೪, ಜೊತೆಗೆ ಸುತ್ತಮುತ್ತಲ ಹಳ್ಳಿಗಳಾದ ಹರ್ಚುಗಾದ ೧೪೮, ಕುಚೇಗಾರಿನ ೧೧೭, ಬಾಲಮಂದಿರದ ೭೬, ದೇವನಹಳ್ಳಿಯ ೩೭೦ ಜನರು ಸೇರಿ ಒಟ್ಟಾರೆ ೧೦೨೫ ಮಂದಿ ತಮ್ಮ ಗದ್ದೆ ತೋಟಗಳನ್ನು ಬಿಟ್ಟು ಬೇರೆ ಕಡೆ ನಿರಾಶ್ರಿತರಾಗಬೇಕಾಯಿತು. ಮೂಲ ಯೋಜನೆಯ ಸ್ಥಳದಲ್ಲಿ ಪ್ರತಿಭಟಿಸುವವರ ಸಂಖ್ಯೆಯು ಗೌಣವಾಗಿದ್ದು, ಪರಿಹಾರ ನೀಡಬೇಕಾದ ಮೊತ್ತವು ಕಡಿಮೆಯಾಗಿದ್ದುದು ಇಲ್ಲಿನ ಭೌಗೋಳಿಕ ರಚನೆಯ ವಿಶೇಷ ಕೊಡುಗೆಯಾಗಿತ್ತು. ವಾರ್ಷಿಕ ೩೦೦೦ ಮಿ.ಮೀ. ಮಳೆ ಬೀಳುವ ಈ ಪ್ರದೇಶವು ಅಣುಶಕ್ತಿ ಆಯೋಗವು ಗೊತ್ತುಪಡಿಸಿಕೊಂಡ ನೀತಿ ನಿಯಮಗಳ ಪ್ರಕಾರ, ಸೂಕ್ತ ಸ್ಥಳವಲ್ಲವೆಂದಾದರೂ ಕಾರ್ಯೋನ್ಮುಖವಾಗಿದೆ.[೨೪] ರಾಷ್ಟ್ರದ ೬ನೇ ಅಣುವಿದ್ಯುತ್ ಸ್ಥಾವರವಾಗಿ ಒಂದೊಂದು ೨೨೦ ಮೆಗಾವಾಟ್ಸ್ ಸಾಮರ್ಥ್ಯದ ಒಟ್ಟು ೮ ಘಟಕಗಳನ್ನು ನಿರ್ಮಿಸುವ ಬೃಹತ್ ಯೋಜನೆ ಇದಾಗಿದ್ದು, ಸದ್ಯದಲ್ಲಿ ೨ ಘಟಕಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿದೆ. ೨೦೨೦ರ ವೇಳೆಗೆ ಕೈಗಾ ಘಟಕವನ್ನು ಕಳಚಿ ಮರುಭೂಮಿಗೆ ಒಯ್ದು ಸುರಕ್ಷಿತ ಸಮಾಧಿ ಮಾಡಬೇಕಾಗುತ್ತದೆ. ಆ ತಂತ್ರಜ್ಞಾನ ನಮಗಿನ್ನೂ ಗೊತ್ತಿಲ್ಲ ! ಪಾಶ್ಚಿಮಾತ್ಯ ದೇಶಗಳಲ್ಲಿನ ಜನರು ತಮ್ಮ ತಪ್ಪಿನ (ಅಣುವಿಕಿರಣದಿಂದಾಗುವ ಅನಾಹುತಗಳು) ಅರಿವುಂಟಾಗಿದ್ದಕ್ಕೆ ಅಣುಶಕ್ತಿಗೆ ವಿದಾಯ ಹೇಳಲು ಹೊರಟಿದ್ದಾರೆ.[೨೫] ಅಲ್ಲಿನ ಶ್ರೀ ಸಾಮಾನ್ಯರೂ ಸುಶಿಕ್ಷಿತರೂ ಅಣುಶಕ್ತಿಯ ವಿರುದ್ಧ ಆಂದೋಲನಕ್ಕಿಳಿದಿರುವುದರಿಂದಲೇ ಉದ್ದಿಮೆಪತಿಗಳು ಅಣು ಘಟಕಗಳನ್ನು ಅರ್ಧಕ್ಕೇ ಕೈ ಬಿಡುತ್ತಿದ್ದಾರೆ. ಅಮೆರಿಕಾವೊಂದರಲ್ಲೇ ಸುಮಾರು ೬೫ ಅಣು ಸ್ಥಾವರಗಳನ್ನು ಮುಚ್ಚಲು ನಿರ್ಧರಿಸಲಾಗಿದೆ. ೧೯೭೪ ರಿಂದೀಚೆಗೆ ಅಲ್ಲಿ ಒಂದೇ ಒಂದು ಹೊಸ ಅಣುವಿದ್ಯುತ್ ಸ್ಥಾವರ ಯೋಜನೆಯನ್ನೂ ಕೈಗೆತ್ತಿಕೊಂಡಿಲ್ಲ. ೧೯೭೮ರ ನಂತರ ಎಲ್ಲೂ ನಿರ್ಮಾಣ ಕೆಲಸ ಜಾರಿಯಲ್ಲಿಲ್ಲ. ಸ್ವೀಡನ್ ಹಾಗೂ ಯುರೋಪಿನ ಇತರ ದೇಶಗಳಲ್ಲಿ ಅಣುಶಕ್ತಿ ಘಟಕಗಳ ಕಾರ್ಯಗಳನ್ನು ಕ್ರಮೇಣ ಮೊಟಕು ಮಾಡುತ್ತಾ ಹೋಗಿ, ಇನ್ನು ೨೫ ವರ್ಷಗಳಲ್ಲಿ ಪೂರ್ತಿ ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ.

ಈ ಎಲ್ಲ ವಿಷಯ ವಿವರಗಳು ನಮ್ಮ ವಿಜ್ಞಾನಿಗಳಿಗೆ, ರಾಜಕೀಯ ಧುರೀಣರಿಗೆ ಗೊತ್ತಿದ್ದರೂ ಇನ್ನು ೧೫ ವರ್ಷಗಳಲ್ಲಿ ₹ ೧೫೦೦೦ ಕೋಟಿ ಖರ್ಚು ಮಾಡಿ ಇಪ್ಪತ್ತೆರಡು ಅಣುವಿದ್ಯುತ್ ಸ್ಥಾವರಗಳನ್ನು ನಿರ್ಮಿಸುವ ಭಾರೀ ಯೋಜನೆ ಹಾಕಿಕೊಂಡಿದ್ದಾರೆ. ಇದಕ್ಕೆ ಶಕ್ತ ರಾಷ್ಟ್ರಗಳು ತಮಗೆ ಬೇಕಿಲ್ಲದ ಅಣುಶಕ್ತಿ ತಂತ್ರಜ್ಞಾನವನ್ನು

ಬಡರಾಷ್ಟ್ರಗಳಿಗೆ ಮಾರಲು ಹವಣಿಸುತ್ತಿರುವುದು ಪ್ರಮುಖ ಕಾರಣವಾಗಿದೆ. ಅಣುಶಕ್ತಿಯ ಲಾಭ ಪಡೆಯುವುದರ ಹಿಂದೆ ಸಾಕಷ್ಟು ಸ್ವಂತ ಲಾಭ ಮಾಡಿಕೊಳ್ಳುವ ಹುನ್ನಾರವನ್ನು ವಿಜ್ಞಾನಿಗಳು, ರಾಜಕೀಯ ಧುರೀಣರು, ಬಂಡವಾಳ ಶಾಹಿಗಳು ನಡೆಸುತ್ತಾರೆ. ಅಣುವಿದ್ಯುತ್ ವಿಕಿರಣಗಳ ಅಪಾಯದ ಬಗ್ಗೆ ಗೌಪ್ಯತೆ ಕಾಪಾಡಿಕೊಳ್ಳಲಾಗುತ್ತದೆ.[೨೬] ಅಣುಶಕ್ತಿಯ ಅಧ್ವಾನಗಳ ಬಗ್ಗೆ ಲೇಖನಗಳು, ಗ್ರಂಥಗಳು ಬರೆಯಲ್ಪಟ್ಟಿವೆ, ಭಾಷಣಗಳು, ವಿಶೇಷ ಉಪನ್ಯಾಸಗಳು ನಡೆದಿವೆ. ಸರ್ಕಾರಗಳು ಹಾಗೂ ಅಣುಶಕ್ತಿ ಇಲಾಖೆ ಇವುಗಳನ್ನು ಅಲ್ಲಗಳೆದಿಲ್ಲ, ಆದರೆ ಎಲ್ಲಿಯೂ ಅಣುವಿದ್ಯುತ್ ಸ್ಥಾವರಗಳ ಅಪಾಯದ ಕುರಿತು ಹೇಳಿಕೆ ನೀಡಿಲ್ಲ. ಬದಲೀ ಶಕ್ತಿ ಮೂಲಗಳ ಯೋಜನೆಗಳಿಂದ ವಿದ್ಯುತ್ ಪಡೆಯಬಹುದಾಗಿದ್ದರೂ ಅಣುವಿದ್ಯುತ್ ಸ್ಥಾವರ ಸ್ಥಾಪನೆಯನ್ನೇ ಕೈಗೊಳ್ಳುತ್ತಿರುವುದರ ಹಿಂದೆ ವಿದೇಶೀಯರ ಕೈವಾಡ, ದೇಶೀಯ ಸರ್ವಭಕ್ಷಕರ ಲಾಭದಾಸೆಗಳು ಒತ್ತಾಸೆಯಾಗಿರುವುದನ್ನು ಗುರುತಿಸಬಹುದು. ಇಷ್ಟೆಲ್ಲದರ ನಡುವೆಯೂ ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯಲ್ಲಿ 'ಕೈಗಾ ಅಣುವಿದ್ಯುತ್ ಸ್ಥಾವರ' ಯೋಜನೆಯನ್ನು ಕೈಗೆತ್ತಿಕೊಳ್ಳಲಾಯಿತು.

'ಕೈಗಾದಲ್ಲಿ ಅಣುವಿದ್ಯುತ್ ಸ್ಥಾವರ' ಸ್ಥಾಪನೆಗೆ ಪ್ರಧಾನಿ ದಿ. ರಾಜೀವ್ ಗಾಂಧಿಯವರ ನೇತೃತ್ವದ ಭಾರತ ಸರ್ಕಾರವು ಅನುಮತಿ ನೀಡಿತು. ಉತ್ತರ ಕನ್ನಡ ಜಿಲ್ಲೆಯಲ್ಲಿ ಇದನ್ನು ಗಟ್ಟಿಯಾಗಿ ವಿರೋಧಿಸಲಾಯಿತು. ಮಳೆಕಾಡಿನಲ್ಲಿ ಕಾಳಿ ಕಣಿವೆಯಲ್ಲಿ ಭೂಕಂಪ ಸಾಧ್ಯತೆ, ನೌಕಾನೆಲೆ ಬರುತ್ತಿರುವುದರಿಂದ ಮಿಲಿಟರಿ ಸೂಕ್ಷ್ಮ ಪ್ರದೇಶವಾಗುತ್ತಿರುವುದು ಹಾಗೂ ಎಲ್ಲಕ್ಕಿಂತ ಮುಖ್ಯವಾಗಿ ಅಣುವಿಕಿರಣದ ಭಾರೀ ದುಷ್ಪರಿಣಾಮಗಳ ಹಿನ್ನೆಲೆಯಲ್ಲಿ ಕೈಗಾದಲ್ಲಿ ಅಣುಸ್ಥಾವರ ಸ್ಥಾಪನೆ ಬೇಡ ಎಂದು ಜಿಲ್ಲೆಯ ಜನರು ಒತ್ತಾಯ ಮಾಡಿದರು. ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯಿತಿಗಳು, ತಾಲ್ಲೂಕು ಮತ್ತು ಜಿಲ್ಲಾ ಪಂಚಾಯಿತಿಗಳು ಅಣುಸ್ಥಾವರದ ವಿರುದ್ಧ ನಿರ್ಣಯ ಕೈಗೊಂಡವು. 'ಜಿಲ್ಲಾ ಪರಿಸರ ಸಂರಕ್ಷಣಾ ಸಮಿತಿ' ರಚನೆ ಆಯಿತು. ಬೆಂಗಳೂರಿನ 'ಅಣು ವಿರೋಧಿ ನಾಗರಿಕ ಶಕ್ತಿ' (ಅವಿನಾಶ) ಮತ್ತು ಸಿಟಿಜನ್ಸ್ ಫಾರ್ ಆಲ್ಟರ್‌ನೇಟೀವ್ಸ್ ಟು ನ್ಯೂಕ್ಲಿಯರ್ ಎನರ್ಜಿ (ಸಿಎಎನ್‌ಇ) ಮುಂತಾದ ಸುಮಾರು ೧೪೦ ಪರಿಸರವಾದಿ ಸಂಘಟನೆಗಳು ಅಣುಸ್ಥಾವರ ವಿರೋಧಿ ಹೋರಾಟಕ್ಕೆ ಬೆಂಬಲವಾಗಿ ನಿಂತವು. ಅದೇ ಸಮಯಕ್ಕೆ ನಡೆದ 'ಪಶ್ಚಿಮ ಘಟ್ಟ ಉಳಿಸಿ' ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ದೇಶದ ವಿವಿಧ ಭಾಗಗಳಿಂದ ಬಂದ ಕಾರ್ಯಕರ್ತರೂ ಕೈಗಾ ವಿರೋಧಿ ಚಳವಳಿಗೆ ಬೆಂಬಲ ಘೋಷಿಸಿದರು. ಫಿಲಿಫೈನ್ಸ್‌ನಲ್ಲಿ ಸೇರಿದ್ದ ೩೬ ರಾಷ್ಟ್ರಗಳ ವಿಜ್ಞಾನಿಗಳು ಕೈಗಾದಂತಹ ದಟ್ಟ ಹಚ್ಚ ಹಸಿರು ಕಾಡಿನಲ್ಲಿ ಅಣುಸ್ಥಾವರ ನಿರ್ಮಾಣವನ್ನು ವಿರೋಧಿಸಿದ್ದರು. ಅಣುವಿಕಿರಣದಿಂದ ಕೈಗಾ ಸುತ್ತಮುತ್ತಲಿನ ಪ್ರಾಣಿ ಹಾಗೂ ಸಸ್ಯ ಸಂಕುಲದ ಮೇಲುಂಟಾಗುವ ದುಷ್ಪರಿಣಾಮಗಳ ಬಗ್ಗೆ ಎಚ್ಚರಿಕೆ ನೀಡಿದ್ದರು.

ಕರಪತ್ರ, ಪಾದಯಾತ್ರೆ, ಉಪವಾಸ ಸತ್ಯಾಗ್ರಹ, ಸಾರ್ವಜನಿಕ ಸಭೆ ಸಮಾರಂಭಗಳು, ಮನವಿ ಸಲ್ಲಿಸುವ ಕಾರ್ಯಕ್ರಮಗಳು ರಾಜ್ಯಾದ್ಯಂತ ನಿರಂತರವಾಗಿ ನಡೆದವು. ಶಾಲಾ ಕಾಲೇಜುಗಳಲ್ಲಿ ಅಣುಪಾಶವೀ ಶಕ್ತಿಯ ಕುರಿತು ಉಪನ್ಯಾಸಗಳು ನಡೆದವು. ಹಲವರು ೨-೩ ವರ್ಷ ತಮ್ಮ ಪೂರ್ಣ ಸಮಯವನ್ನು ಹೋರಾಟಕ್ಕೆ ಮೀಸಲಿಟ್ಟರು. ಜನಾಂದೋಲನ ತೀವ್ರಗೊಳ್ಳುತ್ತಿರುವುದನ್ನು ಗಮನಿಸಿದ ರಾಜ್ಯ ಸರ್ಕಾರವು ಬೆಂಗಳೂರಿನಲ್ಲಿ ರಾಷ್ಟ್ರಮಟ್ಟದ ಮುಕ್ತ

ವಿಚಾರ ಸಂಕಿರಣ ಏರ್ಪಡಿಸಿ, ಸಾರ್ವಜನಿಕ ಚರ್ಚೆಗೆ ಮುಂದಾಯಿತು. ಪ್ರೊ. ಲಿಂಗೇಶ ಶರ್ಮ, ಡಾ. ಕುಸುಮಾ ಸೊರಬ (ಅನುಬಂಧ - ೨ರಲ್ಲಿ ವ್ಯಕ್ತಿಚಿತ್ರಣ) ಜೊತೆಗೂಡಿದ ಶಿವರಾಮ ಕಾರಂತರ (ಅನುಬಂಧ-೨ರಲ್ಲಿ ವ್ಯಕ್ತಿಚಿತ್ರಣ) ನೇತೃತ್ವದಲ್ಲಿ ಕೈಗಾ ಯೋಜನೆಯನ್ನು ವಿರೋಧಿಸಿ ಜನಪರ ಚಳವಳಿಗಳು ನಡೆದವು.[೨೭] ಚಲನಚಿತ್ರ ನಟರು (ಸುರೇಶ್ ಹೆಬ್ಳೀಕರ್, ನೀರ್ನಳ್ಳಿ ರಾಮಕೃಷ್ಣ), ವಿಜ್ಞಾನಿಗಳು (ಡಾ. ನಾಗರಾಜ), ಪತ್ರಕರ್ತ ನಾಗೇಶ ಹೆಗಡೆ, ಗಾಂಧೀವಾದಿ ದೊರೆಸ್ವಾಮಿ ಮುಂತಾದವರ ನೇತೃತ್ವದಲ್ಲಿ ಬೀದಿ ನಾಟಕ, ಹಾಡುಗಾರಿಕೆ, ಮೆರವಣಿಗೆಗಳ ಮೂಲಕ ಸ್ಥಳೀಯರ ಗಮನ ಸೆಳೆಯಲಾಯಿತು. ಖ್ಯಾತ ಪರಿಸರವಾದಿ ಮೇಧಾಪಾಟ್ಕರ್ ಮೆರವಣಿಗೆಯಲ್ಲಿ ಜೊತೆಗೂಡಿದ್ದು ಗಮನಾರ್ಹವಾಗಿತ್ತು.. ಚಳವಳಿಗಾರರು ಅಣುಸ್ಥಾವರ ನಿರ್ಮಾಣವಾಗುವ ಸ್ಥಳಕ್ಕೆ ಹೋಗಿ ಪ್ರತಿಭಟನೆ ನಡೆಸಿದರು. ಬಿಗಿ ಪೊಲೀಸ್ ಬಂದೋಬಸ್ತ್ ಇದ್ದರೂ ಕುಸುಮಾ ಸೊರಬ ಅವರು ದಾರಿ ಬದಲಿಸಿ (ಸ್ನೇಹ ಕುಂಜದ ವಿದ್ಯಾರ್ಥಿನಿಯರೊಂದಿಗೆ) ಕೊಂಡು ಅಣುಸ್ಥಾವರದ ಗುಮ್ಮಟ ಕಟ್ಟುವ ಸ್ಥಳಕ್ಕೆ ತಲುಪಿದರು. ಗುಮ್ಮಟ ಕಟ್ಟಲೆಂದು ತೋಡಿದ್ದ ಗುಂಡಿಗೆ ಧುಮುಕಿ ಅಲ್ಲಿ ಗಿಡನೆಟ್ಟು ತಮ್ಮ ವಿರೋಧವನ್ನು ವ್ಯಕ್ತಪಡಿಸಿ ಪೊಲೀಸರ ಬಂಧನಕ್ಕೊಳಗಾದರು. ಅಲ್ಲಿಯೇ ಪ್ರತಿಭಟನೆಯನ್ನು ಮುಂದುವರಿಸಿದ ಕುಸುಮಕ್ಕನ ತಂಡವು ಸಹ್ಯಾದ್ರಿ ವನಸಿರಿಯ ಕುರಿತ, ಉತ್ತರ ಕನ್ನಡದ ವನವೈಭವದ ಕುರಿತ ಚಂದದ ಹಾಡುಗಳು, ವೃಂದಗಾನಗಳನ್ನು ಹಾಡಿತು. ಕೈಗಾ ವಿರೋಧಿ ಘೋಷಣೆಗಳನ್ನು ಕೂಗಿತು. "ನಿರ್ಭಾವುಕ ಪೊಲೀಸರೆದುರು ದಟ್ಟ ಕಾಡಿನಲ್ಲಿ ಮಹಿಳೆಯರ ಧ್ವನಿ ಪ್ರತಿಧ್ವನಿಸತೊಡಗಿ, ಸಹ್ಯಾದ್ರಿ ಮಾತಾಡತೊಡಗಿತ್ತು."[೨೮] ಚಳವಳಿಯ ಮುಖಂಡರನ್ನು ಬಂಧಿಸಿ ಕಾರವಾರದಲ್ಲಿ ಬಿಡುಗಡೆ ಮಾಡಲಾಯಿತು.

೧೯೮೯ರಲ್ಲಿ ಕೈಗಾ ವಿರೋಧಿ ಚಳವಳಿಯು ನಡೆಯುತ್ತಿರುವಾಗಲೇ ಲೋಕಸಭಾ ಚುನಾವಣೆ ಬಂದಿತು. ಕುಸುಮಾ ಸೊರಬ ನೇತೃತ್ವದಲ್ಲಿ ಸಭೆ ಸೇರಿದ್ದ ಎಲ್ಲರೂ ಶಿವರಾಮ ಕಾರಂತರನ್ನು ಚುನಾವಣೆಗೆ ಸ್ಪರ್ಧಿಸುವಂತೆ ಒತ್ತಾಯಿಸಿ ಒಪ್ಪಿಸಿದರು. ಶಿವರಾಮ ಕಾರಂತರನ್ನು ದೇಶದಲ್ಲಿ ಮೊದಲ ಹಸಿರು ಅಭ್ಯರ್ಥಿಯಾಗಿ ಕೆನರ ಲೋಕಸಭಾ ಕ್ಷೇತ್ರದ ಚುನಾವಣೆಗೆ ನಿಲ್ಲಿಸಿದ್ದು, ಪರಿಸರ ಆಂದೋಲನಕ್ಕೆ ಒಂದು ಹೊಸ ತಿರುವು ಎನ್ನಲಾಗಿದೆ. ಚುನಾವಣೆಯ ಸಮಯದಲ್ಲಿ ವಿದೇಶ ಪ್ರವಾಸ ಕೈಗೊಂಡಿದ್ದ ಶಿವರಾಮ ಕಾರಂತರು ಸೋಲುಂಡರೂ (೨೫,೦೦೦ ಮತಗಳನ್ನು ಪಡೆದು ೩ನೇ ಸ್ಥಾನ) ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಜಕೀಯ ಪಕ್ಷಗಳು ಚುನಾವಣಾ ಪ್ರಣಾಳಿಕೆಯಲ್ಲಿ ಪರಿಸರ ಪೂರಕ ಯೋಜನೆಗಳನ್ನು ತರುತ್ತೇವೆ ಎಂದು ಪ್ರಕಟಿಸುವ ಮಟ್ಟಿಗೆ ಪರಿಸರದ ಪರಿಣಾಮುವು ತನ್ನ ಪ್ರಭಾವವನ್ನು ಬೀರಿತು.

ಶಿವರಾಮ ಕಾರಂತರ ನೇತೃತ್ವದ ಪರಿಸರ ಸಮಿತಿಯು ಸರ್ವೋಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ಹೂಡಿತ್ತು. ಕೇಂದ್ರ ಸರ್ಕಾರವು ಕೈಗಾ ಯೋಜನೆಯ ಬಗ್ಗೆ ಪುನರ್ ವಿಮರ್ಶೆ ಮಾಡಬೇಕು ಎಂದು ಸರ್ವೋಚ್ಚ ನ್ಯಾಯಾಲಯವು ತಡೆಯಾಜ್ಞೆ ನೀಡಿದ್ದು ಇಲ್ಲಿ ಉಲ್ಲೇಖನೀಯ. ಹಲವರು ಕೈಗಾ ಪರ ವಿರೋಧವಾಗಿ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟಪಡಿಸಿದರು. ಉದಾಹರಣೆಗೆ : ೧. 'ಕೈಗಾ ಸ್ಥಾವರದಿಂದ ತುಸು ಅಪಾಯ ಇದೆ ಅಂತ ಆದರೂ ನಿಲ್ಲಿಸುವ ಹೋರಾಟದಲ್ಲಿ ನಾನು ಮೊದಲಿಗನಾಗುತ್ತೇನೆ'. ದಿ. ರಾಮಕೃಷ್ಣ ಹೆಗಡೆ (ಕೈಗಾ

ಯೋಜನೆಯ ಜನಕ, ಮಾಜಿ ಮುಖ್ಯಮಂತ್ರಿ) ೨. 'ಕೈಗಾ ಒಂದು ಭಯಾನಕ ಸ್ಥಾವರ'- ಶಿವರಾಮ ಕಾರಂತ ೩. 'ಕೈಗಾ ಯಾರ ಪ್ರತಿಷ್ಠೆಯ ಪ್ರಶ್ನೆಯೂ ಆಗಬಾರದು' - ಪೇಜಾವರದ ವಿಶ್ವೇಶ್ವರತೀರ್ಥ ಶ್ರೀಗಳವರು ೪. 'ಜೀವತೆತ್ತಾದರೂ ಕೈಗಾ ನಿಲ್ಲಿಸಬೇಕು' - ಮಹಮದ್ ಗೌಸ್ ಇಸ್ಮಾಯಿಲ್ ಶೇಖ್ (ಆಗಿನ ಕಾರವಾರ ನಗರಸಭೆ ಅಧ್ಯಕ್ಷರು) ೫. 'ಕಳಪೆ ಕಾಮಗಾರಿಯ ಕೈಗಾ ನಮಗೆ ಬೇಡವೇ ಬೇಡ' - ಪ್ರಭಾಕರ ರಾಣೆ (ಮಾಜಿ ಸಚಿವರು ಆಗಿನ ಕೈಗಾಕ್ಷೇತ್ರದ ಶಾಸಕರು) ೬. 'ಕೈಗಾ ಒಂದು ಬೇಜವಾಬ್ದಾರಿ' ಪ್ರಯೋಗ - ಆರ್.ಎನ್. ನಾಯ್ಕ (ಆಗಿನ ಉತ್ತರ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರು) ೭. 'ಕೈಗಾ ಮರಣ ಗಂಟೆ' ಎನ್. ಬಿ. ಕಾಮತ್ ೮. 'ಭ್ರಷ್ಟಾಚಾರದ ಹುಚ್ಚು ಹೊಳೆ ಹರಿಯುತ್ತಿರುವ ಈ ದೇಶದಲ್ಲಿ ಅಣುಸ್ಥಾವರದ ಕಲ್ಪನೆಯೇ ಬಹಳ ದುಬಾರಿ' ಆರ್.ವಿ. ದೇಶಪಾಂಡೆ, ಮುಂತಾದವರು.[೨೯] ಹೀಗೆಯೇ ಮಾಧ್ಯಮವೊಂದರ (ತರಂಗ, ಅಕ್ಟೋಬರ್ ೧೯೯೪) ಸಮೀಕ್ಷೆಯ ಪ್ರಕಾರ ೨೦೩೪ ಪತ್ರಗಳಲ್ಲಿ ೨೦೩೧ ಪತ್ರಗಳು ಕೈಗಾ ಅಣುಸ್ಥಾವರವನ್ನು ಬೇಡವೇ ಬೇಡ ಎಂದು ತಿಳಿಸಿದ್ದವು. ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಯೋಜನೆಯ ನಿರಾಶ್ರಿತರು ಹಾಗೂ ಕಾರವಾರ ಮತ್ತು ಕೈಗಾ ಸುತ್ತಮುತ್ತಲಿನ ಜನರನ್ನು ಪ್ರಶ್ನಾವಳಿಯ ಮೂಲಕ ಸಮೀಕ್ಷಿಸಿದಾಗ ಯೋಜನೆಯ ಪರವಾಗಿದ್ದವರ ಸಂಖ್ಯೆಯು ಜಾಸ್ತಿಯಾಗಿದ್ದುದು ತಿಳಿದುಬರುತ್ತದೆ. ಮಾಧ್ಯಮದ ಸಮೀಕ್ಷೆ ಹಾಗೂ ಕ್ಷೇತ್ರಕಾರ್ಯ ಪ್ರಶ್ನಾವಳಿಯ ಸಮೀಕ್ಷೆಗಳನ್ನು ತೌಲನಿಕವಾಗಿ ಅಭ್ಯಸಿಸಿ ವಿಶ್ಲೇಷಣೆಗೊಳಪಡಿಸಿದಾಗ ಯೋಜನಾ ಪ್ರದೇಶದಿಂದ ದೂರವಿದ್ದವರು ಅಣುವಿಕಿರಣದ ಅಪಾಯಗಳ ಬಗ್ಗೆ ತಿಳಿದು ಅಣುಸ್ಥಾವರ ಬೇಡವೆಂದರು. ಈ ಮೊದಲೇ ಗುರುತಿಸಿದಂತೆ ನಿರಾಶ್ರಿತರ ಸಂಖ್ಯೆ ಕಡಿಮೆಯಿದ್ದಿತು ಹಾಗೂ ಅವರೆಲ್ಲ ತೀರಾ ಹಿಂದುಳಿದವರಾಗಿದ್ದು, ಯಾವುದೇ ಒಂದು ಕೋಮಿಗೆ ಸೇರಿದವರಾಗಿರಲಿಲ್ಲ. ಅವರಿಗೆ ಪರಿಹಾರ ಧನ ಹಾಗೂ ಉದ್ಯೋಗ ನೀಡಿಕೆ ಭರವಸೆಗಳು ಪ್ರಮುಖವಾಗಿ ಕಂಡವು. ಇನ್ನು ಸ್ಥಳೀಯರು ಕೈಗಾ ಯೋಜನೆಯನ್ನು ಬೃಹತ್ ಉದ್ದಿಮೆಯಂತೆ ಭಾವಿಸಿ ಇಲ್ಲಿಯವರಿಗೆ ಹೆಚ್ಚು ಹೆಚ್ಚು ಉದ್ಯೋಗಾವಕಾಶಗಳು ದೊರೆಯುತ್ತವೆಂದು ಭಾವಿಸಿದ್ದರು. ಭೌಗೋಳಿಕವಾಗಿ ಘಟ್ಟದ ಮೇಲೆ ಕೈಗಾ ಯೋಜನೆ, ಚಳವಳಿ ನಡೆದದ್ದು ಬಹುಪಾಲು ಕರಾವಳಿಯ ಕಾರವಾರದಲ್ಲಿ, ಚಳವಳಿಯಲ್ಲಿ ಭಾಗವಹಿಸಿದ್ದವರು ಬಹುಪಾಲು ಹೊರಗಿನವರು ! ನಮಗೆ ಅನುಕೂಲವಾಗುವ ಯೋಜನೆಯನ್ನು ತಡೆಯಲು ಬಂದಿದ್ದಾರೆಂದು ತಿಳಿದು ಸ್ಥಳೀಯರು ಸಹಕರಿಸಿದುದು ಕಡಿಮೆ. ಆದರೆ ಸ್ಥಳೀಯರಲ್ಲಿಯೇ ಕೆಲವರು ಕೈಗಾ ಯೋಜನೆಯನ್ನು ವಿರೋಧಿಸಿ ಹೇಳಿಕೆಗಳನ್ನು ನೀಡಿದುದನ್ನು ಈಗಾಗಲೇ ಉದಾಹರಿಸಲಾಗಿದೆ. ರಾಜಕೀಯ ಪಕ್ಷಗಳ ನಾಯಕರ ವಿಭಿನ್ನ ಹೇಳಿಕೆಗಳೂ ಸ್ಥಳೀಯರನ್ನು ದಿಕ್ಕು ತಪ್ಪಿಸಿರುವುದನ್ನು ಗುರುತಿಸಬಹುದಾಗಿದೆ.[೩೦]

ಜನರ ವಿರೋಧವನ್ನು ನಿರ್ಲಕ್ಷಿಸಿ ಮುಂದುವರೆದ ಕೈಗಾ ಅಣುಸ್ಥಾವರದ ನಿರ್ಮಾಣ ಹಂತದಲ್ಲಿ ಗುಮ್ಮಟದ ಒಂದು ಭಾಗವು ೧೯೯೪ರ ಏಪ್ರಿಲ್ ೧೩ ರಂದು ಕುಸಿದು ಬಿದ್ದಿತು.[೩೧] ಹೊರ ರಾಜ್ಯಗಳಿಂದ ಬಂದು ದುಡಿಯುತ್ತಿದ್ದ ಕೂಲಿ ಕಾರ್ಮಿಕರನ್ನು ಅಧಿಕಾರ ಶಾಹಿ ವ್ಯವಸ್ಥೆ ನಿರ್ದಯವಾಗಿ ದುಡಿಸಿಕೊಳ್ಳುತ್ತಿದ್ದುದು, ಕಾರ್ಮಿಕರಿಗೆ ಉಂಟಾಗಿದ್ದ ಬೇಸರ, ಕಡಿಮೆ ಕೂಲಿ ಕಾರಣವೆಂದು ದಾಖಲೆಗಳು ಹೇಳುತ್ತವೆ. ಗುಮ್ಮಟ ನಿರ್ಮಾಣದಲ್ಲಿನ ತಾಂತ್ರಿಕ ದೋಷ,

ಬಳಸಿದ ವಸ್ತುಗಳ ಪ್ರಮಾಣದಲ್ಲಿ ವ್ಯತ್ಯಯಫಾಗಿದ್ದುದು ನಿಜವಾದ ಕಾರಣವೆಂದು ತಿಳಿದಿದ್ದರೂ, ಅದನ್ನು ಹೆಚ್ಚು ಬೆಳಕಿಗೆ ತರದೆ ಕಾರ್ಮಿಕರನ್ನು ಬಲಿಪಶುಗಳನ್ನಾಗಿಸಿರುವುದು ಕಂಡುಬರುತ್ತದೆ. ಗುಮ್ಮಟವು ಕುಸಿದು ಬಿದ್ದ ಘಟನೆಯ ನಂತರ ಕೈಗಾ ಪರವಾಗಿದ್ದವರೂ 'ಕೈಗಾ ಕೈಬಿಡಿ' ಎಂಬ ಘೋಷಣೆಯನ್ನು ಹೊತ್ತು ಚಳವಳಿಗೆ ಬೆಂಬಲವಾಗಿ ನಿಂತರು. ಮತ್ತೊಮ್ಮೆ ಪರಮಾಣು ವಿರೋಧಿ ಆಂದೋಲನಗಳು ಕಾಣಿಸಿಕೊಂಡವು. ದುರಂತದಲ್ಲಾದ ಅನಾಹುತಗಳ ಕುರಿತಾಗಿ ಬೆಂಗಳೂರಿನಲ್ಲಿ ಪತ್ರಿಕಾಗೋಷ್ಠಿಯನ್ನು ಕರೆಯಲಾಯಿತು. ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಬೆಂಗಳೂರು ಇವರ ತಂಡವು ಉತ್ತರ ಕನ್ನಡ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘ, ಶಿರಸಿ ಇವರ ತಂಡದ ಜೊತೆಗೂಡಿ ೧೯೯೬ರ ಸೆಪ್ಟಂಬರ್ ೨೭ ಮತ್ತು ೨೮ರ ಎರಡು ದಿನಗಳ ಅಧ್ಯಯನ ಪ್ರವಾಸ ಮಾಡಿತು. (ಪ್ರವಾಸದ ನಂತರದ ಮಾಹಿತಿ ವಿವರಗಳು ಲಭ್ಯವಾಗಿರುವುದಿಲ್ಲ) ಇದೇ ಸಂದರ್ಭದಲ್ಲಿ 'ಅಣುಶಕ್ತಿ ವಿರೋಧಿ ಸೈಕಲ್ ಜಾಥಾ' ಜಿಲ್ಲೆಯಲ್ಲಿ ಸಂಚರಿಸಿತು. ಶಿರಸಿಯ ಸ್ವರ್ಣವಲ್ಲಿ ಹಾಗೂ ಉಡುಪಿಯ ಪೇಜಾವರ ಮಠಾಧೀಶರೂ ಕೈಗಾ ವಿರೋಧಿ ಚಳವಳಿಯಲ್ಲಿ ಪಾಲ್ಗೊಂಡರು.[೩೨] ಈ ಎಲ್ಲ ಘಟನೆಗಳಲ್ಲೂ ಡಾ. ಕುಸುಮಾ ಸೊರಬ ಅವರ ಪಾತ್ರ ಗಮನಾರ್ಹವಾಗಿತ್ತು. ೧೯೯೭-೯೮ರಲ್ಲಿ ಅವಿನಾಶ ಹಾಗೂ ಜಿಲ್ಲಾ ಪರಿಸರ ಸಮಿತಿ ಕೈಗಾ ಸುತ್ತಲ ಹಳ್ಳಿಗಳ (ನಾಲ್ಕು ತಾಲೂಕುಗಳು) ಆರೋಗ್ಯ ಸಮೀಕ್ಷೆ ನಡೆಸಿದವು. ಇದರಿಂದ ಜನಜಾಗೃತಿ ಉಂಟಾಗಿ ಸವಲತ್ತುಗಳಿಗಾಗಿ ಒತ್ತಾಯಿಸುವಂತಾಯಿತು. ನಿರಂತರವಾಗಿ ಸುರಕ್ಷತೆಯ ಎಚ್ಚರಿಕೆಗಳೊಂದಿಗೆ ಕೈಗಾ ಅಣುವಿದ್ಯುತ್ ಸ್ಥಾವರವು ಉತ್ತರ ಕನ್ನಡ ಜಿಲ್ಲೆಯ ವಿವಾದಿತ ಯೋಜನೆಗಳಲ್ಲಿ ಒಂದಾಗಿ ₹ ೨೫ ಸಾವಿರ ಕೋಟಿ ವೆಚ್ಚದ ಬೃಹತ್ ಯೋಜನೆಯಾಗಿ ತಲೆ ಎತ್ತಿದೆ. ೨೦೦೦ನೇ ಇಸವಿ ಜನವರಿ ೫ ರಂದು ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿಯವರಿಂದ ಉದ್ಘಾಟನೆಗೊಂಡು ೨೨೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆರಂಭಿಸಿ, ಉತ್ಪಾದನಾ ಸಾಮರ್ಥ್ಯ ಹೆಚ್ಚಿಸಿಕೊಳ್ಳುವತ್ತ ಸಾಗಿದೆ.[೩೩]

'ಪರಿಸರ ಉಳಿಸಿ, ಅಭಿವೃದ್ಧಿಯನ್ನು ನಡೆಸಿ' ಎನ್ನುವ ಅಧ್ಯಯನದ ನೆಲೆಯಿಂದ ಕೈಗಾ ಅಣುವಿದ್ಯುತ್ ಸ್ಥಾವರ ವಿರೋಧದ ಪರಿಸರ ಚಳವಳಿಯನ್ನು ನೋಡುವುದಾದರೆ ಪರಿಸರವನ್ನಷ್ಟೇ ಪ್ರಮುಖ ವಸ್ತುವನ್ನಾಗಿಟ್ಟುಕೊಂಡು ಬೆಂಬಲಕ್ಕೆ ನಿಂತ ಮಠಾಧೀಶರು, ರಾಜಕಾರಣಿಗಳು ಹಾಗೂ ನಿರಾಶ್ರಿತರಾದವರು ಭಾಗವಹಿಸಿದ್ದರೆಂಬುದನ್ನು ಅನುಮಾನಿಸಲಾಗಿದೆ. 'ಕೈಗಾ ಕೈಗಾ ಎಲ್ಲಿಯವರೆಗೆ - ಕ್ಯಾನ್ಸರ್ ಹತ್ತಿ ಸಾಯೋವರೆಗೆ', 'ಅಣುಶಕ್ತಿ ದುಬಾರಿ, ಬೇಡ ಅದರ ಸವಾರಿ' ಎಂಬ ಎರಡು ದಶಕಗಳ ಹಿಂದಿನ ಕೈಗಾ ವಿರೋಧಿ ಚಳವಳಿ ಕಾಲದ ಘೋಷಣೆಗಳು ಇಂದಿಗೂ ಪರಿಸರವಾದಿ ಸಂಘಟನೆಗಳ ಎಚ್ಚರಿಕೆಯ ಮಾತುಗಳಾಗಿ, ಬರವಣಿಗೆಗಳಾಗಿ ಮುಂದುವರಿದಿವೆ ಅಷ್ಟೆ. ಕೈಗಾ ಅಣುವಿದ್ಯುತ್ ಸ್ಥಾವರದೊಳಗಿನ ಅಧಿಕಾರಿಗಳು, ನೌಕರ ಸಂಘಟನೆಗಳು ಸುತ್ತಮುತ್ತಲಿನ ಹಾಗೂ ಜಿಲ್ಲೆಯ ಜನರೊಂದಿಗೆ ಸಾಂಸ್ಕೃತಿಕ ಸಂಬಂಧ ಬೆಳೆಸಿವೆ. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಸ್ಪರ್ಧೆಗಳನ್ನು ನಿರಂತರವಾಗಿ ನಡೆಸುತ್ತಿವೆ. ಹೊರಗಡೆ ನಡೆಯುವ ಕಾರ್ಯಕ್ರಮಗಳಿಗೆ ಹಾಗೂ ಜಿಲ್ಲಾಡಳಿತವು ನಡೆಸುವ ಸ್ಪರ್ಧೆಗಳಿಗೆ ಪ್ರಾಯೋಜಕತ್ವವನ್ನು ಎನ್‌ಪಿಟಿಸಿಎಲ್ (ನ್ಯಾಷನಲ್ ನ್ಯೂಕ್ಲಿಯರ್ ಪವರ್ ಟ್ರಾನ್ಸ್‌ಮಿಷನ್ ಕಾರ್ಪೋರೇಷನ್ ಲಿ.,) ನೀಡುತ್ತಿದೆ. ಜೊತೆಗೆ ಕೈಗಾ ಅಣುಸ್ಥಾವರವು ತನ್ನ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿಕೊಳ್ಳಲು ಇದ್ದ ಎರಡು ಘಟಕ (ಗುಮ್ಮಟ)ಗಳನ್ನು ೬-ಆರವರೆಗೆ ಕಟ್ಟಿಕೊಳ್ಳುವತ್ತ

ಮುನ್ನಡೆದಿದೆ. ಅಧಿಕಾರಿಗಳು, ನೌಕರರಿಗಾಗಿ ದಟ್ಟ ಅರಣ್ಯದೊಳಗೆ ಬಹುಮಹಡಿ ಕಾಂಕ್ರೀಟ್ ಕಟ್ಟಡಗಳು ಕೈಗಾ ಸುತ್ತಮುತ್ತಲೂ ತಲೆ ಎತ್ತಿವೆ. ಕೈಗಾದಿಂದ ಜಿಲ್ಲೆಯ ಹಾಗೂ ಹೊರಗಿನ ಇತರೆಡೆಗಳಿಗೆ ಸಾರಿಗೆ ಸಂಪರ್ಕವೇರ್ಪಟ್ಟಿದೆ. ಈಗಲೂ ಅಲ್ಲಿಗೆ ಯೋಜನೆಯ ಸಂಬಂಧವಾಗಿ ಅಗತ್ಯವಿರುವ ಯಂತ್ರಗಳು ಹಾಗೂ ಇನ್ನಿತರೆ ಸಾಧನಗಳನ್ನು ಬೃಹತ್ ಟ್ರಾಲಿಗಳಲ್ಲಿ ಸಾಗಿಸಲಾಗುತ್ತಿದೆ. ಯಾರೂ ತಡೆದು, ಕೇಳಿದ ಉದಾಹರಣೆಗಳಿಲ್ಲ. ಸ್ಥಳೀಯರ ಸಹಕಾರವಿಲ್ಲದೇ ಯಾವ ಚಳವಳಿಯೂ ಬಹಳ ದಿನ ಬಾಳಲಾರದು, ಅಂದರೆ ಕೈಗಾ ಅಣುಸ್ಥಾವರ ವಿರೋಧಿಸಿ ಸ್ಥಳೀಯರು ಸಹಕಾರ ನೀಡಿದುದು ಕಡಿಮೆ ಎಂಬುದನ್ನು ಕಂಡುಕೊಳ್ಳಲಾಗಿದೆ.[೩೪] ಸ್ಥಳೀಯರು ಏಕೆ ಸಹಕಾರ ನೀಡಲಿಲ್ಲ ಎಂಬ ಪ್ರಶ್ನೆಯನ್ನೆತ್ತಿಕೊಂಡು ಈಗಾಗಲೇ ಚರ್ಚಿಸಲಾಗಿದೆ. ಒಂದು ಬೃಹತ್ ಯೋಜನೆಯಾಗಿ ಕೈಗಾ ಅಣುವಿದ್ಯುತ್ ಸ್ಥಾವರವನ್ನು ಗುರುತಿಸಿದ್ದಾರೆಯೇ ವಿನಾ ಚಳವಳಿಯ ಕಾಲದಲ್ಲಿ ಕೂಗಿದ ಘೋಷಣೆಗಳು ಯಾವುವೂ ಇತ್ತೀಚಿನ ಪೀಳಿಗೆಯ ಸ್ಥಳೀಯರಲ್ಲಿ ನೆನಪಾಗಿ ಉಳಿದಿರುವುದು ಕಂಡುಬಂದಿಲ್ಲ. ಆನಂತರದಲ್ಲಿ ನಡೆದ ತದಡಿ, ಹಣಕೋಣ ಉಷ್ಣವಿದ್ಯುತ್ ಸ್ಥಾವರಗಳ ವಿರೋಧದ ಚಳವಳಿಗಳ ಕಾಲದಲ್ಲಿಯೂ ಕೈಗಾ ಪ್ರಾಜೆಕ್ಟ್‌ನ ಸಾಧಕ ಬಾಧಕಗಳ ಕುರಿತು ಚರ್ಚಿಸಿದ, ಪ್ರತ್ಯೇಕವಾಗಿ ಸೆಮಿನಾರ್‌ಗಳನ್ನು ಏರ್ಪಡಿಸಿದ ಉದಾಹರಣೆಗಳಿಲ್ಲ. ಅಂದರೆ ಸ್ಥಳೀಯರು ಕೈಗಾ ಪ್ರಾಜೆಕ್ಟ್ ಅನ್ನು ಒಪ್ಪಿಕೊಂಡಿದ್ದಾರೆ ಎಂದಾಗಲಿ ಅಥವಾ ತಿರಸ್ಕರಿಸಿದ್ದಾರೆ ಎಂದಾಗಲಿ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ. ಜಾಗತಿಕವಾಗಿ ರಷ್ಯಾದ ಚೆರ್ನೋಬಲ್ ಅಣುಸ್ಥಾವರ ದುರಂತದಂತಹ 'ಅಣುವಿಕಿರಣ'ದ ಅವಘಡಗಳನ್ನು ಗಮನಿಸಿದಾಗ 'ಕೈಗಾ' ಇಂದಿಗೂ ಚರ್ಚೆಯ ವಸ್ತುವಾಗಿಯೇ ಉಳಿದಿದೆ ಎನ್ನುವುದು ಸತ್ಯವಾಗಿದೆ.

೪.೪ ಸೀಬರ್ಡ್ ನೌಕಾನೆಲೆ

ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧದ ಅಭಿವೃದ್ಧಿ ಯೋಜನೆಗಳಲ್ಲಿ ಸೀಬರ್ಡ್ ನೌಕಾನೆಲೆ ಸ್ಥಾಪನೆಯು ಮುಖ್ಯವಾದುದು. ಭೌಗೋಳಿಕವಾಗಿ ಕಾರವಾರಕ್ಕೆ ಹೊಂದಿಕೊಂಡಿರುವ ಕರಾವಳಿ ತೀರವು ನೌಕಾನೆಲೆಯ ನಿರ್ಮಾಣಕ್ಕೆ ಅತ್ಯಂತ ಸೂಕ್ತವಾದ ಸ್ಥಳ ಎಂಬುದನ್ನು ನೌಕಾಪಡೆಯ ಮಾಜಿ ಮುಖ್ಯಸ್ಥ ಮತ್ತು ಸೀಬರ್ಡ್ ಯೋಜನೆಯ ರೂವಾರಿ ಅಡ್ಮಿರಲ್ ಆಸ್ಕರ್ ಸ್ಟ್ಯಾನ್ಲಿ ದಾವ್‌ಸನ್ ಅವರು ಗುರುತಿಸಿ ಭಾರತ ಸರ್ಕಾರಕ್ಕೆ ವರದಿ ಸಲ್ಲಿಸಿದ್ದರು. ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ [(ಕ.ನಿ.ವ. (ಸಿ.ಆರ್.ಜಡ್)]ಯಲ್ಲಿಯೂ ಸಮುದ್ರದಡದಲ್ಲಿ ರಕ್ಷಣಾ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳಿಗೆ ಅವಕಾಶವಿದ್ದಿತು.[೩೫]

'ಸೀಬರ್ಡ್' ಭಾರತೀಯ ನೌಕಾಪಡೆಯ ಮಹತ್ವಾಕಾಂಕ್ಷೆಯ ಯೋಜನೆ, ಮುಂಬಯಿ ಭದ್ರತಾ ದೃಷ್ಟಿಯಿಂದ ಸೂಕ್ತ ಸ್ಥಳವಲ್ಲವೆಂದು ತೀರ್ಮಾನಿಸಿ, ಸೀಬರ್ಡ್ ಯೋಜನೆಯನ್ನು ಕಾರವಾರಕ್ಕೆ ಸ್ಥಳಾಂತರಿಸಲಾಯಿತು. ಮೂರು ದಶಕಗಳ ಹಿಂದಿನಿಂದಲೂ ಕಾರವಾರದ ಕಡಲ ತಡಿಯಲ್ಲಿ ಬೃಹತ್ ಆಕಾರದ 'ಸೀಬರ್ಡ್' ಬಂದು ನೆಲೆಯೂರುವ ಸುದ್ದಿ ಜನರನ್ನು ಕಂಗೆಡಿಸಿತ್ತು. ಆದರೆ ಇದು ವಿನಾಶಕಾರವಲ್ಲ, ವಿದೇಶೀ ಜನರದ್ದೂ ಅಲ್ಲ, ಬದಲಾಗಿ ದೇಶದ ಹಿತ ರಕ್ಷಣೆಯ ಒಂದು ನೆಲೆಯೇ ಸೀಬರ್ಡ್ ಎಂದು ತಿಳಿದಾಗ ಸಾಮೂಹಿಕವಾಗಿ ಹೆಪ್ಪುಗಟ್ಟಿದ್ದ ನಿಟ್ಟುಸಿರು ನಿರಾಳವಾಯಿತು. ಯೋಜನೆಗೆ ಸ್ಥಳೀಯರ ನೆಲ, ಮನೆ ಬೇಕೆಂದಾಗಲೂ ಯೋಜನೆಯನ್ನು ಜನರು ಏಕಾಏಕಿ ವಿರೋಧಿಸಿಲ್ಲ. ಉತ್ತರ ಕನ್ನಡದ ಅಭಿವೃದ್ಧಿ

ಇತಿಹಾಸದಲ್ಲಿ ಪ್ರಥಮ ದಾಖಲೆಯಿದು. "ಯೋಜನೆ ಬರಲಿ, ಆದರೆ ನಮ್ಮ ತ್ಯಾಗದ ಬೆಲೆ ಮೌಲಿಕವಾಗಿ ನಿಗದಿಯಾಗಲಿ, ನಮ್ಮನ್ನು ಸುರಕ್ಷಿತ ತಾಣಗಳಿಗೆ ಸ್ಥಳಾಂತರಿಸಿ, ಉತ್ತಮ ಸೌಲಭ್ಯ, ನ್ಯಾಯಬದ್ಧ ಪರಿಹಾರ ನೀಡಲಿ" ಎಂಬುದು ಸಂತ್ರಸ್ತರಾಗಲಿರುವವರ ಅಪೇಕ್ಷೆಯಾಗಿತ್ತು. ಭಾರತೀಯ ನೌಕಾಪಡೆ ಇದನ್ನು ಗೌರವದಿಂದಲೇ ಸ್ವೀಕರಿಸಿತು, ಯೋಜನೆಯ ಒಟ್ಟು ವೆಚ್ಚದಲ್ಲಿ ಶೇಕಡಾ ೧೦ರಷ್ಟನ್ನು ಪರಿಹಾರ ಪುನರ್ವಸತಿಗಳಿಗಾಗಿ ಮೀಸಲಿಟ್ಟಿತು. ರಾಜ್ಯಸರ್ಕಾರ ಈ ಪರಿಹಾರ ಕಾರ್ಯಾಚರಣೆಯಲ್ಲಿ ಜನರಿಗೆ ಒಪ್ಪುವ ದಾರಿ ತುಳಿಯದೆ ಎಡವಿತು.[೩೬]

ಸೀಬರ್ಡ್ ನೌಕಾನೆಲೆ ಸ್ಥಾಪನೆಯು ಇದ್ದಕ್ಕಿದ್ದಂತೆ ಆದುದಲ್ಲ. ಇದಕ್ಕೊಂದು ಚಾರಿತ್ರಿಕ ಹಿನ್ನೆಲೆಯಿದೆ. ೧೯೫೧ರಲ್ಲಿಯೇ ಈ ಯೋಜನೆ ಚರ್ಚೆಗೆ ಬಂದಿತ್ತು. ೧೯೫೯ರ ಜುಲೈ ೧೮ರಂದು ಎಲ್ಲ ದೃಷ್ಟಿಯಿಂದಲೂ ಅಗತ್ಯ ಅನುಕೂಲಗಳನ್ನು ಹೊಂದಿರುವ ಕಾರವಾರದಲ್ಲಿ ದ್ವಿತೀಯ ನೌಕಾ ನಿರ್ಮಾಣ ಕೇಂದ್ರವನ್ನು ಸ್ಥಾಪಿಸಬೇಕೆಂದು ಭಾರತ ಸರ್ಕಾರವನ್ನು ಒತ್ತಾಯಪಡಿಸುವ ನಿರ್ಣಯವೊಂದನ್ನು ಬೆಳಗಾವಿಯಲ್ಲಿ ಸೇರಿದ್ದ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಬಹಿರಂಗ ಅಧಿವೇಶನದಲ್ಲಿ ಅಂಗೀಕರಿಸಲಾಗಿತ್ತು.[೩೭] ೧೯೭೧ರಲ್ಲಿ ಈ ಯೋಜನೆಯ ಪ್ರಕ್ರಿಯೆಗೆ ಚಾಲನೆ ದೊರೆಯಿತು. ೧೯೮೪ರಲ್ಲಿ ಕಾರವಾರದಲ್ಲಿ ನೇವಲ್ ಆಫೀಸ್ ತೆರೆಯಲ್ಪಟ್ಟಿತು. ಅದೇ ವರ್ಷ ದಿ. ಪ್ರಧಾನಿ ಇಂದಿರಾಗಾಂಧಿಯವರು ಯೋಜನೆಗೆ ತಾತ್ತ್ವಿಕ ಒಪ್ಪಿಗೆಯನ್ನು ನೀಡಿದರು. ನೌಕಾನೆಲೆಯ ರೂಪುರೇಖೆಗಳನ್ನು ಸಿದ್ಧಗೊಳಿಸಲಾಯಿತು. ಅಡ್ಮಿರಲ್ ದಾವ್‌ಸನ್ ಅವರೇ ಇವರ ನೇತೃತ್ವವನ್ನು ವಹಿಸಿದ್ದರು. ೧೯೮೬ರ ಅಕ್ಟೋಬರ್ ೨೪ರಂದು ಆಗಿನ ಪ್ರಧಾನಿ ರಾಜೀವ್‌ಗಾಂಧಿಯವರು ಸೀಬರ್ಡ್ ಯೋಜನೆಗೆ ಅಧಿಕೃತ ಅಡಿಗಲ್ಲು ಹಾಕಿದರು.[೩೮] ಕೇಂದ್ರ ಸರ್ಕಾರದ ಯೋಜಿತ ಆದೇಶಗಳ ಜಾರಿಯಲ್ಲಿ ಸ್ಥಳ, ಫಸಲು, ಮನೆಗಳ ಮೌಲ್ಯ ಅಳೆಯುವಲ್ಲಿ, ಜನರ ಅಹವಾಲುಗಳಿಗೆ ಸ್ಪಂದಿಸುವಲ್ಲಿ ರಾಜಕಾರಣ ನಡೆಯಿತು. ರಾಜ್ಯ ಸರ್ಕಾರದ ಈ ವರ್ತನೆ ಜನರಲ್ಲಿ ವಿರೋಧಿ ಭಾವನೆಗಳನ್ನು ಕೆದಕಿತು. ಕೋರ್ಟಿನಲ್ಲಿ ದಾವೆ ಹೂಡಿದರು. ಸೀಬರ್ಡ್ ಯೋಜನೆ ನೆನೆಗುದಿಗೆ ಬಿತ್ತು.[೩೯] ಇನ್ನೇನು ಯೋಜನೆ ಕೈ ಬಿಟ್ಟಂತೆಯೇ ಎನ್ನುವಾಗ ೧೨ ವರ್ಷಗಳ ನಂತರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಬಿ.ಜೆ.ಪಿ. ಸಮ್ಮಿಶ್ರ ಸರ್ಕಾರದ ರಕ್ಷಣಾ ಮಂತ್ರಿ ಜಾರ್ಜ್ ಫರ್ನಾಂಡೀಸ್ ೧೯೯೮ರ ಆಗಸ್ಟ್ ೬ರಂದು ರಾಜ್ಯ ಸರ್ಕಾರದೊಂದಿಗೆ (ಆಗಿನ ಮುಖ್ಯಮಂತ್ರಿ ಜೆ.ಎಚ್. ಪಟೇಲ್) ಮಾತುಕತೆ ನಡೆಸಿ ಸೀಬರ್ಡ್ ಯೋಜನೆಗೆ ಚಾಲನೆ ಕೊಟ್ಟರು. ಅಂದಾಜು ಸುಮಾರು ₹ ೨೫೦೦೦ ಕೋಟಿ ಯೋಜನೆಯು ಕಾರ್ಯೋನ್ಮುಖವಾಯಿತು. 'ಐ.ಎನ್.ಎಸ್. ಕದಂಬ' ಎಂದು ನೂತನವಾಗಿ ಹೆಸರಿಸಲ್ಪಟ್ಟ ಸೀಬರ್ಡ್ (ಕಡಲಹಕ್ಕಿ) ನೌಕಾನೆಲೆಯನ್ನು ೨೦೦೫ರ ಮೇ ೫ರಂದು ಆಗಿನ ರಕ್ಷಣಾ ಸಚಿವರಾಗಿದ್ದ ಪ್ರಣವ ಮುಖರ್ಜಿ ಅವರು ರಾಷ್ಟ್ರಕ್ಕೆ ಸಮರ್ಪಿಸಿದರು.[೪೦]

೦ಸೀಬರ್ಡ್ ನೌಕಾಯೋಜನೆಯು ಕಾರವಾರ ಸಮೀಪದ ಬಿಣಗಾದಿಂದ ಅಂಕೋಲದ ಭಾವಿ ಕೇರಿಯವರೆಗೆ ಸುಮಾರು ೨೪ ಕಿ.ಮೀ. ಉದ್ದದ ನಿಸರ್ಗಮಯ ಕಡಲ ತೀರವನ್ನು ಆಕ್ರಮಿಸಿದೆ. ೧೩ ಗ್ರಾಮಗಳ ೪,೪೪೪ ಕುಟುಂಬಗಳ (೩,೩೧೫ ಕೃಷಿ ಕುಟುಂಬ, ೮೫೬ ಮೀನುಗಾರರ ಕುಟುಂಬ, ೩೩೫ ಅವಿಭಕ್ತ ಕುಟುಂಬಗಳು) ಸುಮಾರು ೩೦ ಸಾವಿರಕ್ಕೂ ಹೆಚ್ಚು ಜನರನ್ನು ನಿರಾಶ್ರಿತರನ್ನಾಗಿಸಿ, ಪುನರ್ವಸತಿ ಕೇಂದ್ರಗಳಿಗೆ ಸ್ಥಳಾಂತರಿಸಲಾಗಿದೆ.[೪೧] ಅಡಿಗಲ್ಲು ಹಾಕಿ, ಯೋಜನೆ ಕಾರ್ಯಾರಂಭ ಮಾಡುವ ನಡುವಿನ ೧೨ ವರ್ಷಗಳ ಕಾಲದಲ್ಲಿ ನಿರಾಶ್ರಿತರು ಅನೇಕ

ಸಮಸ್ಯೆಗಳನ್ನು ಎದುರಿಸುವಂತಾಯಿತು. ಎರಡು ಹಂತದ ಸೀಬರ್ಡ್ ಯೋಜನೆಯು ೨೦ ವರ್ಷಗಳಲ್ಲಿ ಪೂರ್ಣಗೊಳ್ಳಲಿದೆ. ಮೊದಲ ಹಂತದ ಕಾಮಗಾರಿ ೨೦೦೫ ಕ್ಕೆ ಮುಗಿದರೆ, ಎರಡನೆಯ ಹಂತದ್ದು ೨೦೨೦ರ ಒಳಗೆ ಮುಗಿಯುತ್ತದೆ. ಆಗ ದೇಶದ ಅತ್ಯಂತ ದೊಡ್ಡ ನೌಕಾನೆಲೆಯಾಗಿ ದೇಶ ರಕ್ಷಣೆಯ ಬಹುಭಾರವನ್ನು ಇದು ತನ್ನ ಹೆಗಲ ಮೇಲೆ ಹೊರಲಿದೆ. ಸ್ಥಳೀಯವಾಗಿ ಬಹಳಷ್ಟು ಉದ್ಯೋಗಗಳು ಸೃಷ್ಟಿ ಆಗಿ, ಬೃಹತ್ ಮೊತ್ತದ ಈ ಯೋಜನೆಯ ಪರಿಣಾಮ ಕರ್ನಾಟಕದ ವಿತ್ತೀಯ ನಕ್ಷೆಯ ರೂಪವನ್ನು ಬದಲಿಸಿದೆ ಎನ್ನುವುದು ಆರ್ಥಿಕ ತಜ್ಞರ ವಿಶ್ಲೇಷಣೆಯಾಗಿದೆ.[೪೨]

ನಲವತ್ತು ಕಿ.ಮೀ. ದೂರದ 'ಕೈಗಾ ಯೋಜನೆಯನ್ನು ಕೈಬಿಡಿ' ಎಂದು ಜಿಲ್ಲೆಯ, ರಾಜ್ಯದ ಹಾಗೂ ದೇಶದ ಅನೇಕರು ಸೇರಿ ತಿಂಗಳುಗಟ್ಟಲೆ ಕಾಲ ಪರಿಸರ ಚಳವಳಿ ಮಾಡಿದಂತೆ ಸೀಬರ್ಡ್ ಯೋಜನೆಯನ್ನು ವಿರೋಧಿಸಿ ಚಳವಳಿ ಮಾಡಿದುದು ಕಡಿಮೆ. ವಶಪಡಿಸಿಕೊಂಡ ಭೂಮಿಯು ಕೆಲವು ಕಾಂಕ್ರೀಟ್ ಕಟ್ಟಡಗಳನ್ನು ಒಳಗೊಂಡಿದೆಯೇ ವಿನಾ ಜಲಸಂಬಂಧಿ ಯೋಜನೆಗಳಂತೆ ಮುಳುಗಡೆಯಾಗಿಲ್ಲ ! ಆದರೂ 'ಪರಿಸರವನ್ನೂ ಉಳಿಸಿ, ಅಭಿವೃದ್ಧಿಯನ್ನು ನಡೆಸಿ' ಎನ್ನುವ ಈ ಅಧ್ಯಯನದ ನೆಲೆಯಿಂದ ನೋಡಿದಾಗ ಸೀಬರ್ಡ್ ಯೋಜನೆಯ ನಿರಾಶ್ರಿತರ ನಿರಂತರ ಹೋರಾಟವೂ 'ನೆಲಸಂಬಂಧದ ಚಳವಳಿ'ಯೇ ಆಗಿದೆ !

ಜೀವಮಾನ ಕಾಲದಲ್ಲಿ ಒಂದು ಕಡೆ ಬದುಕಿ, ಬಾಳಿ ಯೋಜನೆಯಿಂದಾಗಿ ನಿರಾಶ್ರಿತರಾಗಿರುವ 'ಸ್ಥಳೀಯ ಜನರು' ಪರಿಸರದ ಒಂದು ಭಾಗವೇ ಆಗಿದ್ದರು. ಅವರುಗಳ ಬದುಕಿನಲ್ಲಿ ಉಂಟಾದ ಪಲ್ಲಟವೂ ಒಂದು ಪರಿಸರ ಚಳವಳಿಯೇ ಆಗಿದೆ. ಸ್ಥಳೀಯರು ತಮ್ಮ ಹಿತಾಸಕ್ತಿಗಾಗಿ ಹೋರಾಟ ಮಾಡುತ್ತಿರುವುದು ಚರಿತ್ರೆಯುದ್ದಕ್ಕೂ ನಡೆದೇ ಇರುವುದನ್ನು ಗುರುತಿಸಬಹುದು. "ಸ್ಥಳೀಯ ಜನರ ನೋವಿನಲ್ಲಿ ರಾಷ್ಟ್ರದ ಹಿತವಿದೆ." ಎಂಬ ಸತ್ಯದ ಹಿಂದೆ ಸುಸ್ಥಿರ ಅಭಿವೃದ್ಧಿಯಲ್ಲಿ 'ಸಾಮಾಜಿಕ ನ್ಯಾಯ'ವನ್ನು ಕಡೆಗಣಿಸಬಾರದು ಎಂಬುದನ್ನು ಗಮನಿಸಲೇಬೇಕು.[೪೩] ಈ ಜಿಲ್ಲೆಯ ಹಾಗೂ ಆಚೆಗಿನ ಅಭಿವೃದ್ಧಿ ಯೋಜನೆಗಳ ಹಿನ್ನೆಲೆಯಲ್ಲಿ ಅಲ್ಲಲ್ಲಿನ ಜನರನ್ನು ಒಕ್ಕಲೆಬ್ಬಿಸಲಾಗಿದೆ. ಅವರಲ್ಲಿ ಕೆಲವರು ಮಾನಸಿಕ ಅಸ್ವಸ್ಥರಾಗಿದ್ದಾರೆ, ಸಾವನ್ನಪ್ಪಿದ್ದಾರೆ, ನಿರ್ಗತಿಕರಾಗಿದ್ದಾರೆ, ಮತ್ತೆ ಕೆಲವರು ಅನೈತಿಕ ಮಾರ್ಗಗಳನ್ನು ತುಳಿದಿದ್ದಾರೆ.

'ನಿರಾಶ್ರಿತರ ವೇದಿಕೆ'ಯ ಪದಾಧಿಕಾರಿಗಳಲ್ಲೋರ್ವರಾದ ಸದಾನಂದ ಪಡ್ತಿ ಅವರು 'ನಾವು ಈ ಯೋಜನೆಯನ್ನು ವಿರೋಧಿಸುವುದಿಲ್ಲ, ಆದರೆ ನಮ್ಮನ್ನು ರಾಜಕೀಯ ಸಂತ್ರಸ್ತರಂತೆ ಪರಿಗಣಿಸಬೇಕು' ಎಂದರು. ಸಂತ್ರಸ್ತರನ್ನು 'ಮಾನವೀಯ ದೃಷ್ಟಿಯಿಂದ ನೋಡಬೇಕು, ಕೇವಲ ಕಾಯಿದೆ ದೃಷ್ಟಿಯಿಂದಲ್ಲ ಎಂದು ಸೀಬರ್ಡ್ ನಿರಾಶ್ರಿತರ ಸಂಘಟನೆಯ ಮುಖಂಡರಾಗಿರುವ ಪಿ.ಎಂ. ತಾಂಡೇಲ ಅಭಿಪ್ರಾಯಪಟ್ಟಿದ್ದಾರೆ. ಈ ಹಿನ್ನೆಲೆಯಿಂದ ನಿರಾಶ್ರಿತರ ಚಳವಳಿಯನ್ನು ವಿಶ್ಲೇಷಿಸಬೇಕಾಗಿದೆ. ಯೋಜನೆಗಾಗಿ ಮೊತ್ತ ಮೊದಲಿನ ಪ್ರಸ್ತಾವನೆಯಂತೆ ೧೨,೫೫೦ ಎಕರೆ ಭೂಮಿಯನ್ನು ವಶಪಡಿಸಿಕೊಳ್ಳುವ ಉದ್ದೇಶವಿದ್ದಿತು. ಜನರಿಗೆ ಉಂಟಾಗುವ ತೊಂದರೆಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ ಸರ್ಕಾರದೊಂದಿಗೆ ಚರ್ಚಿಸಿ ಅಂತಿಮವಾಗಿ ೮,೦೭೨ ಎಕರೆ ಭೂಮಿಯನ್ನು ವಿವಿಧ ಬಾಬ್ತುಗಳಿಂದ ಪಟ್ಟಿ -೨ ರಲ್ಲಿ ತೋರಿಸಿರುವಂತೆ ವಶಪಡಿಸಿಕೊಳ್ಳಲಾಯಿತು.

ಪಟ್ಟಿ-೨

ಸೀಬರ್ಡ್ ಪ್ರಾಜೆಕ್ಟ್‌ಗೆ ವಶಪಡಿಸಿಕೊಂಡ ಭೂಮಿ

ಕ್ರ.ಸಂ.	ಭೂಮಿಯ ವರ್ಗೀಕರಣ	ವಶಪಡಿಸಿಕೊಂಡ ಭೂಮಿ (ಎಕರೆಗಳಲ್ಲಿ)	ಶೇಕಡಾವಾರು
೧	ಅರಣ್ಯಭೂಮಿ	೫೫೪೦	೬೯%
೨	ಸರ್ಕಾರಿ ಕಂದಾಯ ಭೂಮಿ	೮೧	೦೧%
೩	ಖಾಸಗಿ ಭೂಮಿ	೨೪೧೧	೩೦%
	ಒಟ್ಟು	೮೦೩೨	೧೦೦%

ಆಧಾರ: ಉತ್ತರ ಕನ್ನಡ ಜಿಲ್ಲಾಧಿಕಾರಿಗಳ ಸ್ಥಾನಿಕ ವರದಿ, ೧೯೯೯

ಅಂಕಿ-ಅಂಶಗಳ ಪ್ರಕಾರ ೨೪೧೧ ಎಕರೆ ಖಾಸಗಿ ಭೂಮಿಯನ್ನು ವಶಪಡಿಸಿಕೊಳ್ಳಲಾಯಿತು. ಪುನರ್ವಸತಿ ಕೇಂದ್ರಗಳನ್ನು ಸರಿಯಾಗಿ ಕಟ್ಟಿಕೊಡಲಿಲ್ಲ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ತಮ್ಮ ನೇತೃತ್ವದಲ್ಲಿ, ಪೊಲೀಸರ ಬೆಂಬಲದಿಂದ ಒಕ್ಕಲೆಬ್ಬಿಸುವ ಕೆಲಸವನ್ನು ೧೯೯೯ರ ಫೆಬ್ರವರಿ ೯ರಿಂದ ಏಪ್ರಿಲ್ ಅಂತ್ಯದವರೆಗೆ ಮಾಡಿದರು. ಜನರನ್ನು ಯಾವುದೇ ವ್ಯವಸ್ಥಿತ ಮೂಲಭೂತ ಸೌಲಭ್ಯಗಳಿಲ್ಲದ ಚಿತ್ತಾಕುಲ, ಅಮದಳ್ಳಿ, ತೋಡೂರು, ಹಾರವಾಡ ಪುನರ್ವಸತಿ ಕೇಂದ್ರಗಳಿಗೆ ಅಟ್ಟಲಾಯಿತು. ಜಿಂಕ್‌ಶೀಟ್‌ಗಳನ್ನು (ತಗಡು) ಬಳಸಿ ಪುನರ್ವಸತಿ ಕೇಂದ್ರಗಳನ್ನು ನಿರ್ಮಿಸಲಾಗಿತ್ತು. ಕರಾವಳಿಯ ಉಷ್ಣತೆಯಲ್ಲಿ ಜನರು ನರಕಯಾತನೆ ಅನುಭವಿಸಿದರು. ಮಳೆಗಾಲದಲ್ಲಿ ಶೆಡ್‌ಗಳಿಗೆ ನೀರು ತುಂಬಿದವು. ೧೯೮೪ರಲ್ಲಿಯೇ ೧೫೬೦ ಎಕರೆ ಅರಣ್ಯ ಭೂಮಿಯನ್ನು ಪುನರ್ವಸತಿಗಾಗಿ ಬಿಡುಗಡೆಗೊಳಿಸಲಾಗಿತ್ತು. ಇಲ್ಲಿ ನಿರಾಶ್ರಿತರಿಗೆ ಶಾಶ್ವತ ಪುನರ್ವಸತಿ ಕೇಂದ್ರಗಳನ್ನು ಪಟ್ಟಿ-೩ರಲ್ಲಿ ತೋರಿಸಿರುವಂತೆ ಸ್ಥಾಪಿಸಲಾಯಿತು.

ಪಟ್ಟಿ-೩

ಸೀಬರ್ಡ್ ನಿರಾಶ್ರಿತರ ಶಾಶ್ವತ ಪುನರ್ವಸತಿ ಕೇಂದ್ರಗಳು

ಕ್ರ.ಸಂ.	ಪುನರ್ವಸತಿ ಕೇಂದ್ರ	ನಿರಾಶ್ರಿತರ ವರ್ಗೀಕರಣ
೧	ಮುಡಗೇರಿ	ಪುನರ್ವಸತಿ ಸಂಭಾವನೆಯನ್ನು ಇಚ್ಛಿಸಿದ ರೈತ ಕುಟುಂಬಗಳು ಮತ್ತು ಜಮೀನುರಹಿತ ನಿರಾಶ್ರಿತರು
೨	ಹಟ್ಟಿಕೇರಿ	ಪುನರ್ವಸತಿ ಸಂಭಾವನೆಯನ್ನು ಇಚ್ಛಿಸಿದ ರೈತ ಕುಟುಂಬಗಳು ಮತ್ತು ಜಮೀನುರಹಿತ ನಿರಾಶ್ರಿತರು
೩	ಹಾರವಾಡ	ಮೀನುಗಾರರ ಕುಟುಂಬಗಳು
೪	ಅಮದಳ್ಳಿ	ಮೀನುಗಾರರ ಕುಟುಂಬಗಳು
೫	ಅಗಸೂರ - ಶಿರಗುಂಜಿ	ಹಂಗಾಮಿ ಲಾಗಣಿದಾರರು ಮತ್ತು ಇತರ ಭೂಮಿರಹಿತ ನಿರಾಶ್ರಿತರು

ಆಧಾರ: ಪ್ರಕಾಶಕರು, ಡಿಟೆಚ್‌ಮೆಂಟ್ ಪ್ರೊಜೆಕ್ಟ್, ಸೀಬರ್ಡ್, ಕಾರವಾರ

ಎಲ್ಲ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ನಿರಾಶ್ರಿತ ಕುಟುಂಬಗಳಿಗೆ ಉದ್ಯೋಗಾವಕಾಶ, ಪರಿಹಾರಧನ ನೀಡಲಾಯಿತು. ನಿರಾಶ್ರಿತರು ತಾವು ಹಿಂದೆ ವಾಸಿಸುತ್ತಿದ್ದ ಮನೆಗಳಿಂದ ಸಾಲ್ವೇಜ್ ಮೆಟೀರಿಯಲ್‌ಗಳನ್ನು ಕೊಂಡೊಯ್ಯಲು ಅವಕಾಶ ಮಾಡಿಕೊಡಲಾಯಿತು.[೪೪] ಆದರೆ ಎಲ್ಲ ರೀತಿಯ ಪುನರ್ವಸತಿ ಸೌಲಭ್ಯಗಳನ್ನು ಕೊಡುವುದು ವರ್ಷಾನುಗಟ್ಟಲೆ ತಡವಾಗಿದ್ದರಿಂದ ಪರಿಹಾರಧನ ಪುನರ್ನಿಗದಿಯಾಗಬೇಕು, ಈಗಾಗಲೇ ಯೋಜನಾ ನಿರಾಶ್ರಿತರಿಗೆ ತಲಾ ₹ ೫೦,೦೦೦/- ಪ್ರಾಪ್ತ ವಯಸ್ಕರಿಗೆ ₹ ೭೦,೦೦೦/-, ಅವಿವಾಹಿತ ಮಹಿಳೆಗೆ ₹ ೭೦,೦೦೦/-, ಸಾಗಣಿಕೆ ವೆಚ್ಚ ₹ ೫೦೦೦/- ಹಾಗೂ ಆಹಾರ ಮತ್ತು ವೈದ್ಯಕೀಯ ವೆಚ್ಚ ₹ ೨೮೦೦/- ನೀಡಲಾಗಿದೆ. ಹಾಗೂ ಅನುದಾನ ವಿತರಿಸುವಲ್ಲಿ ಜನರನ್ನು ಹಿಂಸಿಸುತ್ತಿರುವ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕೆಂಬುದು ನಿರಾಶ್ರಿತರ ಒತ್ತಾಯವಾಗಿರುವುದನ್ನು ಕ್ಷೇತ್ರ ಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಪರ್ಯಾಯ ಉದ್ಯೋಗ ಕಲ್ಪಿಸಿಕೊಡಬೇಕು, ತಡವಾದಲ್ಲಿ ಜೀವನ ನಿರ್ವಹಣಾ ಭತ್ಯೆ ಕೊಡಬೇಕು, ನಿರಾಶ್ರಿತರಿಗೆ ಹೊಸ ಪ್ಯಾಕೇಜನ್ನು ನಿಗದಿಪಡಿಸಬೇಕು ಎಂಬ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಚಳವಳಿ ನಡೆಯುತ್ತಲೇ ಇದೆ. ಅಂಚೆ ಪತ್ರ ಚಳವಳಿ, ಬೆಂಗಳೂರು ಚಲೋ ಚಳವಳಿ, ರಸ್ತೆ ತಡೆ ಚಳವಳಿ, ಅರೆಬೆತ್ತಲೆ ಮೆರವಣಿಗೆಗಳು ನಡೆದೇ ಇವೆ. ರಾಜಕೀಯ ಮುಖಂಡರ ಪ್ರವೇಶದಿಂದ 'ನಿರಾಶ್ರಿತರ ಪುನರ್ವಸತಿ ಸಮಿತಿ' ಮತ್ತು 'ನಿರಾಶ್ರಿತರ ವೇದಿಕೆ'ಗಳೆಂಬ ಸಂಘಟನೆಗಳು ವಿಭಿನ್ನ ರೀತಿಯಲ್ಲಿ ಹೋರಾಡುತ್ತಿವೆ. ನೌಕಾನೆಲೆಯಿಂದ ಉತ್ತರ ಕನ್ನಡ ಜಿಲ್ಲೆಯ ಮೇಲಾಗಿರುವ ಪರಿಣಾಮ ಕುರಿತು 'ವಿಚಾರ ಸಂಕಿರಣ'ವನ್ನು ಕಾರವಾರದಲ್ಲಿ ಪ್ರೆಸ್‌ಗಿಲ್ಡ್‌ನವರು ಏರ್ಪಡಿಸಿ, ಚರ್ಚಿಸಿ ಸರ್ಕಾರದ ಗಮನ ಸೆಳೆದಿದ್ದಾರೆ. ಪರಿಸರವಾದಿಗಳೆಂದು ಕರೆಯಿಸಿಕೊಳ್ಳುವ ಯಾರೂ ನಮ್ಮ ಸಹಾಯಕ್ಕೆ ಬಂದಿಲ್ಲ ಎನ್ನುವ ನೋವೂ ನಿರಾಶ್ರಿತರಲ್ಲಿದೆ.[೪೫] ಸೀಬರ್ಡ್ ನೌಕಾನೆಲೆ ನಿರಾಶ್ರಿತರ ವೇದಿಕೆಯ ಅಧ್ಯಕ್ಷ ಬಿ. ಹೊನ್ನಪ್ಪ, ಕಾರ್ಯದರ್ಶಿ ಸದಾನಂದ ಪಡ್ತಿ, ಉತ್ತರ ಕನ್ನಡ ಜಿಲ್ಲಾ ಪರಿಸರ ಆಂದೋಲನ ಸಮಿತಿ ಅಧ್ಯಕ್ಷ ಅಮ್ಮೆಂಬಳ ಆನಂದ ಮುಂತಾದವರು ಸರ್ಕಾರದ ಪುನರ್ವಸತಿ ನೀತಿಯನ್ನು ಖಂಡಿಸಿದ್ದಾರೆ.[೪೬] ಈಗಲೂ ನಿರಾಶ್ರಿತರ ಕೂಗು ಕುಗ್ಗಿಲ್ಲ, ಸೀಬರ್ಡ್ ನೌಕಾನೆಲೆಯ ಪ್ರಗತಿಯೂ ನಿಂತಿಲ್ಲ!

೪.೫ ಕೈಗಾರಿಕೆಗಳು

ನೆಲಸಂಬಂಧದ ಪರಿಸರ ಹೋರಾಟಗಳ ಸಾಲಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಕೈಗಾರಿಕೆಗಳೂ ಹೊರತಾಗಿಲ್ಲ. 'ಈ ಜಿಲ್ಲೆಯಲ್ಲಿ ಆಧುನಿಕ ಕೈಗಾರಿಕೆಗಳ ಸ್ಥಾಪನೆಯು ಸ್ವಾತಂತ್ರ್ಯಪೂರ್ವದಲ್ಲಿಯೇ ಆರಂಭವಾಗಿತ್ತು.'[೪೭] ದಟ್ಟ ಅರಣ್ಯ ಪ್ರದೇಶವಾದ ದಾಂಡೇಲಿಯಲ್ಲಿ ಬ್ರಿಟಿಷರು ಚಹಾಪುಡಿಯ ಸಾಗಾಣಿಕೆಗೆ ಬೇಕಾದ ಮರದ ಡಬ್ಬಗಳನ್ನು ತಯಾರಿಸಲು ಕಾರ್ಖಾನೆಯೊಂದನ್ನು ಸ್ಥಾಪಿಸಲು ಅನುಮತಿ ನೀಡಿದ್ದರು. ವಿವಿಧ ಮಾಲೀಕರುಗಳಿಂದ ನಡೆಸಲ್ಪಟ್ಟ ದಾಂಡೇಲಿಯ ಇಂಡಿಯನ್ ಪ್ಲೈವುಡ್ ಕಾರ್ಖಾನೆ ಮುಚ್ಚಲ್ಪಟ್ಟಿದೆ. ದಾಂಡೇಲಿಯಲ್ಲಿ ಮರ ಮಟ್ಟುಗಳನ್ನು ರೈಲು ಹಳಿಗಳಿಗೆ ಬೇಕಾಗುವ ಸ್ಲೀಪರ್‌ಗಳಾಗಿ ಮಾರ್ಪಡಿಸಲು, ಸರ್ಕಾರಿ ಸ್ವಾಮ್ಯದ ಮರ ಕೊಯ್ಯುವ ಘಟಕವು ಸ್ಥಾಪನೆಯಾಗಿತ್ತು. ಬ್ರಿಟಿಷ್ ಜೈಲುಗಳಲ್ಲಿದ್ದ ಖೈದಿಗಳು ಇದರಲ್ಲಿ

ಕೆಲಸ ಮಾಡುತ್ತಿದ್ದರು. ಈ ಕಾರ್ಖಾನೆಗಳ ಸಲುವಾಗಿ ದಾಂಡೇಲಿಗೆ ಪ್ರಪ್ರಥಮವಾಗಿ ರೈಲು ಸಂಪರ್ಕ ಕಲ್ಪಿಸಲಾಯಿತು. ಮರದ ಸ್ಲೀಪರ್‌ಗಳನ್ನು ಬಳಸದಿರುವ ಕಾರಣದಿಂದ ಸರ್ಕಾರಿ ಸ್ವಾಮ್ಯದ ಮರ ಕೊಯ್ಯುವ ಘಟಕವು ಮುಚ್ಚಲ್ಪಟ್ಟಿತು.[೪೮]

ವೆಸ್ಟ್ ಕೋಸ್ಟ್ ಪೇಪರ್ ಮಿಲ್ : ೧೯೫೫ರಲ್ಲಿ ನೋಂದಾಯಿಸಲ್ಪಟ್ಟ ವೆಸ್ಟ್ ಕೋಸ್ಟ್ ಪೇಪರ್ ಕಾರ್ಖಾನೆಯು ೧೯೫೮ರಲ್ಲಿ ಕಾಳಿ ನದಿ ದಂಡೆಯಲ್ಲಿರುವ ದಾಂಡೇಲಿಯಲ್ಲಿ ಕಾಗದ ತಯಾರಿಕೆಯನ್ನು ಆರಂಭಿಸಿತು. ಆಗ ಕೇಂದ್ರ ಸರ್ಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದ ಮೊರಾರ್ಜಿ ದೇಸಾಯಿ ಅವರು ಇದನ್ನು ಉದ್ಘಾಟಿಸಿದರು. ರಾಷ್ಟ್ರದ ಕಾಗದ ಕಾರ್ಖಾನೆಗಳಲ್ಲಿಯೇ ಗುಣಮಟ್ಟ ಹಾಗೂ ಉತ್ಪಾದನೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದುಕೊಂಡಿದೆ. ಸುಮಾರು ೪೦೦೦ ಕಾರ್ಮಿಕರಿಗೆ ಉದ್ಯೋಗ ಒದಗಿಸಿರುವ ಈ ಕಾರ್ಖಾನೆಯು ದೇಶ-ವಿದೇಶಗಳಿಗೆ ಕಾಗದಗಳನ್ನು ರಫ್ತು ಮಾಡುತ್ತಿದೆ. ತನ್ನದೇ ಆದ ಸ್ವಂತ ಅರಣ್ಯೀಕರಣದ ಯೋಜನೆಯನ್ನು ಸಹಾ ಹೊಂದಿದೆ.[೪೯] ಆದರೆ ಅತ್ಯಂತ ಕಡಿಮೆ ಬೆಲೆಗೆ ಪಶ್ಚಿಮ ಘಟ್ಟದಲ್ಲಿನ ಬಿದಿರು, ಮರ-ಮಟ್ಟುಗಳನ್ನು ಬಳಸಲು ಸರ್ಕಾರದೊಂದಿಗೆ ಪರವಾನಗಿ ಹೊಂದಿದೆ ಎಂಬ ಆಪಾದನೆಯನ್ನು ಸುತ್ತ-ಮುತ್ತಲಿನ ಜನರು ಮಾಡುತ್ತಾರೆ. ಕಾರ್ಖಾನೆಯ ಆಡಳಿತ ಮಂಡಳಿಯು ತನ್ನದೇ ಆದ ವಿದ್ಯಾಸಂಸ್ಥೆಗಳನ್ನು, ನೌಕರರ ವಸತಿ ಸಮುಚ್ಚಯಗಳನ್ನು ಹೊಂದಿದೆ. ಉತ್ತರ ಕನ್ನಡ ಜಿಲ್ಲೆಯ ವಿವಿಧ ಸಂಘಸಂಸ್ಥೆಗಳು ವೆಸ್ಟ್‌ಕೋಸ್ಟ್ ಪೇಪರ್ ಮಿಲ್‌ನವರಿಂದ ದೇಣಿಗೆ ಪಡೆಯುತ್ತಾರೆ. ಉದಾಹರಣೆಗೆ ಕಾಲೇಜು ವಾರ್ಷಿಕ ಸಂಚಿಕೆಗಳಿಗೆ ಜಾಹಿರಾತು ಕೊಡುವ ಮೂಲಕ ಹಣ ಕೊಡುತ್ತಾರೆ.

ಪರಿಸರ ವಿಜ್ಞಾನಿಗಳು, ಪರಿಸರವಾದಿಗಳು ಕಾಳಿನದಿಯ ಮಾಲಿನ್ಯವನ್ನು ಗಮನಿಸಿದರು ಹಾಗೂ ಕಾಳಿನದಿಗೆ ಕಟ್ಟಲಾಗುವ ಜಲವಿದ್ಯುತ್ ಅಣೆಕಟ್ಟೆಗಳನ್ನು ತಡೆಯಲು ಪರಿಸರ ಚಳವಳಿಗಳನ್ನು ಆರಂಭಿಸಿದರು. ಪಾಂಡುರಂಗ ಹೆಗಡೆ ನಾಯಕತ್ವದ 'ಕಾಳಿ ಬಚಾವೋ' ಆಂದೋಲನವು ಆರಂಭವಾಗಿ ಕಾರ್ಖಾನೆಯವರು ಕಾಳಿನದಿಗೆ ತ್ಯಾಜ್ಯನೀರನ್ನು, ಹರಿಸಿ ಮಲಿನಗೊಳಿಸುತ್ತಿದ್ದುದನ್ನು ವಿರೋಧಿಸಿತು.[೫೦] ಅನೇಕ ಪ್ರಾಣಿಗಳು, ನದಿಯೊಳಗಿನ ಜಲಚರಗಳು ಸಾವನ್ನಪ್ಪಿವೆ. ತ್ಯಾಜ್ಯ ನೀರನ್ನು ಶುದ್ಧೀಕರಿಸಿ ಬಿಡುತ್ತಿದ್ದೇವೆ, ಅತ್ಯಾಧುನಿಕ ಶುದ್ಧೀಕರಣಯಂತ್ರವನ್ನು ಅಳವಡಿಸಿಕೊಳ್ಳುತ್ತೇವೆ ಎಂದು ಕಾರ್ಖಾನೆಯವರು ಹೇಳುತ್ತಲೇ ಇದ್ದಾರೆ.[೫೧] ಕಾರ್ಖಾನೆಯೂ ನಿಂತಿಲ್ಲ, ತ್ಯಾಜ್ಯ ನೀರು ಕಾಳಿನದಿಗಲ್ಲದೆ ಬೇರೆಡೆಗೆ ಹರಿಯುತ್ತಿಲ್ಲವೆಂಬುದನ್ನು ಅಧ್ಯಯನ ಸಂಬಂಧವಾಗಿ ಕೈಗೊಂಡ ಕ್ಷೇತ್ರಕಾರ್ಯದಲ್ಲಿ ವೀಕ್ಷಿಸಲಾಗಿದೆ. ಅಲ್ಲಿರುವ ಎಲ್ಲರೂ ಮೂಕ ಪ್ರೇಕ್ಷಕರಾಗಿರುವುದಕ್ಕೆ ಬಂಡವಾಳಿಗರ ಪ್ರಭಾವ ಅಥವಾ ಅಲ್ಲಿನ ಉದ್ಯೋಗಿಗಳಿಗೆ ಜೀವನ ನಿರ್ವಹಣಾ ಸವಲತ್ತುಗಳನ್ನು ಒದಗಿಸಿರುವುದರಿಂದ ಚಳವಳಿ ತೀವ್ರಗೊಂಡಿಲ್ಲದಿರುವುದನ್ನು ಗುರುತಿಸಬಹುದು.

ಸಿದ್ಧಾಪುರ ತಾಲೂಕಿನ. ಕವಚೂರಿನ ಕರ್ನಾಟಕ ವೀನರ್ಸ್ ಎಂಬ ಹೆಸರಿನ ಮರ-ಮಟ್ಟು ಘಟಕವು ರೋಗಗ್ರಸ್ತವಾಗಿದೆ.[೫೨] ಜಿಲ್ಲೆಯಾದ್ಯಂತ ಇರುವ ಪರವಾನಗಿ ಪಡೆದ ಮರಮಟ್ಟು ಕೊರೆಯುವ ಮಿಲ್‌ಗಳಲ್ಲಿ ಕೆಲವು ಸರ್ವಭಕ್ಷಕರು ಅರಣ್ಯಸಂಪತ್ತಿನ ಲೂಟಿ ಮಾಡುತ್ತಿದ್ದಾರೆ, ನಾವು ಗುಡಿಸಲು ಕಟ್ಟಿಕೊಳ್ಳಲು ಒಂದು ಒಣಗಿದ ಕಟ್ಟಿಗೆ

ತಂದರೆ ದಂಡ ಹಾಕುತ್ತಾರೆ ಎಂಬುದಾಗಿ ನೇರ ಆಪಾದನೆ ಮಾಡುವವರನ್ನು ಕಾಣಬಹುದು. ಈ ಸಂಬಂಧವಾಗಿ ಚಳವಳಿಗಳು ನಡೆದುದು ಕಂಡುಬಂದಿಲ್ಲ.

ಕರಾವಳಿಯ ತಾಲೂಕುಗಳಲ್ಲಿರುವ ಹಂಚು ಕಾರ್ಖಾನೆಗಳು, ಗಡುಸು ಭೂಮಿಯನ್ನು ಕೊರೆದು ಕಟ್ಟಡಗಳನ್ನು ಕಟ್ಟಲು 'ಚೀರೆಕಲ್ಲು' ತೆಗೆದು ಮಾರುವ ಉದ್ದಿಮೆಗಳು ನಡೆದಿವೆ. ಮಣ್ಣು ಮಾಲಿನ್ಯ ಹೊರತುಪಡಿಸಿ ಇತರೆ ಅಪಾಯಗಳಿಲ್ಲದ ಇವುಗಳ ವಿರುದ್ಧವೂ ಯಾವುದೇ ರೀತಿಯ ಚಳವಳಿಗಳು ನಡೆದಿಲ್ಲ.

ಕಾಸ್ಟಿಕ್ ಸೋಡಾ ಕಾರ್ಖಾನೆ : ಕಾರವಾರದ ಸಮೀಪದಲ್ಲಿರುವ ಬಿಣಗಾ ಎಂಬ ಸ್ಥಳದಲ್ಲಿ ರಾಷ್ಟ್ರೀಯ ಹೆದ್ದಾರಿ ೧೭ ಹಾಗೂ ಘಟ್ಟ ಪ್ರದೇಶದ ಇಳಿಜಾರಿನ ನಡುವಿನ ನೂರಾರು ಎಕರೆ ಅರಣ್ಯ ಪ್ರದೇಶದಲ್ಲಿ ೧೯೭೦ರಲ್ಲಿ ಕಾಸ್ಟಿಕ್ ಸೋಡಾ ತಯಾರು ಮಾಡುವ ಕಾರ್ಖಾನೆ ಸ್ಥಾಪನೆಯಾಯಿತು. ಈ ಕಾರ್ಖಾನೆಯವರು ಮೊದಲು ಕುಮಟ ತಾಲೂಕಿನ ಮಾದನಗೇರಿಯ ಬಳಿ ಸುಮಾರು ೧೮೪೦ ಎಕರೆಗಳಷ್ಟು ಭೂಮಿಯನ್ನು ಪಡೆದು, ರೈತರಿಂದ ವಿರೋಧ ಎದುರಿಸಿ ಪುನಾ ಸರ್ಕಾರಕ್ಕೆ ಹಿಂತಿರುಗಿಸಿದ್ದರು.[೫೩] ಶ್ರೀಮಂತ ಉದ್ಯಮಿ ಥಾಪರ್ ಎಂಬುವರು ೨೦ ಕೋಟಿ ಬಂಡವಾಳ ತೊಡಗಿಸಿ ೨೬,೦೦೦ ಟನ್ ಕಾಸ್ಟಿಕ್ ಸೋಡಾವನ್ನು ತಯಾರಿಸುವ 'ಬಿಲ್ಟ್' ಎಂಬ ಹೆಸರಿನ ಕಾರ್ಖಾನೆಯನ್ನು ಸ್ಥಾಪಿಸಿದರು.[೫೪] ಕಾರ್ಖಾನೆಯು ಕ್ರಮೇಣ ಅಭಿವೃದ್ಧಿ ಹೊಂದಿ ರಾಷ್ಟ್ರಮಟ್ಟದಲ್ಲಿ ಹೆಸರುವಾಸಿಯಾಗಿದೆ. ಟೂತ್‌ಪೇಸ್ಟ್ ಮತ್ತಿತರ ಉತ್ಪಾದನೆಗಳಿಗೆ ಅಗತ್ಯವಿರುವ ರಾಸಾಯನಿಕ ಮತ್ತು ವಿವಿಧ ಆಮ್ಲಗಳನ್ನು ತಯಾರಿಸುತ್ತಿದೆ. ತನ್ನ ಬಂಡವಾಳವನ್ನು ೨೧೦ ಕೋಟಿಗೆ ಹೆಚ್ಚಿಸಿಕೊಂಡು ಸಾವಿರಾರು ಕಾರ್ಮಿಕರಿಗೆ ಉದ್ಯೋಗ ನೀಡಿ, ಅಕ್ಕಪಕ್ಕದ ಹಳ್ಳಿಗಳು ಹಾಗೂ ಕಾರವಾರ ನಗರದ ಅಭಿವೃದ್ಧಿ ಸೇವಾ ಕಾರ್ಯಗಳಲ್ಲಿಯೂ ತೊಡಗಿಸಿಕೊಂಡಿದೆ.

೧೯೭೯-೮೦ರಲ್ಲಿ ಕಾರ್ಖಾನೆಯಿಂದ ಸಮುದ್ರದೊಳಗೆ ೫-೬ ಕಿ.ಮೀ.ವರೆಗೆ ಕಲುಷಿತ ನೀರು ಬಿಡಲು ಹಾಕಿದ್ದ ಪೈಪ್‌ಲೈನ್ ದುರಸ್ತಿ ಮಾಡದೇ ಇರುವುದರಿಂದ ಪಾದರಸದಿಂದ ಕೂಡಿದ ನೀರು ಸಮುದ್ರಕ್ಕೆ ಚೆಲ್ಲಿ ಮಾಲಿನ್ಯ ಉಂಟಾಗಿ, ಮೀನುಗಾರಿಕೆಗೆ ತೊಂದರೆಯಾಗಿದೆ ಎಂದು ಸುದ್ದಿಯಾಯಿತು. ಮೀನುಗಾರಿಕೆಯನ್ನೇ ಮುಖ್ಯಕಸುಬನ್ನಾಗಿ ಹೊಂದಿರುವ ಮೀನುಗಾರರು ಹಾಗೂ ಸುತ್ತಮುತ್ತಲಿನ ಸ್ಥಳೀಯರು ಪ್ರತಿಭಟನೆಗೆ ಇಳಿದರು. ಅದೇ ವೇಳೆಗೆ ಜಪಾನಿನ 'ಮೀನಾ ಮಾಟಾ' ಕಾಸ್ಟಿಕ್ ಸೋಡಾ ಕಾರ್ಖಾನೆಯ ದುರಂತ ಹಾಗೂ ಭೂಪಾಲ್ ಅನಿಲ ದುರಂತಗಳು ಬೀದಿಗಿಳಿದವರ ಗಮನಕ್ಕೆ ಬಂದು ಚಳವಳಿಯು ಮತ್ತಷ್ಟು ತೀವ್ರಗೊಂಡಿತು. ರಾಷ್ಟ್ರೀಯ ಹೆದ್ದಾರಿ ತಡೆ ನಡೆಯಿತು.[೫೫] ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯು ಕಂಪನಿಗೆ ಎಚ್ಚರಿಕೆ ನೀಡಿತು. ಕಾರ್ಖಾನೆಯ ಕೆಲಸ ಸ್ಥಗಿತಗೊಂಡಿತು. ಇದರಿಂದಾಗಿ ನೌಕರರಿಗೆ ಕೆಲಸವಿಲ್ಲದಾಯಿತು ಹಾಗೂ ಮೀನುಗಾರರ ಮೀನುಗಳಿಗೆ ಬೇಡಿಕೆಯಿಲ್ಲದಾಯಿತು. ಕಾರವಾರ ಜಿಲ್ಲಾಧಿಕಾರಿ ಸಮ್ಮುಖದಲ್ಲಿ ಕಾರ್ಖಾನೆಯವರು ಹಾಗೂ ಚಳವಳಿಗಾರರ ಮಧ್ಯೆ ಮಾತುಕತೆ ನಡೆದು, ಕಾರ್ಖಾನೆಯವರು ನಷ್ಟವನ್ನು ತುಂಬಿಕೊಡಲು ಒಪ್ಪಿಕೊಂಡರು. ಹೊಸ ತಂತ್ರಜ್ಞಾನವನ್ನು ಬಳಸಿ ಪಾದರಸಯುಕ್ತ ನೀರನ್ನು ಉತ್ಪಾದನೆಯಲ್ಲಿ ಮರು ಬಳಸಿಕೊಳ್ಳಲಾರಂಭಿಸಿದರು. ಇದರಿಂದಾಗಿ ವಿಷಯುಕ್ತ ಪಾದರಸದಿಂದ ಪರಿಸರವು ವಿಮುಕ್ತಿಗೊಂಡಂತಾಯಿತು.[೫೬] ಕಾರ್ಖಾನೆಯು ಮತ್ತೆ ಕಾರ್ಯಾರಂಭ ಮಾಡಿ ಮುನ್ನಡೆಯುತ್ತಿದೆ.

ಕಲ್ಲಿದ್ದಲು ಶುದ್ಧೀಕರಣ ಕಾರ್ಖಾನೆ : ಉತ್ತರ ಕನ್ನಡ ಜಿಲ್ಲೆಯ ಜೋಯಿಡಾ ತಾಲೂಕಿನ ರಾಮನಗರದಲ್ಲಿ ಕಲ್ಯಾಣಿ ಇಂಡಸ್ಟ್ರೀಸ್‌ನವರು ಕಲ್ಲಿದ್ದಲು ಶುದ್ಧೀಕರಣ ಕಾರ್ಖಾನೆ ಮತ್ತು ೨೦೦ ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್ ಘಟಕ, ಸ್ಥಾಪಿಸಲು ತಯಾರಿ ನಡೆಸುತ್ತಿದ್ದರು. ೩೦೦೦ ಸಾವಿರ ಮಂದಿಗೆ ಉದ್ಯೋಗ ದೊರೆಯುವುದೆಂಬ ಆಸೆ ಹುಟ್ಟಿಸಲಾಗಿತ್ತು. ಬೇರೆ ಕಡೆಯಿಂದ ಕಲ್ಲಿದ್ದಲು ತಂದು ಶುದ್ಧೀಕರಿಸುವ ಉದ್ದೇಶವನ್ನು ಹೊಂದಲಾಗಿತ್ತು. ೧೨೦೦ ಎಕರೆಗಳಷ್ಟು ಭೂಮಿಯಲ್ಲಿ ಕಾರ್ಖಾನೆ ಸ್ಥಾಪನೆಗೊಳ್ಳಲು ಸ್ಥಳೀಯರಿಗೆ ತಿಳಿಯದಂತೆ ರಾಜ್ಯ ಸರ್ಕಾರದ ಉನ್ನತ ಮಟ್ಟದಲ್ಲಿ ಪ್ರಯತ್ನಗಳು, ನಿರ್ಧಾರಗಳು ನಡೆದಿದ್ದವು. ಈ ಪ್ರಯತ್ನದಲ್ಲಿ ಕೆಲವೇ ಹಿತಾಸಕ್ತಿಗಳ ಕೈವಾಡವಿದೆ ಎಂದು ಸ್ಥಳೀಯರು ಮತ್ತು ಪರಿಸರ ಸಂಘಟನೆಗಳು ಆಪಾದಿಸಿದವು.

ಕಾಳಿ ಯೋಜನೆಯಿಂದ ನಿರಾಶ್ರಿತರಾದವರಿಗಾಗಿ ಹೊಸದಾಗಿ ನಿರ್ಮಾಣ ಮಾಡಿರುವ ರಾಮನಗರದಲ್ಲಿ ಮಾಲಿನ್ಯಯುಕ್ತ ಕಾರ್ಖಾನೆ ಸ್ಥಾಪಿಸಲು ನಡೆಸಿರುವ ತಯಾರಿಯನ್ನು ವಿರೋಧಿಸಿ ಉತ್ತರ ಕನ್ನಡ ಜಿಲ್ಲಾ ಪರಿಸರ ಸಂರಕ್ಷಣಾ ಸಮಿತಿ ಹಾಗೂ ವೃಕ್ಷಲಕ್ಷ ಆಂದೋಲನ ಪರಿಸರ ಸಂಘಟನೆಗಳು ೧೯೯೯ರ ಮೇ ೧೦ ರಂದು ರಾಮನಗರದಲ್ಲಿ ಸಭೆಯನ್ನು ಸಂಘಟಿಸಿದವು. ಕರ್ನಾಟಕ ಪವರ್ ಕಾರ್ಪೋರೇಷನ್ ಕಾರ್ಖಾನೆಗೆ ನೀರು ಸರಬರಾಜು ಮಾಡಲು ಒಪ್ಪಿಕೊಂಡಿರುವುದನ್ನು ಖಂಡಿಸಿದವು.[೫೭] ದಾಂಡೇಲಿ, ಜೋಯಿಡಾ, ಹಳಿಯಾಳ, ರಾಮನಗರ ಮುಂತಾದ ಪ್ರದೇಶಗಳಲ್ಲಿ ಕಾರ್ಖಾನೆಯ ವಿರುದ್ಧ ವ್ಯಾಪಕ ಚಳವಳಿ ಕಾಣಿಸಿಕೊಂಡಿತು. ಜನಜಾಗೃತಿ ಮೂಡಿಸುವ ಮತ್ತು ಸರ್ಕಾರದಿಂದ ಮಾಹಿತಿ ಕೇಳುವ ಕೆಲಸ ಬಿರುಸಿನಿಂದ ನಡೆಯಿತು. ಸಂಘಟನೆಯೊಳಗಿನ ಭಿನ್ನ ಮನಸ್ಸುಗಳು ಮತ್ತು ಬಂಡವಾಳ ಇವೆರಡು ಕಾರಣಗಳಿಂದ ಯಾವುದೇ ಪ್ರತಿಭಟನೆಯು ಪರದಾಡುವ ಸ್ಥಿತಿ ತಲುಪುತ್ತದೆ.[೫೮] ಈ ಮಧ್ಯದಲ್ಲಿ ಕಲ್ಯಾಣಿ ಇಂಡಸ್ಟ್ರೀಸ್‌ನವರ ಕಾರ್ಯತಂತ್ರಗಳು ತಾತ್ಕಾಲಿಕವಾಗಿ ನಿಲುಗಡೆ ಹೊಂದಿದವು.

ಅಂಕೋಲ ತಾಲೂಕಿನ ಮಂಜಗುಣಿ ಬಳಿ ಟಾಟಾ ಸ್ಟೀಲ್ ಕಾರ್ಖಾನೆಯ ನಿರ್ಮಾಣ ಪೂರ್ವದ ಸಮೀಕ್ಷೆ ನಡೆದಿತ್ತು. ಮೀನುಗಾರರು ಹಾಗೂ ಹಾಲಕ್ಕಿ ಒಕ್ಕಲಿಗರು ಆರಂಭಿಕ ಪ್ರತಿಭಟನಾ ಸಭೆ ನಡೆಸುವ ಹೊತ್ತಿಗೆ ಕಂಪನಿಯು ಕಾರ್ಖಾನೆ ನಿರ್ಮಾಣವನ್ನು ಕೈಬಿಟ್ಟಿತು. ಕಾರವಾರ ತಾಲೂಕಿನ ಮಾಜಾಳಿಗೆ ೬೦ರ ದಶಕದ ಆರಂಭದಲ್ಲಿ ಕಿರ್ಲೋಸ್ಕರ್ ಕಾರ್ಖಾನೆ ಬರುವ ತಯಾರಿ ನಡೆಸಿತ್ತು. ರೈತರು, ಮೀನುಗಾರರು ವ್ಯಕ್ತಪಡಿಸಿದ ವಿರೋಧಕ್ಕೆ ಮಣಿದ ಕೈಗಾರಿಕೋದ್ಯಮಿಗಳು ಕಾರ್ಖಾನೆ ನಿರ್ಮಾಣಕ್ಕೆ ಮುಂದಾಗಲೇ ಇಲ್ಲ. ತಾಜ್‌ಗುಂಪಿನ ಹೋಟೆಲಿನವರು ಮಾಜಾಳಿಯಲ್ಲಿ ಒಂದು ಭಾರೀ ರೆಸಾರ್ಟ್ ಕಟ್ಟುವ ಯೋಜನೆ ಪ್ರಕಟಿಸಿದರು. ರೈತರು ಹೈಕೋರ್ಟ್‌ನಿಂದ ತಡೆ ತಂದು ತಾಜ್ ಹೋಟೆಲಿನವರಿಗೆ ತಡೆ ಹಾಕಿದರು. ೧೯೯೦ರ ಮಧ್ಯಭಾಗದಲ್ಲಿ ಡಾಲ್ಬನ್ ಕಂಪನಿಯವರು ಮಾಜಾಳಿಯಲ್ಲಿ ಕಲ್ಲಿದ್ದಲು ಶುದ್ಧೀಕರಣ ಘಟಕ ಸ್ಥಾಪಿಸುವ ತಯಾರಿ ನಡೆಸಿದರು. ಪರಿಸರ ಸಂರಕ್ಷಣಾ ಸಮಿತಿಯವರ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಜನರು ಡಾಲ್ಬನ್ ಕಂಪನಿಯನ್ನು ಹಿಮ್ಮೆಟ್ಟಿಸಿದರು. ಕರಾವಳಿಯನ್ನು ಕಾರ್ಖಾನೆಗಳು ಮಲಿನಗೊಳಿಸುವುದನ್ನು ತಡೆಗಟ್ಟುವುದೇ ಈ ಎಲ್ಲ ವಿರೋಧಗಳ ಪ್ರಮುಖ ಉದ್ದೇಶವೆಂದು ಚಳವಳಿಗಾರರು ಸ್ಪಷ್ಟಪಡಿಸಿಕೊಂಡಿದ್ದರು.[೫೯]

[illegible]

ಸರ್. ಎಂ. ವಿಶ್ವೇಶ್ವರಯ್ಯನವರು ತಮ್ಮ 'ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ' ಕೃತಿಯಲ್ಲಿ ದೇಶದ ಪ್ರಗತಿಗೆ ಹಲವು ಯೋಜನೆಗಳನ್ನು ಸೂಚಿಸುವಾಗ 'ಕೈಗಾರಿಕೀಕರಣ ಇಲ್ಲವೇ ನಾಶ' ಎಂದಿದ್ದಾರೆ.[೬೦] ಈ ಮಾತು ಹಲವು ವಿವಿಧ ಯೋಜನೆಗಳಿಗೆ ತುತ್ತಾಗಿರುವ ಉತ್ತರ ಕನ್ನಡ ಜಿಲ್ಲೆಗೆ ಅನ್ವಯಿಸಲಿಲ್ಲ ಎನ್ನಬಹುದಾಗಿದೆ. ತಡವಾಗಿಯಾದರೂ ಈ ಶತಮಾನದ ಆರಂಭದ ವರ್ಷಗಳಲ್ಲಿ ಪರಿಸರ ಮತ್ತು ಅಭಿವೃದ್ಧಿಗಳ ಕುರಿತು ಜಿಲ್ಲೆಯಾದ್ಯಂತ ಚರ್ಚೆಯಾಗುತ್ತಿದೆ. ೧೯೯೮ರ ಜುಲೈ ೨೭ರಂದು ಪ್ರೆಸ್ ಗಿಲ್ಡ್ ಕಾರವಾರ ಮತ್ತು ಜಿಲ್ಲಾಡಳಿತ ಸಂಯುಕ್ತವಾಗಿ ಏರ್ಪಡಿಸಿದ್ದ ಚರ್ಚೆಗಳು, ೨೦೦೭ರ ಜುಲೈ ೭-೮ರಲ್ಲಿ ಯಲ್ಲಾಪುರದಲ್ಲಿನ ಸಮಾವೇಶದವರೆಗೆ ಆಗಾಗ್ಗೆ ಅಲ್ಲಲ್ಲಿ ನಡೆದಿವೆ.[೬೧] 'ಪರಿಸರ ಉಳಿಸಿ, ಅಭಿವೃದ್ಧಿ ನಡೆಸಿ' ಎಂಬ ಹಿನ್ನಲೆಯಿಂದ ಪರಿಸರ ಪೂರಕವಾಗಿರುವ ಕೈಗಾರಿಕೆಗಳು ಬರಲಿ ಎಂಬ ವಿಚಾರವು ಪ್ರಬಲವಾಗುತ್ತಿದೆ. ಇದಕ್ಕೆ ಹೆಚ್ಚುತ್ತಿರುವ ಜನಸಂಖ್ಯೆ ಜೊತೆಗೆ ನಿರುದ್ಯೋಗ ಸಮಸ್ಯೆಗಳು ಕಾರಣಗಳಾಗಿವೆ ಎಂಬುದನ್ನು ಹೋರಾಟಗಾರರು, ಜನಪ್ರತಿನಿಧಿಗಳು ಮನಗಂಡಿರುವುದನ್ನು ಗಮನಿಸಲಾಗಿದೆ. ಅದರಂತೆ ಮುರ್ಡೇಶ್ವರದಲ್ಲಿ ಕಾಂಕ್ರೀಟ್ ಸ್ಲೀಪರ್ ಕಾರ್ಖಾನೆ, ಆಸ್ನೋಟಿಯಲ್ಲಿ ಉಕ್ಕಿನ ಕಾರ್ಖಾನೆ, ಶಿರಸಿಯಲ್ಲಿ ಅರಣ್ಯ ಮತ್ತು ತೋಟಗಾರಿಕೆ ಉತ್ಪನ್ನಗಳ ಸಂಸ್ಕರಣಾ ಘಟಕಗಳು ಸ್ಥಾಪನೆಯಾಗಲಿ, ಸ್ವಾಗತಿಸುತ್ತೇವೆ ಎಂಬ ಜಿಲ್ಲೆಯ ಹಾಗೂ ಸ್ಥಳೀಯ ಜನವರ್ಗದ ಧ್ವನಿಗಳು ಬಲಗೊಳ್ಳುತ್ತಿವೆ. ಸ್ವಾತಂತ್ರ್ಯಪೂರ್ವದ ಎರಡು ಕಾರ್ಖಾನೆಗಳು ಮುಚ್ಚಿದವು, ಆನಂತರದಲ್ಲಿ ಎರಡು ಪ್ರಮುಖ ಕಾರ್ಖಾನೆಗಳು ತಮ್ಮ ತಪ್ಪುಗಳನ್ನು ತಿದ್ದಿಕೊಂಡು ಮುನ್ನಡೆದವು. ನೆಲ ಸಂಬಂಧದ ಪರಿಸರ ಚಳವಳಿಗಳ ಪ್ರಭಾವವು ಈಗಾಗಲೇ ಇರುವ ಕೈಗಾರಿಕೆಗಳ ಮೇಲೆ ಆಗಿರುವುದನ್ನು ಬರಲಿರುವ ಕೈಗಾರಿಕೆಗಳು ಗಮನಿಸುತ್ತವೆ.

೪.೬ ಗಣಿಗಾರಿಕೆ

ರಾಜ್ಯದ ಹಾಗೂ ಉತ್ತರ ಕನ್ನಡ ಜಿಲ್ಲೆಯ ಯಶಸ್ವಿ ಪರಿಸರ ಚಳವಳಿಗಳಲ್ಲಿ ಯಲ್ಲಾಪುರ ತಾಲೂಕಿನ ಬಿಸಗೋಡ ಗಣಿಗಾರಿಕೆ ವಿರುದ್ಧ ನಡೆದ ಜನರ ಪ್ರತಿಭಟನೆ ಮಾದರಿ ಎನ್ನಬಹುದು.[೬೨] ಅಭಿವೃದ್ಧಿಯ ದೃಷ್ಟಿಯಿಂದ ಗಣಿಗಾರಿಕೆ ಅನಿವಾರ್ಯವಾದರೂ, ಅದು ನಡೆಯುತ್ತಿರುವ ರೀತಿ ಅಭಿವೃದ್ಧಿಗೆ ಪೂರಕವಾಗಿಲ್ಲ. ಅಂದರೆ ಗಣಿಗಾರಿಕೆ ನಡೆಯುತ್ತಿರುವ ಪ್ರದೇಶದ ಅಭಿವೃದ್ಧಿಗೆ ಪೂರಕವಾಗಿಲ್ಲ ಎಂದೇ ಅರ್ಥ.[೬೩] ಬಿಸಗೋಡ ಪ್ರದೇಶವು ಘಟ್ಟ ಪ್ರದೇಶದಲ್ಲಿದ್ದು, ನೈಸರ್ಗಿಕ ಅರಣ್ಯ ಸಂಪತ್ತಿನಿಂದ ಕೂಡಿದೆ. ರೈತರು ಭತ್ತ ಬೇಸಾಯ, ಅಡಿಕೆ, ಬಾಳೆ, ಸಾಂಬಾರು ಬೆಳೆಗಳ ತೋಟಗಳು ಹಾಗೂ ಪಶುಪಾಲನೆಯನ್ನು ಅವಲಂಬಿಸಿದ್ದಾರೆ. ಇಡೀ ಜಿಲ್ಲೆಯೇ ನೈಸರ್ಗಿಕ ಸಂಫತ್ತಿನಿಂದ ಕೂಡಿದ್ದು, ಪ್ರಾದೇಶಿಕವಾಗಿ ಬಿಸಗೋಡಿನ ಸುತ್ತಮುತ್ತಲೂ ಮ್ಯಾಂಗನೀಸ್ ಅದಿರು ವಿಪುಲವಾಗಿದೆ. ಇಲ್ಲಿರುವ ಮ್ಯಾಂಗನೀಸ್ ಬಳ್ಳಾರಿ ಜಿಲ್ಲೆಯಲ್ಲಿರುವಂತೆ ಬಯಲುಗುಡ್ಡಗಳಲ್ಲಿ ಇಲ್ಲ, ಅರಣ್ಯಾವೃತವಾಗಿದೆ !

ಮೈಸೂರು ಮಿನರಲ್ಸ್ ಕಂಪನಿಯು ೧೯೯೫ರ ಹೊತ್ತಿಗೆ ಬಿಸಗೋಡ ಪ್ರದೇಶದಲ್ಲಿ ಗಣಿಗಾರಿಕೆ ನಡೆಸಿತ್ತು. ಕ್ರಮೇಣ ಅಲ್ಲಿನ ಗಣಿಗಾರಿಕೆಯಿಂದಾಗಿ ಅರಣ್ಯನಾಶ, ಭೂ ಕುಸಿತ, ಕಾಳಿ ಕಣಿವೆ ನಾಶ, ಗಣಿ ಕಾಯಿದೆ - ಅರಣ್ಯ ಕಾಯಿದೆಗಳ ಉಲ್ಲಂಘನೆ, ಕೃಷಿ ಭೂಮಿಗೆ ಆಪತ್ತು, ಜಾನುವಾರುಗಳ ಸಾವು ಮುಂತಾದ ಅವಘಡಗಳು ಉಂಟಾದವು. ಆ ಪ್ರದೇಶದ ಜನರು ಒಟ್ಟಾಗಿ ಗಣಿವಿರೋಧಿ ನೀತಿಗಳನ್ನು ರಚಿಸಿಕೊಂಡು ಹೋರಾಟಕ್ಕಿಳಿದರು. ವೃಕ್ಷಲಕ್ಷ ಆಂದೋಲನ ಸಂಘಟನೆಯು ಜೊತೆಗೂಡಿತು. ಗಣಿಪ್ರದೇಶದ ವೈಜ್ಞಾನಿಕ ಅಧ್ಯಯನ, ಸತ್ಯಾಗ್ರಹ, ಅರಣ್ಯ ಇಲಾಖೆಗೆ ಮುತ್ತಿಗೆ, ಶ್ರೇಷ್ಠ ನ್ಯಾಯಾಲಯದಲ್ಲಿ ರಿಟ್, ವಿಧಾನಸಭೆ, ಲೋಕಸಭೆಗಳಲ್ಲಿ ವಿಷಯ ಪ್ರಸ್ತಾಪ ಮುಂತಾದ ಕಾರ್ಯಕ್ರಮಗಳು ಗಣಿಗಾರಿಕೆಯನ್ನು ವಿರೋಧಿಸಿ ಎಡಬಿಡದೆ ನಡೆದವು. ಕೇಂದ್ರ ತನಿಖಾ ತಂಡವು ಬಿಸಗೋಡ ಪ್ರದೇಶಕ್ಕೆ ಭೇಟಿ ನೀಡಿ, ಅಧ್ಯಯನ ವರದಿಯನ್ನು ಸಲ್ಲಿಸಿತು. ವರದಿಯ ಪ್ರಕಾರ ೨೦ ಹೆಕ್ಟೇರ್ ಪ್ರದೇಶವನ್ನು ಗಣಿಗಾರಿಕೆಗೆ ಬಿಟ್ಟುಕೊಡಬಹುದೆಂದು ತಿಳಿಸಲಾಗಿತ್ತು. ಪರಿಸರ ಸಂರಕ್ಷಣೆಗಾಗಿ ವರದಿಯನ್ನು ವಿರೋಧಿಸಿ ಚಳವಳಿಯು ಬಿರುಸುಗೊಂಡಿತು. ಆಗಿನ ಕೇಂದ್ರ ಸರ್ಕಾರದ ಪರಿಸರ ಹಾಗೂ ಅರಣ್ಯ ಮಂತ್ರಿ ಸುರೇಶ್ ಪ್ರಭು ಅವರು ಬಿಸಗೋಡ, ಚಕ್ರಬೈಲ ಗಣಿಗಾರಿಕೆ ನಡೆದ ಒಂದೆರಡು ಪ್ರದೇಶಗಳಿಗೆ ಭೇಟಿ ಕೊಟ್ಟರು. ಯಲ್ಲಾಪುರದಲ್ಲಿ ಮಾತನಾಡುತ್ತಾ ಉತ್ತರ ಕನ್ನಡದ ಜನರು ಸಾಕಷ್ಟು ತ್ಯಾಗ ಮಾಡಿದ್ದೀರಿ, ಉತ್ತಮ ಉದ್ದಿಮೆಗಳನ್ನು ಪ್ರೋತ್ಸಾಹಿಸಿ, ಅಭಿವೃದ್ಧಿಗೆ ಕೊಡುಗೆ ನೀಡಿ ಎನ್ನುತ್ತಾ'ಕೊಳ್ಳಗಳನ್ನು ಸಂರಕ್ಷಿಸಬೇಕಾದ್ದು ನಮ್ಮ ಹೊಣೆ, ಅದಕ್ಕೆ ನನ್ನ ಸಹಮತ ಇದೆ' ಎಂದರು.[೬೪] ಗಣಿಗಾರಿಕೆಗೆ ಸಂಬಂಧಿಸಿದ ಕೇಂದ್ರ ತಂಡದ ವರದಿಯನ್ನು ಪರಿಶೀಲಿಸುತ್ತೇನೆ ಎಂದು ಭರವಸೆ ನೀಡಿದರು. ಅವರ ಜೊತೆಯಲ್ಲಿ ಆಗಿನ ಸಂಸದರಾಗಿದ್ದ ಅನಂತಕುಮಾರ ಹೆಗಡೆ, ಆಗಿನ ಶಾಸಕರಾಗಿದ್ದ ವಿಶ್ವೇಶ್ವರ ಹೆಗಡೆ ಕಾಗೇರಿ, ಪರಿಸರ ಹೋರಾಟಗಾರ ಅನಂತ ಹೆಗಡೆ ಆಶೀಸರ ಮುಂತಾದವರು ಜೊತೆಗಿದ್ದು ಮಾಹಿತಿ ನೀಡಿದರು.[೬೫] ಅದೇ ಸಂದರ್ಭದಲ್ಲಿ ಹಾಜರಿದ್ದ ಮೈಸೂರ್ ಮಿನರಲ್ಸ್ ಕಂಪನಿಯ ಅನುರೆಡ್ಡಿ ಹಾಗೂ ಕೆನರಾವೃತ್ತ ಅರಣ್ಯಾಧಿಕಾರಿ ಬಿ.ಶಿವನಗೌಡ ಮತ್ತಿತರ ಅಧಿಕಾರಿಗಳಿಂದ ವಿವರಣೆಗಳನ್ನು ಸಚಿವರು ಪಡೆದರು. ರಾಜ್ಯ ಜನತಾದಳ ಸರ್ಕಾರದ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಬಾರದಿರುವುದಕ್ಕೆ ಅಲ್ಲಿ ಸೇರಿದ್ದವರು ಜನರ ಭಾವನೆಗಳಿಗೆ ರಾಜ್ಯ ಸರ್ಕಾರ ಸ್ಪಂದಿಸುತ್ತಿಲ್ಲವೆಂದು ದೂರಿದರು.[೬೬] ಸುಮಾರು ಮೂರು ವರ್ಷಗಳ ಕಾಲದ ನಿರಂತರ ಹೋರಾಟದ ಫಲವಾಗಿ ಮೈಸೂರು ಮಿನರಲ್ಸ್ ಕಂಪನಿಯು ಬಿಸಗೋಡ ಗಣಿಗಾರಿಕೆಯನ್ನು ಸಂಪೂರ್ಣವಾಗಿ ನಿಲ್ಲಿಸಿತು. ಆನಂತರದಲ್ಲಿ ಯಾವುದೇ ಸರ್ಕಾರಗಳು ಅಲ್ಲಿ ಗಣಿಗಾರಿಕೆಗೆ ಪರವಾನಗಿ ನೀಡಿಲ್ಲ. ೧೯೯೫ರಲ್ಲಿಯೇ ಯಾಣದಲ್ಲಿ ಸುಣ್ಣದ ಗಣಿಗಾರಿಕೆಗೆ ನೀಡಿದ್ದ ಪರವಾನಗಿಯನ್ನು ಗಣಿ ಇಲಾಖೆಯು ಹಿಂಪಡೆಯುವಂತೆ ಮಾಡುವಲ್ಲಿ ವೃಕ್ಷಲಕ್ಷ ಆಂದೋಲನದ ಕಾರ್ಯಕರ್ತರು ಯಶಸ್ವಿಯಾದರು.

ಪಶ್ಚಿಮ ಘಟ್ಟಗಳಲ್ಲಿ ಗಣಿಗಾರಿಕೆ ವಿರೋಧಿಸಿ ಸಹ್ಯಾದ್ರಿ ಗಣಿ ವಿರೋಧಿ ವೇದಿಕೆಯು ಸಾಗರದಲ್ಲಿ ಇರುವಂತೆಯೇ ಉತ್ತರ ಕನ್ನಡ ಜಿಲ್ಲೆಯಲ್ಲಿ ಗಣಿಗಾರಿಕೆಯನ್ನೇ ವಿರೋಧಿಸುವ ಪ್ರತ್ಯೇಕವಾದ ಸಂಘಟನೆಗಳು ಇಲ್ಲ. ಮಲೆನಾಡಿನ ಸುಮಾರು ಇಪ್ಪತ್ತು ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಗಣಿಗಾರಿಕೆಗೆ

ಅನುಮತಿ ಕೋರಿ ಸುಮಾರು ಮೂವತ್ತೈದು ದೇಶಿ ಹಾಗೂ ವಿದೇಶಿ ಕಂಪನಿಗಳು ಅರ್ಜಿ ಹಾಕಿವೆ.[೬೭] ಉತ್ತರ ಕನ್ನಡ ಜಿಲ್ಲೆಯಲ್ಲಿ ಕಲ್ಲು ಕೊರೆಯುವ ಕ್ರಷರ್‌ಗಳು ನಿರಂತರವಾಗಿ ಕಾರ್ಯೋನ್ಮುಖವಾಗಿವೆ. ಅವುಗಳಿಂದುಂಟಾಗುವ ಶಬ್ದ ಮತ್ತು ಧೂಳಿನ ವಿರುದ್ಧವಾಗಿ ಜನರು ದೂರುತ್ತಿದ್ದಾರೆ.[೬೮] ಪರ್ಮಿಟ್ ಇಲ್ಲದ ಕ್ರಷರ್‌ಗಳನ್ನು ರದ್ದುಪಡಿಸುವ ಕ್ರಮಕೈಗೊಳ್ಳಲಾಗುವುದು ಎಂದು ಜಿಲ್ಲಾಡಳಿತ ಎಚ್ಚರಿಕೆ ನೀಡಿದೆ. ಜಿಲ್ಲೆಯೊಳಗಿನ ಬಂಡವಾಳಶಾಹಿಗಳು, ರಾಜಕೀಯ ಧುರೀಣರ ಬೆಂಬಲಿತರು ಎಚ್ಚರಿಕೆಯನ್ನು ಗಮನಿಸಿದಂತೆ ಕಂಡುಬರುತ್ತಿಲ್ಲ. ೧೯೯೭ರಲ್ಲಿ ಸರ್ಕಾರ ಬಹುರಾಷ್ಟ್ರೀಯ ಕಂಪನಿಗಳಿಗೆ ಗಣಿಗಾರಿಕೆ ಮಾಡಲು ಪರವಾನಗಿಯನ್ನು ಕೊಡಲು ಉತ್ತರ ಕನ್ನಡ ಜಿಲ್ಲೆಯಲ್ಲಿ ವೈಮಾನಿಕ ಸಮೀಕ್ಷೆ ನಡೆಸುವ ಯೋಜನೆ ಪ್ರಕಟಿಸಿತು. ಇದನ್ನು ಪ್ರತಿಭಟಿಸಲಾಯಿತು.

ಇತರೆ ಜಿಲ್ಲೆಗಳ ಗಣಿಗಾರಿಕೆಯ ಲಾರಿಗಳು ಕಾರವಾರ, ಬೇಲೇಕೇರಿ ಬಂದರುಗಳನ್ನು ತಲುಪುವಾಗ ಪರಿಸರದ ಮೇಲೆ ಉಂಟು ಮಾಡುತ್ತಿರುವ ಹಾನಿ ಹೆಚ್ಚುತ್ತಿದೆ. ಉತ್ತರ ಕನ್ನಡ ಜಿಲ್ಲೆಯ ಬಹುತೇಕ ಎಲ್ಲ ಹೆದ್ದಾರಿಗಳಲ್ಲಿ ಅದಿರು ಲಾರಿಗಳು ಸಂಚಾರ ಸಮಸ್ಯೆಗೆ ಕಾರಣವಾಗಿವೆ. ನಿಯಮಬಾಹಿರವಾಗಿ ಓವರ್ ಲೋಡ್ ತುಂಬಿದ ಲಾರಿಗಳಿಂದಾಗಿ ರಸ್ತೆಗಳು ಹದಗೆಟ್ಟಿವೆ. ೬೩ನೆಯ ಹೆದ್ದಾರಿಯಲ್ಲಿ ಅರಬೈಲ್ ಘಟ್ಟದಲ್ಲಿ ಆಗಾಗ್ಗೆ ಭೂಕುಸಿತ ಉಂಟಾಗಲು ಅತಿಭಾರದ ಅದಿರು ಹಾಗೂ ಗ್ರಾನೈಟ್ ಹೊತ್ತ ಲಾರಿಗಳ ಓಡಾಟವೂ ಪ್ರಮುಖ ಕಾರಣವೆಂದು ಹೇಳಲಾಗುತ್ತಿದೆ.

ಭಾರತ ಸರ್ಕಾರವು ವಿದೇಶಗಳಿಗೆ ಅದಿರು ರಫ್ತು ಮಾಡಲು ಅನುಮತಿ ನೀಡಿದ ಈ ಸುಮಾರು ಹದಿನೈದು ವರ್ಷಗಳೊಳಗೆ ಕೋಟಿಗಟ್ಟಲೆ ಟನ್ ಅದಿರನ್ನು ಬಳ್ಳಾರಿ ಜಿಲ್ಲೆಯ ಗಣಿಗಳಿಂದ ಉತ್ತರ ಕನ್ನಡ ಜಿಲ್ಲೆಯ ಕಾರವಾರ ಮತ್ತು ಬೇಲೇಕೇರಿ ಬಂದರುಗಳಿಂದ ಸಾಗಿಸಲಾಗಿದೆ. ಅದಿರು ಸಾಗಾಣಿಕೆಯ ಮೊದಲ ಐದಾರು ವರ್ಷಗಳಲ್ಲಿ ಲಾಭ ಮಾಡಿಕೊಂಡ ಗಣಿ ಉದ್ಯಮಿಗಳ ನಡುವಿನ ಪೈಪೋಟಿಯು ರಸ್ತೆಗಳಲ್ಲಿ ಅದಿರು ತುಂಬಿದ ಲಾರಿಗಳ ಸಂಖ್ಯೆಯನ್ನು ಹೆಚ್ಚಿಸಿತು. ಆಗ ನೆಲಮಾಲಿನ್ಯ, ವಾಯುಮಾಲಿನ್ಯ, ಶಬ್ದಮಾಲಿನ್ಯಗಳುಂಟಾಗಿ ಒಂದಾದ ಮೇಲೊಂದರಂತೆ ಸಮಸ್ಯೆಗಳು ಆರಂಭವಾದವು. ಮುಖ್ಯವಾಗಿ ಸಂಚಾರ ಸಮಸ್ಯೆಗೆ ಕಾರಣವಾದ ಅದಿರು ಲಾರಿಗಳ ಓಡಾಟದ ವಿರುದ್ಧ ಜನರು ರಸ್ತೆಗಿಳಿದರು.[೬೯] ಹೆದ್ದಾರಿಗಳ ಎರಡೂ ಬದಿಯಲ್ಲಿ ಅದಿರು ಕೆಂಧೂಳಿನಿಂದ ಕಂಗೆಟ್ಟ ನಿಸರ್ಗ ಸೌಂದರ್ಯಸಂರಕ್ಷಣೆಗಾಗಿ ಅರಣ್ಯ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ದೂರು ಕೊಟ್ಟರು. ರಸ್ತೆ ತಡೆ, ಅಧಿಕಾರಿಗಳಿಗೆ ಘೇರಾವ್, ಹೆದ್ದಾರಿ ಬಳಿ ವಾಸಿಸುವ ಜನರಿಂದ ನಿಯಮಿತವಾಗಿ ನಡೆಯುತ್ತಲೇ ಇವೆ. ಕೆಲವರು ರಸ್ತೆ ಬದಿ ಅಂಗಡಿಗಳನ್ನು ತೆರೆದು ಲಾಭ ಮಾಡಿಕೊಳ್ಳಲು ಅದಿರು ಲಾರಿಗಳ ಓಡಾಟವನ್ನು ಬಯಸಿದರು. 'ಅದಿರು ಲಾರಿಗಳ ಓಡಾಟವು' ಉತ್ತರ ಕನ್ನಡ ಜಿಲ್ಲೆಯ ಈಗಿನ ಪರಿಸರ ಚಳವಳಿಗಳ ಪ್ರಮುಖ ವಸ್ತುವಾಗಿದೆ. ಮಂಗಳೂರಿನ ಬಂದರಿಗೂ ಅದಿರು ಲಾರಿಗಳು ಉತ್ತರ ಕನ್ನಡ ಜಿಲ್ಲೆಯ ರಸ್ತೆಗಳಲ್ಲಿಯೇ ಸಾಗುವುದರಿಂದ ಸಮಸ್ಯೆ ಮತ್ತಷ್ಟು ಹೆಚ್ಚಿದ್ದು, ಪ್ರವಾಸಿಗರು ಬೇಸರಗೊಳ್ಳುತ್ತಿರುವುದನ್ನು ಕಾಣಬಹುದಾಗಿದೆ. ಪತ್ರಿಕಾ ಮಾಧ್ಯಮದಲ್ಲಿ ಈ ಸಮಸ್ಯೆಯನ್ನು ಸವಿವರವಾಗಿ

ಸಂಬಂಧಪಟ್ಟವರೆಲ್ಲರ ಗಮನಕ್ಕೆ ತರಲಾಗುತ್ತಿದೆ. ಆದರೂ 'ಅದಿರು ದೊರೆಗಳ' ವಿರುದ್ಧ ಕ್ರಮಗಳನ್ನು ಜರುಗಿಸಿದುದು ಕಡಿಮೆ. ಮಳೆಗಾಲದ ನೆಪದಲ್ಲಿ ಒಂದೆರಡು ತಿಂಗಳು ಅದಿರು ಸಾಗಾಣಿಕೆಗೆ ನಿಷೇಧ, ಮತ್ತೆ ಮುಂದುವರಿಕೆ, ಮತ್ತದೇ ಸಮಸ್ಯೆಗಳು !

ಅದಿರು ಲಾರಿಗಳ ಓಡಾಟದ ಸಮಸ್ಯೆ ಒಂದೆಡೆಯಾದರೆ, ಬಂದರು ಪ್ರದೇಶಗಳಲ್ಲಿ ಅದಿರು ದಾಸ್ತಾನು ಮಾಡುತ್ತಿರುವುದು ಮತ್ತೊಂದು ಸಮಸ್ಯೆಯಾಗಿದೆ. ಕರಾವಳಿಗೆ ಅದಿರು ಚಟುವಟಿಕೆ ಕಾಲಿಟ್ಟ ಮೇಲೆ ಅದಿರು ಪರ್ವತಗಳು ಕಾರವಾರ, ಬೇಲೇಕೇರಿ, ಅಂಕೋಲಾ ಪ್ರದೇಶಗಳಲ್ಲಿ ನೋಡಸಿಗುತ್ತವೆ. ಈ ಪರ್ವತಗಳು (ಕೃತಕ) ಸಹ್ಯಾದ್ರಿ ಪರ್ವತಕ್ಕೆ ಸಾಟಿಯಾಗ ಹೊರಟಂತೆ ಕಾಣುತ್ತವೆ.[೨೦] ಇಂತಹ ದಾಸ್ತಾನು ಅದಿರುಪರ್ವತಗಳಿಂದ ಸುತ್ತಲಿನ ನಿವಾಸಿಗಳಿಗೆ, ಮೀನುಗಾರರಿಗೆ ಅಪಾಯವುಂಟಾಗಿದೆ.

ಬೇಲೇಕೇರಿಯಲ್ಲಿ ಮೀನುಗಾರರು ಅದಿರು ಕಂಪನಿಗಳ ವಿರುದ್ಧ ಸಾಂಕೇತಿಕ ಧರಣಿ ನಡೆಸಿದರು. ಜಿಲ್ಲಾ ಮೀನು ಮಾರಾಟ ಫೆಡರೇಶನ್ ಅಧ್ಯಕ್ಷ ಗಣಪತಿ ಮಾಂಗ್ರೆ ಅವರು ಮಾತನಾಡಿ ಅದಿರು ಕಂಪನಿಗಳವರು ಏಳು ಪ್ರಮುಖ ಬೇಡಿಕೆಗಳನ್ನು ಈಡೇರಿಸದ ಅದಿರು ಕಂಪನಿಗಳವರಿಗೆ ಶಾಶ್ವತವಾಗಿ ಕಬ್ಬಿಣದ ಅದಿರು ವ್ಯವಹಾರಕ್ಕೆ ತಡೆ ಹಾಕಲಾಗುತ್ತದೆಂದರು. ಧೂಳಿನ ಸ್ವಚ್ಛತೆ, ಕುಡಿಯುವ ನೀರು, ಸ್ಮಶಾನ ಭೂಮಿ ಅತಿಕ್ರಮಣ ತೆರವು ಪ್ರಮುಖ ಬೇಡಿಕೆಗಳು. ಇಂತಹ ಬೇಡಿಕೆಗಳು, ಹೋರಾಟಗಳ ನಡುವೆಯೇ ಅದಿರು ಸಾಗಾಣಿಕೆ ನಡೆಯುತ್ತಲೇ ಇದೆ. ರಾಜಕೀಯ ಪಕ್ಷಗಳು, ಜನಪ್ರತಿನಿಧಿಗಳು, ಮಂತ್ರಿಗಳು ಶಾಮೀಲಾಗಿದ್ದರೆ ಎಂಬುದು ಜನರ ಆರೋಪವಾಗಿದೆ. ತಾಲ್ಲೂಕಿನ ಬೇಲೇಕೇರಿ ಗ್ರಾಮದಲ್ಲಿ ಅದಿರು ಸಾಗಾಣಿಕೆಯಲ್ಲಿ ತೊಡಗಿರುವ ಕಂಪನಿಗಳು ಸಿ.ಆರ್. ಝುಡ್. ಅಧಿನಿಯಮವನ್ನು ಉಲ್ಲಂಘಿಸಿ ಕಾಮಗಾರಿ ನಡೆಸಿವೆ ಹಾಗೂ ಸಮುದ್ರ ಪ್ರದೇಶವನ್ನು ಒತ್ತುವರಿ ಮಾಡಿ ಬೃಹತ್ ಅದಿರು ದಾಸ್ತಾನು ಜಟ್ಟಿಗಳನ್ನು ನಿರ್ಮಿಸಿದ್ದರಿಂದ ಬೇಲೇಕೇರಿ, ಭಾವಿ ಕೇರಿ ಮುಂತಾದ ಪ್ರದೇಶಗಳಲ್ಲಿ ವ್ಯಾಪಕ ಕಡಲ ಕೊರೆತ ಉಂಟಾಗಿದೆ ಎಂದು ಸಂಸದ ಅನಂತಕುಮಾರ ಹೆಗಡೆ ಆರೋಪಿಸಿ, ಪ್ರತಿಭಟನಕಾರರನ್ನು ಬೆಂಬಲಿಸಿದ್ದರು.

ಇತ್ತೀಚೆಗೆ ಗಣಿ ಲೂಟಿ, ಅದಿರು ಸಾಗಾಣಿಕೆ, ಅದಿರು ದಾಸ್ತಾನು ಉತ್ತರ ಕನ್ನಡ ಜಿಲ್ಲೆಯಾಚೆಗಿನ ಬೃಹತ್ ಚರ್ಚಾವಸ್ತುವಾಗಿದ್ದು, ರಾಜ್ಯ-ಕೇಂದ್ರ ಸರ್ಕಾರಗಳ, ಆಡಳಿತ-ವಿರೋಧ ಪಕ್ಷಗಳ ಜಟಾಪಟಿಗೆ ಕಾರಣವಾಗಿದೆ. ಕೇಂದ್ರ ಸರ್ಕಾರ ಅದಿರು ರಫ್ತು ನಿಷೇಧ ಸಾಧ್ಯವಿಲ್ಲ ಎಂದು ಹೇಳಿಬಿಟ್ಟಿದೆ. ರಾಜ್ಯಸರ್ಕಾರ ಪರ್ಯಾಯ ಕ್ರಮಗಳನ್ನು ಕೈಗೊಳ್ಳುತ್ತೇನೆಂದು ಹೇಳುತ್ತಿದೆ. ಅದಿರು ಸಾಗಾಣಿಕೆ ನಿಂತಿಲ್ಲ, ಪರಿಸರ ಚಳವಳಿಯೂ ಬಲಗುಂದಿಲ್ಲ !

೪.೨ 'ಪಶ್ಚಿಮ ಘಟ್ಟ ಉಳಿಸಿ' ಚಳವಳಿ

ಭಾರತದ ದಕ್ಷಿಣದಲ್ಲಿ ನೈಸರ್ಗಿಕ ಖಜಾನೆಯಾಗಿರುವ ಪಶ್ಚಿಮ ಘಟ್ಟಗಳ ಸಾಲು ನಿರಂತರವಾಗಿ ಮಾನವನ ದಾಳಿಗೆ ತುತ್ತಾಗಿ ಸಹನೆ ಕಳೆದುಕೊಳ್ಳುತ್ತಿದೆ.[೨೧] ಪಶ್ಚಿಮ ಘಟ್ಟಗಳ ಹಾಗೂ ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯ ಘಟ್ಟ

ಪ್ರದೇಶದ ಜೀವವೈವಿಧ್ಯತೆಯ ಕುರಿತಾಗಿ ಈ ಅಧ್ಯಯನವು ಈ ಮೊದಲೇ ವಿಶ್ಲೇಷಿಸಿದೆ. 'ಪಶ್ಚಿಮ ಘಟ್ಟ ಉಳಿಸಿ' ಎನ್ನುವ ಚಳವಳಿ ಆರಂಭಗೊಳ್ಳುವುದಕ್ಕೆ ಅನೇಕ ಕಾರಣಗಳಿವೆ. ಗಣಿಗಾರಿಕೆ, ಜಲವಿದ್ಯುತ್ ಯೋಜನೆಗಳು, ವಾಣಿಜ್ಯ ಬೆಳೆಗಳು, ಕೈಗಾರಿಕೆಗಳು, ಮುಂತಾದವು ಪ್ರಮುಖ ಕಾರಣಗಳಾಗಿವೆ. ಅರಣ್ಯ ಮತ್ತು ಪರಿಸರ ನೀತಿಗಳು, ಹೊಸ ಆರ್ಥಿಕ ನೀತಿ, ಬಹುರಾಷ್ಟ್ರೀಯ ಕಂಪನಿಗಳ ಧೋರಣೆಗಳು, ಸರ್ವ ಭಕ್ಷಕರ ಲಾಭ ಗಳಿಕೆಯ ತೀವ್ರತೆ, ಸ್ಥಳೀಯ ಜಾತಿ-ಜನವರ್ಗಗಳ ಸಾಂಸ್ಕೃತಿಕ ಹಿನ್ನೆಲೆ, ಆಯಾ ಸಂದರ್ಭಗಳಲ್ಲಿನ ಜನಪ್ರತಿನಿಧಿಗಳ ವರ್ತನೆಗಳು ಇನ್ನು ಮುಂತಾದುವು ಪಶ್ಚಿಮ ಘಟ್ಟ ಉಳಿಸಿ ಚಳವಳಿಗೆ ಪ್ರೇರಕ ಅಂಶಗಳಾಗಿವೆ.

ಪಶ್ಚಿಮ ಘಟ್ಟ ಉಳಿಸಿ ಚಳವಳಿಯ ಸಂದರ್ಭದಲ್ಲಿ ಚರ್ಚೆಗೊಳಗಾದ ಇನ್ನೊಂದು ಸಂಗತಿಯೆಂದರೆ ಅದರ ಅಭಿವೃದ್ಧಿಯ ಕುರಿತಾದುದ್ದು.[೨೨] ಪಶ್ಚಿಮ ಘಟ್ಟದ ಅಭಿವೃದ್ಧಿಗೆಂದು ಸಾಗರೋತ್ತರ ಅಭಿವೃದ್ಧಿ ಸಂಸ್ಥೆಗಳಿಂದ ಹಣ ಸಂಗ್ರಹಿಸಲಾಯಿತು. ಉದಾಹರಣೆಗೆ ಕರ್ನಾಟಕ ಸರ್ಕಾರವು ಪಶ್ಚಿಮ ಘಟ್ಟ ಉಳಿವಿಗಾಗಿ ಬ್ರಿಟನ್‌ನೊಂದಿಗೆ ಜಂಟೀ ಅರಣ್ಯ ಯೋಜನೆ ಒಪ್ಪಂದ ಮಾಡಿಕೊಂಡಿತು. ಬ್ರಿಟನ್ ₹ ೨೬೦ ಕೋಟಿಯನ್ನು ಪಶ್ಚಿಮ ಘಟ್ಟ ಅರಣ್ಯ ಮತ್ತು ಪರಿಸರ ಯೋಜನೆಗಾಗಿ ನೀಡಿತು. ಸರ್ಕಾರ ಮತ್ತು ಬಹುರಾಷ್ಟ್ರೀಯ ಕಂಪನಿಗಳ ನಡುವಿನ ಒಪ್ಪಂದವಾದ್ದರಿಂದ ಜನ ಸಾಮಾನ್ಯರ ಸಹಭಾಗಿತ್ವದ ಪ್ರಶ್ನೆ ಪ್ರಾಮುಖ್ಯತೆಯನ್ನು ಪಡೆದುಕೊಳ್ಳಲೇ ಇಲ್ಲ. ಅಭಿವೃದ್ಧಿ ಕೇವಲ ಕಡತಗಳಲ್ಲಿ ಮಾತ್ರ ದಾಖಲಾದವು. ಸ್ಥಳೀಯ ಶ್ರೀಮಂತವರ್ಗದ ರಾಜಕೀಯದಿಂದಾಗಿ ಸಾಮ್ಹಾನ್ಯ ಜನ ಸಮುದಾಯವು ಈ ಬೆಳವಣಿಗೆಗಳತ್ತ ಉದಾಸೀನ ತೋರಲಾರಂಭಿಸಿದರು. ಬಂಡವಾಳ ಶಾಹಿ ವರ್ಗವೂ ಇದನ್ನೇ ನಿರೀಕ್ಷಿಸುತ್ತಿತ್ತು.[೨೩] ೧೯೮೭ರಲ್ಲಿ ವಿಶ್ವಬ್ಯಾಂಕ್ ಪಶ್ಚಿಮ ಘಟ್ಟ ಅಭಿವೃದ್ಧಿ ಯೋಜನೆ ಅಡಿಯಲ್ಲಿ ₹ ೨೫ ಕೋಟಿ ನೀಡಿತ್ತು, ಖರ್ಚಾಯಿತು ! ಪಶ್ಚಿಮ ಘಟ್ಟದ ಅಭಿವೃದ್ಧಿ ಯೋಜನೆಯಡಿಯಲ್ಲಿ ಹರಿದು ಬರುತ್ತಿರುವ ವಿದೇಶಿ ಹಣ ಸರಿಯಾದ ರೀತಿಯಲ್ಲಿ ಬಳಕೆಯಾಗುತ್ತಿಲ್ಲ ಎನ್ನುವ ಮಾತು ಎಲ್ಲೆಡೆ ಕೇಳಿ ಬರುತ್ತಿದೆ ಎಂಬ ವಿಚಾರವನ್ನು ನಾಗೇಶ ಹೆಗಡೆಯವರು ತಮ್ಮ ಪಶ್ಚಿಮ ಘಟ್ಟಗಳ ಅಳಿವು-ಉಳಿವು ಎನ್ನುವ ಗ್ರಂಥದಲ್ಲಿ ವ್ಯಕ್ತಪಡಿಸಿದ್ದಾರೆ.[೨೪]

೧೯೮೦ರಿಂದ ಈಚೆಗೆ 'ಪಶ್ಚಿಮ ಘಟ್ಟಗಳನ್ನು ಉಳಿಸಿ' ಎನ್ನುವ ಹೆಸರಿನಲ್ಲಿ ಚಳವಳಿಗಳು ನಡೆದಿವೆ. ಸಾವಿರಾರು ಸಭೆಗಳು, ವಿಚಾರ ಸಂಕಿರಣಗಳು ನಡೆದಿವೆ ಹಾಗೂ ಲೇಖನಗಳು, ಗ್ರಂಥಗಳು, ಸಾಕ್ಷ್ಯಚಿತ್ರಗಳು ಬರುತ್ತಲೇ ಇವೆ. ಅರಣ್ಯ, ಪರಿಸರ ಇನ್ನಿತರ ಇಲಾಖೆಗಳು ಪರಿಸರ ನೀತಿಯ ಕುರಿತಾಗಿ ಹೊಸ ಕಾನೂನು - ಕಾಯಿದೆಗಳನ್ನು ರೂಪಿಸುತ್ತಲೇ ಇವೆ. ಕರ್ನಾಟಕ ಸರ್ಕಾರವು ಸೆಪ್ಟೆಂಬರ್ ೨೦೦೮ ರಿಂದ 'ಪಶ್ಚಿಮ ಘಟ್ಟ ಕಾರ್ಯಪಡೆ' ರಚಿಸಿದೆ. ಅನಂತರ ಹೆಗಡೆ ಅಶೀಸರ ಅವರ ಅಧ್ಯಕ್ಷತೆಯಲ್ಲಿ ವಿವಿಧ ತಜ್ಞರುಗಳ ಪ್ರತಿನಿಧಿತ್ವವಿರುವ ಉನ್ನತ ಮಟ್ಟದ ಸಮಿತಿಯು ಕಾರ್ಯೋನ್ಮುಖವಾಗಿದೆ. ಕಾರ್ಯಪಡೆಯು ತನ್ನ ಪ್ರಮುಖ ಸಾಧನೆಗಳು ಹಾಗೂ ಸರ್ಕಾರಕ್ಕೆ ಸಲ್ಲಿಸುತ್ತಿರುವ ಶಿಫಾರಸ್ಸುಗಳನ್ನು ಸಿದ್ಧಪಡಿಸಿದೆ.[೨೫]

ಪಶ್ಚಿಮ ಘಟ್ಟಗಳನ್ನೊಳಗೊಂಡ ರಾಜ್ಯಗಳ ಪರಿಸರ ಪ್ರಿಯ ಸಂಘಟನೆಗಳು 'ಪಶ್ಚಿಮ ಘಟ್ಟ ಉಳಿಸಿ' ಹೆಸರಿನಲ್ಲಿ ಮೂರು ದಿನಗಳ ಬೃಹತ್ ಜಾಥಾವನ್ನು ಸಂಘಟಿಸಿದವು. ೧೯೮೭ ನವೆಂಬರ್‌ನಿಂದ ೧೯ನೇ ಜನವರಿ

೧೯೮೮ರವರೆಗೆ ನಡೆದ ಪಾದಯಾತ್ರೆಯಲ್ಲಿ ೧೦೦ ಕ್ಕೂ ಹೆಚ್ಚು ಸಂಘ - ಸಂಸ್ಥೆಗಳು ಸೇರಿಕೊಂಡಿದ್ದವು. ಉತ್ತರ ಕನ್ನಡ ಜಿಲ್ಲೆಯಿಂದ ಹೊನ್ನಾವರ ಪರಿಸರ ಕೂಟ, ಶಿರಸಿಯ ಅಪ್ಪಿಕೋ ತಂಡ ಹಾಗೂ ಇನ್ನಿತರ ಪರಿಸರ ಪ್ರಿಯರು ಭಾಗವಹಿಸಿದ್ದರು.

ಉತ್ತರ ಕನ್ನಡ ಜಿಲ್ಲೆಯಲ್ಲಿ ಡಾ. ಕುಸುಮಾ ಸೊರಬ ಅವರ ಜೊತೆಗೂಡಿದ ಎಲ್ಲರೂ 'ಪಶ್ಚಿಮ ಘಟ್ಟ ಉಳಿಸಿ' ಜಾಥಾದಲ್ಲಿ ಭಾಗವಹಿಸಿದರು.[೨೧] ಪಾದಯಾತ್ರೆ ಒಂದು ಆಂದೋಲನವಾಗಿ ಪರಿವರ್ತಿತವಾಗಿ ಪರಸ್ಪರರಲ್ಲಿ ಹೆಚ್ಚಿನ ತಿಳಿವಳಿಕೆಯ ಜೊತೆ ಜೊತೆಗೆ ಪರಿಸರ ಸಮಸ್ಯೆಗಳ ಗಂಭೀರತೆಯ ಅರಿವು ಈ ಆಂದೋಲನಕ್ಕೆ ಒಂದು ನೆಲೆಗಟ್ಟನ್ನು ಹಾಗೂ ಗಾಂಭೀರ್ಯವನ್ನು ಒದಗಿಸಿದೆ.[೨೨] ಈ ಜಿಲ್ಲೆಯಲ್ಲಿ ನಡೆದ ನೆಲಸಂಬಂಧಿ ಹಾಗೂ ಜಲಸಂಬಂಧಿ ಪರಿಸರ ಚಳವಳಿಗಳು ಒಂದಲ್ಲ ಒಂದು ರೀತಿಯಲ್ಲಿ ಪಶ್ಚಿಮಘಟ್ಟ ಉಳಿಸಿ ಚಳವಳಿಯ ಭಾಗವೇ ಆಗಿದ್ದು, ಅವುಗಳನ್ನು 'ನೈಸರ್ಗಿಕ ಸೂಕ್ಷ್ಮ ಪ್ರದೇಶ'ವೆಂದು ಘೋಷಿಸಬೇಕೆಂಬ ಒತ್ತಾಯದ ಮುಂಚೂಣಿಯಲ್ಲಿವೆ. 'ಪರಿಸರ ಉಳಿಸಿ, ಅಭಿವೃದ್ಧಿ ನಡೆಸಿ ಎಂಬ ನೆಲೆಯಿಂದ ಪಶ್ಚಿಮ ಘಟ್ಟ ಉಳಿಸಿ ಚಳವಳಿಯನ್ನು ಗಮನಿಸಿದಾಗ ಅಭಿವೃದ್ಧಿಯು ವ್ಯವಸ್ಥಿತವಾಗಿ ನಡೆಯದೇ, ಪರಿಸರ ಸಂರಕ್ಷಣೆ ಎಂಬುದು ಚರ್ಚೆಯ ವಿಚಾರವಾಗಿಯೇ ಉಳಿದಿರುವುದು ಕಂಡುಬರುತ್ತದೆ.

೪.೮ ರೈಲ್ವೆ ಯೋಜನೆಗಳು

ಸ್ವಾತಂತ್ರ್ಯಪೂರ್ವದಲ್ಲಿ ಬ್ರಿಟಿಷರು ರೈಲ್ವೆ ಹಳಿ ಹಾಕಲು ಅಗತ್ಯವಿರುವ ಮರದ ಸ್ಲೀಪರ್‌ಗಳನ್ನು ಸಾಗಿಸಲು ಅಳ್ನಾವರದಿಂದ ದಾಂಡೇಲಿಗೆ ಸುಮಾರು ೪೬ ಕಿ.ಮೀ. ಉದ್ದದ ರೈಲ್ವೆ ಹಳಿ ಹಾಕಿದ್ದರು. ಜನರ ಪ್ರಯಾಣಕ್ಕೆ ರೈಲು ಓಡಾಟ ಮಾಡದಿದ್ದರೂ, ಗೂಡ್ಸ್ ರೈಲು ಬರುತ್ತಿತ್ತು. ಇದು ಜಿಲ್ಲೆಯ ಮೊದಲ ರೈಲ್ವೆ ಸಂಪರ್ಕ ಎಂದು ದಾಖಲಾಯಿತು. ಈ ರೈಲ್ವೆ ಸಂಪರ್ಕ ಬೇಕು ಅಥವಾ ಬೇಡ ಎಂದು ವಸಾಹತು ಆಡಳಿತವನ್ನು ಪ್ರಶ್ನಿಸಿದ ಇಲ್ಲವೇ ಹೋರಾಟ ನಡೆಸಿದ ದಾಖಲೆಗಳಿಲ್ಲ.

ಕೊಂಕಣ ರೈಲ್ವೆ : ಕೇರಳದಿಂದ ಮುಂಬಯಿವರೆಗೆ ಕರಾವಳಿಯುದ್ದಕ್ಕೂ ಪ್ರಕೃತಿಯ ರಮಣೀಯತೆಯ ನಡುವೆ ಸಾಗುವ ಕೊಂಕಣ ರೈಲ್ವೆಯು ಸುಮಾರು ೭೧೪ ಕಿ.ಮೀ. ಉದ್ದದ ಯೋಜನೆ.[೨೮] ಉತ್ತರ ಕನ್ನಡ ಜಿಲ್ಲೆಯಲ್ಲಿ ಸುಮಾರು ೧೩೦ ಕಿ.ಮೀ. ಹಾದು ಹೋಗುವ ಕೊಂಕಣ ರೈಲ್ವೆಯು ರಾಷ್ಟ್ರೀಯ ಹೆದ್ದಾರಿ ೧೭ ರ ಜೊತೆ ಜೊತೆಗೇ ಸಾಗುತ್ತದೆ. ಹಂತ ಹಂತವಾಗಿ ೧೯೯೭ ರ ಹೊತ್ತಿಗೆ 'ಕೊಂಕಣ ರೈಲ್ವೆ ನಿಗಮ'ದ ಜವಾಬ್ದಾರಿಯಲ್ಲಿ ಸಿದ್ಧಗೊಂಡಿತು ಕೊಂಕಣ ರೈಲ್ವೆ. ಈ ಮಹತ್ತರವಾದ ಕೊಂಕಣ ರೈಲ್ವೆ ಯೋಜನೆಯಿಂದ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಂಪರ್ಕವುಂಟಾಯಿತು. ನೈಸರ್ಗಿಕವಾಗಿ ಸೇತುವೆಗಳು, ಸುರಂಗಗಳ ನಿರ್ಮಾಣದಂತಹ ಅಡೆತಡೆಗಳು ಬಂದವೇ ವಿನಾ ನಿರಾಶ್ರಿತರನ್ನು ಹೊರತುಪಡಿಸಿ, ಇತರರು ಯೋಜನೆಯನ್ನು ವಿರೋಧಿಸಿ ಚಳವಳಿ ಮಾಡಿದ ದಾಖಲೆಗಳು ಕಡಿಮೆ ಎಂಬುದನ್ನು ಗುರುತಿಸಬಹುದಾಗಿದೆ.

ಕೊಂಕಣ ರೈಲ್ವೆ ಯೋಜನೆಗಾಗಿ ಉತ್ತರ ಕನ್ನಡ ಜಿಲ್ಲೆಯ ಐದು ತಾಲೂಕುಗಳು ಅರುವತ್ತೆಂಟು ಗ್ರಾಮುಗಳಲ್ಲಿ ೧೧೪೯ ಎಕರೆ ಖಾಸಗಿ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಭೂಸ್ವಾಧೀನ ಕಾಯಿದೆಯಂತೆ ಪರಿಹಾರ ಮತ್ತು ಶಾಸನ ಬದ್ಧ ಪಾವತಿಗಳನ್ನು ನೀಡಲಾಗಿದೆ. ಹೆಚ್ಚಿನ ಪರಿಹಾರ ಕೋರಿ ೩೭೯ ಪ್ರಕರಣಗಳು ನ್ಯಾಯಾಲಯದಲ್ಲಿವೆ. ಈ ಯೋಜನೆಯಲ್ಲಿ ಪುನರ್ವಸತಿಗೆ ಅವಕಾಶ ಇರುವುದಿಲ್ಲ.[೭೯] ಕೊಂಕಣ ರೈಲ್ವೆಯಿಂದಾದ ನಿರಾಶ್ರಿತರು ಉದ್ಯೋಗಗಳನ್ನು ಪಡೆಯಲು, ಪರಿಹಾರ ಮೊತ್ತವನ್ನು ಹೆಚ್ಚಿಸಿಕೊಳ್ಳಲು ಕಾನೂನು ರೀತ್ಯಾ ಹೋರಾಡುತ್ತಿದ್ದಾರೆ. ಅವರಾಗಲೀ ಅವರನ್ನು ಬೆಂಬಲಿಸಿಯಾಗಲೀ ನಡೆದ ಹೋರಾಟವನ್ನು ದೇಸೀವಾದದ ಹಿನ್ನೆಲೆಯಿಂದ ನೆಲಸಂಬಂಧ'ದ ಪರಿಸರ ಚಳವಳಿ ಎಂದೇ ಕರೆಯಬಹುದಾಗಿದೆ.

ಹುಬ್ಬಳ್ಳಿ - ಅಂಕೋಲಾ ರೈಲು ಮಾರ್ಗ : ಕೊಂಕಣ ರೈಲ್ವೆ ಸಮೀಕ್ಷಾ ಕಾರ್ಯದ ಮೊದಲೇ ಸುಮಾರು ೧೩೦ ವರ್ಷಗಳ ಹಿಂದೆಯೇ ಹುಬ್ಬಳ್ಳಿ - ಕಾರವಾರ ರೈಲ್ವೆ ಸಮೀಕ್ಷೆಯಾಗಿತ್ತು. ೧೮೫೮ರಲ್ಲಿಯೆ ಮೂವರು ಸರ್ವೇಯರ್‌ಗಳ ತಂಡವು ಕಾರವಾರ ಪ್ರದೇಶವು ರೈಲ್ವೆ ಸೌಲಭ್ಯ ಹೊಂದಲು ಎಲ್ಲ ರೀತಿಯಿಂದಲೂ ಅರ್ಹತೆ ಹೊಂದಿದೆ ಎಂದು ವರದಿ ಮಾಡಿದ್ದರು. ಧಾರವಾಡ ಜಿಲ್ಲೆಯ ೪೫ ಕಿ.ಮೀ. ಉತ್ತರ ಕನ್ನಡ ಜಿಲ್ಲೆಯ ಸುಮಾರು ೧೫೧ ಕಿ.ಮೀ. ಸೇರಿ ಒಟ್ಟು ಸುಮಾರು ೧೯೬ ಕಿ.ಮೀ. ಉದ್ದವಾಗಿತ್ತು. ಕೊಂಕಣ ರೈಲ್ವೆ ನಿರ್ಮಾಣವಾದ ಮೇಲೆ ಹುಬ್ಬಳ್ಳಿ - ಅಂಕೋಲ ರೈಲ್ವೆ ಮಾರ್ಗವೆಂದು ಹೆಸರಾಗಿ ಉದ್ದ ಸುಮಾರು ೩೦ ಕಿ.ಮೀ. ಗಳಷ್ಟು ಕಡಿಮೆಯಾಯಿತು. ೧೯೯೯ರಲ್ಲಿ ಆಗಿನ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಹುಬ್ಬಳ್ಳಿಯಲ್ಲಿ ಈ ಯೋಜನೆಗೆ ಅಡಿಗಲ್ಲು ಇರಿಸಿದ್ದರು. ಹುಬ್ಬಳ್ಳಿಯಿಂದ ಕಲಘಟಗಿವರೆಗೆ ರೈಲ್ವೆ ಹಳಿ ಹಾಕುವ ಕಾರ್ಯನಡೆದು ಮುಂದೆ ಸಾಗದೆ ನೆನೆಗುದಿಗೆ ಬಿದ್ದಿದೆ. ಇದಕ್ಕೆ ಯೋಜನೆಗೆ ಖರ್ಚು ಜಾಸ್ತಿ, ಅರಣ್ಯನಾಶ, ಹಾಸನ - ಮಂಗಳೂರು ಮಾರ್ಗನಿರ್ಮಾಣಕ್ಕೆ ಆದ್ಯತೆ, ತಾಳಗುಪ್ಪ - ಹೊನ್ನಾವರ ರೈಲ್ವೆ ಸಮೀಕ್ಷೆಯಂತಹ ಕಾರಣಗಳು ಪ್ರಮುಖವಾಗಿವೆ. ಸುಮಾರು ೧೬೪ ಕಿ.ಮೀ. ಉದ್ದದ (ಖಾಸಗಿ ಜಮೀನು : ೧೧೩.೬೭ ಹೆಕ್ಟೇರ್, ಅರಣ್ಯ ಜಮೀನು ೯೮೩.೬೧ ಹೆಕ್ಟೇರ್, ಒಟ್ಟು ೭೯೭.೨೩ ಹೆಕ್ಟೇರ್) ಈ ರೈಲ್ವೆ ಮಾರ್ಗವನ್ನು ಕೊಂಕಣ ರೈಲ್ವೆ ನಿಗಮಕ್ಕೆ ಒಪ್ಪಿಸಲು ರಾಜ್ಯಸರ್ಕಾರ ೧೯೯೮ ರಲ್ಲಿಯೇ ಯೋಚಿಸಿತ್ತು.[೮೦] ಯಾವುದೇ ಮೂಲದಿಂದಲಾದರೂ ಸರಿ ಹುಬ್ಬಳ್ಳಿ - ಅಂಕೋಲಾ ರೈಲ್ವೆ ಮಾರ್ಗ ನಿರ್ಮಾಣದ ಬೇಡಿಕೆ ಇದೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕೆಲವೇ ಪರಿಸರವಾದಿಗಳು ಹೆಚ್ಚು ಅರಣ್ಯನಾಶವಾಗುತ್ತದೆ, ಇದರಿಂದ ಜೀವವೈವಿಧ್ಯತೆಯ ಮೇಲೆ ಪರಿಣಾಮ ಉಂಟಾಗುತ್ತದೆಂದು ವಾದಿಸಿ, ರೈಲ್ವೆ ಯೋಜನೆಯೇ ಬೇಡವೆಂದು ಕೇಂದ್ರ ಪರಿಸರ ಇಲಾಖೆಯ ಮೊರೆ ಹೋಗಿದ್ದಾರೆ. ೨೦೦೬ರಲ್ಲಿ ಸುಪ್ರೀಂ ಕೋರ್ಟಿನಿಂದ ತಡೆಯಾಜ್ಞೆ ತಂದಿದ್ದಾರೆ. ಜಿಲ್ಲೆಯ ಬೇರೆ ಬೇರೆ ಚಳವಳಿಗಳಲ್ಲಿ ಭಾಗವಹಿಸಿದ ಕೆಲವರು ಹುಬ್ಬಳ್ಳಿ - ಅಂಕೋಲಾ ರೈಲ್ವೆ ಮಾರ್ಗ ಆಗಬೇಕೆಂದು ಒತ್ತಾಯಿಸಿ ಚಳವಳಿ ಮಾಡಿದ್ದಾರೆ. ಸಮೀಕ್ಷೆ, ಮರುಸಮೀಕ್ಷೆ ಅರಣ್ಯ ಮತ್ತು ಪರಿಸರ ಇಲಾಖೆಯಿಂದ ನಡೆಯುತ್ತಲೇ ಇದೆ. ಈ ಅಭಿವೃದ್ಧಿ ಯೋಜನೆಯ ಸಂಬಂಧದಲ್ಲಿ ಪರಿಸರವಾದಿಗಳು ಬೀದಿಗಿಳಿದು ಹೋರಾಟ ಮಾಡಿದ್ದು ಎಲ್ಲೂ ದಾಖಲಾಗಿಲ್ಲ. ಪತ್ರ ಬರೆಯುವುದು,

ದಾವೆ ಹೂಡುವುದು, ಮನವಿ ಸಲ್ಲಿಸುವುದು ಅವರ ಕಾರ್ಯತಂತ್ರಗಳಾಗಿವೆ. ರೈಲ್ವೆ ಮಾರ್ಗ ನಿರ್ಮಾಣ ಕಾರ್ಯ ಮುಂದುವರಿದಿಲ್ಲ. ಪರಿಣಾಮ ಹಾಗೂ ಫಲಿತಾಂಶ ಇನ್ನೂ ಅಂತಿಮವಾಗಿಲ್ಲ.

೪.೯ ಇತರೆ ಚಳವಳಿಗಳು

ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧದ ಪರಿಸರ ಚಳವಳಿಗಳನ್ನು ನಿರ್ದಿಷ್ಟವಾಗಿ ಸಂಖ್ಯಾದೃಷ್ಟಿಯಿಂದ ಇಂತಿಷ್ಟೇ ಎಂದು ಹೇಳಲು ಆಗುವುದಿಲ್ಲ. ಬಹುಸಂಖ್ಯಾತವಾಗಿ ಜನರು ಯೋಜನೆಗಳನ್ನು ಬೆಂಬಲಿಸಿರುವುದನ್ನು, ಅಲ್ಪಸಂಖ್ಯಾತವಾಗಿ ಜನರು ಯೋಜನೆಗಳನ್ನು ವಿರೋಧಿಸಿರುವುದನ್ನು ಈವರೆಗಿನ ನೆಲಸಂಬಂಧದ ಪರಿಸರ ಚಳವಳಿಗಳಲ್ಲಿ ವಿಶೇಷವಾಗಿ ಗಮನಿಸಲಾಗಿದೆ.

ಇಪ್ಪತ್ತೊಂದನೆಯ ಶತಮಾನದ ಮೊದಲ ದಶಕದಲ್ಲಿ ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧದ ಪರಿಸರ ಚಳವಳಿಗಳೆಂದು ಗುರುತಿಸಿ, ದಾಖಲಿಸಿಕೊಂಡಿರುವ ತದಡಿ ಉಷ್ಣವಿದ್ಯುತ್ ಸ್ಥಾವರ ಹಾಗೂ ಹಣಕೋಣ ಉಷ್ಣ ವಿದ್ಯುತ್ ಸ್ಥಾವರ ಯೋಜನೆಗಳು ವಿಭಿನ್ನ ಪರಿಸರ ಚಳವಳಿಗಳಾಗಿ ದಾಖಲುಗೊಂಡಿವೆ. ಅಂದರೆ ಈ ಎರಡು ಯೋಜನೆಗಳನ್ನು ಸಂಖ್ಯಾದೃಷ್ಟಿಯಿಂದ ಬಹುಸಂಖ್ಯಾತರು ವಿರೋಧಿಸಿ, ಅಲ್ಪಸಂಖ್ಯಾತರು ಬೆಂಬಲಿಸಿರುವುದನ್ನು ಅಧ್ಯಯನದ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ.

ತದಡಿ ಉಷ್ಣವಿದ್ಯುತ್ ಸ್ಥಾವರ : ಉತ್ತರ ಕನ್ನಡ ಜಿಲ್ಲೆ ಕರಾವಳಿಯ ಕುಮಟ ತಾಲೂಕಿಗೆ ಸೇರಿರುವ ತದಡಿಯು ಅಘನಾಶಿನಿ ನದಿಯ ಸಾಗರ ಸಂಗಮ ಸ್ಥಳವಾಗಿದೆ. ರೈತರು, ಮೀನುಗಾರರು, ಚಿಪ್ಪಿ ತೆಗೆಯುವ ಕಾರ್ಮಿಕರು, ಉಪ್ಪಿನ ತಯಾರಿಕೆಯಲ್ಲಿ ನೂರಾರು ಶ್ರಮಜೀವಿಗಳು ವಾಸಿಸುವ ಮಾದನಗೇರಿ, ಹಿರೇಗುತ್ತಿ, ಹಿತ್ತಲಮಕ್ಕಿ, ಹೊಸಗದ್ದೆ, ಸಾಣಿಕಟ್ಟ, ನುಶಿಕೋಟೆ, ಬರ್ಗಿ, ಕಿಮಾನಿ, ಮೇಲಿನಕೇರಿ, ತೊರ್ಕೆ, ಅಘನಾಶಿನಿ ಮೊದಲಾದ ಊರುಗಳನ್ನು ವ್ಯಾಪಿಸಿಕೊಂಡಿರುವ ವಿಶಾಲಪ್ರದೇಶವಾಗಿದೆ. ಪ್ರಸಿದ್ಧಯಾತ್ರಾಸ್ಥಳ ಗೋಕರ್ಣಕ್ಕೆ ಸಮೀಪವಿದೆ. ಇಲ್ಲಿ ವ್ಯಾಪಿಸಿರುವ ಸುಮಾರು ೧೮೪೪ ಎಕರೆ ಸಮುದ್ರದ ಉಪ್ಪುನೀರಿನಿಂದ ಆವೃತವಾದ ಖಾಲಿನೆಲವು ಯೋಜನೆಗಳ ಸ್ಥಾಪನೆಗೆ ಮೂಲವಾಗಿದೆ.

೧೯೭೦ರಲ್ಲಿ ಈ ನೆಲವನ್ನು ಕಾರವಾರ ಸಮೀಪದ ಬಿಣಗಾದಲ್ಲಿರುವ ಕಾಸ್ಟಿಕ್ ಸೋಡಾ ಕಾರ್ಖಾನೆಯವರಿಗೆ ಉಪ್ಪು ಉತ್ಪಾದಿಸಲು ಸರ್ಕಾರವೇ ರೈತರಿಂದ ತೆಗೆಸಿಕೊಟ್ಟಿತ್ತು. ಅಲ್ಲಿನ ಉಪ್ಪು ಕಾಸ್ಟಿಕ್ ಸೋಡಾ ತಯಾರಿಕೆಗೆ ಉಪಯುಕ್ತವಲ್ಲ ಎಂದು ಉಪಯೋಗಿಸದೇ ಇರುವ ಭೂಮಿಯು ಕಾರ್ಖಾನೆಯವರ ಬಳಿಯೇ ಉಳಿದಿತ್ತು. ೧೯೯೦ರ ದಶಕದ ಮಧ್ಯಭಾಗದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯು ಈ ಜಾಗವನ್ನು ತನ್ನ ವಶಕ್ಕೆ ತೆಗೆದುಕೊಂಡಿತು. ಸರ್ಕಾರದ ಕೈಯಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದ ಖಾಲಿಜಾಗ ಇರುವುದು ಹಾಗೂ ಅತ್ಯಂತ ಸುರಕ್ಷಿತ ಬಂದರು, ರೈಲು ಮತ್ತು ರಾಷ್ಟ್ರೀಯ ಹೆದ್ದಾರಿ ಸಂಪರ್ಕದ ಅನುಕೂಲಗಳಿರುವುದು ಕೇಂದ್ರ ಸರ್ಕಾರದ ಕಲ್ಲಿದ್ದಲು ಆಧಾರಿತ ಅಲ್ಟ್ರಾ ಮೆಗಾ ಉಷ್ಣವಿದ್ಯುತ್ ಸ್ಥಾವರ ಯೋಜನೆ ಜಾರಿಗೆ ದಾರಿಯಾಯಿತು. ಹದಿನೈದು ಸಾವಿರ ಕೋಟಿ ಬಂಡವಾಳ ಹೂಡಿಕೆಯ ಯೋಜನೆಯು

ಮಂಜೂರಾಯಿತು. ಸಿ.ಆರ್.ಜಡ್. ವ್ಯಾಪ್ತಿಯಲ್ಲಿ ಸೇರುವ ೭೪೫ ಎಕರೆ ಭೂಮಿಯನ್ನು ಹೊರತುಪಡಿಸಿ ೧೯೦೧ ಎಕರೆ ಭೂಮಿಯನ್ನು ಒದಗಿಸಲು ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಹಾಗೂ ಯೋಜನೆಯ ವಸತಿಗಾಗಿ ೧೦೩೨ ಎಕರೆ ಭೂಮಿಯನ್ನು ಅಂಕೋಲ ತಾಲೂಕಿನಲ್ಲಿ ಗುರುತಿಸಲಾಗಿದೆ ಎಂದು ಜಿಲ್ಲಾಡಳಿತವು ವರದಿ ಮಾಡಿತು. 'ಯೋಜನೆ ಕೈ ತಪ್ಪಲು ಬಿಡುವುದಿಲ್ಲ' ಎಂದು ರಾಜ್ಯ ಸರ್ಕಾರವು ಹೇಳಿದ್ದು ಭಾರಿ ಚರ್ಚೆ, ಪ್ರತಿಭಟನೆಗಳಿಗೆ ಕಾರಣವಾಯಿತು.[೮೧]

ತದಡಿಯಲ್ಲಿ ನಿರಾಶ್ರಿತರಾಗುವ ಕುಟುಂಬಗಳ ಸಂಖ್ಯೆ ಕಡಿಮೆ ಇದ್ದು, ಪುನರ್ವಸತಿ ಸಮಸ್ಯೆ ಉಂಟಾಗದಿರುವುದು ಸರ್ಕಾರಕ್ಕೆ ಸಮಾಧಾನ ತಂದ ಪ್ರಮುಖ ವಿಷಯವಾಗಿತ್ತು. ಆದರೆ ವಿದ್ಯುತ್ ತಂತಿಮಾರ್ಗ ನಿರ್ಮಿಸಲು ಅಪಾರ ಕಾಡಿನ ನಾಶ, ಉಷ್ಣವಿದ್ಯುತ್ ಸ್ಥಾವರ ಉಂಟುಮಾಡಬಹುದಾದ ಪರಿಸರ ನಾಶ, ಪಶ್ಚಿಮಘಟ್ಟದ ಸೂಕ್ಷ್ಮಜೀವ ವೈವಿಧ್ಯದ ಮೇಲೆ ಒದಗಬಹುದಾದ ದುಷ್ಪರಿಣಾಮ, ಅಘನಾಶಿನಿ ನದಿ, ಸಮುದ್ರ ತೀರವನ್ನೇ ನಂಬಿಕೊಂಡಿರುವ ಮೀನುಗಾರರು, ಕೃಷಿ ಕುಟುಂಬಗಳ ಜೀವನಾಧಾರ ಭೀತಿಯೇ ಪರಿಸರ ಚಳವಳಿಗೆ ಕಾರಣವಾದವು. ಎಷ್ಟೇ ಆಧುನಿಕ ತಂತ್ರಜ್ಞಾನವನ್ನು ಬಳಸಿದರೂ ವರ್ಷಕ್ಕೆ ೩೦ ರಿಂದ ೪೦ ಲಕ್ಷ ಟನ್ ಹಾರು ಬೂದಿ ಉತ್ಪಾದನೆ ಖಂಡಿತ. ೪೦ ರಿಂದ ೫೦ ಕಿ.ಮೀ. ವ್ಯಾಪ್ತಿಗೆ ಬೂದಿ ಹಾರುವುದನ್ನು ತಡೆಗಟ್ಟುವುದು ಅಸಾಧ್ಯ ಎಂಬುದು ಪರಿಸರ ಹೋರಾಟಗಾರರನ್ನು ಅಧ್ಯಯನ ಸಂಬಂಧದಲ್ಲಿ ಸಂಪರ್ಕಿಸಿದಾಗ ದೊರೆತ ಖಚಿತ ನಿಲುವು ಆಗಿತ್ತು. ಸೂಕ್ಷ್ಮಜೀವಿ ವ್ಯವಸ್ಥೆಯನ್ನು ಬಲಿಗೊಟ್ಟು ಅಭಿವೃದ್ಧಿ ಬೇಡವೆಂಬ ಸುಪ್ರೀಂ ಕೋರ್ಟಿನ ತೀರ್ಪು ಆಧರಿಸಿ ತದಡಿ ಉಷ್ಣವಿದ್ಯುತ್ ಸ್ಥಾವರವನ್ನು ಕೈ ಬಿಡುವಂತೆ ಪರಿಸರ ಸಂಘಟನೆಗಳವರು, ಜಿಲ್ಲೆಯ ಜನಪ್ರತಿನಿಧಿಗಳು, ಬೇಡ್ತಿ ಚಳವಳಿಯಲ್ಲಿ ಮುಂದಾಳತ್ವ ವಹಿಸಿದ್ದ ಸ್ವರ್ಣವಲ್ಲಿ ಶ್ರೀಗಂಗಾಧರೇಂದ್ರ ಸ್ವಾಮಿಗಳ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡು ವಿರೋಧಿಸಿದರು. ಇನ್ನಿತರ ಮಠಾಧೀಶರುಗಳು ಭಾಗವಹಿಸಿ ಚಳವಳಿಗೆ ಬೆಂಬಲ ಘೋಷಿಸಿದರು.[೮೨] ರಸ್ತೆತಡೆ, ಕುಮಟ ಬಂದ್, ಜಿಲ್ಲಾ ಕೇಂದ್ರ ಕಾರವಾರದಲ್ಲಿ ಮೆರವಣಿಗೆಗಳು ತದಡಿ ಯೋಜನೆಯ ವಿರೋಧದ ಸಂಬಂಧವಾಗಿ ನಡೆದ ಈ ಪರಿಸರ ಚಳವಳಿಗಳ ಪ್ರಮುಖ ಘಟನೆಗಳಾಗಿದ್ದವು. ಈ ಅಧ್ಯಯನದ ಸಂದರ್ಭದಲ್ಲಿಯೇ ನಡೆದ ಘಟನೆಯಾದ್ದರಿಂದ ಯೋಜನಾ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಮಾಡುವಾಗ ಕಂಡುಕೊಂಡ ಪ್ರಮುಖ ವಿಷಯಗಳಲ್ಲಿ ಯೋಜನೆಯನ್ನು ಬೆಂಬಲಿಸಿದ ಧ್ವನಿಗಳನ್ನು ಕಂಡು, ಕೇಳಿ ದಾಖಲಿಸಿಕೊಳ್ಳಲಾಯಿತು. ದಾಖಲಿಸಿಕೊಂಡ ವಿವರಗಳ ಪ್ರಕಾರ 'ತದಡಿ ಉಷ್ಣಸ್ಥಾವರ ಪ್ರಗತಿಪರ ವೇದಿಕೆ'ಯವರ ಸ್ಥಳೀಯ ಬಂಡವಾಳಿಗರು, ಕಪ್ಪೆಚಿಪ್ಪು ಸಂಗ್ರಹಿಸಿ ಲಕ್ಷಾಂತರ ರೂಪಾಯಿ ಲಾಭ ಮಾಡಿಕೊಳ್ಳಲು ಯೋಜನೆಯನ್ನು ವಿರೋಧಿಸುತ್ತಿದ್ದಾರೆ ಎಂದು ಆಪಾದಿಸಿದರು. ಈ ನೆಲಸಂಬಂಧದ ಪರಿಸರ ಚಳವಳಿಯಲ್ಲಿ ಯೋಜನೆಯ ಪರವಾಗಿದ್ದವರ ಸಂಖ್ಯೆ ಗೌಣವಾಗಿದ್ದುದರಿಂದ ಚಳವಳಿ ಯಶಸ್ವಿಯಾಯಿತೆಂಬುದನ್ನು ನಿರ್ದಿಷ್ಟ ಪಡಿಸಿಕೊಳ್ಳಲಾಗಿದೆ. ಸರ್ಕಾರಗಳು ಎಷ್ಟೇ ಸಮಜಾಯಿಷಿ ನೀಡಿದರೂ ಪರಿಸರ ಚಳವಳಿಗಾರರ ವಿರೋಧದಿಂದಾಗಿ ತದಡಿ ಯೋಜನೆಯ ಕಾರ್ಯಗತವಾಗುವಲ್ಲಿ ಹಿನ್ನಡೆ ಅನುಭವಿಸಿದೆ.[೮೩]

ಹಣಕೋಣ ಉಷ್ಣವಿದ್ಯುತ್ ಸ್ಥಾವರ : ಕಾರವಾರದಿಂದ ಸುಮಾರು ಹದಿನಾರು ಕಿ.ಮೀ. ದೂರದಲ್ಲಿರುವ ಹಣಕೋಣ ಎಂಬ ಗ್ರಾಮವು ಕಾಳಿನದಿ ದಡದಿಂದ ಅನತಿ ದೂರದಲ್ಲಿದೆ. ಈ ಸ್ಥಳದಲ್ಲಿ ೨೦೦೮ರ ಆರಂಭದಲ್ಲಿ ಹಿಂದ್-ಭಾರತ್ ಪವರ್ ಕಂಪನಿಯವರು ಉಷ್ಣವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ನಿರ್ಧರಿಸಿದರು. ಈ ಖಾಸಗಿ ಕಂಪನಿಯ ನಿರ್ದೇಶಕ ಎ.ಎನ್. ವಾಸುರಾವ್ ಅವರು ಹಣಕೋಣದ ಬಳಿ ೨೩೦ ಎಕರೆ ಖಾಸಗಿ ಜಮೀನು ಖರೀದಿ ಮಾಡಲಾಗಿದ್ದು, ೪೫೦ ಮೆಗಾವ್ಯಾಟ್ ಸಾಮರ್ಥ್ಯದ ಉಷ್ಣವಿದ್ಯುತ್ ಸ್ಥಾವರ ಸ್ಥಾಪಿಸಲಾಗುವುದೆಂದು, ಇದೊಂದು ಪರಿಸರ ಸ್ನೇಹಿ ಯೋಜನೆ ಎಂದು ಹೇಳಿಕೊಂಡು ಕಂಪನಿಯು ಕಾರ್ಯೋನ್ಮುಖವಾಯಿತು. ಹಣಕೋಣ ವ್ಯಾಪ್ತಿಯ ಒಂಬತ್ತು ಹಳ್ಳಿಗಳ ಜನರಿಗೆ ಉದ್ಯೋಗ ಸಿಗಲಿದ್ದು, ಮುಂದಿನ ದಿನಗಳಲ್ಲಿ ಕಂಪನಿಯು ಜನರಿಗೆ ಇನ್ನೂ ಅನೇಕ ಸವಲತ್ತುಗಳನ್ನು ಒದಗಿಸಿಕೊಡುತ್ತದೆಂಬ ಭರವಸೆ ನೀಡಿದರು. ಅದರಂತೆ ಹಣಕೋಣದಲ್ಲಿ ಬೀದಿದೀಪ ಅಳವಡಿಕೆ, ಶೌಚಾಲಯಗಳನ್ನು ನಿರ್ಮಿಸಿಯೂ ಕೊಟ್ಟಿತು. ಸ್ಥಳೀಯ ಜನರು ಯೋಜನೆಯ ಪರ ನಿಲುವು ಹೊಂದಿರುವಾಗಲೇ ಪರಿಸರವಾದಿಗಳ ಪ್ರವೇಶವಾಯಿತು.

ಹಣಕೋಣ ಗ್ರಾಮಾಭಿವೃದ್ಧಿ ಸಂಸ್ಥೆ ಹಾಗೂ ಸ್ಥಾವರ ವಿರೋಧಿ ಸಮಿತಿ ಹಣಕೋಣದಲ್ಲಿ ಸಭೆಯನ್ನು ಏರ್ಪಡಿಸಿದವು.[೬೪] ಸಭೆಯಲ್ಲಿ ವೃಕ್ಷಲಕ್ಷ ಆಂದೋಲನದ ಅನಂತ ಹೆಗಡೆ ಅಶೀಸರ, ಪರಿಸರವಾದಿ ವಿ.ಎನ್. ನಾಯಕ್, ಸಮಗ್ರ ವಿಕಾಸ ಸಂಸ್ಥೆಯ ವೈ.ಬಿ. ರಾಮಕೃಷ್ಣ, ಇಂಧನ ತಜ್ಞ, ಶಂಕರ ಶರ್ಮಾ, ವನ್ಯಜೀವಿ ತಜ್ಞ ಬಾಲಚಂದ್ರ ಸಾಯಿಮನೆ ಮುಂತಾದವರು ಯೋಜನೆ ಎಲ್ಲ ಸಾಧಕಬಾಧಕಗಳನ್ನು ಕುರಿತು ವಿವರಿಸಿರುವುದನ್ನು ಕ್ಷೇತ್ರಕಾರ್ಯದ ನಿಮಿತ್ತ ಖುದ್ದಾಗಿ ಹೋಗಿ ಹಾಜರಿದ್ದು ಗಮನಿಸಲಾಯಿತು.[೬೫] ಯೋಜನೆಯಿಂದ ಕೇವಲ ಮುನ್ನೂರು ಜನರಿಗೆ ಉದ್ಯೋಗ ದೊರೆಯಬಹುದು. ಆದರೆ ಯೋಜನೆಯಿಂದ ಹೊರಬಿಡುವ ಮಲಿನ ಬಿಸಿನೀರಿನಿಂದ ಕಾಳಿನದಿಯ ನೂರಾರು ಜಲಚರಗಳು ನಾಶವಾಗುತ್ತವೆ, ಹತ್ತಾರು ವರ್ಷಗಳಲ್ಲಿ ಮೀನುಗಳೇ ದೊರೆಯುವುದಿಲ್ಲ ಎಂಬೆಲ್ಲಾ ಅಂಕಿ-ಅಂಶಗಳನ್ನು ಮುಂದಿಟ್ಟರು. ೨೦೦೮ರ ಜುಲೈ ತಿಂಗಳಿನಲ್ಲಿ ಹಣಕೋಣ ಉಷ್ಣವಿದ್ಯುತ್ ಸ್ಥಾವರ ವಿರೋಧಿಸಿ ಸಭೆಗಳು, ಜಿಲ್ಲಾ ಕೇಂದ್ರ ಕಾರವಾರದಲ್ಲಿ ಜಾಥಾ, ರಸ್ತೆ ತಡೆ, ಕಾರವಾರ ಬಂದ್ ಮುಂತಾದ ಪ್ರತಿಭಟನಾ ಕಾರ್ಯಕ್ರಮಗಳು ಏರ್ಪಟ್ಟಿದ್ದವು. ಇದೇ ಸಂದರ್ಭದಲ್ಲಿ ಯೋಜನೆಯನ್ನು ಬೆಂಬಲಿಸಿ ಕೆಲವರು ಪ್ರತಿಭಟನೆಗಿಳಿದರು. ಪೊಲೀಸರು ಮಧ್ಯೆ ಪ್ರವೇಶಿಸುವಷ್ಟು ಬಿಗು ವಾತಾವರಣ ನಿರ್ಮಾಣವಾಯಿತು. ನಿರುದ್ಯೋಗ ಸಮಸ್ಯೆ ನಿವಾರಣೆಗೆ ಹಣಕೋಣ ಸ್ಥಾವರ ಬರಲಿ ಎಂದು ಕೆಲವರು ಪತ್ರಿಕಾ ಹೇಳಿಕೆಗಳನ್ನು ಕೊಡುವುದು ವಿಶೇಷವಾಗಿತ್ತು.

೨೦೦೯ರ ಡಿಸೆಂಬರ್ ೨೦ರಂದು ಹಣಕೋಣದ ಸಾತೇರಿ ದೇವಸ್ಥಾನದಲ್ಲಿ ಉಷ್ಣಸ್ಥಾವರ ವಿರೋಧಿ ಹೋರಾಟಗಾರರನ್ನುದ್ದೇಶಿಸಿ ಮಾತನಾಡಿದ ಪರಿಸರವಾದಿ ಮೇಧಾಪಾಟ್ಕರ್ ಅವರು ಜನಹಿತ ಕಡೆಗಣಿಸುವ ತೀರ್ಪುಗಳು ಬಂದರೆ ಕಾನೂನು ಕೈಗೆತ್ತಿಕೊಳ್ಳಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಸಿದರು.[೬೬] ಹಣಕೋಣ ಹೋರಾಟಗಾರರ ಮೇಲೆ ನಡೆಸಲಾದ ದೌರ್ಜನ್ಯ ಅಮಾನವೀಯ. ಹೋರಾಟಗಾರರ ಶಕ್ತಿ ಏನೆಂಬುದು ಸರ್ಕಾರಕ್ಕೆ ಗೊತ್ತು. ಹೀಗಾಗಿ ಇಲ್ಲಿನ ಜೈಲಿನಲ್ಲಿಟ್ಟರೆ ತಾವೇ ತೊಂದರೆಗೆ ಒಳಗಾಗಬೇಕಾಗುತ್ತದೆ ಎಂಬುದನ್ನು ಅರಿತೇ

ಎಲ್ಲರನ್ನೂ ಬಳ್ಳಾರಿ ಜೈಲಿನಲ್ಲಿ ಇರಿಸಲಾಗಿತ್ತು. ಉಷ್ಣಸ್ಥಾವರ ಇಲ್ಲಿಂದ ತೊಲಗುವವರೆಗೆ ಹೋರಾಟ ಮುಂದುವರಿಯುತ್ತದೆ. ಎಂಥ ದೌರ್ಜನ್ಯಕ್ಕೂ ನಾವು ಬಗ್ಗುವುದಿಲ್ಲ ಎಂದರು. ಹಣಕೋಣ ಹೋರಾಟದಲ್ಲಿ ಯಾರೂ ಕಲ್ಲು ತೂರಿಲ್ಲ, ಬಂದೂಕು ಎತ್ತಿಕೊಂಡಿಲ್ಲ. ತಮ್ಮ ಮೇಲೆ ದೌರ್ಜನ್ಯ ನಡೆದಾಗಲೂ ಹೋರಾಟಗಾರರು ಶಾಂತಿಯುತವಾಗಿ ಚಳವಳಿ ಮುಂದುವರಿಸಿರುವುದು ಹೆಮ್ಮೆಯ ಸಂಗತಿ ಎಂದು ಶ್ಲಾಘಿಸಿದರು. ಒಗ್ಗಟ್ಟಿನಿಂದಾಗಿ ಹಣಕೋಣ ಉಷ್ಣವಿದ್ಯುತ್ ಸ್ಥಾವರ ವಿರೋಧಿ ಚಳವಳಿಯು ಯಶಸ್ವಿಯತ್ತ ಸಾಗಿತು. ೨೦೧೦ರ ಜನವರಿ ೨ ರಂದು ಹಿಂದ್-ಭಾರತ್ ಕಂಪನಿಯವರು ಉಷ್ಣವಿದ್ಯುತ್ ಸ್ಥಾವರ ಯೋಜನೆಯನ್ನು ತಮಿಳುನಾಡಿಗೆ ಸ್ಥಳಾಂತರಿಸಲು ನಿರ್ಧರಿಸಿದರು. ನೆಲಸಂಬಂಧದ ಪರಿಸರ ಚಳವಳಿಗಳಲ್ಲಿ ಇದು ಯಶಸ್ವಿಯಾಯಿತೆಂದು ಗುರುತಿಸಲ್ಪಟ್ಟಿತು.

ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧದ ಪರಿಸರ ಚಳವಳಿಗಳಲ್ಲಿ ಸಫಲತೆ ವಿಫಲತೆಗಳನ್ನು ಪಟ್ಟಿ -೪ ರಲ್ಲಿರುವಂತೆ ಗಮನಿಸಬಹುದು. ಕಾಲಮಾನ ಶಾಸ್ತ್ರದ ಚೌಕಟ್ಟಿನಲ್ಲಿ ಆಯಾ ಸಂದರ್ಭದ ದತ್ತಾಂಶಗಳ ಆಧಾರದ ಮೇಲೆ ಪಟ್ಟಿಯನ್ನು ವ್ಯವಸ್ಥೆಗೊಳಿಸಿ ತೀರ್ಮಾನಕ್ಕೆ ಬಂದಿರುವುದೇ ವಿನಾ ಇದೇ ಅಂತಿಮ ತೀರ್ಮಾನವಾಗಿರುವುದಿಲ್ಲ.

ಪಟ್ಟಿ -೪

ನೆಲಸಂಬಂಧದ ಪರಿಸರ ಚಳವಳಿಗಳ ಸಫಲತೆ - ವಿಫಲತೆ

ಕ್ರ.ಸಂ.	ಸಫಲತೆ ಹೊಂದಿದ ಪರಿಸರ ಚಳವಳಿಗಳು	ವಿಫಲತೆ ಹೊಂದಿದ ಪರಿಸರ ಚಳವಳಿಗಳು	ಭಾಗಶಃ ಫಲಿತಾಂಶ ನೀಡಿದ ಪರಿಸರ ಚಳವಳಿಗಳು	ಚಳವಳಿಯೇ ನಡೆಯದ ಯೋಜನೆಗಳು
೧	ಕಟ್ಟಿಗೆ ಮತ್ತು ಹುಲಬನ್ನಿ ಚಳವಳಿಗಳು	-	-	-
೨	ಅಪ್ಪಿಕೋ ಚಳವಳಿ	-	-	-
೩	-	ಕೈಗಾ ಚಳವಳಿ	-	-
೪	-	-	ಸೀಬರ್ಡ್ ನೌಕಾನೆಲೆ ಯೋಜನೆ	-
೫	ಗಣಿಗಾರಿಕೆ	-	ಪಶ್ಚಿಮ ಘಟ್ಟ ಉಳಿಸಿ ಚಳವಳಿ	-
೬	-	-	-	ಕೊಂಕಣ ರೈಲ್ವೆ
೭	-	-	ಹುಬ್ಬಳ್ಳಿ - ಅಂಕೋಲ ರೈಲ್ವೆ ಯೋಜನೆ	-
೮	ಕೈಗಾರಿಕೆಗಳು	-	-	-
೯	ತದಡಿ ಮತ್ತು ಹಣಕೋಣ ಉಷ್ಣವಿದ್ಯುತ್ ಸ್ಥಾವರಗಳು	-	-	-

ಆಧಾರ: ಕ್ಷೇತ್ರಕಾರ್ಯದಿಂದ ಪಡೆದ ದತ್ತಾಂಶಗಳು

ಈ ಪಟ್ಟಿಯಿಂದ ಹೊರತಾಗಿರುವ ಉತ್ತರ ಕನ್ನಡ ಜಿಲ್ಲೆಯ ನೆಲಸಂಬಂಧದ ಯೋಜನೆಗಳೇ ಆಗಿರುವ ಟಿಬೇಟಿಯನ್ ನಿರಾಶ್ರಿತರಿಗೆ ನೀಡಿದ ಸುಮಾರು ೪೦೦೦ ಎಕರೆ ಭೂಮಿ, ಅರಣ್ಯ ಒತ್ತುವರಿ ಮಾಡಿಕೊಂಡು ಕೃಷಿ ಬದುಕು ಸಾಗಿಸುತ್ತಿರುವ ಅಕ್ರಮ-ಸಕ್ರಮದ ವಿಚಾರಗಳು, ಹಾಗೂ ಹೋರಾಟಗಳು, ರಸ್ತೆಗಳ ಅಗಲೀಕರಣ ಯೋಜನೆಗಳು ಕಾರವಾರ ಬಂದರು ವಿಸ್ತರಣೆ, ಅರಣ್ಯದೊಳಗೆ ದೇವಾಲಯ ಮತ್ತು ಸಮುದಾಯ ಭವನಗಳ ನಿರ್ಮಾಣ ಕಾರ್ಯಗಳು, ಶಿಕ್ಷಣ ಸಂಸ್ಥೆಗಳಿಂದಾಗಿ ಒದಗಿಸಲಾಗುತ್ತಿರುವ ಭೂಮಿ ಮುಂತಾದವುಗಳನ್ನು ಅಧ್ಯಯನದ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಿದ್ದರೂ ಪರಿಸರ ಚಳವಳಿಗಳ ವ್ಯಾಪ್ತಿಗೆ ತಂದುಕೊಂಡಿಲ್ಲ. ನೆಲಸಂಬಂಧದ ಚಳವಳಿಗಳ ಸಮಕಾಲೀನವಾಗಿಯೇ ನಡೆದಿರುವ ಜಲಸಂಬಂಧದ ಚಳವಳಿಗಳ ಕುರಿತಾಗಿ ಪ್ರಸ್ತುತ ಅಧ್ಯಯನವು ಮುಂದುವರಿದಿದೆ.

ಕೊನೆ ಟಿಪ್ಪಣಿಗಳು

೧. ಧ್ಯೇಯನಿಷ್ಠ ಪತ್ರಕರ್ತ, ಶತಮಾನ ವಿಶೇಷಾಂಕ, ಶಿರಸಿ ೨೦೦೦ ಪುಟ ೨೯

೨. ಪ್ರೊಜೆಕ್ಟ್ ಸೀಬರ್ಡ್, ಕೈಪಿಡಿ, ಪುಟ ೩

೩. ರಾಜಶೇಖರ ಹೆಬ್ಬಾರ, ಧ್ಯೇಯನಿಷ್ಠ ಪತ್ರಕರ್ತ, ಪಾಕ್ಷಿಕ ಪುರವಣಿ, ಶಿರಸಿ, ಪುಟ ೧

೪. ಅದೇ, ಪುಟ ೧

೫. ಅದೇ, ಪುಟ ೨

೬. ವಿಷ್ಣುನಾಯ್ಕ, ದುಡಿಯುವ ಕೈಗಳ ಹೋರಾಟದ ಕತೆ, ಪುಟ ೨೪

೭. ಸದಾನಂದ ಪಿ.ಎಸ್., ಲೋಕಧ್ವನಿ, ಶಿರಸಿ - ೨೦೦೯, ಪುಟ ೨

೮. ರಾಜಶೇಖರ ಹೆಬ್ಬಾರ, ಪೂರ್ವೋಕ್ತ, ಪುಟ ೨

೯. ಅನುಬಂಧ -೨, ಸೊಪ್ಪಿನ ಬೆಟ್ಟ ಸೌಲಭ್ಯ

೧೦. ನಾಗೇಶ ಹೆಗಡೆ, ಇರುವುದೊಂದೇ ಭೂಮಿ, ಪುಟ ೬೧

೧೧. ಅದೇ, ಪುಟ ೬೮

೧೨. ಶಿವಾನಂದ ಕಳವೆ, ಪಶ್ಚಿಮ ಘಟ್ಟದಲ್ಲಿ ಮೊನೋಕಲ್ಚರ್ ಮಹಾಯಾನ, ಪುಟ ೨೬

೧೩. ಶ್ರೀಧರ ಮಂಗಳೂರ, '೨೫' ಪೂರೈಸಿದ ಅಪ್ಪಿಕೋ ಸಾಧನೆಯ ಮೆಲುಕು, ಲೋಕಧ್ವನಿ ಪತ್ರಿಕೆ, ಪುಟ ೨

೧೪. ಅದೇ, ಪುಟ ೨

೧೫. ಅನುಬಂಧ -೨, ಸುಂದರಲಾಲ್ ಬಹುಗುಣ ಅವರ ವ್ಯಕ್ತಿ ಚಿತ್ರಣ

೧೬. ಅನುಬಂಧ -೧, ಚಿತ್ರಸೂಚಿ

೧೭. ನಾಗೇಶ ಹೆಗಡೆ, ಪೂರ್ವೋಕ್ತ, ಪುಟ ೬೬

೧೮. ಅದೇ, ಪುಟ ೬೬

೧೯. ಅಪ್ಪಿಕೋ ಚಳವಳಿಯಲ್ಲಿ ಭಾಗವಹಿಸಿದ ಎಲ್ಲರನ್ನೂ ಹೆಸರಿಸಲಾಗಿಲ್ಲ

೨೦. ನಾಗೇಶ ಹೆಗಡೆ, ಪೂರ್ವೋಕ್ತ, ಪುಟ ೬೮

೨೧. ರಾಮಚಂದ್ರ ಗುಹಾ, ಜಾಗತಿಕ ಪರಿಸರ ಚರಿತ್ರೆ, ಪುಟ ೧೭೯

೨೨. ಅದೇ, ಪುಟ ೧೭೫

೨೩. ನಾಗೇಶ ಹೆಗಡೆ, ಪೂರ್ವೋಕ್ತ ೯೪

೨೪. ತರಂಗ, ೩ನೇ ಅಕ್ಟೋಬರ್, ೧೯೯೪, ಪುಟ ೧೮

೨೫. ನಾಗೇಶ ಹೆಗಡೆ, ಪೂರ್ವೋಕ್ತ, ಪುಟ ೯೯

೨೬. ಅನುಬಂಧ -೨, ಅಣುವಿದ್ಯುತ್ - ವಿಕಿರಣ ಎಂದರೆ ?!

೨೭. ಕೈಗಾ ಚಳವಳಿಯಲ್ಲಿ ಭಾಗವಹಿಸಿದ ಎಲ್ಲರನ್ನೂ ಹೆಸರಿಸಲಾಗಿಲ್ಲ

೨೮. ನಾಗೇಶ ಹೆಗಡೆ ಹಾಗೂ ಶಾರದಾಗೋಪಾಲ, ಶತಮಾನದ ಕುಸುಮ, ಪುಟ ೫೫

೨೯. ಗಣಪತಿ ಬಿ, ತರಂಗ, ೨ನೇ ಅಕ್ಟೋಬರ್ ೧೯೯೪, ಪುಟ ೧೫ ರಿಂದ ೨೩

೩೦. ಅನುಬಂಧ - ೨, ಕ್ಷೇತ್ರ ಕಾರ್ಯ ಪ್ರಶ್ನಾವಳಿ

೩೧. ನಾಗೇಶ ಹೆಗಡೆ ಹಾಗೂ ಶಾರದ ಗೋಪಾಲ, ಪೂರ್ವೋಕ್ತ, ಪುಟ ೧೦೨

೩೨. ಅನುಬಂಧ - ೧, ಚಿತ್ರಸೂಚಿ

೩೩. ಅನುಬಂಧ - ೧, ಚಿತ್ರಸೂಚಿ

೩೪. ಮುಂಗಾರು ಪತ್ರಿಕೆ, ೨ನೇ ಅಕ್ಟೋಬರ್ ೧೯೮೮, ಪುಟ ೬

೩೫. ಅನುಬಂಧ -೨, ಕರಾವಳಿ ಕಾನೂನು

೩೬. ಗಣಪತಿ ಬಿ, ತರಂಗ, ೧೧ನೇ ಮಾರ್ಚ್ ೧೯೯೯, ಪುಟ ೬೦

೩೭. ಪ್ರಜಾವಾಣಿ, ೧೯ನೇ ಜುಲೈ ೧೯೫೯, ಪುಟ ೬

೩೮. ಅನುಬಂಧ - ೧, ಚಿತ್ರಸೂಚಿ

೩೯. ತರಂಗ, ೧೧ನೇ ಮಾರ್ಚ್ ೧೯೯೯, ಪುಟ ೬೧

೪೦. ಜಿಲ್ಲೆಯ ಬನವಾಸಿಯಲ್ಲಿ ರಾಜಧಾನಿ ಕಟ್ಟಿ ಆಳ್ವಿಕೆ ನಡೆಸಿದ ಕನ್ನಡದ ಮೊದಲ ರಾಜವಂಶ 'ಕದಂಬರ' ನೆನಪಿನಲ್ಲಿ

೪೧. ಅನುಬಂಧ -೧, ನಕಾಶೆ ಸೂಚಿ

೪೨. ಗಣಪತಿ ಬಿ, ಪೂರ್ವೋಕ್ತ, ಪುಟ ೬೧

೪೩. ರಮೇಶ್ ಎಸ್. ಮಾಂಗ್ಲೇಕರ್, ಪಿಎಚ್.ಡಿ. ಅಪ್ರಕಟಿತ ಮಹಾಪ್ರಬಂಧ, ಗೋವಾ ವಿಶ್ವವಿದ್ಯಾನಿಲಯ, ಪುಟ ೯೧

೪೪. ಅನುಬಂಧ -೧, ಚಿತ್ರಸೂಚಿ

೪೫. ಮೋಹನ್‌ಕೃಷ್ಣ ರೈ ಕೆ, ಪರಿಸರ ಚಳವಳಿಗಳು, ಪುಟ ೫೩

೪೬. ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಪುನರ್ವಸತಿ ಹೋರಾಟದಲ್ಲಿನ ಎಲ್ಲರನ್ನೂ ಹೆಸರಿಸಲಾಗಿಲ್ಲ

೪೭. ಸದಾಶಿವ ವೈ, ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳು ನಡೆದು ಬಂದ ದಾರಿ, ಸ್ವರ್ಣದರ್ಪಣ ೧೯೯೮, ಪುಟ ೫೯

೪೮. ಅದೇ, ಪುಟ ೫೯

೪೯. ಅದೇ, ಪುಟ ೫೯

೫೦. ಗಣೇಶ ಪಿ ನಾಡೋರ, ಪ್ರಜಾವಾಣಿ, ೫ನೇ ಜೂನ್ ೨೦೦೩, ಪುಟ - I

೫೧. ಅನುಬಂಧ - ೧, ಚಿತ್ರಸೂಚಿ

೫೨. ಸದಾಶಿವ ವೈ, ಪೂರ್ವೋಕ್ತ, ಪುಟ ೬೦

೫೩. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೫೪

೫೪. 'ಬಿಲ್ಟ್' ಕಾರ್ಖಾನೆಯ ಹೆಸರು ಈಗ 'ಸೋಲಾರೀಸ್ ಕೆಮ್‌ಟೆಕ್' ಲಿ. ಎಂದು ಪುನರ್ನಾಮಕರಣಗೊಂಡಿದೆ.

೫೫. ಅನುಬಂಧ -೧, ಚಿತ್ರಸೂಚಿ

೫೬. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೫೪

೫೭. ಧ್ಯೇಯನಿಷ್ಠ ಪತ್ರಕರ್ತ, ದೈನಿಕ, ಶಿರಸಿ, ೭ನೇ ಮೇ ೧೯೯೯, ಪುಟ ೧

೫೮. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೫೪

೫೯. ಅನಂತ ಹೆಗಡೆ ಅಶೀಸರ, ಹಸಿರುಳಿಸಲು ಹೋರಾಟದ ಹೆದ್ದೆರೆ, ಧ್ಯೇಯನಿಷ್ಠ ಪತ್ರಕರ್ತ, ಶತಮಾನದ ವಿಶೇಷಾಂಕ, ೨೦೦೦, ಪುಟ ೨೭

೬೦. ವಿಶ್ವೇಶ್ವರಯ್ಯ ಎಂ, ಪ್ಲಾನ್ಡ್ ಎಕಾನಮಿ ಫಾರ್ ಇಂಡಿಯಾ, ಪುಟ ೬

೬೧. ಅನುಬಂಧ -೨, ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿ ಕುರಿತು ಹಲವರ ಅಭಿಪ್ರಾಯಗಳು

೬೨. ಅನಂತ ಹೆಗಡೆ ಅಶೀಸರ, ಪೂರ್ವೋಕ್ತ, ಪುಟ ೨೭

೬೩. ಮೋಹನ್‌ಕೃಷ್ಣ ರೈ, ಪೂರ್ವೋಕ್ತ, ಪುಟ ೨೮

೬೪. ಧ್ಯೇಯನಿಷ್ಠ ಪತ್ರಕರ್ತ, ದೈನಿಕ, ೮ನೇ ಅಕ್ಟೋಬರ್ ೧೯೯೮, ಶಿರಸಿ, ಪುಟ ೧

೬೫. ಬಿಸಗೋಡ ಗಣಿ ವಿರೋಧಿ ಹೋರಾಟದಲ್ಲಿ ಭಾಗವಹಿಸಿದ ಎಲ್ಲರನ್ನೂ ಹೆಸರಿಸಲಾಗಿಲ್ಲ

೬೬. ಧ್ಯೇಯನಿಷ್ಠ ಪತ್ರಕರ್ತ, ದೈನಿಕ, ಪೂರ್ವೋಕ್ತ, ಪುಟ ೧

೬೭. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೨೯

೬೮. ಅನುಬಂಧ - ೧, ಚಿತ್ರ ಸೂಚಿ

೬೯. ಅನುಬಂಧ - ೧, ಚಿತ್ರಸೂಚಿ

೭೦. ಕರಾವಳಿ ಮುಂಜಾವು, ದೈನಿಕ, ೨೪ನೇ ಜನವರಿ ೨೦೦೭

೭೧. ನಾಗೇಶ ಹೆಗಡೆ, ಪೂರ್ವೋಕ್ತ, ಪುಟ ೧೬೬

೭೨. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೩೩

೭೩. ಅದೇ, ಪುಟ ೩೩

೨೪. ಅದೇ, ಪುಟ ೩೩

೨೫. ಅನುಬಂಧ - ೨, ಪಶ್ಚಿಮ ಘಟ್ಟ ಕಾರ್ಯಪಡೆಯ ಶಿಫಾರಸುಗಳು

೨೬. ಅನುಬಂಧ - ೧, ಚಿತ್ರಸೂಚಿ

೨೭. ನಾಗೇಶ ಹೆಗಡೆ ಹಾಗೂ ಶಾರದಾಗೋಪಾಲ, ಪೂರ್ವೋಕ್ತ, ಪುಟ ೧೦೭

೨೮. ಅನುಬಂಧ - ೧, ಚಿತ್ರಸೂಚಿ

೨೯. ೨೦೦೭ರಲ್ಲಿ ಆಗಿನ ಮುಖ್ಯಮಂತ್ರಿ ಹೆಚ್.ಡಿ. ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಉತ್ತರ ಕನ್ನಡದ ಜಿಲ್ಲಾಡಳಿತವು ಮಂಡಿಸಿದ ವರದಿಯಿಂದ

೩೦. ಧ್ಯೇಯನಿಷ್ಠ ಪತ್ರಕರ್ತ, ಶಿರಸಿ, ೨೧ನೇ ಏಪ್ರಿಲ್ ೧೯೯೮

೩೧. ಬಾಲಕೃಷ್ಣ ಎಂ ಜಿ, ತದಡಿ ಯೋಜನೆ ವಿವಾದ ಏಕೆ ಪ್ರಜಾವಾಣಿ ೭ನೇ ಸೆಪ್ಟಂಬರ್ ೨೦೦೬

೩೨. ಅನುಬಂಧ - ೧, ಚಿತ್ರಸೂಚಿ

೩೩. ತದಡಿ ಉಷ್ಣವಿದ್ಯುತ್ ಸ್ಥಾವರ ಚಳವಳಿಯಲ್ಲಿ ಭಾಗವಹಿಸಿದ ಎಲ್ಲರನ್ನೂ ಹೆಸರಿಸಲಾಗಿಲ್ಲ

೩೪. ಅನುಬಂಧ - ೧, ಚಿತ್ರಸೂಚಿ

೩೫. ಹಣಕೋಣ ಉಷ್ಣವಿದ್ಯುತ್ ಸ್ಥಾವರ ಚಳವಳಿಯಲ್ಲಿ ಭಾಗವಹಿಸಿದ ಎಲ್ಲರನ್ನೂ ಹೆಸರಿಸಲಾಗಿಲ್ಲ

೩೬. ಅನುಬಂಧ - ೨, ಮೇಧಾ ಪಾಟ್ಕರ್ ಅವರ ವ್ಯಕ್ತಿ ಚಿತ್ರಣ

❑ ❑ ❑

ಅಧ್ಯಾಯ - ೫

ಉತ್ತರ ಕನ್ನಡ ಜಿಲ್ಲೆಯ ಜಲಸಂಬಂಧಿ ಪರಿಸರ ಚಳವಳಿಗಳು

ಉತ್ತರ ಕನ್ನಡ ಜಿಲ್ಲೆಯ ಜಲಸಂಬಂಧಿ ಪರಿಸರ ಚಳವಳಿಗಳು

✦

ಉತ್ತರ ಕನ್ನಡ ಜಿಲ್ಲೆಯಲ್ಲಿ ಜಲಸಂಬಂಧವಾಗಿ ನಡೆದ ಪರಿಸರ ಚಳವಳಿಗಳು ಈ ಮೊದಲು ಅಧ್ಯಯನಕ್ಕೊಳಪಡಿಸಿದ ನೆಲಸಂಬಂಧದ ಪರಿಸರ ಚಳವಳಿಗಳಿಗಿಂತ ವಿಭಿನ್ನವಾದವುಗಳೆಂದು ಗುರುತಿಸಲಾಗಿದೆ. ವಿಶೇಷವಾಗಿ ಕಂಡುಕೊಂಡಿರುವ ಅಂಶವೆಂದರೆ ಜಲಸಂಬಂಧಿ ಯೋಜನೆಗಳಿಂದ ಅಭಿವೃದ್ಧಿಯ ಜೊತೆಗೇ ಪರಿಸರ ಉಳಿಸುವ ಕೆಲಸ ಆಗಿಲ್ಲದಿರುವುದು. ಉದಾಹರಣೆಗೆ ಕಾಳಿ ಕಣಿವೆಯಲ್ಲಿ ಮುಳುಗಡೆಯಾದ ಪ್ರದೇಶ ಸುಮಾರು ೩೨,೭೦೮ ಎಕರೆ. ಈ ಪ್ರದೇಶದಲ್ಲಿದ್ದಷ್ಟೂ ಜನರು ನಿರಾಶ್ರಿತರಾದರು, ಅರಣ್ಯ ಮುಳುಗಡೆಯಾಯಿತು, ಖಗ-ಮೃಗಗಳು ಅಲ್ಲಿಂದ ಖಾಲಿಯಾದವು. ಶಾಶ್ವತವಾಗಿ ನೀರು ನಿಲ್ಲುವಂತಾಗಿ, ರೋಗಗಳು, ಭೂಕುಸಿತ, ಭೂಕಂಪಗಳಿಗೆ ದಾರಿಯಾಯಿತೆಂದು ಪರಿಸರವಾದಿಗಳ ಅಭಿಪ್ರಾಯ.

ಶರಾವತಿ ಜಲವಿದ್ಯುತ್ ಉತ್ಪಾದನಾ ಯೋಜನೆಯಲ್ಲಿ ೨೨೦ ಮೆಗಾವಾಟ್ಸ್ ವಿದ್ಯುತ್ ಉತ್ಪಾದಿಸಲು ೭೦೦ ಹೆಕ್ಟೇರ್‌ನಷ್ಟು ಅರಣ್ಯ ಮುಳುಗಿ ನಾಶಗೊಂಡಿತು.ಇಷ್ಟು ದೊಡ್ಡ ಪ್ರದೇಶವನ್ನು ಅರಣ್ಯವಾಗಿ ಬೆಳೆಯಲು ಕನಿಷ್ಟ ೪೦೦೦ ವರ್ಷಗಳಾದರೂ ಬೇಕಾಗುತ್ತದೆ. ಆದರೂ ಇಂತಹ ಅರಣ್ಯವನ್ನು ಬೆಳೆಸಲು ಸಾಧ್ಯವಿಲ್ಲ.[1] ಈ ವೈಜ್ಞಾನಿಕ ಅಭಿಪ್ರಾಯವನ್ನು ಅಲ್ಲಗಳೆಯಲಾಗದು. ಸುಮಾರು ೧೮೦ ಕಿ.ಮೀ. ಉದ್ದ ಹರಿಯುವ ಕಾಳಿ ನದಿಗೆ ಜಲವಿದ್ಯುತ್ ಉತ್ಪಾದನೆಗಾಗಿ ಈಗಾಗಲೇ ಐದು ಅಣೆಕಟ್ಟುಗಳನ್ನು ಕಟ್ಟಿ ಸಾವಿರಾರು ಹೆಕ್ಟೇರ್ ಅರಣ್ಯ ಭೂಮಿ ಮುಳುಗಡೆಯ ಬೆನ್ನಿನಲ್ಲಿಯೇ ಜಿಲ್ಲೆಯಲ್ಲಿ ಹರಿಯುವ ನದಿಗಳಿಗೆ ಇನ್ನೂ ಒಂದೆರಡು ಅಣೆಕಟ್ಟು ಕಟ್ಟುವ ಯೋಜನೆಗಳು, ಬೇಡ್ತಿ - ವರದಾ ನದಿಗಳನ್ನು ಜೋಡಿಸಿ, ಪೂರ್ವದ ಬಯಲು ಜಿಲ್ಲೆಗಳಿಗೆ ನೀರುಣಿಸುವ ಯೋಜನೆಗಳನ್ನು ತಡೆಯುವ ಚಳವಳಿಗಳು ನಡೆದಿವೆ.

ಲಾಭ - ನಷ್ಟಗಳ ದೃಷ್ಟಿಯಿಂದ ನೆಲ ಸಂಬಂಧದ ಯೋಜನೆಗಳಿಂದ ಜಲಸಂಬಂಧದ ಯೋಜನೆಗಳು ಅತೀ ಹೆಚ್ಚುನಷ್ಟದಿಂದ ಕೂಡಿದ್ದು, ಅಪಾಯಕಾರಿಯೂ ಆಗಿವೆ. ಅಣೆಕಟ್ಟುಗಳಲ್ಲಿ ನಿಂತ ನೀರಿನಿಂದ ಖಾಯಿಲೆಗಳು, ಭೂಕುಸಿತ, ಭೂಕಂಪಗಳು ಕಾಣಿಸಿಕೊಳ್ಳುತ್ತವೆ.[2] ಜಲಸಂಬಂಧದ ಯೋಜನೆಗಳಿಂದ ಕಳೆದುಕೊಂಡ ಭೂಮಿಯನ್ನು ಮತ್ತೆ ಪಡೆಯಲು, ಅಣೆಕಟ್ಟು ಒಡೆದು ಪಡೆದರೂ ಹಿಂದಿನ ಸ್ಥಿತಿಗೆ ತರಲು ಸಾಧ್ಯವೇ ಇಲ್ಲ. ಜಲಸಂಬಂಧದ ಯೋಜನೆಗಳು ಸಂಪೂರ್ಣವಾಗಿ ಬಹುಜನರ ಸಂಪರ್ಕದಿಂದ ದೂರವೇ ಉಳಿಯುತ್ತವೆ. ನಿಷೇಧಿತ ಪ್ರದೇಶಗಳಾಗಿರುವ ಅಲ್ಲಿಗೆ ಅನುಮತಿ ಪಡೆದು ಅಣೆಕಟ್ಟು, ಕೃತಕ

ಉದ್ಯಾನವನಗಳನ್ನು ನೋಡಿ ಬರುವುದೊಂದೇ ಲಾಭ. ಇಂತಹ ಯೋಜನೆಗಳಿಂದ ನಿರಾಶ್ರಿತರಾದವರು ಮತ್ತೆ ನಿರಾಶ್ರಿತರಾಗುತ್ತಾರೆ. ಉದಾಹರಣೆಗೆ ಸುಪಾ ಅಣೆಕಟ್ಟಿನಿಂದ ನಿರಾಶ್ರಿತರಾದವರಿಗೆ ಕಾಳಿನದಿಯ ಇತರೆಡೆಗಳಲ್ಲಿ ಭೂಮಿ ನೀಡಲಾಯಿತು. ಕಾಳಿ ವಿದ್ಯುತ್ ಯೋಜನೆಗಳನ್ನು ಕೈಗೆತ್ತಿಕೊಂಡಾಗ ಅದೇ ನಿರಾಶ್ರಿತರು ಮತ್ತೆ ನಿರಾಶ್ರಿತರಾಗಿ ಬೇರೆಡೆಗೆ ತೆರಳಬೇಕಾಯಿತು. ಇಂತಹ ಎಲ್ಲ ಅವಘಡಗಳ ಹಿನ್ನೆಲೆಯಲ್ಲಿ ಜಲಸಂಬಂಧದ ಪರಿಸರ ಚಳವಳಿಗಳು ವಿಶಿಷ್ಟವೆನಿಸಿಕೊಂಡು, ಪ್ರತ್ಯೇಕವಾದ ಅಧ್ಯಾಯದಲ್ಲಿ ವಿವರವಾದ ಅಧ್ಯಯನಕ್ಕೆ ಅವಕಾಶ ಮಾಡಿಕೊಟ್ಟಿವೆ.

೫.೧ ಕಾಳಿ ಜಲವಿದ್ಯುತ್ ಯೋಜನೆಗಳು

ಉತ್ತರ ಕನ್ನಡ ಜಿಲ್ಲೆ ಹಾಗೂ ಗೋವಾ ರಾಜ್ಯದ ಗಡಿಯಲ್ಲಿರುವ 'ಡಿಗ್ಗಿ'ಯಲ್ಲಿ ಉಗಮವಾದ ಕಾಳಿ ನದಿಯು ಜೋಯಿಡಾ, ಹಳಿಯಾಳ, ಯಲ್ಲಾಪುರ ಮತ್ತು ಕಾರವಾರ ತಾಲೂಕುಗಳಲ್ಲಿಸುಮಾರು ೧೮೪ ಕಿ.ಮೀ. ಹರಿದು ಕಾರವಾರದ ಬಳಿ ಅರಬ್ಬೀ ಸಮುದ್ರ ಸೇರುತ್ತದೆ. ಸಮುದ್ರ ಮಟ್ಟದಿಂದ ೬೧೧ ಮೀಟರ್ ಎತ್ತರದ ಡಿಗ್ಗಿಯೇ ಕಾಳಿ ಮೂಲವೆಂದು ಸಾಮಾನ್ಯ ತಿಳುವಳಿಕೆಯಾಗಿದೆ. ಆದರೆ ಡಿಗ್ಗಿಯಿಂದ ೧೫ ಕಿ.ಮೀ. ದೂರ ಮುನ್ನಡೆದರೆ·೩೭ ಮೀಟರ್ ಎತ್ತರದಲ್ಲಿರುವ 'ಕುಶಾವಳಿ' ಕಾಳಿಯ ಮೂಲವೆಂದು ವೈಜ್ಞಾನಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸತ್ಯವಾಗಿದೆ ಎಂಬುದಾಗಿ ಪರಿಸರ ಅಧ್ಯಯನಾಸಕ್ತ ಶಿವಾನಂದ ಕಳವೆ ಹೇಳುತ್ತಾರೆ.[೩] ಕಾಳಿನದಿಯು ಪಶ್ಚಿಮ ಘಟ್ಟ ಶ್ರೇಣಿಯಲ್ಲಿ ಐದು ಉಪನದಿಗಳನ್ನು (ಪಾಂಡ್ರಿ, ಕನೇರಿ, ಬಾರ್ಚಿ, ತಟ್ಟಿಹಳ್ಳಹಾಗೂ ವಾಕಿ) ಸೇರಿಸಿಕೊಂಡು ಹರಿಯುತ್ತ ಗೊಂಡಾರಣ್ಯದ ತರಗೆಲೆಗಳು ಕೊಳೆತು ಕಪ್ಪಾಗಿ 'ಕಾಳಿ' ಎನಿಸಿಕೊಂಡಿದೆ. ಆದರೆ "ಆಕಾಶವೇ ಕಾಣದಂತೆ ನದಿಯ ಮೇಲೆ ಗಿಡಮರಗಳ ಚಾವಣಿ ಇದ್ದರೆ ನೀರು ನೀಲಿಯಾಗಿ ಕಾಣುವುದಿಲ್ಲವೆಂದು ನಾಗೇಶ ಹೆಗಡೆ ಬರೆದಿದ್ದಾರೆ.[೪]

ನಿತ್ಯಹರಿದ್ವರ್ಣ ಕಾಡಿನೊಳಗೆ ಸದಾ ತುಂಬಿ ಹರಿಯುವ, ಸಹ್ಯಾದ್ರಿಯ ಇಳುಕಲಿನಲ್ಲಿ ದಿಢೀರ್ ಧುಮುಕುವ ಈ ನದಿಯಿಂದ ಅಗ್ಗವಾಗಿ ವಿದ್ಯುತ್ ಉತ್ಪಾದಿಸಲು ಸಾಧ್ಯೆಂದು ಯೋಜನಾ ತಜ್ಞರು ಲೆಕ್ಕ ಹಾಕಿದರು. ೧೯೭೦ ರಲ್ಲಿ ಅಸ್ತಿತ್ವಕ್ಕೆ ಬಂದಿದ್ದ ಕರ್ನಾಟಕ ಪವರ್‌ಕಾರ್ಪೋರೇಷನ್‌ಗೆ ಈ ಕೆಲಸ ಒಪ್ಪಿಸಲಾಯಿತು. ಮೂಲ ಕಾಳಿಗೆ ಐದು ಅಣೆಕಟ್ಟುಗಳನ್ನೂ, ತಟ್ಟಿಹಳ್ಳ, ಕನೇರಿ ಹಾಗೂ ವಾಕಿ ಉಪನದಿಗಳಿಗೆ ಐದು ಒಡ್ಡುಗಳನ್ನು ನಿರ್ಮಿಸಿ ಒಟ್ಟು ೧೩೨೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸಲು ನಿರ್ಧರಿಸಲಾಯಿತು. ಕಾಳಿ ಹೈಡ್ರೋ ಎಲೆಕ್ಟ್ರಿಕ್ ಪ್ರಾಜೆಕ್ಟ್ ಎಂಬ ಹೆಸರಿನ ಕಾರ್ಯಯೋಜನೆಯು ೧೯೭೧ ರಿಂದ ಜಾರಿಯಾಗಿ ಮೊದಲ ಹಂತದಲ್ಲಿ ೯೧ ಮೆಗಾವ್ಯಾಟ್, ಎರಡನೇ ಹಂತದಲ್ಲಿ ೨೭೮ ಮೆಗಾವ್ಯಾಟ್ ಹಾಗೂ ಮೂರನೇ ಹಂತದಲ್ಲಿ ೧೨೮ ಮೆಗಾವ್ಯಾಟ್ ಒಟ್ಟು ಸೇರಿ ೧೩೧೬ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡುವ ಸಿದ್ಧತೆಯಲ್ಲಿ ತೊಡಗಿಸಿಕೊಂಡಿತು.[೫]

ಕಾಳಿ - ಒಂದನೇ ಹಂತದ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ೧೯೭೫ ರಿಂದ ೧೯೭೯ರವರೆಗೆ ನಡೆಸಲಾಗಿದೆ. ಒಟ್ಟು ೫೫೫೨ ಎಕರೆ ಖಾಸಗಿ ಜಮೀನನ್ನು ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ.ಒಟ್ಟು ೬೨

ಗ್ರಾಮಗಳು, ೧೯೨೪ ಕುಟುಂಬಗಳು ಈ ಯೋಜನೆಯಿಂದ ಬಾಧಿತವಾಗಿರುತ್ತವೆ. ಎಲ್ಲ ನಿರಾಶ್ರಿತರಿಗೆ ಅವರ ಉದ್ಯೋಗ ಹಾಗೂ ಭೂ ಸ್ವಾಧೀನ ಪಡಿಸಿಕೊಂಡ ಹಿಡುವಳಿಗೆ ಅನುಗುಣವಾಗಿ ಸರ್ಕಾರದ ಆದೇಶ ನಂ. ಪಿಡಬ್ಲ್ಯುಡಿ / ೨೮೨ / ಪಿಪಿಸಿ / ೮೫, ದಿ. ೨೩.೧೨.೧೯೮೫ದನ್ವಯ ಐದು ಎಕರೆಗಿಂತ ಹೆಚ್ಚು ಭೂಮಿ ಕಳೆದುಕೊಂಡವರಿಗೆ ತಲಾ ₹ ೩೫,೦೦೦, ಒಂದರಿಂದ ಐದು ಎಕರೆ ಜಮೀನು ಕಳೆದುಕೊಂಡವರಿಗೆ ತಲಾ ₹ ೨೦,೦೦೦ ಹಾಗೂ ಒಂದು ಎಕರೆಯವರಿಗೆ ತಲಾ ₹ ೧೫,೦೦೦ ಮತ್ತು ಭೂ ರಹಿತ ಕೃಷಿ ಕಾರ್ಮಿಕರು, ಸಣ್ಣ ವ್ಯಾಪಾರಿಗಳು, ಕುಶಲಕರ್ಮಿಗಳು ಇತ್ಯಾದಿಯವರಿಗೆ ತಲಾ ₹ ೧೦,೦೦೦ ಪುನರ್ವಸತಿ ಅನುದಾನ ನೀಡಲಾಗಿದೆ. ಪ್ರತಿ ನಿರಾಶ್ರಿತರ ಕುಟುಂಬಕ್ಕೆ ೮೦ x ೧೨೦ ಮತ್ತು ೪೫ x ೬೦ ಅಡಿ ಅಳತೆಯ ನಿವೇಶನ ಹಾಗೂ ತಲಾ ₹ ೨೫೦೦ ಸಾಗಣಿಕ ವೆಚ್ಚ ನೀಡಲಾಗಿದೆ. ಈ ನಿರಾಶ್ರಿತರಿಗೆ ಜೋಯಿಡಾ ತಾಲೂಕಿನ ರಾಮನಗರದಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದೆ. ಅಗತ್ಯವಿರುವ ಮೂಲಭೂತ ಸೌಲಭ್ಯಗಳನ್ನು ಒದಗಿಸಲಾಗಿದೆ. ೮೫ ಜನರಿಗೆ ಕೆ.ಪಿ.ಸಿ.ಯಲ್ಲಿ ಉದ್ಯೋಗ ನೀಡಲಾಗಿದೆ.[೬]

ಕಾಳಿ ಮೊದಲ ಹಂತದ ಸುಪಾ, ಬೊಮ್ಮನಹಳ್ಳಿ, ತಟ್ಟಿಹಳ್ಳ ಯೋಜನೆಗಳಿಂದಾಗಿ ವಶಪಡಿಸಿಕೊಂಡ ಖಾಸಗಿ ಭೂಮಿ ಮತ್ತು ೨೫೦೦೦ ಎಕರೆ ಅರಣ್ಯ ಭೂಮಿಯೂ ಸೇರಿ ಒಟ್ಟು ಸುಮಾರು ೩೦,೦೦೦ ಎಕರೆ ಮುಳುಗಡೆಯಾಯಿತು. ಅಷ್ಟು ಪರಿಸರವೂ ಮುಳುಗಡೆಯಾಯಿತೆಂದೇ ಅರ್ಥ. ನಿರಾಶ್ರಿತರು ಹೊಸ ಜಾಗದಲ್ಲಿ 'ಜೀವನ ನಡೆಸಲು ಕಷ್ಟವಾಗಿ ಕೆಲವರು ದೇಹ ಮಾರಿಕೊಂಡು ಬದುಕುವ ಸ್ಥಿತಿ ತಲುಪಿರುವುದನ್ನು, ಅಧಿಕಾರಿಗಳ ಕಿರುಕುಳ ಹಾಗೂ ಹೊಸ ಜಾಗದಲ್ಲಿ ಹೊರಗಡೆಯಿಂದ ಬಂದ ಅತಿಕ್ರಮಣದಾರರ ಉಪಟಳ ಹೆಚ್ಚಿರುವುದನ್ನು ಮಾಧ್ಯಮಗಳು ದಾಖಲಿಸಿರುವುದನ್ನು ಗಮನಿಸಲಾಗಿದೆ.[೭] ಈ ಹಂತದಲ್ಲಿ ಮುಳುಗಡೆಯಾದ ಪರಿಸರ ಸಂರಕ್ಷಣೆಗಿಂತ ನಿರಾಶ್ರಿತರ ಬದುಕಿನ ಹೋರಾಟವನ್ನು ಗುರುತಿಸಬಹುದು. ನಿರಾಶ್ರಿತರು ಹೆಚ್ಚುವರಿ ಪರಿಹಾರ ಕೋರಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದರು. (ಜಿಲ್ಲಾ ಆಡಳಿತದ ಅಧಿಕೃತ ವರದಿ ೨೦೦೭) ಒಟ್ಟು ೧೪೮೦ ಪ್ರಕರಣಗಳು ದಾಖಲಾಗಿ ೪೦೦ ಪ್ರಕರಣಗಳು ಇತ್ಯರ್ಥವಾಗದೇ ಬಾಕಿ ಉಳಿದಿರುವುದು ನಿರಾಶ್ರಿತರ ಬವಣೆ, ಸರ್ಕಾರಿ ಧೋರಣೆಗಳನ್ನು ತೋರಿಸುತ್ತದೆ. ರಾಮನಗರದಲ್ಲಿ ಕಲ್ಯಾಣಿ ಇಂಡಸ್ಟ್ರೀಸ್‌ನವರು ಕಲ್ಲಿದ್ದಲು ಘಟಕ ಸ್ಥಾಪಿಸಲು ಮುಂದಾಗಿದ್ದನ್ನು ಪರಿಸರವಾದಿಗಳು ವಿರೋಧಿಸಿದ ರೀತಿಯನ್ನು ಗಮನಿಸಲಾಗಿದೆ. ನಿರಾಶ್ರಿತರಿಗೆ ಎಲ್ಲ ಸೌಲಭ್ಯಗಳನ್ನು ನೀಡಲಾಗಿದೆ ಎಂದು ತಿಳಿದಿರುವ ಕೆ.ಪಿ.ಸಿ.ಯವರು ಕಾಳಿ-ಎರಡು ಮತ್ತು ಮೂರನೇ ಹಂತದ ಯೋಜನೆಗಳಿಗೆ ಮುಂದಾದರು.

ಕಾಳಿನದಿಯ ಎರಡನೆಯ ಹಂತದ ಜಲವಿದ್ಯುತ್ ಯೋಜನೆಯಲ್ಲಿ ಕೊಡಸಳ್ಳಿ, ಕದ್ರಾ ಅಣೆಕಟ್ಟೆಗಳ ನಿರ್ಮಾಣ ಸಂದರ್ಭದಲ್ಲಾದ ಘಟನೆಗಳು ರಾಜ್ಯಾದ್ಯಂತ ಪರಿಸರ ಪ್ರಿಯರ ಗಮನ ಸೆಳೆದಿವೆ. ಈ ಯೋಜನೆಗೆ ಭೂ ಸ್ವಾಧೀನ ಪ್ರಕ್ರಿಯೆಯನ್ನು ೧೯೭೯ ರಿಂದ ೧೯೮೩ರವರೆಗೆ ನಡೆಸಲಾಗಿದೆ. ಒಟ್ಟು ೨೧೫೬ ಎಕರೆ ಖಾಸಗಿ ಜಮೀನನ್ನು ಭೂ ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಅರಣ್ಯ ಭೂಮಿಯೂ ಸೇರಿ ಈ ಯೋಜನೆಯ ಮುಳುಗಡೆ ಪ್ರದೇಶ ೪೨೦೦ ಎಕರೆಗಳು. ಒಟ್ಟು ೮೧೭ ಕುಟುಂಬಗಳು ಈ ಯೋಜನೆಯಿಂದ ನಿರಾಶ್ರಿತವಾಗಿವೆ. ಮೊದಲ ಹಂತದ

ಯೋಜನೆಯಂತೆಯೇ ಪುನರ್ವಸತಿ ಅನುದಾನ ನೀಡಲಾಗಿದೆ. ಎರಡನೇ ಹಂತದ ಯೋಜನೆಯ ನಿರಾಶ್ರಿತ ಕುಟುಂಬದವರಿಗೆ ಅಂಕೋಲ ತಾಲೂಕಿನ ಹೆಗ್ಗಾರ, ಕಲ್ಲೇಶ್ವರ ಮತ್ತು ಹಳವಳ್ಳಿ ಗ್ರಾಮಗಳ ೧೦೭೦ ಎಕರೆ ಪ್ರದೇಶದಲ್ಲಿ ಪುನರ್ವಸತಿ ಕೇಂದ್ರ ಸ್ಥಾಪಿಸಲಾಗಿದೆ. ಮೂಲಭೂತ ಸೌಲಭ್ಯಗಳೊಂದಿಗೆ ೯೦ ಜನರಿಗೆ ಕೆ.ಪಿ.ಸಿ.ಯಲ್ಲಿ ಉದ್ಯೋಗ ನೀಡಲಾಗಿದೆ. ಭೂ ಸ್ವಾಧೀನಪಡಿಸಿಕೊಂಡ ಜಮೀನಿನ ಭೂ ಮಾಲೀಕರು ಹೆಚ್ಚಿನ ಪರಿಹಾರ ಕೋರಿ ನ್ಯಾಯಾಲಯದಲ್ಲಿ ೧೭ ಪ್ರಕರಣಗಳನ್ನು ದಾಖಲು ಮಾಡಿದ್ದು, ೧೫೭ ಪ್ರಕರಣಗಳು ಲೋಕ ಅದಾಲತ್ ಮೂಲಕ ಇತ್ಯರ್ಥವಾಗಿರುತ್ತವೆ.[೮] ಬಹುಪಾಲು ಅಡಿಕೆ, ತೆಂಗು, ಮಾವುಗಳಿರುವ ತೋಟಗಳಾಗಿದ್ದರಿಂದ ಪ್ರತಿಯೊಂದು ಮರದ ಸರಾಸರಿ ಉತ್ಪನ್ನದ ಆಧಾರದ ಮೇಲೆ ಬೆಲೆ ನಿರ್ಧರಿಸಿ, ಹೆಚ್ಚಿನ ಮೊತ್ತದ ಪರಿಹಾರ ನೀಡಲಾಗಿದೆ. ನಿರಾಶ್ರಿತರಿಗೆ ದೊರೆತ ಅಧಿಕ ಹಣವೂ ಒಂದು ಕಾರಣವಾಗಿ ಬ್ಯಾಂಕುಗಳಲ್ಲಿ ಠೇವಣಿ ಇಡುವವರ ಸಂಖ್ಯೆ ಜಾಸ್ತಿಯಾಗಿ ಬ್ಯಾಂಕಿಂಗ್ ಚಟುವಟಿಕೆಗಳು ಚುರುಕುಗೊಂಡಿರುವುದು ತಿಳಿದುಬಂದಿದೆ.[೯] ಲಕ್ಷಾಂತರ ರೂಪಾಯಿ ಪರಿಹಾರ ಪಡೆದವರೇ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹೇಳಿಕೊಂಡ ವಿಚಾರಗಳಿವು.

ಕೊಡಸಳ್ಳಿ, ಬೀರ್ಕೋಲ್ ಗುಡ್ಡಗಳ ನಡುವೆ ಹರಿಯುವ ಕಾಳಿನದಿಗೆ ಅಡ್ಡವಾಗಿ ೪೪ ಮೀಟರ್ ಎತ್ತರದ ೪೯೭ ಮೀಟರ್ ಉದ್ದದ ಅಣೆಕಟ್ಟು ನಿರ್ಮಿಸಲಾಗಿದೆ. ಈ ಯೋಜನೆಯಿಂದ ೧೨೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದಿಸುವುದು ಕೆ.ಪಿ.ಸಿ.ಯ ಉದ್ದೇಶ. ೧೯೭೮ರಲ್ಲಿ ಅಣೆಕಟ್ಟು ಕಟ್ಟುವ ಕೆಲಸವು ಆರಂಭಗೊಂಡಿತು. ಕೆ.ಪಿ.ಸಿ.ಯವರು ಪ್ರತಿವರ್ಷ ಮಳೆಗಾಲ ಬರುತ್ತಿದ್ದಂತೆ ನೀರು ನಿಲ್ಲಿಸುತ್ತೇವೆಂಬ ನೋಟೀಸನ್ನು ಅಲ್ಲಿನ ನಿವಾಸಿಗಳಿಗೆ ಕೊಡುತ್ತಿದ್ದರು. ನೋಟೀಸುಗಳನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ. ಕೊಡಸಳ್ಳಿ ಅಣೆಕಟ್ಟೆಗೆ ಬಾಗಿಲುಗಳನ್ನು ನಿಗದಿತ ದಿನಾಂಕಕ್ಕೆ ಮೊದಲೇ ಹಾಕಿ ನೀರು ನಿಲ್ಲಿಸಲಾಯಿತು. ಈ ಮಧ್ಯೆ ಅಣೆಕಟ್ಟೆ ಕಟ್ಟಿದ್ದ ಬೀರ್ಕೋಲ್ ಗುಡ್ಡ ಬಿರುಕು ಬಿಟ್ಟಿದೆ ಎಂಬ ಸುದ್ದಿ ಬಿದ್ದಿತು. ಕೆ.ಪಿ.ಸಿ.ಯವರ ತಜ್ಞರ ತಂಡ ಪರಿಶೀಲಿಸಿ ಬಿರುಕು ಬಿಟ್ಟಿಲ್ಲ, ಯಾವುದೇ ರೀತಿಯ ಅಪಾಯವಿಲ್ಲ ಎಂಬ ಸ್ಪಷ್ಟನೆ ನೀಡಿತು. ಆಗಿನ ಮುಖ್ಯಮಂತ್ರಿ ದಿ. ಜೆ.ಎಚ್. ಪಟೇಲ್ ಅವರು ಯಾವುದೇ ರೀತಿಯ ಭೂ ಕುಸಿತ ಉಂಟಾಗಿಲ್ಲವೆಂಬ ಸ್ಪಷ್ಟನೆಯನ್ನು ಮಾಧ್ಯಮಗಳಿಗೆ ನೀಡಿದರು. ಅಣೆಕಟ್ಟೆಯಲ್ಲಿ ನೀರು ತುಂಬಿ ಫಲವತ್ತಾದ ತೋಟ, ಗದ್ದೆಗಳು, ಜಲಾವೃತವಾದವು. ಕೊಡಸಳ್ಳಿ, ಸಾತೊಡ್ಡಿ, ಬೀರ್ಕೋಲ್ ಮತ್ತು ಜಲಾವೃತಗೊಂಡ ಪ್ರದೇಶಗಳೊಳಗಿನ ಇತರೆ ಹಳ್ಳಿಗಳು, ಮನೆಗಳು ಮುಳುಗಿದವು. ಕೊಡಸಳ್ಳಿ ಅಣೆಕಟ್ಟು ಹಿನ್ನೀರಿನಿಂದ ದೇವಕಾರು ಗ್ರಾಮ ದ್ವೀಪವಾಗಿದೆ. ಮೂರು ಕಡೆ ನೀರು, ಒಂದು ಕಡೆ ಏರಲಾಗದ ಘಟ್ಟವಿದ್ದು ಜನರು ಹೊರಜಗತ್ತಿನ ಸಂಪರ್ಕವನ್ನೇ ಕಳೆದುಕೊಂಡಿದ್ದಾರೆ.

ಕೊಡಸಳ್ಳಿ ಅಣೆಕಟ್ಟು ವಿರೋಧದ ಹೋರಾಟದಲ್ಲಿ ಜನರು ತಮ್ಮ ಆಸ್ತಿ ಕಳೆದುಕೊಳ್ಳುತ್ತೇವೆ ಎಂದು ಯೋಜನೆಯೇ ಆಗಬಾರದೆಂದು ಹೋರಾಟ ಮಾಡಲಿಲ್ಲ ; ಸರ್ಕಾರವೇ ಜನರನ್ನು ಹೋರಾಟಕ್ಕೆ ತಳ್ಳಿತು.[೧೦] ಸವಲತ್ತುಗಳನ್ನು ನೀಡದೇ ಯೋಜನೆಯತ್ತ ಗಮನ ನೀಡಿದ್ದರಿಂದ ಜನರು ಚಳವಳಿಗಿಳಿದರು, ಹತ್ತು ದಿನಗಳ ಕಾಲ ಜಿಲ್ಲಾ ಕಾರಾಗೃಹದಲ್ಲಿ ಬಂಧಿತರಾಗಿದ್ದರು. ನಿರಾಶ್ರಿತರ ಪುನರ್ವಸತಿ ಸಮಿತಿಯೊಂದು ಸಂಘಟಿತವಾಯಿತು. ಸಮಿತಿಯ ಧುರೀಣ ಜಿ.ವಿ. ಗಾಯ್ಕರ್ ಅವರು ಚಳವಳಿಯ ಬೆಳವಣಿಗೆಯನ್ನು ಕುರಿತು

ಈ ರೀತಿ ಪ್ರತಿಕ್ರಿಯಿಸಿದ್ದಾರೆ. "ನಾವು ವಿರೋಧಿಸಿದೆವು, ಆದರೆ ಯಾವ ಪರಿಸರವಾದಿಗಳೂ ನಮಗೆ ಬೆಂಬಲ ನೀಡಿಲ್ಲ, ಹೀಗಾಗಿ ನಮ್ಮ ಹೋರಾಟ ಶಕ್ತಿ ಗುಂದಿತು. ಈಗ ಪುನರ್ವಸತಿಯನ್ನಾದರೂ ಸರಿಯಾಗಿ ಮಾಡಿ ಎಂದು ಹೋರಾಟ ಮಾಡುತ್ತಿದ್ದೇವೆ". ಇನ್ನೊಬ್ಬ ಹೋರಾಟಗಾರ ಡಿ.ಎನ್. ಗಾಂವ್ಕರ್ ಅವರು ತಮ್ಮ ನೋವನ್ನು ಈ ರೀತಿ ವ್ಯಕ್ತಪಡಿಸಿದ್ದಾರೆ. "ಒಮ್ಮೆಲೇ ನೀರು ನಿಲ್ಲಿಸಿದಾಗ ನಾವು ಜೀವನ್ಮರಣ ಹೋರಾಟ ಮಾಡಬೇಕಾಯಿತು, ಆ ಸಂದರ್ಭದಲ್ಲಿ ಯಾವ ಪರಿಸರವಾದಿಗಳೂ ನಮ್ಮನ್ನು ಕಣ್ಣೆತ್ತಿ ನೋಡಲಿಲ್ಲ." ಹೋರಾಟ ಸಮಿತಿಯ ಅಧ್ಯಕ್ಷರಾದ ಜಿ.ಆರ್. ಭಟ್‌ರವರು "ನಮಗೆ ಸುಳ್ಳು ಹೇಳಿ ಮೋಸ ಮಾಡಿದರು ಎಂದಿದ್ದಾರೆ". ಪುನರ್ವಸತಿ ಪ್ರದೇಶವನ್ನು ಆಯ್ಕೆ ಮಾಡುವಾಗ ನಿರಾಶ್ರಿತರನ್ನು ಗಮನಕ್ಕೆ ತೆಗೆದುಕೊಳ್ಳಲೇ ಇಲ್ಲ, ಎಲ್ಲಾ ನಿರ್ಧಾರಗಳೂ ಏಕಪಕ್ಷೀಯವಾಗಿದ್ದವು.[೧೧] ಜಿಲ್ಲಾ ಆಡಳಿತದ ಪ್ರಕಾರ ಅಣೆಕಟ್ಟು ಕಟ್ಟುವ ಕೆಲಸ ಪ್ರಾರಂಭವಾಗಿ ಸುಮಾರು ಇಪ್ಪತ್ತೊಂದು ವರ್ಷಗಳೇ ಕಳೆದಿವೆ. ಆದರೂ ಅಲ್ಲಿನ ನಿವಾಸಿಗರು ಬೇರೆ ಕಡೆ ಜಮೀನು ಖರೀದಿಸಿಕೊಂಡಿಲ್ಲ. ಅವರು ಪುನರ್ವಸತಿ ಕೇಂದ್ರಗಳಿಗೆ ಹೋಗಲು ಉದಾಸೀನ ತಳೆದರು. ಅಲ್ಲಿನ ಗ್ರಾಮಸ್ಥರು ಅಣೆಕಟ್ಟು ನಿರ್ಮಾಣವೇ ಆಗಬಾರದು ಎನ್ನುವ ಉದ್ದೇಶವನ್ನು ಇಟ್ಟುಕೊಂಡು ಹೋರಾಟ ನಡೆಸಿದ್ದರು. ಈಗ ಕೊಡಸಳ್ಳಿ ಯೋಜನೆಯು ವಿದ್ಯುತ್ ಉತ್ಪಾದನೆಯಲ್ಲಿ ತೊಡಗಿಸಿಕೊಂಡಿರುವುದು ಹಳೆಯ ವಿಚಾರವಾಗಿದೆ. ನಿರಾಶ್ರಿತರು ಬೇಡ್ತಿ ನದಿಯ 'ರನ್ ಆಫ್ ದಿ ರಿವರ್' ಯೋಜನೆ ಜಾರಿಯಾದರೆ ಮತ್ತೆ ಮುಳುಗುತ್ತೇವೆಂಬ ಭೀತಿಯಲ್ಲಿದ್ದಾರೆ. ಕೊಡಸಳ್ಳಿ ಯೋಜನಾ ಪ್ರದೇಶ, ಪುನರ್ವಸತಿ ಪ್ರದೇಶಗಳನ್ನು ವೀಕ್ಷಿಸಿ, ಪುನರ್ವಸತಿಗರನ್ನು ಸಂದರ್ಶಿಸಿದಾಗ ದೊರೆತ ಮಾಹಿತಿಗಳನ್ನು ಗಮನಿಸಿದರೆ ಕೊಡಸಳ್ಳಿ ಅಭಿವೃದ್ಧಿ ಯೋಜನೆಯು ಗೊಂದಲಮಯ ಚಿತ್ರಣವನ್ನು ಹೊಂದಿದೆಯೆಂಬುದು ಸ್ಪಷ್ಟವಾಗುತ್ತದೆ.

ಕಾಳಿ ನದಿಯ ಎರಡನೆಯ ಹಂತದಲ್ಲಿಯೇ ಮುಂದುವರಿದ ಯೋಜನೆಯಾಗಿ ಕದ್ರಾ ಬಳಿಯ ಅಣೆಕಟ್ಟೆ ಕಾಮಗಾರಿಯ ಸಮಕಾಲೀನವಾಗಿಯೇ ನಿರ್ಮಿಸಲ್ಪಟ್ಟಿತು. ಕೊನೆಯ ಮತ್ತು ಮೂರನೆಯ ಹಂತದಲ್ಲಿ ಕೆಳಕಾನೇರಿಯಲ್ಲಿ ಅಣೆಕಟ್ಟು ಮತ್ತು ವಿದ್ಯುದಾಗಾರ ನಿರ್ಮಾಣ ಕಾರ್ಯವು ನಡೆಯಿತು. ೧೧೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಈ ಯೋಜನೆಯು ಕುಂಬಾರವಾಡ ಗ್ರಾಮದಿಂದ ೮ ಕಿ.ಮೀ. ದೂರದಲ್ಲಿದೆ. ಈ ಮೂರನೆಯ ಹಂತದಲ್ಲಿ ಸುಮಾರು ೨೬೩ ಕುಟುಂಬದವರನ್ನು ಮಾತ್ರ ಪುನರ್ವಸತಿ ಮಾಡಬೇಕಾಗುತ್ತದೆ. ಈ ಕುಟುಂಬಗಳ ಪುನರ್ವಸತಿಗಾಗಿ ಅಂದಾಜು ೧೬೦೦ ಎಕರೆ ಜಮೀನು ಬೇಕಾಗುವುದು. ಕೇಂದ್ರ ಸರ್ಕಾರವು ಅರಣ್ಯ ಜಮೀನು ಮಂಜೂರು ಮಾಡಿತು. ಕರ್ನಾಟಕ ಸರ್ಕಾರವು ಸಭೆ ನಡೆಸಿ ನಿರಾಶ್ರಿತರಿಗೆ ಭೂಮಿಗೆ ಬದಲಾಗಿ ಹಣವನ್ನು ಕೊಡುವ ವಿಷಯದಲ್ಲಿ ನಿರ್ಧಾರ ಕೈಕೊಂಡಿತು. ೧೯೮೫-೮೬ರಲ್ಲಿ ಮಳೆಗಾಲಕ್ಕೆ ಮುಂಚೆ ಮುಳುಗಡೆಯಾಗಲಿದ್ದ ಕುಟುಂಬಗಳವರು ಪರಿಹಾರ ಧನ ಪಡೆದು ಕರ್ನಾಟಕ ವಿದ್ಯುತ್ ನಿಗಮದ ಸಹಾಯದಿಂದ ತಮ್ಮ ಇಚ್ಛೆಗಳನ್ನುಸಾರವಾಗಿ ಬೇರೆ ಬೇರೆ ಪ್ರದೇಶಗಳಿಗೆ ಹೋಗಿರುತ್ತಾರೆ. ಉಳಿದ ಕೆಲವು ಕುಟುಂಬಗಳು ಜಲಾಶಯದ ಪೂರ್ಣಮಟ್ಟದಿಂದ ಎತ್ತರ ಪ್ರದೇಶಕ್ಕೆ ಹೋಗಿ ಸ್ವಂತ ಇಚ್ಛೆಯಿಂದ ವಾಸಿಸುತ್ತಿದ್ದಾರೆ.[೧೨]

ಕಾಳಿಯೋಜನೆಯು ಮೂರು ಹಂತಗಳಲ್ಲಿ ಪೂರ್ಣಗೊಂಡಿದೆ. ರಿಪೇರಿ ಹಾಗೂ ನಿರ್ವಹಣೆ ಕೆಲಸಗಳೊಂದಿಗೆ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದೆ.

ಒಂದು ಕಾಲದಲ್ಲಿ ಉತ್ತರ ಕನ್ನಡ ಜಿಲ್ಲೆಗೆ ವರಪ್ರಸಾದವಾಗಿದ್ದ ಕಾಳಿನದಿ ಈಗ ಶಾಪವಾಗಿ ಪರಿಣಮಿಸಿದೆ.[೧೩] ಜಿಲ್ಲೆಯ ಜೀವವೈವಿಧ್ಯ ನಾಶಕ್ಕೆ ಈ ನದಿಯನ್ನು ಹಂತಹಂತವಾಗಿ ಬಳಸಿ ಕೊಳ್ಳಲಾಗುತ್ತಿದೆ. ಕಳೆದ ಇಪ್ಪತ್ತು ವರ್ಷದಲ್ಲಿ ಕಾಳಿ ನದಿಯ ಹರಿವು ಕೇವಲ ೧೮ ಕಿ.ಮೀ. ಗಳಿಗೆ ಸೀಮಿತವಾಗಿದೆ ! ಕುಶಾವಳಿಯಿಂದ ೧೦ ಕಿ.ಮೀ. ಹರಿಯುವುದರೊಳಗೆ ಸುಪಾ ಜಲಾಶಯದ ಹಿನ್ನೀರು ಸೇರುತ್ತದೆ,ಕದ್ರಾದಿಂದ ೮ ಕಿ.ಮೀ. ಹರಿಯುವುದರೊಳಗೆ ಸಮುದ್ರದ ಹಿನ್ನೀರು ಸಿಗುತ್ತದೆ.[೧೪] ಈ ಮಾತಿನಂತೆ ಇಡೀ ಕಾಳಿ ಕಣಿವೆಯನ್ನು ಅಧ್ಯಯನ ಸಂಬಂಧವಾಗಿ ಸುತ್ತಾಡಿದಾಗ 'ಅಭಿವೃದ್ಧಿಯನ್ನು ನಡೆಸಿ, ಪರಿಸರವನ್ನು ಉಳಿಸಿ' ಎಂಬ ನೆಲೆಯಿಂದ ಕಾಳಿ ವಿದ್ಯುತ್‌ಯೋಜನೆಗಳ ವಿರೋಧದ 'ಪರಿಸರ ಚಳವಳಿಗಳು' ವಿಫಲವಾಗಿರುವುದನ್ನು ಗುರುತಿಸಬಹುದಾಗಿದೆ. ಇದಕ್ಕೆ ಪ್ರಮುಖ ಮತ್ತು ಮಹತ್ವದ ಕಾರಣಗಳಿವೆ. ಮೊದಲನೆಯದಾಗಿ ಯೋಜನಾ ಪ್ರದೇಶವು ದಟ್ಟಡವಿಯ ಘಟ್ಟ ಪ್ರದೇಶವಾಗಿದ್ದು, ಉತ್ತರ ಕನ್ನಡ ಜಿಲ್ಲೆ ಹಾಗೂ ಕರ್ನಾಟಕ ರಾಜ್ಯದಲ್ಲಿಯೇ ಅತ್ಯಂತ ವಿರಳ ಜನಸಂಖ್ಯೆ ಇರುವ ಜಾಗವಾಗಿದೆ. ಎರಡನೆಯದಾಗಿ ನಿರಾಶ್ರಿತರಾದವರೆಲ್ಲ ಒಂದೇ ಕಡೆ ವಾಸಿಸುತ್ತಿರಲಿಲ್ಲ. ಚದುರಿದಂತಿದ್ದ ಅವರೆಲ್ಲ ಒಗ್ಗಟ್ಟಾಗಿ ಯಾವುದೇ ಚಳವಳಿಯಲ್ಲಿ ಭಾಗವಹಿಸಲು ಸಾರಿಗೆ ವ್ಯವಸ್ಥೆಯ ಅನಾನುಕೂಲತೆಯಿಂದ ಸಾಧ್ಯವಿರಲಿಲ್ಲ. ಮೂರನೆಯದಾಗಿ ಕಾಳಿ ಯೋಜನೆಯು ಹಂತ ಹಂತವಾಗಿ ನಿರ್ಮಾಣ ಕೆಲಸ ಕೈಗೊಂಡಿದ್ದರಿಂದ ಪರಿಹಾರ ಹಾಗೂ ಪುನರ್ವಸತಿ ಕೈಗೊಳ್ಳಲು ತೊಂದರೆಯಾಗಲಿಲ್ಲ. ಕೊನೆಯದಾಗಿ ಕೊಡಸಳ್ಳಿ ನಿರಾಶ್ರಿತರಲ್ಲಿ ಕೆಲವರು ಮುಂಚೂಣಿಯಲ್ಲಿ ನಿಂತು ಮಾತಾನಾಡಿದ್ದು ಬಿಟ್ಟರೆ, ಉಳಿದಂತೆ ಎಲ್ಲೂ ಪ್ರಬಲವಾದ ನಾಯಕತ್ವ ಕಂಡುಬರಲಿಲ್ಲ. ಏನೇ ಇದ್ದರೂ ಕಾಳಿ ಯೋಜನೆಯ ನಿರಾಶ್ರಿತರ ಬವಣೆಗಳು ಇಂದಿಗೂ ಚಳವಳಿಯ ಭಾಗವೇ ಆಗಿ ಉಳಿದುಕೊಂಡಿವೆ.

೫.೨ ಬೇಡ್ತಿ ಜಲವಿದ್ಯುತ್ ಯೋಜನೆಗಳು

ಕರ್ನಾಟಕದಲ್ಲಿ ೧೯೮೦ರಲ್ಲಿ ನಡೆದ ಬೇಡ್ತಿ ಚಳವಳಿಯೇ ಮೊದಲ 'ಪರಿಸರ ಹೋರಾಟ'ವೆಂದು ಹೇಳಬೇಕು. ಲಿಂಗನಮಕ್ಕಿ ಜಲಾಶಯಕ್ಕಾಗಿ ಮುನ್ನೂರು ಹಳ್ಳಿಗಳನ್ನು ಮುಳುಗಿಸಿ ಕಾಳಿ ಯೋಜನೆಗಾಗಿ ಸುಪಾ ಪಟ್ಟಣವನ್ನೂ ಮುಳುಗಿಸಿದ ಯೋಜನಾತಜ್ಞರು ಅಲ್ಲೇ ಸಮೀಪ ಅಘನಾಶಿನಿ ಮತ್ತು ಬೇಡ್ತಿ ಕಣಿವೆಗಳ ಜನರನ್ನು ಎತ್ತಂಗಡಿ ಮಾಡಲು ಹೊರಟಾಗ ಪ್ರತಿಭಟನೆ ಎಂದುರಾಯಿತು.[೧೫] ಬೇಡ್ತಿ ಚಳವಳಿ ನಡೆಯಿತು. ನಾಗೇಶ ಹೆಗಡೆ ಮಾತಿನಂತೆ ಈ ಹೋರಾಟಕ್ಕೆ ಬೌದ್ಧಿಕ ಆಯಾಮ ನೀಡಿದವರು ಪ್ರೊ. ಲಿಂಗೇಶ ಶರ್ಮ. ದೊಡ್ಡ ಅಣೆಕಟ್ಟುಗಳ ಸಾಧಕ-ಬಾಧಕಗಳ ಕುರಿತು ಅವರು ಶಿರಸಿಯಲ್ಲಿ ೧೯೮೦ರಲ್ಲಿ ರಾಷ್ಟ್ರೀಯ ವಿಚಾರ ಸಂಕಿರಣವನ್ನು ಸಂಘಟಿಸಿದರು. ನಾಲ್ಕು ದಿನಗಳ ಈ ಸೆಮಿನಾರ್‌ಗೆ ದಿಲ್ಲಿ, ಕಲ್ಕತ್ತಾ, ಪುಣೆ, ಮುಂಬೈ, ಬೆಂಗಳೂರುಗಳ ಆರ್ಥಿಕ ತಜ್ಞರು, ಅಭಿವೃದ್ಧಿ ತಜ್ಞರು, ಆಡಳಿತ ತಜ್ಞರು ಹಾಗೂ ಅರಣ್ಯ ತಜ್ಞರು ಆಗಮಿಸಿ ಪಾಲ್ಗೊಂಡಿದ್ದರು. "ವಿದ್ಯುತ್ತಿಗಾಗಿ ದಟ್ಟ ಅರಣ್ಯಗಳನ್ನು ಮುಳುಗಿಸುವುದೆಂದರೆ ಒಂದು ರುಪಾಯಿಯನ್ನು ವಿನಿಯೋಗಿಸಿ ೫೪ ಪೈಸೆಗಳನ್ನು ಪಡೆದಷ್ಟೇ ಅವ್ಯಾವಹಾರಿಕ"

ಎಂದು ಪುಣೆಯ ವಿಜಯ ಪರಾಂಜಪೆ ಹೇಳಿದ್ದು ನಾಡಿನ ಪತ್ರಿಕೆಗಳಲ್ಲಿ ಪ್ರತಿಧ್ವನಿಸಿತು.[೧೬] 'ಬೇಡ್ತಿ ಬೇಡ' ಎಂಬ ಚಳವಳಿಗೆ ನಾಂದಿಯಾಯಿತು.

ಜಲಸಂಬಂಧದ ಪರಿಸರ ಚಳವಳಿಗಳಲ್ಲಿ ಯಶಸ್ವಿ ಚಳವಳಿ ಎಂದು ಗುರುತಿಸಿಕೊಂಡಿರುವ ಬೇಡ್ತಿ ಚಳವಳಿಯ ಮೂಲ ಬೇಡ್ತಿ ನದಿ. ಧಾರವಾಡದ ಸೋಮೇಶ್ವರ ದೇವಸ್ಥಾನದ ಬಳಿ ಹುಟ್ಟಿದ ಶಾಲ್ಮಲಿ ತೊರೆ ಹುಬ್ಬಳ್ಳಿಯ ಕಲಘಟಗಿಯ ಬಳಿ ಬೇಡ್ತಿ ಹಳ್ಳವು ತೊರೆಯೊಡನೆ ಸೇರಿ ಬೇಡ್ತಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ಘಟ್ಟ ಪ್ರದೇಶವನ್ನು ಸೇರಿ, ಮಳೆನಾಡಿನ ನೀರು ಮೈದುಂಬಿಕೊಂಡು ಪಶ್ಚಿಮಾಭಿಮುಖವಾಗಿ ಹರಿಯುತ್ತ ಯಲ್ಲಾಪುರ ತಾಲೂಕಿನ ಮಾಗೋಡು ಬಳಿ ಸುಮಾರು ೬೬೦ ಅಡಿ ಎತ್ತರದಿಂದ ಧುಮ್ಮಿಕ್ಕಿ ನೋಡುಗರ ಕಣ್ಮನ ಸೆಳೆಯುತ್ತಿದೆ. ವಿದ್ಯುತ್ ಉತ್ಪಾದನೆಗೆ ನಾನೇನು ಕಡಿಮೆ ಎಂದು ಶರಾವತಿಗೆ ಅದು ಸವಾಲು ಹಾಕಲಿಲ್ಲ ! ೧೯೭೫ ರಲ್ಲಿ ಶರಾವತಿ ಜಲವಿದ್ಯುತ್ ಯೋಜನೆಯು ಮುಕ್ತಾಯಗೊಂಡಾಗ ಸರ್ಕಾರದ ಮುಂದಿನ ಯೋಜನೆಯಾಗಿ ಕಣ್ಣಿಗೆ ಬಿದ್ದದ್ದು ಬೇಡ್ತಿ. ಇದರಲ್ಲಿ ನದಿಯದ್ದೇನು ತಪ್ಪೂ ಇಲ್ಲ ! ಮಾಗೋಡ ಜಲಪಾತ ಸೃಷ್ಟಿಸಿ ಮುಂದುವರಿದು ಗಂಗಾವಳಿ ನದಿ ಎಂದು ಕರೆಯಿಸಿಕೊಂಡು, ಗಂಗಾವಳಿ ಹಳ್ಳಿಯ ಬಳಿ ಅರಬ್ಬಿ ಸಮುದ್ರ ಸೇರುತ್ತದೆ. ಕಡಿಮೆ ಪ್ರಮಾಣದಲ್ಲಿ ಕೃಷಿ ಹಾಗೂ ವಿಶೇಷವಾಗಿ ಒಳನಾಡು ಮೀನುಗಾರಿಕೆಗೆ ಅನುಕೂಲವಾಗಿರುವ ಈ ನದಿಗೆ ಅಣೆಕಟ್ಟು ಕಟ್ಟಿ ಜಲವಿದ್ಯುತ್ ಉತ್ಪಾದಿಸುವ ಯೋಜನೆಯನ್ನು ಮೈಸೂರು ವಿದ್ಯುತ್ ನಿಗಮವು (ಎಂ.ಪಿ.ಸಿ.) ರಾಜ್ಯಸರ್ಕಾರದ ಮಾರ್ಗದರ್ಶನದಲ್ಲಿ ಹಮ್ಮಿಕೊಂಡಿತು.

ಬೇಡ್ತಿ ನದಿಗೆ ಮೂರು ಹಂತಗಳಲ್ಲಿ ಅಣೆಕಟ್ಟುಗಳನ್ನು ಕಟ್ಟಲು ಯೋಜನೆ ರೂಪಿಸಲಾಯಿತು. ಮೊದಲ ಹಂತದಲ್ಲಿ ಮಾಗೋಡು ಬಳಿ ೧೧೧.೨ ಮೀಟರ್ ಎತ್ತರದ ೩೫.೬೦ ಮೀ. ಅಗಲದ ಅಣೆಕಟ್ಟು ಕಟ್ಟಿ ಅಲ್ಲಿಂದ ಸುರಂಗ ಮಾರ್ಗವಾಗಿ ಅರಬೈಲ್ ಪವರ್ ಹೌಸ್‌ಗೆ ನೀರನ್ನು ಸಾಗಿಸುವ ಯೋಜನೆಯನ್ನು ಹಾಕಿಕೊಳ್ಳಲಾಯಿತು. ೨೧೦ ಮೆಗಾವ್ಯಾಟ್ ಸಾಮರ್ಥ್ಯದ ಭೂಗರ್ಭ ವಿದ್ಯುದಾಗಾರದಲ್ಲಿ ವಾರ್ಷಿಕ ೧೪೦ ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆ ಗುರಿ ಇಟ್ಟುಕೊಳ್ಳಲಾಯಿತು. ಮೊದಲ ಹಂತದ ಬೃಹತ್ ಯೋಜನೆಯ ೮೬೧ ಚ. ಮೈಲಿ ವಿಸ್ತಾರ ಹೊಂದಿತ್ತು. ೧೯೭೨ರಲ್ಲಿ ₹ ೪೨ ಕೋಟಿ ಇದ್ದ ಯೋಜನಾ ವೆಚ್ಚವು ೧೯೯೧-೯೨ರ ವೇಳೆಗೆ ಸರ್ಕಾರದ ಅನುಮತಿ ದೊರೆತು ಕಾಮಗಾರಿ ಆರಂಭಗೊಳ್ಳುವ ವೇಳೆಗೆ ₹ ೩೫೬ ಕೋಟಿಗೇರಿತ್ತು. ಸಂಭವಿಸಿದ ಪರಿಸರ ಚಳವಳಿಯು ಇಷ್ಟೊಂದು ಮೊತ್ತದ ಖರ್ಚು ಆಗದಂತೆ ತಡೆಯಿತು !

ಉದ್ದೇಶಿತ ಎರಡನೆಯ ಹಂತವಾಗಿ ಬೇಡ್ತಿಯ ಉಪನದಿಗಳಾದ ಸೊಂದ, ಪಟ್ಟಣ ಹೊಳೆಗಳಿಗೆ ಅಣೆಕಟ್ಟುಗಳನ್ನು ನಿರ್ಮಿಸುವ ಯೋಜನೆ ರೂಪಿಸಲಾಯಿತು. ₹ ೧೫೦ ಕೋಟಿ ವೆಚ್ಚದಲ್ಲಿ ೨೧೦ ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಗುರಿ ಹೊಂದಲಾಯಿತು. ಈ ಹಂತದಲ್ಲಿ ಮುಳುಗಡೆಯಾಗಲಿರುವ ಪ್ರದೇಶದ ವಿಸ್ತಾರ ೧೯೫.೬ಚ. ಮೈಲಿಗಳು. ಆದರೆ ಸೋಂದ ಮಠವು ಮುಳುಗಡೆಯಾದರೆ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಗಬಹುದೆಂದು ಅದನ್ನು ಮುಳುಗಡೆ ಮಾಡದ ರೀತಿಯಲ್ಲಿ ಸೋಂದ ಬಿಟ್ಟು, ತುಡುಗಣಿ ಎಂಬಲ್ಲಿ ಅಣೆಕಟ್ಟೆ ಕಟ್ಟಲು ಯೋಜಿಸಲಾಯಿತು.

[illegible]

ಮೂರನೇ ಹಂತದಲ್ಲಿ ಬಿಳೀ ಹಳ್ಳಕ್ಕೆ ಅಣೆಕಟ್ಟು ನಿರ್ಮಿಸುವ ಯೋಜನೆ ಮಾಡಲಾಯಿತು. ಯೋಜನೆಯ ವಿಸ್ತಾರ ೨೮ ಚದರ ಮೈಲುಗಳು. ಎಂ.ಪಿ.ಸಿ.ಯವರ ಅಂಕಿ-ಅಂಶಗಳ ಪ್ರಕಾರ ಈ ಯೋಜನೆಯಿಂದಾಗಿ ೨೮,೦೦೦ ಎಕರೆ ಅರಣ್ಯ, ೧೨,೦೨೦ ಎಕರೆ ನೀರಾವರಿ ಭೂಮಿ, ೧೦೦ ಎಕರೆ ತೋಟ ಹಾಗೂ ೨೫೦ ಎಕರೆ ಒಣ ಬೇಸಾಯದ ಭೂಮಿ ಹಾಗೂ ಒಟ್ಟೂ ೨೨ ಹಳ್ಳಿಗಳು ಮುಳುಗಡೆಯಾಗುವುದಾಗಿತ್ತು.[೧೭] ಈಗಾಗಲೇ ಉತ್ತರ ಕನ್ನಡ ಜಿಲ್ಲೆಯ ದಕ್ಷಿಣದಲ್ಲಿ ಶರಾವತಿ ಜಲವಿದ್ಯುತ್ ಯೋಜನೆ, ಉತ್ತರದಲ್ಲಿ ಕಾಳಿ ಜಲವಿದ್ಯುತ್ ಯೋಜನೆಗಳು ಕಾರ್ಯಾರಂಭ ಮಾಡಿ ಮಧ್ಯದಲ್ಲಿ ಬೇಡ್ತಿ ಜಲವಿದ್ಯುತ್ ಯೋಜನೆ ಜಾರಿಯಾಗುವುದಾದರೆ ಅರಣ್ಯ ಜಿಲ್ಲೆಯಾದ ಉತ್ತರ ಕನ್ನಡವನ್ನೇ ಏಕೆ ಬಲಿಕೊಡಬೇಕೆಂಬುದು ಜನರ ಪ್ರಶ್ನೆಯಾಗತೊಡಗಿತು. ಅದು ಚಳವಳಿಯ ದಾರಿ ತುಳಿಯಿತು.

೧೯೬೯ರ ಜೂನ್ ತಿಂಗಳಿನಲ್ಲಿ ಬೇಡ್ತಿ ಜಲವಿದ್ಯುತ್ ಯೋಜನೆಗೆ ಕೇಂದ್ರ ಯೋಜನಾ ಆಯೋಗದ ಮಂಜೂರಾತಿ ದೊರೆತು ಕರ್ನಾಟಕ ಸರ್ಕಾರ ಕಾರ್ಯ ಪ್ರವೃತ್ತವಾದುದನ್ನು ತಿಳಿದ ಜನರು ಪ್ರತಿಭಟನೆಗೆ ಮುಂದಾದರು. ಈ ಮೊದಲು ಉತ್ತರ ಕನ್ನಡ ಜಿಲ್ಲೆಯಲ್ಲಿ ಜಾರಿಯಾದ ಯೋಜನೆಗಳ ವಿರುದ್ಧ ಇಲ್ಲದ ಪ್ರತಿಭಟನೆಯು ಬೇಡ್ತಿ ಚಳವಳಿಯಲ್ಲಿ ಬಿರುಸುಗೊಳ್ಳಲು ಕಾರಣ ಶ್ರೀಮತಿ ಅನಸೂಯ ಶರ್ಮ ಅವರು. ಉತ್ತರ ಕನ್ನಡ ಜಿಲ್ಲೆಯ ಏಕೈಕ ಮಹಿಳಾ ವಿಧಾನಸಭಾ (ಆಗಿನ ಅಂಕೋಲ-ಯಲ್ಲಾಪುರ ತಾಲೂಕುಗಳು ಸೇರಿದ್ದ 'ಅಂಕೋಲ' ಕ್ಷೇತ್ರ) ಸದಸ್ಯರಾಗಿ ಬೇಡ್ತಿ ವಿರೋಧಿ ಪರಿಸರ ಚಳವಳಿಯ ಮುಂಚೂಣಿಯಲ್ಲಿ ನಿಂತರು. 'ಉತ್ತರ ಕನ್ನಡ ಜಿಲ್ಲಾ ಜಲವಿದ್ಯುತ್ ಯೋಜನಾ ವಿರೋಧಿ ಸಮಿತಿ'ಯನ್ನು ಸ್ಥಾಪಿಸಿ, ಎಲ್ಲರ ಬಾಯಲ್ಲಿ 'ಬೇಡ್ತಿ ಅಮ್ಮ' ಎಂದು ಕರೆಯಲ್ಪಟ್ಟರು.

೧೯೭೯ರ ಜುಲೈ ತಿಂಗಳಿನಲ್ಲಿ ಬೇಡ್ತಿ ಜಲವಿದ್ಯುತ್ ಯೋಜನೆಯ ಕೆಲಸ ಪ್ರಾರಂಭವಾಯಿತು. ಅರಣ್ಯ ನಾಶ ವಿಪರೀತವಾಯಿತು. ಸ್ಥಳಕ್ಕೆ ಭೇಟಿ ಕೊಟ್ಟ ಪತ್ರಿಕೆಗಳವರು ಜನರನ್ನು ಬಡಿದೆಬ್ಬಿಸುವ ರೀತಿಯಲ್ಲಿ ಫೋಟೋ ಸಹಿತ ವರದಿ ಮಾಡಿದರು.[೧೮] ಪ್ರತಿವರ್ಷ ಸಾಮಾನ್ಯವಾಗಿ ಜೂನ್ ಮೊದಲ ವಾರದಲ್ಲಿ ಮಳೆ ಬೀಳುತ್ತಿದ್ದ ಆ ಪ್ರದೇಶದಲ್ಲಿ ಜೂನ್ ೨೫ನೇ ತಾರೀಖು ಕಳೆದರೂ ಮಳೆ ಬರಲಿಲ್ಲ. ಈ ಯೋಜನೆಗಳೇ ಮಳೆ ಕಡಿಮೆಯಾಗಲು ಕಾರಣವೆಂಬುದನ್ನು ತಿಳಿದ ಜನರು ಬೇಡ್ತಿ ಜಲವಿದ್ಯುತ್ ಯೋಜನೆಯನ್ನು ತಡೆಯುವುದೊಂದೇ ಪರಿಹಾರವೆಂದು ಶಾಸಕಿಯವರಲ್ಲಿ ಮನವಿ ಮಾಡಿಕೊಂಡರು. ೧೯೭೯ರ ಅಕ್ಟೋಬರ್ ಮೂರರಂದು ಯಲ್ಲಾಪುರದಲ್ಲಿ ಮೊದಲ ಸಭೆ ನಡೆದು ಬೇಡ್ತಿ ವಿರೋಧಿ ಚಳವಳಿಯು ನಿರ್ದಿಷ್ಟ ರೂಪ ಪಡೆದುಕೊಂಡಿತು. ಜಿಲ್ಲಾ ಕೇಂದ್ರ ಕಾರವಾರದಲ್ಲಿ ಒಂದು ದಿನದ ಸಾಂಕೇತಿಕ ಸತ್ಯಾಗ್ರಹ ನಡೆಸಲು ತೀರ್ಮಾನಿಸಲಾಯಿತು.

೧೯೭೯ರ ನವೆಂಬರ್ ೧೫ರಂದು ಜಿಲ್ಲೆಯಾದ್ಯಂತ ಸುಮಾರು ೨೦೦೦ ಜನರು ಕಾರವಾರದಲ್ಲಿ ಸಭೆ ಸೇರಿ "ಉತ್ತರ ಕನ್ನಡದ ಮಾರಣ ಹೋಮ ನಿಲ್ಲಿಸಿ ವಿಪತ್ತಿನ ಅಂಚಿನಿಂದ ಪಾರು ಮಾಡಿ" ಎಂಬ ಘೋಷಣೆಯೊಂದಿಗೆ ಮೆರವಣಿಗೆ ನಡೆಸಿ ಆಗಿನ ಜಿಲ್ಲಾಧಿಕಾರಿ ರೇಣುಕಾ ವಿಶ್ವನಾಥನ್‌ಗೆ ಮನವಿ ಸಲ್ಲಿಸಿದರು. ಅಲ್ಲಿಯ ಮುನಿಸಿಪಲ್

ಹಾಲ್‌ನಲ್ಲಿ ಸಭೆ ಸೇರಿ ಚಳವಳಿಯನ್ನು ವಿರೋಧಿಸುವ ಸಲುವಾಗಿ ಈಗಾಗಲೇ ಇದ್ದ ಉತ್ತರ ಕನ್ನಡ ಜಿಲ್ಲಾ ಜಲವಿದ್ಯುತ್ ಯೋಜನಾ ವಿರೋಧಿ ಸಮಿತಿಯನ್ನು ಶ್ರೀಮತಿ ಅನಸೂಯ ಶರ್ಮ ಅವರ ಅಧ್ಯಕ್ಷತೆಯಲ್ಲಿ ಬಲಗೊಳಿಸಲಾಯಿತು. ಮೂವರು ಉಪಾಧ್ಯಕ್ಷರು, ಒಬ್ಬರು ಕಾರ್ಯದರ್ಶಿ, ಇಬ್ಬರು ಸಹ ಕಾರ್ಯದರ್ಶಿಗಳು, ಒಬ್ಬರು ಕೋಶಾಧ್ಯಕ್ಷರು ಹಾಗೂ ೨೮ ಜನ ಸದಸ್ಯರನ್ನು ಆರಿಸಲಾಯಿತು.[೧೯] ಆನಂತರ ಮಾಗೋಡಿನಲ್ಲಿ ೧೯೭೮ರ ನವೆಂಬರ್ ೨೨ ರಂದು ಸತ್ಯಾಗ್ರಹ ನಡೆಯಿತು. ಕರ್ನಾಟಕ ಪವರ್ ಕಾರ್ಪೋರೇಷನ್ (ಕೆ.ಪಿ.ಸಿ.) ಆಫೀಸಿನ ಎದುರು ಶಾಂತಿಯುತ ಮೆರವಣಿಗೆ ನಡೆಸಲಾಯಿತು. ಅದೇ ದಿನ ಜಿಲ್ಲೆಯ ಎಲ್ಲ ಶಾಲಾ ಕಾಲೇಜುಗಳು ಮುಚ್ಚಿದ್ದು, ವಕೀಲರು ಕೋರ್ಟುಗಳಿಗೆ ಹಾಜರಾಗಲಿಲ್ಲ. ಅನೇಕರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಡಿಸೆಂಬರ್ ಒಂದರಂದು ಬೆಂಗಳೂರಿಗೆ ತೆರಳಿ ಆಗಿನ ಮುಖ್ಯಮಂತ್ರಿ ದಿ. ಡಿ. ದೇವರಾಜ ಅರಸು ಅವರನ್ನು ಕಂಡು ಬೇಡ್ತಿ ಯೋಜನೆಗೆ ತಡೆಯಾಜ್ಞೆ ನೀಡುವಂತೆ ಮನವಿ ಮಾಡಿಕೊಳ್ಳಲು ತೀರ್ಮಾನಿಸಲಾಯಿತು. ಅದರಂತೆ ನೂರಾರು ಜನರು ಬೆಂಗಳೂರಿಗೆ ತೆರಳಿ ಮುಖ್ಯಮಂತ್ರಿಯವರಿಗೆ ಶಾಸಕಿ ಅನಸೂಯ ಶರ್ಮ ಅವರು ಬೇಡ್ತಿ ಯೋಜನೆಯಿಂದ ಜನರಿಗೆ ಹಾಗೂ ಪರಿಸರಕ್ಕೆ ಆಗಬಹುದಾದ ಅನನುಕೂಲಗಳ ಬಗ್ಗೆ ವಿವರಿಸಿದರು. ಮುಖ್ಯಮಂತ್ರಿಯವರು ತಡೆಯಾಜ್ಞೆ ನೀಡಿದರು. ಆಗ ಪಾರ್ಲಿಮೆಂಟರಿ ಚುನಾವಣೆ ಕಾಲವಾಗಿದ್ದು ತಾತ್ಕಾಲಿಕವಾಗಿ ಬೇಡ್ತಿ ಯೋಜನೆ ಮುಂದಕ್ಕೆ ಹಾಕಿದಂತಾಯಿತು. ಶಾಶ್ವತ ತಡೆ ದೂರವೇ ಉಳಿಯಿತು.

ದಿ. ಗುಂಡೂರಾವ್ ಅವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಹಿಂದೆ ತಡೆಯಾಜ್ಞೆ ತಂದಿದ್ದರೂ ಕಾಮಗಾರಿ ನಡೆದಿತ್ತು. ಹೋರಾಟ ಸಮಿತಿಯವರು ಮತ್ತೆ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿ ಎರಡನೇ ಸಲ ಯೋಜನೆಯ ನಿಲುಗಡೆ ಆದೇಶ ತಂದರು. ಹೋರಾಟ ಸಮಿತಿಯವರೇ ಮುಂದಾಗಿ 'ನೈಸರ್ಗಿಕ ಸಮತೋಲನಾ ಸಮಿತಿಯ' ಸದಸ್ಯರಾಗಿದ್ದ ಮಾಧವ ಗಾಡ್ಗೀಳ ನೇತೃತ್ವದ ಸಮಿತಿಯಿಂದ ಯೋಜನಾ ಪ್ರದೇಶದ ಕುರಿತು ಅಧ್ಯಯನ ವರದಿ ಕೇಳಿದರು. ಮಾಧವ ಗಾಡ್ಗೀಳ ಅವರು ನೀಡಿದ ವರದಿಯಲ್ಲಿ ಯೋಜನೆಯಿಂದ ನಷ್ಟ ಜಾಸ್ತಿ ಎಂಬುದು ಸರ್ಕಾರಕ್ಕೆ ಸವಾಲಾಯಿತು. ಈ ಮಧ್ಯೆ ಪರಿಸರವಾದಿ ಸುಂದರಲಾಲ್ ಬಹುಗುಣ ಅವರು ಶಿರಸಿಗೆ ಬಂದು ಚಳವಳಿಗಾರರಿಗೆ ಸೂಕ್ತ ಸಲಹೆ, ಸೂಚನೆಗಳನ್ನು ನೀಡಿದರು. ಬೇಡ್ತಿ ಯೋಜನೆಯ ಕೆಲಸ ನಡೆಯುತ್ತಲೇ ಇತ್ತು. ಜಿಲ್ಲೆಯ ರಾಜಕೀಯ ಧುರೀಣರಾಗಿದ್ದ ದಿ. ರಾಮಕೃಷ್ಣ ಹೆಗಡೆಯವರು ಈ ಸಂದರ್ಭದಲ್ಲಿ ಚಳವಳಿಗಾರರ ಬೆಂಬಲಕ್ಕಿದ್ದರು. ಮುಖ್ಯಮಂತ್ರಿಗಳಾಗಿದ್ದ ದಿ. ಗುಂಡೂರಾವ್ ಅವರು ಸರ್ಕಾರದ ವತಿಯಿಂದ ತಜ್ಞರ ಸಮಿತಿಯನ್ನು ನೇಮಿಸಿದರು. ಸಮಿತಿಯು ಸಲ್ಲಿಸಿದ ವರದಿಯನ್ನು ಸರ್ಕಾರ ಬಹಿರಂಗಪಡಿಸಲಿಲ್ಲ. ಯೋಜನೆಯ ಕೆಲಸವೂ ನಿಲ್ಲಲಿಲ್ಲ. ಆದರೆ ಮುಖ್ಯಮಂತ್ರಿಯವರು ಮಾತ್ರ ಬದಲಾದರು.

ಮುಖ್ಯಮಂತ್ರಿಗಳಾಗಿ ಅಧಿಕಾರ ವಹಿಸಿಕೊಂಡಿದ್ದ ಬಂಗಾರಪ್ಪನವರು ೧೯೯೨ರ ಆಗಸ್ಟ್‌ನಲ್ಲಿ ನ್ಯೂಯಾರ್ಕಿನ ಅನಿವಾಸಿ ಭಾರತೀಯ ಕಂಪನಿ ಕೈತ್‌ನೆಸ್‌ಪವರ್ ಕಾರ್ಪೋರೇಷನ್‌ನೊಂದಿಗೆ ಎರಡು ಯೋಜನೆಗಳಿಗೆ ಸಹಿ ಹಾಕಿದರು. ಅದರಂತೆ ಬೇಡ್ತಿ ಯೋಜನೆಯನ್ನೇ ಸಮಗ್ರವಾಗಿ ಬದಲಾಯಿಸಲಾಯಿತು. ಇದರಲ್ಲಿ ಓಡುವ ನದಿ ನೀರಿನ (ರನ್ ಆಫ್ ದಿ ರಿವರ್) ಯೋಜನೆ ಜಾರಿಗೆ ತರುವ ಪ್ರಯತ್ನ ಮಾಡಲಾಯಿತು. ಹತ್ತು ಸಣ್ಣ ಸಣ್ಣ ಅಣೆಕಟ್ಟೆಗಳನ್ನು ನಿರ್ಮಿಸುವ

ಯೋಜನೆ ಹಾಕಿಕೊಳ್ಳಲಾಯಿತು. ಈ ಯೋಜನೆಯಲ್ಲಿ ಸಾವಿರಾರು ಎಕರೆ ಸಮೃದ್ಧ ತೋಟವನ್ನು ಮುಳುಗಿಸುವ ಭೀತಿಯುಂಟಾಯಿತು.

ಈ ನೂತನ ಯೋಜನೆಯನ್ನು ಜಾರಿಗೆ ತರುವ ಸಂಬಂಧ ಟೆಂಡರ್ ಕರೆಯಲಾಯಿತು. ೧೯೯೨ರ ಸೆಪ್ಟಂಬರ್ ೭ರಂದು ಸರ್ಕಾರದ ಟೆಂಡರನ್ನು ವಿರೋಧಿಸಿ ಸ್ವರ್ಣವಲ್ಲಿಯ ಈಗಿನ ಮಠಾಧೀಶರಾಗಿರುವ ಶ್ರೀ ಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳವರ ನೇತೃತ್ವದಲ್ಲಿ ಚಳವಳಿ ಹೊಸ ರೂಪ ಪಡೆದುಕೊಂಡಿತು. ಸೆಪ್ಟಂಬರ್ ೧೪ ರಿಂದ ೧೮ರವರೆಗೆ ಸ್ವರ್ಣವಲ್ಲಿ ಮಠದಿಂದ ಮಾಗೋಡಿಗೆ ೬೫ ಕಿ.ಮೀ. ದೂರದ ಪಾದಯಾತ್ರೆ ಮಾಡಿದರು. ನಮ್ಮ ಹೋರಾಟ ಜಿಲ್ಲೆಯ ಪರಿಸರಕ್ಕೆ ಸಂಬಂಧಿಸಿದೆ ; ಬೇಡ್ತಿ ಒಂದು ಸಂಕೇತ ಮಾತ್ರ, 'ಬೇಡ್ತಿಯನ್ನು ಉಳಿಸಿಕೊಳ್ಳಲು ನಾವು ಬಲಿದಾನಕ್ಕೂ ಸಿದ್ಧ' ಎಂದು ಘೋಷಿಸಿದರು.[೨೦] ಜನರನ್ನು ಎಚ್ಚರಿಸುವುದರೊಂದಿಗೆ ಈ ಚಳವಳಿಗೆ ವಿಶಾಲ ರೂಪವನ್ನು ತಂದುಕೊಟ್ಟರು. ೧೮.೯.೯೨ರಂದು ಪಾದಯಾತ್ರೆ ಮಾಗೋಡ ತಲುಪಿದಾಗ ಸುಮಾರು ೩೦,೦೦೦ಕ್ಕೂ ಹೆಚ್ಚು ಜನರು ಸೇರಿದ್ದುದು ರಾಷ್ಟ್ರದ ಗಮನ ಸೆಳೆಯಿತು.[೨೧] ಜನಸ್ತೋಮವನ್ನು ಉದ್ದೇಶಿಸಿ ಮಾತನಾಡುತ್ತಾ ಸ್ವಾಮೀಜಿಯವರು "ಯೋಜನೆ ನಡೆಯುವುದಾದರೆ ನನ್ನ ಎದೆಯ ಮೇಲೆ ನಡೆಯಲಿ" ಎಂದು ಸಾರುತ್ತಾ ಅಹಿಂಸಾತ್ಮಕ ಹೋರಾಟಕ್ಕೆ ಕರೆ ನೀಡಿದರು. ಜನರು ಚಳವಳಿಗಾಗಿಯೇ ಸಿದ್ಧಪಡಿಸಿದ್ದ ₹ ೧೦ ಬೆಲೆ ಬಾಳುವ ಬ್ಯಾಡ್ಜನ್ನು ಧರಿಸಿದ್ದರು.[೨೨] ಚಳವಳಿಯನ್ನು ಪ್ರಾರಂಭಿಸಿ, ಮುನ್ನಡೆಸಿಕೊಂಡು ಬಂದಿದ್ದ ಶ್ರೀಮತಿ ಅನಸೂಯ ಶರ್ಮ ಅವರು ಅಲ್ಲಿದ್ದು, ಎಲ್ಲರಿಂದ ಪ್ರಶಂಸಿಸಲ್ಪಟ್ಟರು. ಈ ಸಮಾವೇಶದಲ್ಲಿ ಮತ್ತು ಮುಂದಕ್ಕೆ ಸ್ವಾಮೀಜಿಯವರು 'ಹಸಿರು ಸ್ವಾಮಿ' ಯವರೆಂದು ಸಂಬೋಧಿಸಲ್ಪಟ್ಟರು (ಲೋಕಧ್ವನಿ ದೈನಿಕ, ಶಿರಸಿ ೧೦-೧೨-೨೦೦೭). ಬೇಡ್ತಿ ಚಳವಳಿಯು ರಾಜಕೀಯ ವೃತ್ತಿ (ಮಹಿಳೆ) ಮುಖಂಡತ್ವದಿಂದ ಧಾರ್ಮಿಕ ವ್ಯಕ್ತಿಯ ನೇತೃತ್ವದಲ್ಲಿ ಬಲಗೊಂಡಿರುವುದು ವಿಚಾರಣೀಯವಾಗಿದೆ.

ಕರ್ನಾಟಕ ಸರ್ಕಾರವು ಏನೆಲ್ಲ ತಂತ್ರಗಳನ್ನು ಹೂಡಿದರೂ ಚಳವಳಿಯನ್ನು ಹತ್ತಿಕ್ಕಲಾಗಲಿಲ್ಲ. ಸ್ವಾಮೀಜಿಯವರ ವತಿಯಿಂದ ತಂಡವು ದೆಹಲಿಗೆ ತೆರಳಿ ಕೇಂದ್ರ ಯೋಜನಾ ಆಯೋಗವನ್ನು ಭೇಟಿಯಾಗಿ ಯೋಜನೆ ತಡೆಗೆ ಮನವಿ ಸಲ್ಲಿಸಿತು. ಪರಿಸರ ಖಾತೆಯು ಇದುವರೆವಿಗೂ ಯೋಜನೆಗೆ ಅನುಮತಿ ಕೊಟ್ಟಿಲ್ಲ. 'ಬೇಡ್ತಿ ಒಂದು ಮುಚ್ಚಿದ ಕಡತ' ಎಂದು ತಿಳಿಸಿತು.[೨೩] ಯಶಸ್ಸು ಸಾಧಿಸಿದ ಸಂತೋಷ ಚಳವಳಿಗಾರರಿಗೆ ಉಂಟಾದರೂ, ಕೆಲವರಿಗೆ ಅನುಮಾನ ಕಾಡುತ್ತಿರುವುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗುರುತಿಸಲಾಗಿದೆ.

ಬೇಡ್ತಿ ಜಲವಿದ್ಯುತ್ ಯೋಜನೆಯು ನಿರಂತರ ಹೋರಾಟದ ಫಲವಾಗಿ ಯಶಸ್ವಿಯಾಗಿದೆ ಎಂಬುದನ್ನು ಗುರುತಿಸಬಹುದು. ಅದು ಒಂದು ಪ್ರಬಲ ಜಾತಿ (ಹವ್ಯಕ ಬ್ರಾಹ್ಮಣರು) ಯವರ ಹೋರಾಟವಾಗಿತ್ತು, ಅವರು ತಮ್ಮ ಮನೆಗಳು, ಮಠ ಹಾಗೂ ಅಡಿಕೆ ತೋಟಗಳನ್ನು ಮುಳುಗಡೆಯಾಗುವುದನ್ನು ತಪ್ಪಿಸಲು ಸಕ್ರಿಯವಾಗಿ ಚಳವಳಿಯಲ್ಲಿ ಪಾಲ್ಗೊಂಡರು ಎಂದು ಹೇಳುವವರು ಇದ್ದಾರೆಂಬುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಕಂಡುಕೊಳ್ಳಲಾಗಿದೆ. ಬೇಡ್ತಿ ಯೋಜನೆಯ ನಂತರವೂ ಸರ್ಕಾರವು 'ರನ್ ಆಫ್ ದಿ ರಿವರ್' ಯೋಜನೆಯ ಪ್ರಸ್ತಾಪವನ್ನು ಮಾಡುತ್ತಲೇ ಬಂದಿದೆ. ಪರಿಸರವನ್ನು ಉಳಿಸುವುದೂ ಒಂದು ಅಭಿವೃದ್ಧಿಯೇ ಆಗಿದೆ ಎಂಬುದು ಬೇಡ್ತಿ ಚಳವಳಿಗಾರರ

ಅಭಿಪ್ರಾಯವಾಗಿದೆ. ಇತ್ತೀಚೆಗೆ ಬೇಡ್ತಿ, ಅಘನಾಶಿನಿ ನದಿ ಕಣಿವೆ ಪ್ರದೇಶವನ್ನು ಸಂರಕ್ಷಣಾ ವಲಯವೆಂದು ಘೋಷಿಸಲು ಕೇಂದ್ರ ವನ್ಯಜೀವಿ ಮಂಡಲಿ ತೀರ್ಮಾನ ತೆಗೆದುಕೊಂಡಿದೆ ಎಂಬುದು ಬೇಡ್ತಿ ಚಳವಳಿಗೆ ದೊರೆತ ಜಯವೆನ್ನಲಾಗಿದೆ.[೨೪]

೫.೩ ಶರಾವತಿ ಟೇಲ್‌ರೇಸ್ ಯೋಜನೆ

ಕರ್ನಾಟಕದ ಹೈಕೋರ್ಟ್ ೧೬-೭-೧೯೮೮ ರಂದು ಪ್ರಜಾವಾಣಿ ದಿನಪತ್ರಿಕೆಯ ಐದನೇ ಪುಟದಲ್ಲಿ ಚರಿತ್ರಾರ್ಹ ಜಾಹಿರಾತು ನೀಡಿತ್ತು. "ಶರಾವತಿ ಟೇಲ್ ರೇಸ್ ಅಣೆಕಟ್ಟು ಯೋಜನೆಯ ವಿರುದ್ಧವಾಗಿ ಜನರಿಂದ ಬಂದ ಅಹವಾಲನ್ನು ವಿಚಾರಣೆಗೆ ಸ್ವೀಕರಿಸಲಾಗಿದೆ ; ಯೋಜನೆಯ ಪರವಾಗಿ ಅಥವಾ ವಿರುದ್ಧವಾಗಿ ಸಾರ್ವಜನಿಕರು ನ್ಯಾಯಾಲಯಕ್ಕೆ ಮನವಿ ಮಂಡಿಸಬಹುದು." ಮೇಲ್ನೋಟಕ್ಕೆ ಇದು ಮಾಮೂಲು ನೋಟೀಸು ಆದರೂ ಇದೊಂದು ಐತಿಹಾಸಿಕ ದಾಖಲೆಯಾಗಿ ಕನ್ನಡ ನಾಡಿನ ಪರಿಸರ ಚಳವಳಿ ಪ್ರೌಢಾವಸ್ಥೆಗೆ ಬಂದ ದ್ಯೋತಕವಾಗಿ ಅನೇಕ ರೀತಿಯಲ್ಲಿ ಅರ್ಥಗರ್ಭಿತವಾಗಿದೆ.[೨೫]

ಹೊನ್ನಾವರದ ಗ್ರಾಮೀಣ ಜನರು ಹೈಕೋರ್ಟ್‌ಗೆ ಅನರ್ಥಕಾರಿ ಶರಾವತಿ ಟೇಲ್‌ರೇಸ್ ಯೋಜನೆ ವಿರುದ್ಧ ರಿಟ್ ಅರ್ಜಿ ಹಾಕಿದ್ದಕ್ಕಾಗಿ ಈ ಮೇಲಿನ ವಿಚಾರ ಪ್ರಮುಖವಾದುದಾಗಿತ್ತು. ಶರಾವತಿ ನದಿಗೆ ೧೯೬೫ರಲ್ಲಿ ಲಿಂಗನಮಕ್ಕಿಯಲ್ಲಿ ಬೃಹತ್ ಅಣೆಕಟ್ಟೆ ನಿರ್ಮಿಸಿ ವಿದ್ಯುತ್ ಉತ್ಪಾದಿಸಲಾಗುತ್ತಿದೆ. ಗೇರುಸೊಪ್ಪ ಬಳಿ ಶರಾವತಿ ನದಿಗೆ ಅದು ಹರಿಯುವ ಕೊಳ್ಳದಲ್ಲಿ ಮತ್ತೊಂದು ಅಣೆಕಟ್ಟು ಕಟ್ಟುವುದೇ ಈ ಹೊಸ ಯೋಜನೆ. ೧೬ ಕಿ.ಮೀ. ಉದ್ದದ ಶರಾವತಿ ಕಣಿವೆ ಸಮೃದ್ಧವಾದ ಮಳೆ ಕಾಡುಗಳು ಹಾಗೂ ಅವುಗಳೊಳಗಿನ ಸೂಕ್ಷ್ಮಜೀವಿ ಸಂಕುಲಗಳನ್ನು ಹೊಂದಿರುವುದೇ ಚಳವಳಿ ಪ್ರಾರಂಭಗೊಳ್ಳಲು ಮೂಲಕಾರಣ. ಸುಮಾರು ೭೦೦ ಹೆಕ್ಟೇರ್ ವಿಸ್ತೀರ್ಣವುಳ್ಳ ಶರಾವತಿ ಕೊಳ್ಳಕ್ಕೆ ವಿಶ್ವಬ್ಯಾಂಕ್ ತಜ್ಞರು, ಬಾಂಬೆ ನ್ಯಾಚುರಲ್ ಹಿಸ್ಟರಿ ಸೊಸೈಟಿ ಸಂಸ್ಥೆಯ ನಿಸರ್ಗ ವಿಜ್ಞಾನಿಗಳು, ಡಾ. ಶಫಿಉಲ್ಲಾ ಸಮಿತಿಯವರು ಭೇಟಿ ನೀಡಿ ಅಧ್ಯಯನ ನಡೆಸಿ 'ಇದೊಂದು ಅಪರೂಪದ ಸಸ್ಯ - ಪ್ರಾಣಿಸಂಕುಲಗಳನ್ನು ಹೊಂದಿರುವ ಭಾಗ, ಎನ್ನುವ ವರದಿಯನ್ನು ನೀಡಿದರು. ಚಳವಳಿಗಾರರಿಗೆ ಈ ವರದಿ ಇನ್ನಷ್ಟು ವಿಶ್ವಾಸವನ್ನು ತಂದುಕೊಟ್ಟಿತು.[೨೬]

'ಹೊನ್ನಾವರ ಪರಿಸರ ಕೂಟ'ವು ಈ ಯೋಜನೆಯ ವಿರುದ್ಧ ಚಳವಳಿ ಪ್ರಾರಂಭಿಸಿತು. ಭಾಷಣ, ಬೀದಿ ನಾಟಕ, ಸ್ಲೈಡ್‌ಗಳ ಪ್ರದರ್ಶನ, ಜನಪದ ನೃತ್ಯ, ಲಾವಣಿ ಮುಂತಾದವುಗಳ ಮೂಲಕ ಜನರಲ್ಲಿ ಅರಿವು ಮೂಡಿಸುವ ಕೆಲಸವೂ ನಡೆಯಿತು. 'ಅಣೆಕಟ್ಟನ್ನು ಆಗಗೊಡೆವು, ಸಹ್ಯಾದ್ರಿಯನ್ನು ಉಳಿಸುವೆವು' ಎನ್ನುವ ಘೋಷಣೆಯನ್ನು ಕೂಗಲಾಯಿತು. ಯೋಜನೆ ಸಂಬಂಧ ಅರಣ್ಯವನ್ನು ಗುತ್ತಿಗೆ ಪಡೆಯಲು ಟೆಂಡರ್ ಹಾಕುವ ಸಂದರ್ಭದಲ್ಲಿ 'ಟೆಂಡರ್ ಪೆಟ್ಟಿಗೆ ಅಪ್ಪಿಕೋ' ಪ್ರತಿಭಟನೆ ನಡೆಸಲಾಯಿತು.[೨೭] ಮತ್ತೊಂದೆಡೆ ಕರ್ನಾಟಕ ಪವರ್ ಕಾರ್ಪೋರೇಷನ್ ಟೆಂಡರ್ ಕರೆದು ಅಣೆಕಟ್ಟೆಯ ನಿರ್ಮಾಣಕ್ಕೆ ಸಿದ್ಧತೆ ನಡೆಸಿತು. ಇದೇ ಸಂದರ್ಭದಲ್ಲಿ 'ಶರಾವತಿ ಅಣೆಕಟ್ಟು ವಿರೋಧಿ ಸಮಿತಿ' ಹುಟ್ಟಿಕೊಂಡಿತು. ಅದು ಆನಂತರ ಶರಾವತಿ ಅಣೆಕಟ್ಟು ವಿರೋಧಿ ಸಮಿತಿ ಮತ್ತು ಶರಾವತಿ ಅಣೆಕಟ್ಟು ಹೋರಾಟ ಸಮಿತಿಗಳೆಂದು ಭಾಗವಾಗಿ ಹೋರಾಟ ಮಾಡಿತು.

ಪರಿಸರವಾದಿ ಡಾ. ಕುಸುಮ ಸೊರಬ ಅವರು ಪರಿಸರ ಸಂಘಟನೆಗಳೊಂದಿಗೆ ಸೇರಿಕೊಂಡು ಮಾರ್ಗದರ್ಶನ ನೀಡುತ್ತಾ, ಯೋಜನೆಗೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ತರುವಲ್ಲಿ ಯಶಸ್ವಿಯಾದರು. 'ಶರಾವತಿ ಕೊಳ್ಳದ ರಮ್ಯನೋಟ - ನಿಂತು ಆನಂದಿಸಿ' ಎನ್ನುವ ಫಲಕದ ಮೇಲೆ 'ಇನ್ನು ಕೆಲವೇ ದಿನ ಮಾತ್ರ' ಅಂತ ಬರೆದು ಛಾಯಾಚಿತ್ರವನ್ನು ಮಾಡಿಟ್ಟುಕೊಂಡು ಎಲ್ಲ ಕಡೆ ತೋರಿಸಿ ಭಾಷಣ ಮಾಡುತ್ತಿದ್ದರು.[೨೮] ಸರ್ಕಾರ ಮತ್ತು ಚಳವಳಿಗಾರರ ನಡುವೆ ಮಾತುಕತೆ ವಿಫಲವಾದಾಗ ಡಾ. ಕುಸುಮಾ ಸೊರಬ, ಶಿವರಾಮ ಕಾರಂತ ಇನ್ನೂ ಅನೇಕ ಪರಿಸರ ಪ್ರಿಯರೆಲ್ಲ ಸೇರಿ ಶರಾವತಿ ಕಣಿವೆಯಲ್ಲಿ ಗಿಡಗಳನ್ನು ನೆಟ್ಟರು.[೨೯] ೧೯೯೭ರಲ್ಲಿ ಕೋರ್ಟಿನಲ್ಲಿದ್ದ ಕೇಸು ವಜಾ ಆಗಿ ತಡೆಯಾಜ್ಞೆ ತೆರವಾಯಿತು. ಕೇಂದ್ರ ಪರಿಸರ ಇಲಾಖೆಯು ಕಾಮಗಾರಿಗೆ ಒಪ್ಪಿಗೆ ನೀಡಿತು. ಗುತ್ತಿಗೆದಾರರು ಶರಾವತಿ ಕೊಳ್ಳಕ್ಕೆ ನುಗ್ಗಿ ಮರ ಕಡಿಯುವ ಕೆಲಸ ಪ್ರಾರಂಭಿಸಿದರು. ಇದನ್ನು ವಿರೋಧಿಸಿ ಚಳವಳಿಗಾರರು 'ಅಪ್ಪಿಕೋ ಚಳವಳಿ' ನಡೆಸಿದರು. ಒಂದು ಹಂತದಲ್ಲಿ ಮಳೆ, ಚಳಿ, ಗಾಳಿಯನ್ನು ಲೆಕ್ಕಿಸದೆ ಚಳವಳಿಗಾರರು ಗುತ್ತಿಗೆದಾರರನ್ನು ಹಿಮ್ಮೆಟ್ಟಿಸಿದರು. ಅರಣ್ಯ ಇಲಾಖೆ ಮರಗಳನ್ನು ಕಡಿಯುವುದನ್ನು ತಾತ್ಕಾಲಿಕವಾಗಿ ನಿಲ್ಲಿಸಿತು. ಚಳವಳಿಗಾರರು ಜಯ ಸಾಧಿಸಿದೆವೆಂದು ಹಿಂತಿರುಗಿದರು.

೧೯೯೮ರ ಜನವರಿಯಲ್ಲಿ ಯೋಜನೆಯ ಕಾಮಗಾರಿ ಬಿರುಸಿನಿಂದ ಪ್ರಾರಂಭಗೊಂಡಿತು. ಕೆ.ಪಿ.ಸಿ.ಯವರು ಚಳವಳಿಗಾರರು ಸೇರುವ ಮೊದಲೇ ಶರಾವತಿ ಕೊಳ್ಳವನ್ನು ತಮ್ಮ ವಶಕ್ಕೆ ತೆಗೆದುಕೊಂಡು ಯೋಜನೆಯ ಕೆಲಸವನ್ನು ಆರಂಭಿಸಿದರು. ಶರಾವತಿ ಟೇಲ್‌ರೇಸ್ ವಿರುದ್ಧ ಆರಂಭದಿಂದಲೇ ಕೆಲಸ ಮಾಡುತ್ತಿದ್ದ ಡಾ. ಕುಸುಮಾ ಸೊರಬ ಅವರು ಇನ್ನೊಮ್ಮೆ ತಡೆಯಾಜ್ಞೆ ತರಲು ಬೆಂಗಳೂರಿಗೆ ಹೊರಟರು. ಮಾರ್ಗಮಧ್ಯದಲ್ಲಿ ರಸ್ತೆ ಅಪಘಾತದಲ್ಲಿ ಅನಿರೀಕ್ಷಿತವಾಗಿ ಮರಣ ಹೊಂದಿದರು. ಉತ್ತರ ಕನ್ನಡ ಜಿಲ್ಲೆಯ 'ಯೋಜನೆಗಳ ಹೆಸರಿನಲ್ಲಿ ಯಾರ ಅಭಿವೃದ್ಧಿ ನಡೆಯುತ್ತಿದೆ' ಎನ್ನುವ ಪ್ರಶ್ನೆಗೆ ಉತ್ತರಿಸುವ ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಲೇ ಪರಿಸರ ಪ್ರೇಮಿಯಾಗಿದ್ದ ಡಾ. ಕುಸುಮಾ ಸೊರಬ ಇನ್ನಿಲ್ಲವಾದರು.[೩೦] ನಡೆಯುತ್ತಿರುವ ಮುಂದೆ ನಡೆಯಬಹುದಾದ ಪರಿಸರ ಚಳವಳಿಗಳಿಗೆ ಅವರ ಸಾವು ತುಂಬಲಾರದ ನಷ್ಟವೆಂದು ಅವರೇ ಕಟ್ಟಿ ಬೆಳೆಸಿದ್ದ ಹೊನ್ನಾವರದ 'ಸ್ನೇಹ ಕುಂಜ'ದಲ್ಲಿರುವ ಕಾರ್ಯಕರ್ತರೆಲ್ಲರ ಅಭಿಪ್ರಾಯವಾಗಿರುತ್ತದೆ ಎಂಬುದನ್ನು ಕ್ಷೇತ್ರಕಾರ್ಯ ಸಂದರ್ಭದಲ್ಲಿ ಗಮನಿಸಲಾಗಿದೆ.

ಶರಾವತಿ ಟೇಲ್‌ರೇಸ್ ಯೋಜನೆಯ ಸಂಬಂಧದ ಪರಿಸರ ಚಳವಳಿಯು ಒಂದು ದೀರ್ಘ ಹೋರಾಟವಾಗಿತ್ತು. ಈ ಚಳವಳಿಯಲ್ಲಿ ಚಳವಳಿಗಾರರು, ಗುತ್ತಿಗೆದಾರರು, ಸರ್ಕಾರಗಳ ನಡುವೆ ಸ್ಪರ್ಧೆ ಏರ್ಪಟ್ಟು ನ್ಯಾಯಾಲಯವನ್ನು ಅವಲಂಬಿಸಿರುವುದು ವಿಶೇಷವಾಗಿತ್ತು. 'ಮನೆಗಳು ಮುಳುಗಿ ನಿರಾಶ್ರಿತರಾದವರಿಲ್ಲ' ಎನ್ನುವ ಕಾರಣಕ್ಕಾಗಿ ಕೆಲವರು ಶರಾವತಿ ಟೇಲ್‌ರೇಸ್ ಯೋಜನೆಯನ್ನು ಬೆಂಬಲಿಸಿದರೆಂಬ ಅಭಿಪ್ರಾಯಗಳನ್ನು ಅಧ್ಯಯನವು ಗಮನಿಸಿದೆ. ಪ್ರಸ್ತುತ ಅಧ್ಯಯನವು ಸ್ಪಷ್ಟಪಡಿಸಿಕೊಂಡಿರುವಂತೆ ಅಪಾರವಾದ ನೈಸರ್ಗಿಕ ಸಂಪತ್ತಿನ ಮುಳುಗಡೆಯೂ ಒಂದು ಅರ್ಥದಲ್ಲಿ ಅಭಿವೃದ್ಧಿಯ ಹಿನ್ನಡೆಯೇ ಆಗಿದೆ ಎಂಬುದನ್ನು ಜಲಸಂಬಂಧದ ಚಳವಳಿಗಳನ್ನು ಪ್ರತ್ಯೇಕವಾಗಿ ಅಧ್ಯಯನಕ್ಕೊಳಪಡಿಸುವ ಮೂಲಕ ಕಂಡುಕೊಂಡಿದೆ.

೫.೪ ಸಿಗಡಿ ಮೀನು ಕೃಷಿ

ಕರಾವಳಿ ತೀರದಲ್ಲಿ ಹಬ್ಬಲಾರಂಭಿಸಿದ ಸಿಗಡಿ ಕೃಷಿ ವ್ಯಾಪಕ ಪ್ರತಿಭಟನೆಗೆ ಒಳಗಾಗಿದೆ. ೧೯೯೪ರಮೇ ೨೮ ರಂದು ಕುಮಟದಲ್ಲಿ ಸುಮಾರು ೩೦೦ ರೈತರು "ಸಿಗಡಿ ಕೃಷಿ ನಿಲ್ಲಿಸಿ ಪರಿಸರ ಉಳಿಸಿ" ಎಂಬ ಘೋಷಣೆಯೊಡನೆ ಈ ಯೋಜನೆಯನ್ನು ವಿರೋಧಿಸಿದರು.[೩೧] ಅಘನಾಶಿನಿ, ಕಾಳಿ, ಗಂಗಾವಳಿ, ಶರಾವತಿ ಮುಂತಾದ ನದಿಗಳ ಹಿನ್ನೀರಿನ ದಡದಲ್ಲಿರುವ ಭತ್ತದ ಗದ್ದೆಗಳು ಇಂದು ಸಿಗಡಿಯ ಕೊಳಗಳಾಗಿ ಬದಲಾಗುತ್ತಿರುವುದೇ ಈ ಚಳವಳಿಗೆ ಮುಖ್ಯ ಕಾರಣ. ಸರಕಾರ ಹಾಗೂ ಖಾಸಗಿ ಆಡಳಿತಕ್ಕೆ ಸೇರಿದ ಒಟ್ಟು ೮೦೦೦ ಹೆಕ್ಟೇರ್ ಪ್ರದೇಶ ಸಿಗಡಿ ಕೃಷಿಗೆ ಯೋಗ್ಯವೆಂದು ಕರಾವಳಿ ತೀರದಲ್ಲಿ ಗುರುತಿಸಲಾಗಿದೆ. ಅತ್ಯುತ್ತಮ ಆಹಾರ ಹಾಗೂ ಲಾಭದಾಯಕವಾಗಿರುವ ಸಿಗಡಿ ಕೃಷಿಯನ್ನು ಮೀನು ಕೃಷಿಕರ ಅಭಿವೃದ್ಧಿ ಸಂಸ್ಥೆಗಳ ಮೂಲಕ ರೈತರಿಗೆ ಪರವಾನಗಿಯನ್ನು ಕೊಡುವ ಮೂಲಕ ಸರ್ಕಾರವೇ ಪ್ರೋತ್ಸಾಹಿಸುತ್ತಿದೆ. ೧೯೯೧-೯೨ ರಲ್ಲಿ ವೈಜ್ಞಾನಿಕ ರೀತಿಯ ಸಿಗಡಿ ಕೃಷಿ ಬಗ್ಗೆ ಅಲ್ಪಾವಧಿ ತರಬೇತಿ, ಕಡಿಮೆ ಬಡ್ಡಿದರದಲ್ಲಿ ಸಾಲ ನೀಡುತ್ತಿದೆ. ₹ ೪೮ ಲಕ್ಷ ವೆಚ್ಚದಲ್ಲಿ ಕುಮಟದ ಹೆಡ್‌ಬಂದರಿನಲ್ಲಿಸಿಗಡಿ ಮರಿ ಉತ್ಪಾದನಾ ಸಂಕೀರ್ಣ ನಿರ್ಮಿಸಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಉಪ್ಪು ನೀರಿನ ಕಡಿಮೆ ಆಳದ ಪ್ರದೇಶದಲ್ಲಿ ಸಿಗಡಿ ಕೃಷಿ ನಡೆಯುತ್ತಿದೆ. ಕರ್ನಾಟಕದ ಕರಾವಳಿಯ ೧೦ ಸಾವಿರ ಎಕರೆ ಗಜನಿ (ಕ್ಷಾರ) ಭೂಮಿಯಲ್ಲಿ ೮ ಸಾವಿರ ಎಕರೆ ಉತ್ತರ ಕನ್ನಡದಲ್ಲಿದೆ. ಸಮುದ್ರೋತ್ಪನ್ನ ರಫ್ತು ಅಭಿವೃದ್ಧಿ ಪ್ರಾಧಿಕಾರವು ಗೋಕರ್ಣದ ಸಾಣಿಕಟ್ಟದಲ್ಲಿ ಪ್ರಾಯೋಗಿಕವಾಗಿ ಕಡಿಮೆ ಉಪ್ಪು ನೀರುಳ್ಳ ಸಮತಟ್ಟಾದ ಪ್ರದೇಶ, ಸಮುದ್ರದ ಕೊಲ್ಲಿಯ ಪ್ರದೇಶ ಹಾಗೂ ಉಬ್ಬರವಿಳಿತಗಳಿಂದುಂಟಾದ ಪ್ರದೇಶದಲ್ಲಿ ಸಿಗಡಿ ಕೃಷಿಗೆ ಅವಕಾಶ ನೀಡಿದೆ. ಭರತದ (ಉಬ್ಬರ) ನೀರು, ಸಿಗಡಿ ಕೃಷಿ ಪ್ರದೇಶಕ್ಕೆ ಬರುವಂತೆ, ಇಳಿತದಲ್ಲಿ ಕೃಷಿ ಪ್ರದೇಶದ ನೀರು ಹೊರ ಹೋಗುವಂತೆ 'ಸ್ಲೂಸ್‌ಗೇಟ್'ಗಳಿರುತ್ತವೆ. ೧೯೯೦ ದಶಕದಲ್ಲಿದ್ದಷ್ಟು ಸಿಗಡಿ ಕೃಷಿಯು ತಾಂತ್ರಿಕ ಕಾರಣಗಳು, ಸಿಗಡಿಗೆ ಬರುವ ರೋಗಗಳಿಂದಾಗಿ ಇತ್ತೀಚೆಗೆ ಕಡಿಮೆಯಾಗುತ್ತಿದೆ. ವರ್ಷಕ್ಕೆ ಎರಡು ಬಾರಿ ಸಿಗಡಿ ಫಸಲನ್ನು ತೆಗೆಯಬಹುದು. ಮೇ ನಿಂದ ಅಕ್ಟೋಬರ್‌ವರೆಗೆ ಕ್ಷಾರ ನಿರೋಧಕ ಬತ್ತದ ತಳಿಯಾದ 'ಕಗ್ಗ'ವನ್ನು ಬೆಳೆಯುತ್ತಾರೆ. ನವೆಂಬರ್‌ನಿಂದ ಏಪ್ರಿಲ್‌ವರೆಗೆ ಸಿಗಡಿ ಪಾಲನೆ ನಡೆಯುತ್ತದೆ.

ಉತ್ತರ ಕನ್ನಡ ಜಿಲ್ಲೆಯ ಕರಾವಳಿಯಲ್ಲಿ ಕ್ಷಾರಭೂಮಿ ಬಂಡುಗಳು, ಕಟ್ಟುಗಳು, ಜಂಪುಡಿಗಳು ದುಸ್ಥಿತಿಯಲ್ಲಿವೆ. ಈ ಕೃಷಿಗೆ ಸೆಗಣಿ, ಕೋಳಿಗೊಬ್ಬರ, ಯೂರಿಯಾ, ಸೂಪರ್ ಪಾಸ್ಪೇಟ್‌ಗಳನ್ನು ಬಳಸಲಾಗುತ್ತದೆ. ನಂತರ ಸಮುದ್ರಕ್ಕೆ ಉಬ್ಬರ ಬಂದಾಗ ನದಿಯಲ್ಲಿ ಹಿನ್ನುಗ್ಗುವ ಉಪ್ಪು ನೀರನ್ನು ಸಿಗಡಿಯ ಕೊಳಗಳಿಗೆ ತುಂಬಲಾಗುತ್ತದೆ. ಕೊಳಗಳಿಂದ ನೀರನ್ನು ದಿನವೂ ಬದಲಾಯಿಸಬೇಕು. ಆದರೆ ಈ ನೀರಿನಲ್ಲಿ ಸಿಗಡಿಯ ತ್ಯಾಜ್ಯಗಳಿರುತ್ತವೆ. ಈ ಕಾರಣಗಳಿಂದಾಗಿ ರೈತರು ಈ ಯೋಜನೆಯನ್ನು ಬಲವಾಗಿ ವಿರೋಧಿಸುತ್ತಿದ್ದಾರೆ. ಸ್ಥಳೀಯ ಪರಿಸರ ಸಂಘಟನೆಗಳೂ ತಮ್ಮ ಬೆಂಬಲ ನೀಡಿವೆ. ಮತ್ತೊಂದೆಡೆ ಜೂನ್ ೧೫ರಿಂದ ಆಗಸ್ಟ್ ೧೫ರ ವರೆಗೆ ಸಮುದ್ರದಲ್ಲಿ ಮೀನುಗಾರಿಕೆಗೆ ನಿಷೇಧವಿರುವಾಗ ರೈತರಿಂದ ವಾರ್ಷಿಕ ಟೆಂಡರ್ ಮೇಲೆ ಗಜನಿ ಹೊಂಡಗಳನ್ನು ಪಡೆದ ಗುತ್ತಿಗೆದಾರರು ಅಧಿಕ ಲಾಭ ಪಡೆಯುತ್ತಾರೆ.[೩೨]

ರೈತರಿಗೆ ಲಾಭಕ್ಕಿಂತ ನಷ್ಟವೇ ಜಾಸ್ತಿಯಾಗ ತೊಡಗಿ ಸೀಗಡಿ ಕೃಷಿಯನ್ನು ಈ ಮುಂದಿನ ಕಾರಣಗಳಿಗಾಗಿಯೂ ವಿರೋಧಿಸಿದರು.

ತ್ಯಾಜ್ಯವಸ್ತುಗಳನ್ನು ನದಿ ಹಾಗೂ ಸಾಗರ ಸೇರುವ ಅಳಿವೆ ಪ್ರದೇಶಗಳಿಗೆ ಬಿಡಲಾಗುತ್ತದೆ. ಇದರಿಂದ ಸಾಗರ ಜೀವಿಗಳು ನಾಶವಾಗುವ ಸಂಭವವಿದೆ. ಕೊಳದ ಉಪ್ಪು ನೀರು ಸುತ್ತಲಿನ ಮಣ್ಣಿನಲ್ಲಿ ಬಸಿದು ಅಂತರ್ಜಲ ಸೇರಿ ಭತ್ತದ ಕೃಷಿ ಹಾನಿಗೊಳಗಾಗಿದೆ. ಗದ್ದೆಯ ಅಂಚಿನಲ್ಲಿರುವ ಅಡಿಕೆ ತೆಂಗು ಹಾಗೂ ಇನ್ನಿತರ ಮರಗಳು ಒಣಗಿ ಹೋಗಿವೆ. ಸಿಹಿನೀರಿನ ಬಾವಿಗಳಲ್ಲಿ ಉಪ್ಪು ನೀರು ತುಂಬಿದೆ. ಸಿಗಡಿ ಕೃಷಿ ನಡೆಸುವಾಗ ಮಣ್ಣಿನ ಗುಣಮಟ್ಟ ಅಥವಾ ಸುತ್ತಲಿನ ಪರಿಸರವನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಬಂಡವಾಳ ಹಾಗೂ ಅಧಿಕಾರದ ಬಲದಿಂದ ಅನೇಕ ರೈತರ ಜಮೀನನ್ನು ಪಡೆದುಕೊಳ್ಳಲಾಗಿದೆ. ಸುತ್ತಲೂ ಸಿಗಡಿ ಕೃಷಿಇದ್ದು, ಮಧ್ಯದಲ್ಲಿ ಇರುವ ಬಡ ರೈತರು ಭತ್ತಬೆಳೆಯುವ ಹಾಗೂ ಇಲ್ಲ, ಸಿಗಡಿ ಕೃಷಿ ನಡೆಸುವ ಹಾಗೂ ಇಲ್ಲ. ಈ ಕಾರಣಗಳಿಂದಾಗಿ ಬಡ ರೈತರ ಆಸ್ತಿ ಶ್ರೀಮಂತರ ಕೈ ಸೇರಿದೆ. ಇಂತಹ ಕಾರಣಗಳನ್ನು ಇಟ್ಟುಕೊಂಡು ಪರಿಸರ ಉಳಿಸಿ ಎನ್ನುವ ಘೋಷಣೆಯೊಡನೆ ಚಳವಳಿ ಪ್ರಾರಂಭಗೊಂಡರೂ ನಿರೀಕ್ಷಿತ ಯಶಸ್ಸುಗಳಿಸಲಿಲ್ಲ. ಏಕೆಂದರೆ ಸಿಗಡಿ ಮರಿಗಳಿಗೆ ರೋಗ ಬಂದು ಕೋಟ್ಯಂತರ ರೂಪಾಯಿ ನಷ್ಟ ವಾಯಿತೆನ್ನುವ ಉದ್ಯಮಪತಿಗಳ ಹಾಹಾಕಾರದ ಎದುರು ಜನಸಾಮಾನ್ಯರ ಪ್ರತಿಭಟನೆ ಸದ್ದಿಲ್ಲದಾಯಿತು.[೩೩] ಸಿಗಡಿ ಕೃಷಿಯಿಂದ ಕಡಲ ತೀರದ ಮೀನುಗಾರಿಕೆಗೆ, ರೈತರ ಕೃಷಿ ಬೆಳೆಗಳಿಗೆ ಆದ ಹಾನಿಗಳಿಗೆ ಪರಿಹಾರ ಸಿಗಲಿಲ್ಲ. ಸಿಗಡಿ ಕೃಷಿಯ ಪ್ರೋತ್ಸಾಹ, ಸಿಗಡಿ ಕೃಷಿಯ ವಿರುದ್ಧದ ಚಳವಳಿಗಳು ನಡೆಯುತ್ತಲೇ ಇವೆ. ಡಾ. ಕುಸುಮಾ ಸೊರಬ ಬೆಂಗಳೂರಿನಿಂದ ಸಮೀಕ್ಷೆಗೆ ಬಂದಿದ್ದ ಕಾನೂನು ವಿದ್ಯಾರ್ಥಿಗಳ ಜೊತೆ ಸೇರಿ, ಮಾರ್ಗದರ್ಶನ ನೀಡಿ, ಚಳವಳಿಗಾರರನ್ನೂ ಬೆಂಬಲಿಸಿದರು.

ಸಿಗಡಿ ಕೃಷಿಯ ವಿರುದ್ಧ ನಡೆಯುತ್ತಿರುವ ಚಳವಳಿಯಲ್ಲಿ ಅರಣ್ಯನಾಶವೂ ಒಂದು ಮುಖ್ಯ ವಿಷಯವಾಗಿದೆ. ಇಲ್ಲಿ ಅರಣ್ಯನಾಶ ಎನ್ನುವುದನ್ನು 'ಕಾಂಡ್ಲ'ಕಾಡಿನ ಕುರಿತು ಹೇಳಲಾಗಿದೆ. ಸಿಗಡಿ ಕೃಷಿ ಹೊಂಡಗಳನ್ನು ನಿರ್ಮಿಸಲು ನದಿಗಳ ಅಳಿವೆಯಂಚಿನಲ್ಲಿರುವ ಕಾಂಡ್ಲಾ ಸಸ್ಯಗಳನ್ನು ಕಡಿಯಲಾಗುತ್ತಿದೆ. ಅರಣ್ಯ ಇಲಾಖೆಯವರು ಈಗಾಗಲೇ ಬೆಳೆದು ನಿಂತಿದ್ದ ಕಾಂಡ್ಲಾಕಾಡುಗಳ ಸಂರಕ್ಷಣೆಯತ್ತ ಗಮನ ಹರಿಸದಿದ್ದ ಕಾರಣ ಕರಾವಳಿ ತೀರದ ಸುಮಾರು ೬೪೩ ಹೆಕ್ಟೇರ್ ಕಾಂಡ್ಲ ಅರಣ್ಯ ಪ್ರದೇಶ ಸಂಕುಚಿತಗೊಳ್ಳುತ್ತಾ ಸಾಗಿದೆ.

ಕಾಂಡ್ಲಾ ಕಾಡುಗಳು ಉಷ್ಣವಲಯದ ಅಪರೂಪದ ಜೀವವೈವಿದ್ಯ ತಾಣಗಳಾಗಿವೆ. ಕಾಂಡ್ಲಾರಣ್ಯಗಳಲ್ಲಿ ಒಟ್ಟು ೧೩೦ಕ್ಕೂ ಅಧಿಕ ವಿವಿಧ ಸಸ್ಯ ಪ್ರಭೇದಗಳನ್ನು ದಾಖಲಿಸಲಾಗಿದೆ.[೩೪] ಕರಾವಳಿ ತೀರದಲ್ಲಿ ಅವಸಾನದ ಅಂಚನ್ನು ಸಮೀಪಿಸಿದ್ದ ಕಾಂಡ್ಲಕಾಡುಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗಾಗಿ ರಾಜ್ಯದ ಅರಣ್ಯ ಮತ್ತು ಪರಿಸರ ಇಲಾಖೆಗಳು ಯೋಜನೆಯೊಂದನ್ನು ರೂಪಿಸಿದವು. ಬೆಂಗಳೂರಿನ 'ಕರ್ನಾಟಕ ಅಸೋಸಿಯೇಷನ್ ಫಾರ್‌ದಿ ಅಡ್ವಾನ್ಸ್‌ಮೆಂಟ್ ಆಫ್ ಸೈನ್ಸ್'ನ ವಿಜ್ಞಾನಿಗಳು ಈ ಯೋಜನೆಯ ಅನುಷ್ಠಾನಕ್ಕೆ ನೆರವು ನೀಡಲು ಒಪ್ಪಿಕೊಂಡರು. ೧೯೮೮ ರಿಂದ ಕಾಂಡ್ಲಾ ಕಾಡುಗಳ ಕುರಿತಾದ ಈ ಪ್ರಕ್ರಿಯೆ ಪ್ರಾರಂಭಗೊಳ್ಳಲಾರಂಭಿಸಿತು. ಕಾಂಡ್ಲ ಸಸಿಗಳ ಕುರಿತು ಅರಣ್ಯ ಇಲಾಖೆಯ ಸಿಬ್ಬಂದಿಗಳಿಗೆ ತರಬೇತಿ ನೀಡಲಾಯಿತು. ಸರ್ಕಾರ ಯೋಜನೆಗೆ ಹಣವನ್ನು ಬಿಡುಗಡೆಗೊಳಿಸಿತು. ಕರಾವಳಿಯ

ಅಳಿವೆಗಳಲ್ಲಿ ಕಾಂಡ್ಲ ಕಾಡಿನ ಅಭಿವೃದ್ಧಿ ಕೆಲಸಗಳು ನಡೆದವು. ಕಾಂಡ್ಲ ಕಾಡಿನ ಪ್ರದೇಶವನ್ನು 'ಮಂಗಳಬನ' ಎಂದು ಕರೆದು ಅದನ್ನು ಜೀವ ವಿವಿಧತೆಯ ಕೇಂದ್ರವನ್ನಾಗಿ ಮಾಡುವ ಉದ್ದೇಶವನ್ನು ಅರಣ್ಯ ಮತ್ತು ಪರಿಸರ ಇಲಾಖೆಗಳು ಹೊಂದಿವೆ.[೩೫]

ಲಾಭದ ಆಸೆಯನ್ನಷ್ಟೇ ಹೊಂದಿ ಬೆಳೆಯುವ ಸಿಗಡಿ ಕೃಷಿ ಕೆಲವೇ ಜನರ ಹಿಡಿತದಲ್ಲಿದ್ದು, ಇತರೆಲ್ಲಾ ಕೃಷಿಕರಿಗೆ ತೊಂದರೆಯಾಗಿರುವುದರಿಂದ ಚಳವಳಿ ನಡೆದಿದೆ. ಆದರೆ ಆ ಕೆಲವೇ ಜನ ಶ್ರೀಮಂತ ಸಿಗಡಿ ಕೃಷಿಕರು ನಮಗೆ ನಷ್ಟವಾಗಿದೆ, ತುಂಬಿ ಕೊಡುವವರಾರು ? ಎನ್ನುತ್ತಾರೆ. 'ಪರಿಸರ ಉಳಿಸಿ, ಅಭಿವೃದ್ಧಿಯನ್ನು ನಡೆಸಿ' ಎನ್ನುವ ನೆಲೆಯಿಂದ ನೋಡಿದಾಗ, ಪರಿಸರಕ್ಕೆ ಹಾನಿಕಾರಕವಾದ ಸಿಗಡಿ ಕೃಷಿ ಕಡಿಮೆಯಾಗುತ್ತಿರುವುದನ್ನು, ಸ್ಪರ್ಧೆ ಇಲ್ಲದಿರುವುದನ್ನು ಸಿಗಡಿ ಕೃಷಿ ಕ್ಷೇತ್ರಗಳಿಗೆ ಭೇಟಿ ಕೊಟ್ಟು ಗುರುತಿಸಲಾಗಿದೆ. ಮತ್ತೊಂದೆಡೆ ಸರ್ಕಾರವು ಸಿಗಡಿ ಕೃಷಿಗೆ ಪ್ರೋತ್ಸಾಹವನ್ನು ಪ್ರಕಟಿಸುತ್ತಿರುವುದನ್ನು ಮಾಧ್ಯಮಗಳಲ್ಲಿ ಗಮನಿಸಬಹುದಾಗಿದೆ.

೫.೫ ಇತರೆ ಚಳವಳಿಗಳು

ಉತ್ತರ ಕನ್ನಡ ಜಿಲ್ಲೆಯಲ್ಲಿ ಸರಾಸರಿ ವರ್ಷಕ್ಕೊಂದರಂತೆ ಜಲಸಂಬಂಧದ ಯೋಜನೆಗಳು ಸರ್ಕಾರದಿಂದ, ಬಂಡವಾಳದಿಂದ ಪ್ರಸ್ತಾಪವಾಗುತ್ತಲೇ ಇವೆ. ಅಂತಹವುಗಳನ್ನು ಆರಂಭದಲ್ಲಿಯೇ ವಿರೋಧಿಸಿ ಪರಿಸರ ಚಳವಳಿಗಳು ನಡೆಯುತ್ತಲೇ ಇವೆ. ಬೃಹತ್ ಜಲಸಂಬಂಧಿ ಯೋಜನೆಗಳಿಂದಾಗಿರುವ ನಷ್ಟವನ್ನು ಜನರು ಮರೆತಿಲ್ಲ. ಅದಕ್ಕಾಗಿ ಮತ್ತಾವುದೇ ಜಲಸಂಬಂಧದ ಯೋಜನೆಗಳನ್ನು ಜಿಲ್ಲೆಯೊಳಗೆ ಬರಲು ಬಿಡುತ್ತಿಲ್ಲ. ಪ್ರಸ್ತಾಪಿಸಲ್ಪಟ್ಟಿರುವ ಇತರೆ ಜಲಸಂಬಂಧಿ ಯೋಜನೆಗಳು ಹಾಗೂ ಚಳವಳಿಗಳನ್ನು ಈ ಮುಂದಿನಂತೆ ಗಮನಿಸಬಹುದಾಗಿದೆ.

ಬೆಣ್ಣೆಹೊಳೆ ಅಣೆಕಟ್ಟು ಯೋಜನೆ : ಶಿರಸಿ ತಾಲೂಕಿನ ರಾಗಿ ಹೊಸಳ್ಳಿ ಗ್ರಾಮದ ಬಳಿ ಹರಿಯುವ ಬೆಣ್ಣೆಹೊಳೆಗೆ ಅಣೆಕಟ್ಟು ಕಟ್ಟುವ ಯೋಜನೆಯನ್ನು ಸರ್ಕಾರವು ೧೯೯೫ರಲ್ಲಿ ಪ್ರಕಟಿಸಿತು. ವಿದ್ಯುತ್ ಉತ್ಪಾದನೆಯನ್ನೇ ಪ್ರಧಾನ ಗುರಿಯಾಗಿಸಿಟ್ಟು ಕೊಂಡಿದ್ದ ಈ ಯೋಜನೆಯ ಸಮೀಕ್ಷಾ ಕಾರ್ಯಕ್ಕೆ ಆಸ್ಪದ ಕೊಡದೆ ಸುತ್ತಮುತ್ತಲಿನ ಜನರು ಪ್ರತಿಭಟಿಸಿದರು. ಇಂದಿಗೂ ಸಮೀಕ್ಷಾ ಕಾರ್ಯ ಕೈಗೊಳ್ಳಲಾಗದೆ ಸರ್ಕಾರಿ ಲೆಕ್ಕದಲ್ಲಿ ಯೋಜನೆಯಾಗಿಯೇ ಇದೆ. ಜನರು ಎಚ್ಚರಿಕೆಯಿಂದಿದ್ದಾರೆ.

'ರನ್ ಆಫ್ ದಿ ರಿವರ್' ಯೋಜನೆ : ಬೇಡ್ತಿ ನದಿಗೆ ಅಣೆಕಟ್ಟು ಕಟ್ಟುವುದನ್ನು ಘಟ್ಟದ ಮೇಲಿನ ಜನ ತೀವ್ರವಾಗಿ ಪ್ರತಿಭಟಿಸಿದರು. ಸ್ವರ್ಣವಲ್ಲಿ ಮಠದ ಶ್ರೀಗಳ ನೇತೃತ್ವದಲ್ಲಿ ನಡೆದ ಚಳವಳಿಯಿಂದಾಗಿ ಸರ್ಕಾರ ಬೇಡ್ತಿ ಯೋಜನೆಯನ್ನು ಹಿಂತೆಗೆದು ಕೊಂಡಿತು. 'ಬೃಹತ್ ಯೋಜನೆಗಳಿಗೆ ಬದಲಾಗಿ ಬಹಳ ಕಾಡು ಮುಳುಗದ ಯೋಜನೆಗಳನ್ನು ರೂಪಿಸಿ' ಎಂದು ಸರ್ಕಾರಕ್ಕೆ ಜನರು ಸವಾಲೆಸೆದ ಪ್ರತಿಫಲವೇ ರನ್ ಆಫ್ ದಿ ರಿವರ್ ಯೋಜನೆ.[೩೬] ಬೇಡ್ತಿ ನದಿಯು ಘಟ್ಟದಿಂದ ಕೆಳಕ್ಕೆ ಹರಿದು ಗಂಗಾವಳಿ ಎಂಬ ಹೆಸರಿನಿಂದ ಕರೆಯಲ್ಪಡುತ್ತದೆ. ನದಿಯು ರಭಸವಾಗಿ ಹರಿಯುವ (ಓಡುವ) ೧೬ ಕಡೆಗಳಲ್ಲಿ ಪುಟ್ಟ ಒಡ್ಡುಗಳನ್ನು ಕಟ್ಟಿ ವಿದ್ಯುತ್ ಉತ್ಪಾದಿಸುವ

ಯೋಜನೆಯನ್ನು ಸರ್ಕಾರ ಮುಂದಿಟ್ಟಿತು. ಯೋಜನೆಯ ತಯಾರಿ ನಡೆಸಿದ್ದ ಸರ್ಕಾರದ ವಿರುದ್ಧ ಜನರು ಚಳವಳಿ ಆರಂಭಿಸಿದರು.

ಗಂಗಾವಳಿ ನದಿ ಅನೇಕ ಹಳ್ಳಿಗಳಿಗೆ ಆಸರೆಯಾಗಿದೆ. ಮೊರಬ, ಸುಂಕಸಾಳ, ಶೇವಕಾರ, ಹಳವಳ್ಳಿ, ಹಿಲ್ಲೂರು, ಮೊಗಟಾ, ಕುಂಟ್ಗಣಿ ಮುಂತಾದ ೨೬ ಹಳ್ಳಿಗಳು ಭೌಗೋಳಿಕವಾಗಿ ಜಲಾವೃತವಾಗುವ ತಗ್ಗು ಪ್ರದೇಶಗಳಲ್ಲಿವೆ. ರನ್ ಆಫ್ ದಿ ರಿವರ್ ಯೋಜನೆಯಲ್ಲಿ ಪುಟ್ಟ ಅಣೆಕಟ್ಟುಗಳಾದರೆ ಈ ಎಲ್ಲಾ ಹಳ್ಳಿಗಳೂ ಮುಳುಗದಿದ್ದರೂ ಅವರು ಬೆಳೆ ಬೆಳೆಯುವ ಭೂಮಿ ಪೂರ್ತಿಯಾಗಿ ನೀರಿನಿಂದ ಮುಳುಗುತ್ತದೆ. ಏನು ಬೆಳೆಯುವುದು. ಊಟ ಮಾಡುವದೆನ್ನುವ ಪ್ರಶ್ನೆಗಳು ಜನರನ್ನು ಕಾಡಿದವು, ಅಂತಿಮವಾಗಿ ಯೋಜನೆಯನ್ನೇ ಆಗದಂತೆ ತಡೆಯಲು ಜನರು ಮುಂದಾದರು. ಬಹಳ ಮುಖ್ಯವಾಗಿ ಹಳವಳ್ಳಿ, ಕಲ್ಲೇಶ್ವರ, ಹೆಗ್ಗಾರ ಹಳ್ಳಿಗಳವರು ಈಗಾಗಲೇ ಕೊಡಸಳ್ಳಿ ಯೋಜನೆಯಿಂದ ನಿರಾಶ್ರಿತರಾಗಿ ಬಂದು ನೆಲೆಸಿದ್ದವರು, ಮತ್ತೊಂದು ಯೋಜನೆಗಾಗಿ ನಾವು ಇನ್ನೆಷ್ಟು ಸಲ ನಿರಾಶ್ರಿತರಾಗುವುದು ಎಂಬ ನೋವಿನ ಪ್ರಶ್ನೆಯು ಚಳವಳಿಗೆ ದಾರಿ ಮಾಡಿಕೊಟ್ಟಿತು.

ಜಿಲ್ಲಾಧಿಕಾರಿಗಳ ಸಮ್ಮುಖದಲ್ಲಿ ಕೆ.ಪಿ.ಸಿ. ಮತ್ತು ಜನ ಸಾಮಾನ್ಯರ ಮುಖಾಮುಖಿ ಕಾರ್ಯಕ್ರಮವೊಂದು ಏರ್ಪಾಡಾಯಿತು. 'ಜನರಿಗೆ ತಿಳುವಳಿಕೆ ನೀಡುವ ಕಾರ್ಯಕ್ರಮ' ಎಂದು ಸರ್ಕಾರದವರು ಹೇಳಿಕೊಂಡರು. ನೀವೊಮ್ಮೆ ಮಳೆಗಾಲದಲ್ಲಿ ಬಂದು ಈ ಹಳ್ಳಿಗಳನ್ನು ನೋಡಿ, ಮಳೆಗಾಲದಲ್ಲಿ ಅಧ್ಯಯನ ಮಾಡಿ ಎಂದು ಜನರು ವಿನಂತಿಸಿಕೊಂಡರು. ಸಭೆಯು ಯಾವುದೇ ನಿರ್ಣಗಳಿಲ್ಲದೆ ಕೊನೆಗೊಂಡಿತು. ಬೇಡ್ತಿ ಯೋಜನೆಯನ್ನು ತಡೆದು ಯಶಸ್ವಿಯಾಗಿದ್ದ ಸ್ವರ್ಣವಲ್ಲಿ ಸ್ವಾಮಿಗಳು ೧೯೯೮ರ ಅಕ್ಟೋಬರ್‌ನಲ್ಲಿ ರನ್ ಆಫ್ ದಿ ರಿವರ್ ಯೋಜನೆ ವ್ಯಾಪ್ತಿಯ ಅಗಸೂರಿಗೆ ಬಂದಿದ್ದರು. ಜನರು ಈ ಯೋಜನೆಯನ್ನು ತಡೆಯಲು ಸ್ವಾಮಿಗಳ ಮುಂದಾಳತ್ವವನ್ನು ಬಯಸಿದರು. ಅದೇ ವೇಳೆಯಲ್ಲಿ ಡಾ. ಕುಸುಮಾ ಸೊರಬ ಅವರು ಸ್ವಾಮಿಗಳನ್ನು ಭೇಟಿಯಾಗಿ ಬೆಂಬಲ ನೀಡಬೇಕೆಂದು ಎಲ್ಲರ ಪರವಾಗಿ ಕೇಳಿಕೊಂಡರು.

ಅಗಸೂರಿನ ಸಭೆಯಲ್ಲಿ ಸುಮಾರು ೧೦ ಸಾವಿರ ಜನರು ಸೇರಿದ್ದರು. ಸ್ವಾಮಿಗಳು ತಮ್ಮ ಭಾಷಣದುದ್ದಕ್ಕೂ ರನ್ ಆಫ್ ದಿ ರಿವರ್ ಮತ್ತು ಶರಾವತಿ ಕೊಳ್ಳ ಯೋಜನೆಗಳನ್ನು ಸಂಘಟಿತರಾಗಿ ವಿರೋಧಿಸಲು ಕರೆ ನೀಡಿದರು. 'ಉತ್ತರ ಕನ್ನಡವನ್ನೇ ನಾಶಮಾಡಲು ಬಂದಿರುವ ಎಲ್ಲಾ ಯೋಜನೆಗಳನ್ನೂ ವಿರೋಧಿಸೋಣ', 'ಉತ್ತರ ಕನ್ನಡ ಉಳಿಸಿ' ಆಂದೋಲನದಲ್ಲಿ ಘಟ್ಟದ ಮೇಲಿನವರು, ಕೆಳಗಿನವರೆನ್ನದೆ ಭಾಗವಹಿಸೋಣ'ವೆಂದರು.[೩೭] ಜನರು ಈ ಯೋಜನೆಯ ವಿರುದ್ಧ ಸಂಘಟಿತರಾದರು.

ರನ್ ಆಫ್ ದಿ ರಿವರ್ ಯೋಜನೆಯ ಜಾರಿಯಾಗದೆ ಕೇವಲ ಕಡತಗಳಲ್ಲಿ ಉಳಿದು ಕೊಂಡಿತು. ಈ ಚಳವಳಿಯು ಪರಿಸರ ನಾಶವನ್ನು (ಮುಳುಗಡೆ) ತಡೆದುದಲ್ಲದೆ ಘಟ್ಟದ ಮೇಲಿನ ಮತ್ತು ಘಟ್ಟದ ಕೆಳಗಿನ ಜನರನ್ನು ಭಾವನಾತ್ಮಕವಾಗಿ ಒಂದುಗೂಡುವಂತೆ ಮಾಡಿತು.

'ಉತ್ತರ ಕನ್ನಡ ಉಳಿಸಿ' ಅಭಿಯಾನಕ್ಕೆ ರನ್ ಆಫ್ ದಿ ರಿವರ್ ಯೋಜನೆಯ ವಿರೋಧಿ ಸಂಘಟನೆಯು ಪ್ರೇರಣೆಯಾಯಿತು. ಡಾ. ಕುಸುಮಾ ಸೊರಬ ಅವರು ಮೆಗಾಫೋನ್ ಹಿಡಿದು ಜಿಲ್ಲೆಯ ಎಲ್ಲ ತಾಲೂಕು ಕೇಂದ್ರಗಳಿಗೆ ಸಂತೆಯ ದಿನ ಹೋಗಿ ಸಭೆ ನಡೆಸಿ ವಿನಾಶರಹಿತ ವಿಕಾಸದ ಬಗ್ಗೆ ವಿಚಾರ ವಿನಿಮಯಗಳನ್ನು ನಡೆಸಿದರು. ಪರಿಸರ ಚಳವಳಿಗಳಿಗೆ ಒಂದು ರೀತಿಯಲ್ಲಿ ಸದಾ ಚೈತನ್ಯ ತುಂಬುತ್ತಿದ್ದರು. ಚಳವಳಿಗಳಿಗಳ ವಿರೋಧಿ ಟೀಕೆಗಳಿಗೆ ಗಮನ ನೀಡಬಾರದೆಂದು ಜನರನ್ನು ಎಚ್ಚರಿಸಿದರು.

ಬಾಡಗುಂದ ಅಣೆಕಟ್ಟು ಯೋಜನೆ : ದಾಂಡೇಲಿ ಸಮೀಪದ ಬಾಡಗುಂದ ಎಂಬಲ್ಲಿ ಕಾಳಿ ಕೊಳ್ಳದಲ್ಲಿ ಕಿರು ಜಲವಿದ್ಯುತ್ ಯೋಜನೆಯನ್ನು ಕೈಗೊಳ್ಳಲು ಖಾಸಗಿ ಕಂಪನಿಗೆ ಸರ್ಕಾರವು ಪರವಾನಗಿಯನ್ನು ನೀಡಿತು. ಸುದ್ದಿ ತಿಳಿದ ಜಿಲ್ಲೆಯ ಪರಿಸರವಾದಿಗಳು, ಸ್ಥಳೀಯ ಪ್ರಮುಖರು ಯಾವ ಕಾರಣಕ್ಕೂ ಕಿರು ಜಲವಿದ್ಯುತ್ ಯೋಜನೆಗೆ ಅವಕಾಶ ಕೊಡುವುದಿಲ್ಲವೆಂದು ಚಳವಳಿಗೆ ಮುಂದಾದರು. ೧೯೮೭ರಲ್ಲಿಯೇ ಕಾಳಿನದಿ ಕೊಳ್ಳದಲ್ಲಿ ಯಾವುದೇ ಹೊಸ ಯೋಜನೆಯನ್ನು ಕೈಗೆತ್ತಿಕೊಳ್ಳದಿರುವ ಆಶ್ವಾಸನೆಯನ್ನು ಸರ್ಕಾರವು ನೀಡಿದ್ದುದನ್ನು ಚಳವಳಿಗಾರರು ನೆನಪಿಸಿಕೊಟ್ಟರು. ದಾಂಡೇಲಿಯ ಅಭಯಾರಣ್ಯಕ್ಕೆ ಕೇವಲ ೫ ಕಿ.ಮೀ. ದೂರವಿರುವ ಈ ಯೋಜನೆಯಿಂದ ಪರಿಸರಕ್ಕೆ ಹಾನಿಯಾಗುತ್ತದೆಂಬ ಕಾನೂನು ಬೆಂಬಲವನ್ನು ಗಮನಿಸಿದರು. ಬಿರುಸುಗೊಂಡ ಚಳವಳಿಯನ್ನು ಗಮನಿಸಿದ ಸರ್ಕಾರವು ಯೋಜನೆಯ ಪರಾಮರ್ಶೆಗೆ ರಾಜ್ಯದ ವನ್ಯಜೀವಿ ವಿಭಾಗದ ಮುಖ್ಯ ಅರಣ್ಯಸಂರಕ್ಷಣಾಧಿಕಾರಿಗಳಿಗೆ ಸೂಚಿಸಿದೆ. ಯೋಜನೆಯ ಪ್ರಾರಂಭಗೊಂಡಿಲ್ಲ.

ವಿದ್ಯುತ್ ಹೈಟೆನ್ಷನ್ ಲೈನ್‌ಗಳು : ಜಲಸಂಬಂಧದ ಚಳವಳಿಗಳು ಅಣೆಕಟ್ಟುಗಳನ್ನು ಕಟ್ಟಿ ಅರಣ್ಯ, ಹಳ್ಳಿ, ತೋಟಗಳನ್ನು ಮುಳುಗಿಸುವುದರ ವಿರುದ್ಧ ನಡೆದವು. ಉತ್ಪಾದಿಸಿದ ವಿದ್ಯುತ್ ಸಾಗಿಸಲು ಹೈಟೆನ್ಷನ್ ಲೈನ್‌ಗಳನ್ನು ಹಾಕಲು ಅರಣ್ಯವನ್ನು ಕಡಿಯುತ್ತಾರೆ, ತಡೆಯಬೇಕು ಎಂಬ ಇನ್ನೊಂದು ಪ್ರಮುಖ ಕಾರಣಕ್ಕಾಗಿ ಮುಂದುವರಿದವು. ಉತ್ತರ ಕನ್ನಡ ಜಿಲ್ಲೆಯ ಜಲವಿದ್ಯುತ್ ಯೋಜನೆಗಳಿಂದ ಈಗಾಗಲೇ ಸಾವಿರಾರು ಹೆಕ್ಟೇರ್ ಅರಣ್ಯ ಮುಳುಗಡೆಯಾಗಿದೆ. ಉತ್ಪಾದಿಸಿದ ವಿದ್ಯುತ್ ಸಾಗಾಣಿಕೆಗೆ ತಂತಿಮಾರ್ಗ ನಿರ್ಮಾಣಕ್ಕೆ ಸಾವಿರಾರು ಎಕರೆ ಅರಣ್ಯನಾಶವಾಗಿದೆ.

ಕಾಳಿ ಹಾಗೂ ಶರಾವತಿ ಜಲವಿದ್ಯುತ್ ಯೋಜನೆಗಳಿಂದ ವಿದ್ಯುತ್ ಸಾಗಿಸಲು ಈಗಾಗಲೇ ನೂರಾರು ಎಕರೆ ಅರಣ್ಯವನ್ನು ಕಡಿದು ನೆಲಸಮಗೊಳಿಸಲಾಗಿದೆ. ಪಶ್ಚಿಮ ಘಟ್ಟದ ಎಲ್ಲಕಡೆ ತಂತಿಮಾರ್ಗಗಳೇ ಆದರೆ ವನ್ಯಜೀವಿ ಸಸ್ಯಸಂತತಿಗೆ ಉಳಿಗಾಲವೆಲ್ಲಿ ಎಂದು ಪರಿಸರ ಸಂಘಟನೆಗಳು ಪ್ರಶ್ನಿಸುತ್ತಿವೆ. ೧೯೮೭ರ ಮೇ ೫ ರಂದು ಪರಿಸರ ಅರಣ್ಯ ಮಂತ್ರಾಲಯದ ಆದೇಶದ ಪ್ರಕಾರ ಕಾಳಿ ಕಣಿವೆಯಲ್ಲಿ ಅರಣ್ಯನಾಶ ಮಾಡುವ ಇನ್ನಾವುದೇ ಯೋಜನೆ ಕೈಗೊಳ್ಳಬಾರದು ಎಂದು ತಿಳಿಸಲಾಗಿದೆ.[೨೮] ಆದರೆ ಕೈಗಾ ನರೇಂದ್ರ ತಂತಿ ಮಾರ್ಗ ಯೋಜನೆಯು ಈ ಆದೇಶವನ್ನು ಪಾಲಿಸಿಲ್ಲ.

ಕೈಗಾ - ನರೇಂದ್ರ ತಂತಿ ಮಾರ್ಗಕ್ಕೆ ಸಾವಿರ ಎಕರೆ ಅರಣ್ಯನಾಶ. ೭೫,೦೦೦ ಮರಗಳ ಮಾರಣಹೋಮನಡೆದಿದೆ. ಈಗಾಗಲೇ ಕೈಗಾ - ಶಿರಸಿ- ದಾವಣಗೆರೆ ತಂತಿಮಾರ್ಗವು ದಕ್ಷಿಣಾಭಿಮುಖವಾಗಿ ನಿರ್ಮಾಣವಾಗಿದ್ದು ಸುಮಾರು

೨೦೦೦ ಎಕರೆ ಅರಣ್ಯ ನಾಶವಾಗಿದೆ.[೩೯] ರೈತರ ಸೊಪ್ಪಿನ ಬೆಟ್ಟಗಳು, ನೀರಿನ ಮೂಲಗಳ ಮೇಲೆ ಅಪಾರ ಹಾನಿ ಸಂಭವಿಸಿ, ವನ್ಯಪ್ರಾಣಿಗಳು ಅತಂತ್ರವಾಗಿವೆ. ಬೃಹತ್ ವಿದ್ಯುತ್ ತಂತಿಮಾರ್ಗಗಳು ಬೇಡ ಎಂದು ವೃಕ್ಷಲಕ್ಷ ಆಂದೋಲನ ಹಾಗೂ ಇನ್ನಿತರ ಪರಿಸರ ಸಂಘಟನೆಗಳು ಚಳವಳಿ ನಡೆಸಿವೆ. ಬೆಂಗಳೂರಿನ ಭಾರತೀಯ ವಿಜ್ಞಾನ ಮಂದಿರದ ವಿಜ್ಞಾನಿ ಡಿ.ಕೆ. ಸುಬ್ರಹ್ಮಣ್ಯಂ ಅವರು ಕರಾವಳಿಯಲ್ಲಿ ಕೈಗಾ ವಿದ್ಯುತ್ ಮಾರ್ಗ ನಿರ್ಮಾಣ ಮಾಡಬಹುದೆಂದು ಸೂಚಿಸಿದರು. ಆದರೂ ಇದಾವುದನ್ನೂ ಲೆಕ್ಕಿಸದೆ ಕೈಗಾ ನರೇಂದ್ರ ತಂತಿ ಮಾರ್ಗ ಚಾಲನೆಯಲ್ಲಿದೆ. ಕೈಗಾದಿಂದ ಇನ್ನೂ ಎಷ್ಟು ತಂತಿ ಮಾರ್ಗಗಳನ್ನು ಹಾಕುತ್ತಾರೋ ಎಂಬ ಅನುಮಾನವನ್ನು ಪರಿಸರ ಚಳವಳಿಗಾರರು ವ್ಯಕ್ತಪಡಿಸುತ್ತಾರೆ. ತಂತಿ ಮಾರ್ಗ ಹಾಕುವುದನ್ನು ತಡೆಯುವಲ್ಲಿ ಹಾಗೂ ವಿಸ್ತರಿಸುವಲ್ಲಿ ಪರಿಸರ ಚಳವಳಿಗಳು ಗಮನಾರ್ಹ ಕೆಲಸ ಮಾಡಿವೆ, ಸರ್ಕಾರವನ್ನು ಎಚ್ಚರಿಸಿವೆ.

ಬೇಡ್ತಿ-ವರದಾ ನದಿಗಳ ಜೋಡಣೆ ಯೋಜನೆ : ೨೦೦೬-೦೭ರಿಂದೀಚೆಗೆ 'ಬೇಡ್ತಿ-ವರದಾ' ನದಿಗಳ ಜೋಡಣೆ ಪ್ರಸ್ತಾಪ ಚಾಲ್ತಿಯಲ್ಲಿದೆ. ಒಟ್ಟು ₹ ೯೦೦ ಕೋಟಿ ವೆಚ್ಚದಲ್ಲಿ ೧೨ ವರ್ಷಗಳೊಳಗೆ ಪೂರ್ಣಗೊಳಿಸಲು ನಿರ್ಧರಿಸಿರುವ ಯೋಜನೆ ಇದಾಗಿದೆ. ನೀರಿನ ಬರ ನೀಗಿಸಲು ನದಿ ಜೋಡಣೆಯೇ ಪರಿಹಾರವೆಂದು ಕೇಂದ್ರ ಸರ್ಕಾರದ ಜಲಸಂಪನ್ಮೂಲ ಮಂತ್ರಾಲಯದ ರಾಷ್ಟ್ರೀಯ ಜಲಾಭಿವೃದ್ಧಿ ಸಂಸ್ಥೆಯು ಬೇಡ್ತಿ - ವರದಾ ನದಿಗಳ ಜೋಡಣೆ ಯೋಜನೆಯನ್ನು ಕಾರ್ಯಗತಗೊಳಿಸಲು ಮುಂದಾಗಿದೆ.

ಉತ್ತರ ಕನ್ನಡದ ಶಿರಸಿ ತಾಲೂಕಿನ ಸಿರಾಲ್‌ಬೈಲ್ ಮತ್ತು ಹುಲಿಗೋಳ್ ಗ್ರಾಮದ ಹತ್ತಿರ ಸಂಗ್ರಹಣಾ ಅಣೆಕಟ್ಟು ಕಟ್ಟಿ ಬೇಡ್ತಿ ನದಿಯ ಹೆಚ್ಚುವರಿ ನೀರನ್ನು ಪೂರ್ವದಿಕ್ಕಿಗೆ ಮಾರ್ಗಪಲ್ಲಟಗೊಳಿಸಿ ವರದಾ ನದಿಗೆ ಸೇರಿಸಲಾಗುತ್ತದೆ. ಇದಕ್ಕೆ ೯೧.೧೦ ಮೆಗಾವ್ಯಾಟ್ ಸಾಮರ್ಥ್ಯದ ವಿದ್ಯುತ್‌ಚಾಲಿತ ಪಂಪ್‌ಸೆಟ್ ಬಳಸಲಾಗುವುದು. ವರದಾ ನದಿಗೆ ಸೇರಿದ ನೀರನ್ನು ತುಂಗಭದ್ರಾ ಎಡದಂಡೆ ಕಾಲುವೆ ಮೂಲಕ ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸುಮಾರು ೭೭, ೯೬೨ ಹೆಕ್ಟೇರ್ ಪ್ರದೇಶಕ್ಕೆ ನೀರುಣಿಸಬಹುದೆಂದು ಅಂದಾಜಿಸಲಾಗಿದೆ.[೪೦]

ಇದು ಅವೈಜ್ಞಾನಿಕ ಯೋಜನೆ ಎಂದು ಪರಿಸರವಾದಿಗಳು ವಾದಿಸುತ್ತಾರೆ. ಹೆಚ್ಚುವರಿ ನೀರು ಯಾವುದು ? ಎಷ್ಟು? ಎನ್ನುವ ಸ್ಪಷ್ಟವಾದ ನಿರ್ಧಾರವಾಗದೆ ಯೋಜನೆ ತಯಾರಿಸಲಾಗಿದೆ ಎನ್ನುತ್ತಾರೆ ಹೋರಾಟ ಸಮಿತಿ ಕಾರ್ಯದರ್ಶಿ ಅನಂತ ಹೆಗಡೆ ಅಶೀಸರ. ಇನ್ನೊಂದು ಕಾವೇರಿ ಗಲಾಟೆಗೆ ಅವಕಾಶವಾದೀತು ಎಂಬುದಾಗಿ ಗಮನ ಸೆಳೆದಿದ್ದಾರೆ. ಈ ಎರಡು ನದಿಗಳ ಜೋಡಣೆಯಿಂದ ಅಪಾಯವೇ ಜಾಸ್ತಿ ಎಂದು ಪರಿಸರ ಪತ್ರಕರ್ತ ನಾಗೇಶ ಹೆಗಡೆ ಪ್ರತಿಪಾದಿಸಿದ್ದಾರೆ. ಪೂರ್ವದ ಬಯಲು ಜಿಲ್ಲೆಗಳಿಗೆ ನೀರೊದಗಿಸುವ ಈ ನದಿ ಜೋಡಣೆ ಅವೈಜ್ಞಾನಿಕವೆಂದು ಡಿಸೆಂಬರ್ ೯, ೨೦೦೭ ರಂದು ಶಿರಸಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಪ್ರತಿಪಾದಿಸಿರುವುದನ್ನು ಗಮನಿಸಲಾಗಿದೆ. ಇದೇ ಸಂವಾದ ಕಾರ್ಯಕ್ರಮದಲ್ಲಿ 'ಒಂದು ಹನಿ ನೀರನ್ನೂ ಕೊಡೆವು' ನದಿ ಜೋಡಣೆ ಚರ್ಚೆ ಅನಗತ್ಯ ಎಂದರು ಸ್ವರ್ಣವಲ್ಲಿ ಶ್ರೀಗಂಗಾಧರೇಂದ್ರ ಸರಸ್ವತಿ ಸ್ವಾಮಿಗಳು.[೪೧] ಅನಂತರದಲ್ಲಿ ನದಿ ಜೋಡಣೆ ಯೋಜನೆಯು ಸದ್ದಿಲ್ಲದೆ ನಿಂತಿದೆ. ಪರಿಸರ ಚಳವಳಿಗಾರರಿಗೆ ಈ ಯೋಜನೆಯು ಮತ್ತೆ

ಪ್ರಸ್ತಾಪಗೊಳ್ಳಬಹುದೆಂದೂ ತಿಳಿದಿದೆ. ಯೋಜನೆಯನ್ನು ಮೂಲದಲ್ಲಿಯೇ ಪ್ರಶ್ನಿಸಿದ್ದು ಈ ಸಂಬಂಧದ ಪರಿಸರ ಚಳವಳಿಯ ಯಶಸ್ಸು ಎಂದೇ ಭಾವಿಸಲಾಗಿದೆ !

ಉತ್ತರ ಕನ್ನಡ ಜಿಲ್ಲೆಯಲ್ಲಿಯೂ ನಡೆದಿರುವ ಕುಡಿಯುವ ನೀರಿಗಾಗಿ ಹೋರಾಟ, ಧರ್ಮಾ ಜಲಾಶಯ (ಮುಂಡಗೋಡ ತಾಲೂಕು) ಒಡೆದಾಗ (೨೦೦೮) ನೀರು ಪೋಲಾಗಿ ಬೇಗ ದುರಸ್ತಿ ಮಾಡದಿರುವುದು, ಕೃಷಿಗಾಗಿ ಏತ ನೀರಾವರಿ ಯೋಜನೆಗಳಿಗೆ ಒತ್ತಾಯಿಸುತ್ತಿರುವುದು, ನದಿಗಳು ಉಕ್ಕಿ ಹರಿದು ಹಾನಿ ಉಂಟು ಮಾಡುವುದರ ಕುರಿತು, ಕಡಲ ಕೊರೆತದಿಂದಾಗುವ ಹಾನಿಗಳು ಇವೇ ಮುಂತಾದ ಜಲಸಂಬಂಧದ ಬೇಡಿಕೆಗಳು ಹಾಗೂ ಪ್ರತಿಭಟನೆಗಳು ನಡೆಯುತ್ತಲೇ ಇವೆ. ಪ್ರಸ್ತುತ ಅಧ್ಯಯನವು ಇವೆಲ್ಲವುಗಳನ್ನೂ ಪರಿಸರ ಚಳವಳಿಗಳ ವ್ಯಾಪ್ತಿಗೆ ತಂದುಕೊಂಡಿರುವುದಿಲ್ಲ. ಜಿಲ್ಲೆಯೊಳಗೆ ಅರಣ್ಯ ಲೂಟಿ ಮಾಡುವವರ ಕುರಿತು ಯಾರೂ ಚಳವಳಿ ಮಾಡಿದ ಬಗ್ಗೆಯೂ ವಿಚಾರ ವಿಶ್ಲೇಷಣೆ ಮಾಡಿರುವುದಿಲ್ಲ. ಉತ್ತರ ಕನ್ನಡ ಜಿಲ್ಲೆಗೆ ಅಪರಿಚಿತವಾದ ಪರಿಸರವಾದಿ ಸ್ವಯಂ ಸೇವಾಸಂಸ್ಥೆಗಳು, ಪರಿಸರವಾದಿಗಳು ವಿದೇಶಿ ಹಣ ಪಡೆಯುವ ಕುರಿತೂ ಗಮನಿಸಿಲ್ಲ.[೨೨] ಸುಸ್ಥಿರ ಅಭಿವೃದ್ಧಿಗೆ ಉತ್ತರ ಕನ್ನಡ ಜಿಲ್ಲೆಯ ಒಟ್ಟಾರೆ ಧಾರಣಶಕ್ತಿಯನ್ನು ಅಧ್ಯಯನ ಮಾಡಿ ಯೋಜನೆಗಳನ್ನು ಮಂಜೂರು ಮಾಡಿ, ಹೇರಬೇಡಿ ಎಂಬ ಪರಿಸರ ಚಳವಳಿಗಾರರ ಒತ್ತಾಯವನ್ನು ಗಮನಿಸಿದೆ. ಈವರೆಗಿನ ನೆಲಸಂಬಂಧಿ ಹಾಗೂ ಜಲಸಂಬಂಧಿ ಪರಿಸರ ಚಳವಳಿಗಳು ಎಂಬ ಪ್ರಮುಖ ಅಧ್ಯಾಯಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ವಿವರಗಳು, ವಿಶ್ಲೇಷಣೆಗಳನ್ನು ದಾಖಲಿಸಿಕೊಂಡು ಅಭ್ಯಸಿಸಿದ ಮೇಲೆ ಒಟ್ಟಾರೆ ಅಧ್ಯಯನದ ಫಲಿತಗಳನ್ನು ಕಂಡುಕೊಳ್ಳುವತ್ತ ಪ್ರಸ್ತುತ ಅಧ್ಯಯನವು ಮುಂದಾಗಿದೆ.

ಕೊನೆ ಟಿಪ್ಪಣಿಗಳು

೧. ರಾಮಕೃಷ್ಣ ವೈ.ಬಿ., ಸಂಪುಟ ೨, ಧರಣಿಮಂಡಲ, ತುಮಕೂರು, ೩೦ನೇ ಏಪ್ರಿಲ್ ೨೦೧೦, ಪುಟ ೪೧

೨. ಅದೇ, ಪುಟ ೪೨

೩. ಶಿವಾನಂದ ಕಳವೆ, ಕಾಲು ದಾರಿಯ ದಾಖಲೆ, ಪುಟ ೧೬೦

೪. ನಾಗೇಶ ಹೆಗಡೆ, ಇರುವುದೊಂದೇ ಭೂಮಿ, ಪುಟ ೧೫೪

೫. ಅನುಬಂಧ - ಒಂದು, ಚಿತ್ರಸೂಚಿ

೬. ಮುಖ್ಯಮಂತ್ರಿಗಳಾಗಿದ್ದ ಮಾನ್ಯ ಹೆಚ್.ಡಿ. ಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಪ್ರಗತಿ ಸಭೆಗೆ ಒದಗಿಸಿರುವ ಜಿಲ್ಲಾಡಳಿತದ ಅಧಿಕೃತ ವರದಿ, ೮-೫-೨೦೦೭

೭. ಅನಂತ ದೇಸಾಯಿ, ಸುಪಾ ಅಣೆಕಟ್ಟು ನಿರ್ವಸಿತರ ಪಾಡು, ಲೋಕಧ್ವನಿ, ಶಿರಸಿ, ೨೩-೯-೨೦೦೦, ಪುಟ೨

೮. ಜಿಲ್ಲಾಡಳಿತದ ಅಧಿಕೃತ ವರದಿ, ಪೂರ್ವೋಕ್ತ, ೮-೫-೨೦೦೭

೯. ಸೂರ್ಯನಾಥ ಯು. ಕಾಮತ್, ಉತ್ತರ ಕನ್ನಡ ಡಿಸ್ಟ್ರಿಕ್ಟ್ ಗೆಜೆಟಿಯರ್, ಪುಟ ೪೩೪

೧೦. ನರಸಿಂಹ ಸಾತೊಡ್ಡಿ, ಭೂಮಿಯ ಋಣ ಕಳೆದುಕೊಂಡ ಕೊಡಸಳ್ಳಿಗರು, ಧ್ಯೇಯನಿಷ್ಠ ಪತ್ರಕರ್ತ, ಶಿರಸಿ, ೧೦-೪-೧೯೯೮, ಪುಟ ೩

೧೧. ಗಣಪತಿ ಬಿ., ಕೊಡಸಳ್ಳಿ ಅಣೆಕಟ್ಟು - ಕಣ್ಣೀರ ಕತೆ, ತರಂಗ, ೧೬ನೇ ಆಗಸ್ಟ್ ೧೯೯೮, ಪುಟ ೨೫

೧೨. ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕಾಳಿ ಜಲವಿದ್ಯುತ್ ಯೋಜನೆ ಮುಖ್ಯ ಅಭಯಂತರರ ಕಚೇರಿ ಕೈಪಿಡಿ, ಪುಟ ೧೧

೧೩. ಸುಬ್ಬರಾಯ ಟಿ ಎಂ, ಮುಳುಗಡೆ, ಸುಧಾ, ೨೪ನೇ ಜೂನ್ ೧೯೯೦

೧೪. ಪಾಂಡುರಂಗ ಹೆಗಡೆ, ಕಾಳಿಯ ಕಥೆ - ವ್ಯಥೆ, ಶಿರಸಿ, ಫೆಬ್ರವರಿ ೨೦೦೩, ಬೆನ್ನುಡಿ

೧೫. ರಾಮಚಂದ್ರ ಗುಹಾ, ಜಾಗತಿಕ ಪರಿಸರ ಚರಿತ್ರೆ, ಪುಟ ೧೯೯

೧೬. ಅದೇ,ಪುಟ ೧೯೯

೧೭. ಭಾರತಿ ಭಟ್, ಬೇಡ್ತಿ ಚಳವಳಿ ಸಾಗಿ ಬಂದ ದಾರಿ, ಪುಟ ೪

೧೮. ಅದೇ, ಪುಟ ೩೦

೧೯. 'ಉತ್ತರ ಕನ್ನಡ ಜಿಲ್ಲಾ ಜಲವಿದ್ಯುತ್ ಯೋಜನಾ ವಿರೋಧಿ ಸಮಿತಿ' :

ಶ್ರೀಮತಿ ಅನಸೂಯಾ ಶರ್ಮಾ - ಅಧ್ಯಕ್ಷರು

ಶ್ರೀಯುತರುಗಳಾದ ಜಿ.ಎಸ್. ಹೆಗಡೆ ಕಡೇ ಕೂಡಿ, ಎನ್.ಡಿ. ನಾಯ್ಕ ಹಾಗೂ

ಆರ್.ಎನ್. ಹೆಗಡೆ ಗೋರ್ಸಗದ್ದೆ - ಉಪಾಧ್ಯಕ್ಷರುಗಳು

ಶ್ರೀ ಆರ್.ಎಸ್. ಹೆಗಡೆ ಮಳಗಿ ಮನೆ - ಕಾರ್ಯದರ್ಶಿ

ಶ್ರೀ ಆರ್.ಜಿ. ಹೆಗಡೆ ಬೆದೆಹಕ್ಲು, ಶ್ರೀ ಜಿ.ಎಲ್. ಹೆಗಡೆ ತ್ಯಾರಗಲ್ - ಸಹಕಾರ್ಯದರ್ಶಿಗಳು

ಶ್ರೀ ಜಮಾಲ್ ಪಾಶಾ ಅಹಮದ್ ಸಾಬ್ - ಕೋಶಾಧ್ಯಕ್ಷ ಹಾಗೂ ಸದಸ್ಯರುಗಳಾಗಿ

೧. ಗಜಾನನ ಶರ್ಮಾ, ಕಲ್ಲಾಳ, ೨. ವಿ.ಎಂ. ಫಾಡಿ, ಹಳಿಯಾಳ, ೩. ಡಿ.ವಿ. ವೈಂಗಣಕರ, ಕಾರವಾರ, ೪. ಎಚ್.ವಿ. ನಾಯಕ, ಕುಮಟ ೫. ಆರ್.ಎಸ್. ಭಾಗವತ್, ಕುಮಟ ೬. ವಿ.ಪಿ. ಭಟ್ಟ ಕಣ್ಣೆ ೭. ಕೃಷ್ಣ ನಾರಾಯಣ ಹೆಗಡೆ ಹುಲಿಮನೆ ೮. ಜಿ.ಎಂ. ಹೆಗಡೆ ನೇರ್ಲಹದ್ದ ೯. ಜಿ.ಎನ್. ಭಟ್ಟ ಹೊಸ್ತೋಟ ೧೦. ಜಿ.ಎಸ್. ಹೆಗಡೆ ಅಜ್ಜೀಬಳ, ೧೧. ಎಂ.ವಿ. ಭಟ್ಟ ತಟ್ಟೀಕೈ ೧೨. ಕೃಷ್ಣ ಹೆಗಡೆ ಹುಲಿಮನೆ ೧೩. ನಾರಾಯಣ ಶಿವರಾಮ ಭಟ್ಟ ಹುಳಗೋಳ ೧೪. ಎಂ.ಎಂ. ಜಾಲಿಸತ್ಗಿ ಹೊನ್ನಾವರ ೧೫. ಓಂಕಾರ ವೆಂ. ಭಟ್ಟ ಮಾಗೋಡು ೧೬. ಕೆ.ಜಿ. ಹೆಗಡೆ ಬೆಳಗುಂದ್ಲಿ ೧೭. ವಿ.ಎನ್. ಹೆಗಡೆ ಬೆದೆಹಕ್ಲ ೧೮. ವೆಂಕಟ್ರಮಣ ಡಾ. ಹೆಗಡೆ ಭಾವನಕೊಪ್ಪ ೧೯. ಟಿ.ಎಸ್. ಭಟ್ಟ ಹಿತ್ಲಳ್ಳಿ ೨೦. ರಾಮಕೃಷ್ಣ ಹರಿಕೇಶವ ಭಟ್ಟಬಿದ್ರೇಪಾಲ್ ೨೧. ತಿಮ್ಮಣ್ಣನರಸಿಂಹ ಭಟ್ಟ ಗುಂಟಕಲ್ ೨೨. ಓಂ ನಮ್ ಶೆಟ್ಟಿ ಅಂಕೋಲ ೨೩. ಬೆಂಡಗೇರಿ ಸಾಹೇಬ್ ಮುಂಡಗೋಡ ೨೪. ಕೃಷ್ಣಸುಬ್ರಾಯ ಹೆಗಡೆ ಹೊಸ್ತೋಟ ೨೫. ವೆಂಕಟ್ರಮಣ ಗಣಪತಿ ಜೋಷಿ ಕೊಪ್ಪಲ ತೋಟ ೨೬. ನಾಗೇಶ ವಿಠಲ ಶಾನಭಾಗ ಯಲ್ಲಾಪುರ ೨೭. ಶಂಕರ ಭಟ್ಟ ಮಸಗತ್ತಿ ೨೮. ನಾರಾಯಣ ಹೆಗಡೆ ಉಳ್ಳಿಕೊಪ್ಪ.

೨೦. ತರಂಗ, ೧೩ನೇ ಡಿಸೆಂಬರ್ ೧೯೯೨

೨೧. ಅನುಬಂಧ - ಒಂದು, ಚಿತ್ರಸೂಚಿ

೨೨. ಅನುಬಂಧ - ಒಂದು, ಚಿತ್ರಸೂಚಿ

೨೩. ಭಾರತಿಭಟ್, ಪೂರ್ವೋಕ್ತ, ಪುಟ ೯೫

೨೪. ವಿಜಯ ಕರ್ನಾಟಕ ದೈನಿಕ, ೧೨-೦೮-೨೦೧೦, ಪುಟ ೧

೨೫. ನಾಗೇಶ ಹೆಗಡೆ, ಇರುವುದೊಂದೇ ಭೂಮಿ, ಪುಟ ೧೧೭

೨೬. ಮೋಹನ್‌ಕೃಷ್ಣರೈ ಕೆ, ಪರಿಸರ ಚಳವಳಿಗಳು, ಪುಟ ೫೦

೨೭. ಅನುಬಂಧ - ಒಂದು, ಚಿತ್ರಸೂಚಿ

೨೮. ನಾಗೇಶ್ ಹೆಗಡೆ ಹಾಗೂ ಶಾರದ ಗೋಪಾಲ, ಶತಮಾನದ ಕುಸುಮ, ಪುಟ ೧೦೬

೨೯. ಶರಾವತಿ ಟೇಲ್‌ರೇಸ್ ಯೋಜನೆ ಹೋರಾಟದಲ್ಲಿ ಭಾಗವಹಿಸಿದ ಎಲ್ಲರನ್ನೂ ಹೆಸರಿಸಲಾಗಿಲ್ಲ.

೩೦. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೫೧

೩೧. ಅದೇ,ಪುಟ ೫೫

೩೨. ನಾಯ್ಕ ಎಂ ಜಿ, 'ಗಜನಿ ಎಂಬ ಮೀನುಗಣಿ', ಪ್ರಜಾವಾಣಿ, ೧೫-೭-೨೦೧೦, ಪುಟ - I

೩೩. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೫೬

೩೪. ಜಯಕರ ಭಂಡಾರಿ ಎಂ, 'ಆಪತ್ತಿನಲ್ಲಿ ಕಾಳಿಕೊಳ್ಳದ ಜೀವಜಾಲ', ಧರಣಿಮಂಡಲ, ಸಂಪುಟ ೧, ಸಂಚಿಕೆ ೪, ೩೧-೧೦-೨೦೦೯

೩೫. ಮೋಹನ್‌ಕೃಷ್ಣ ರೈ ಕೆ, ಪೂರ್ವೋಕ್ತ, ಪುಟ ೫೭

೩೬. ನಾಗೇಶ ಹೆಗಡೆ ಹಾಗೂ ಶಾರದ ಗೋಪಾಲ, ಪೂರ್ವೋಕ್ತ, ಪುಟ ೭೯

೩೭. ಅದೇ, ಪುಟ ೮೦

೩೮. ರಘುನಂದನ ಭಟ್ಟ, 'ಬೃಹತ್ ತಂತಿಮಾರ್ಗ ವನ್ಯ ವಿಪತ್ತಿನ ಹಾದಿ', ಪ್ರಜಾವಾಣಿ, ೨-೨-೨೦೦೬

೩೯. ಅನುಬಂಧ - ೨, ವಿವಿಧ ಯೋಜನೆಗಳಿಗಾಗಿ ಅರಣ್ಯ ಭೂಮಿ ಮಂಜೂರು ಮಾಡಿದ ವಿವರ.

೪೦. ಲಕ್ಷ್ಮಣ ಟಿ ನಾಯ್ಕ, 'ಬೇಡ್ತಿ - ವರದಾ ನದಿ ಜೋಡಣೆ - ಜಲಮೂಲದ ನಾಶ', ಪ್ರಜಾವಾಣಿ, ೭-೧೨-೨೦೦೭

೪೧. ಲೋಕಧ್ವನಿ ದೈನಿಕ, ಶಿರಸಿ, ೧೦-೧೨-೨೦೦೭, ಪುಟ ೧

೪೨. ಶರ್ಮಾ ಎಸ್ ಎಸ್, 'ಬಣ್ಣ ಬದಲಿಸುತ್ತಲೇ ಹೋದ ಪರಿಸರ ಹೋರಾಟ', ಉದಯವಾಣಿ, ೫-೮-೨೦೦೮, ಪುಟ ೧೨

❑ ❑ ❑

ಅಧ್ಯಾಯ - ೬

ಅಧ್ಯಯನದ ಫಲಿತಗಳು

ಅಧ್ಯಯನದ ಫಲಿತಗಳು

✦

"ಈ ಭೂಮಿಯ ಮೇಲೆ ಬದುಕಿರುವ ಪ್ರತಿಯೊಬ್ಬರಿಗೂ ಅಗತ್ಯವಾದುದನ್ನು ಪ್ರಕೃತಿ ಕೊಡಬಲ್ಲುದು ; ಆದರೆ ನಮ್ಮ ದುರಾಸೆಗಳನ್ನೆಲ್ಲಾ ಅದು ಪೂರೈಸಲಾಗದು" **-ಮಹಾತ್ಮಾ ಗಾಂಧೀಜಿ**

ಗಾಂಧೀಜಿಯವರ ಈ ಮಾತಿನಂತೆ, ಪರಿಸರವು ಯಾರೊಬ್ಬರ ಸ್ವಂತದ್ದಲ್ಲ, ಅದು ಸ್ವತಂತ್ರವಾದುದು ಹಾಗೂ ಸಾರ್ವತ್ರಿಕವಾದುದು ಎಂಬ ಸಾಮಾನ್ಯ ತಿಳುವಳಿಕೆ ಅಡಿಯಲ್ಲಿ 'ಪರಿಸರವನ್ನು ಉಳಿಸಿ, ಅಭಿವೃದ್ಧಿಯನ್ನು ನಡೆಸಿ' ಎನ್ನುವ ತಾತ್ವಿಕ ನೆಲೆಯಿಂದ 'ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು' ಎಂಬ ವಿಷಯದ ಕುರಿತು ಪ್ರಸ್ತುತ ಅಧ್ಯಯನವು ಕಂಡುಕೊಂಡಿರುವ ಫಲಿತಗಳನ್ನು ಕಟ್ಟಿಕೊಡಲು ಬಯಸುತ್ತದೆ.

ಪ್ರಸ್ತುತ ನಿಬಂಧದಲ್ಲಿ ಅಧ್ಯಯನದ ಫಲಿತಗಳನ್ನು ಪ್ರತ್ಯೇಕವಾಗಿ ದಾಖಲಿಸಿದ್ದರೂ ಅಲ್ಲಲ್ಲಿ ಆಯಾ ಅಧ್ಯಾಯಗಳ ಬರವಣಿಗೆಯಲ್ಲೇ ಫಲಿತಗಳನ್ನೂ, ಹೊಳಹುಗಳನ್ನೂ ಸಾಂದರ್ಭಿಕವಾಗಿ ಹೇಳಲಾಗಿದೆ. ಆದರೆ ಅವುಗಳನ್ನು ತಾತ್ವಿಕ ನೆಲೆಗಟ್ಟಿನಲ್ಲಿ ಈ ಅಧ್ಯಾಯದಲ್ಲಿ ವಿಶ್ಲೇಷಿಸಲಾಗಿದೆ.

೧.೧ ಜಗತ್ತಿನ ಎಲ್ಲ ಕಡೆ ಪರಿಸರ ನಾಶ ತಡೆ ಸಂಬಂಧವಾಗಿ ಇತ್ತೀಚೆಗೆ ಸಾಮಾಜಿಕ ಪರಿಸರದೊಳಗೆ 'ಪರಿಸರ ವಿಜ್ಞಾನ'ವು ಒಂದು ಅಧ್ಯಯನ ವಿಷಯವಾಗಿ ಇಂದು ಶೈಕ್ಷಣಿಕ ಶಿಸ್ತುಗಳಲ್ಲಿ ಮೊದಲನೆಯದಾಗಿದೆ. ಪರಿಸರ ವಿಜ್ಞಾನವು ಇಡೀ ವಿಶ್ವದ ಬಗೆಗಿನ ಅಧ್ಯಯನವೆನಿಸಿಕೊಳ್ಳುತ್ತಿದೆ. ಜಗತ್ತಿನಲ್ಲಿ ಎಲ್ಲಿಯಾದರೂ ಪರಿಸರಕ್ಕೆ ಹಾನಿಯುಂಟಾದರೆ ಒಟ್ಟು ಮನುಕುಲದ ಅಸ್ತಿತ್ವಕ್ಕೆ ಕೊಡಲಿಪೆಟ್ಟು ಬೀಳುತ್ತಿದೆ. ಪರಿಸರ ಪ್ರಜ್ಞೆ ಉಂಟುಮಾಡುವ, ಜಾಗೃತಗೊಳಿಸುವ ಸಾಮಾಜಿಕ ಪರಿಸರದೊಳಗಿನ ವಿವಿಧ ಕಾರ್ಯತಂತ್ರಗಳಲ್ಲಿ 'ಪರಿಸರ ಚಳವಳಿಗಳು' ಪ್ರಮುಖವಾದ ಪಾತ್ರ ವಹಿಸಿಕೊಂಡಿವೆ ಎಂಬುದು ಸ್ಪಷ್ಟವಾಗಿದೆ.

೧.೨ ಚಳವಳಿಗಳು ತಮ್ಮ ಗುರಿಯನ್ನು ಸಾಧಿಸುವ ನಿಟ್ಟಿನಲ್ಲಿ ಸತ್ಯಾಗ್ರಹ, ಸಂಧಾನ, ಶಿಕ್ಷಣ, ಪ್ರಚಾರ, ವಕೀಲಿ ಮಾಡುವುದು, ಒತ್ತಡ ಹೇರುವುದು, ಬಹಿಷ್ಕಾರ ಹಾಕುವುದು, ಕರ ನಿರಾಕರಣೆ, ಮುಷ್ಕರ, ಲಾಕೌಟ್, ಉಪವಾಸ, ಧರಣಿ, ಮೋರ್ಚಾ, ಮೆರವಣಿಗೆ ಮುಂತಾದ ಕಾರ್ಯತಂತ್ರಗಳನ್ನು ಬಳಸುತ್ತವೆ. ಪರಿಸರ ಚಳವಳಿಗಳಿಗೆ ತಾತ್ಕಾಲಿಕವಾಗಿ ಈ ಕಾರ್ಯತಂತ್ರಗಳು ಪೂರಕವಾಗಿದ್ದರೂ, ಪರಿಸರ ಸಂಬಂಧದ ಕಾಯಿದೆಗಳು 'ಪರಿಸರವನ್ನು ಉಳಿಸಿ, ಅಭಿವೃದ್ಧಿಯನ್ನು ನಡೆಸಿ' ಎನ್ನುವ ವಿಷಯದ ಪರವಾಗಿಲ್ಲದೆ ಗೊಂದಲವನ್ನು ಸೃಷ್ಟಿಸುತ್ತವೆ. ಉದಾಹರಣೆಗೆ ಸಿ.ಆರ್.ಜಡ್. ಕರಾವಳಿ ಕಾನೂನಿನಲ್ಲಿ 'ರಕ್ಷಣೆಗಾಗಿ ಕರಾವಳಿಯಲ್ಲಿ ನೆಲವನ್ನು ಉಪಯೋಗಿಸಿಕೊಳ್ಳಲು ಅವಕಾಶವಿರುವುದ

ರಿಂದ ಉತ್ತರ ಕನ್ನಡ ಜಿಲ್ಲೆಯ ಸುಮಾರು ೨೪ ಕಿ.ಮೀ. ಕರಾವಳಿಯ ಪರಿಸರವು ನೌಕಾನೆಲೆಯಾಗಿ ಬದಲಾಯಿತು.

೧.೩ ಚಳವಳಿಗಳ ಚರಿತ್ರೆಯ ವ್ಯಾಪ್ತಿಗೆ ದಶಕಗಳ ಕಾಲದ ದಾಖಲೆಯನ್ನಷ್ಟೇ ಹೊಂದಿರುವ ಪರಿಸರ ಚಳವಳಿಗಳೂ ಸಾಮಾಜಿಕ ಚಳವಳಿಗಳೇ ಆಗಿದ್ದು, ಪ್ರಮುಖ ಸ್ಥಾನ ಪಡೆದುಕೊಳ್ಳುತ್ತಿವೆ. 'ವಿಶಾಲವಾದ ಸಾಮಾಜಿಕ ಪ್ರತಿಕ್ರಿಯೆಗೆ, ಪರಿಸರ ವಾಗ್ವಾದಕ್ಕೆ' ಪರಿಸರಾಂದೋಲನಗಳು ಕಾರಣವಾಗಿವೆ ಎಂಬ ಸ್ಪೇನ್ ಬರಹಗಾರ ಮಾರ್ಟಿನೆಜ್ ಏಲಿಯರ್‌ನ ಮಾತು ನಂಬಲರ್ಹವಾಗಿದೆ.

೧.೪ ಪರಿಸರ ಚಳವಳಿಗಳು ಪ್ರದೇಶ, ಜಾತಿ, ಮತಗಳ ಹೊರತಾಗಿ ಆರಂಭವಾಗುತ್ತವೆ. ಕ್ರಮೇಣ ಪರಿಸರ ಪ್ರೇಮಿಗಳು, ಪರಿಸರವಾದಿಗಳು, ನಿರಾಶ್ರಿತರು, ಸರ್ವಭಕ್ಷಕರೆಂಬ ಗುಂಪುಗಳಾಗಿ ಪ್ರತ್ಯೇಕಗೊಳ್ಳುತ್ತವೆ ; ವಿಭಿನ್ನ ಫಲಿತಾಂಶಗಳು ಹೊರಬರುತ್ತವೆ. ಮನುಕುಲವು ಜೀವವೈವಿಧ್ಯದ ಭಾಗವಾಗಿರುವಾಗ ಎಲ್ಲೇ ಪರಿಸರ ಚಳವಳಿಗಳು ನಡೆದರೂ ವ್ಯತ್ಯಾಸವಿರಬಾರದು. ವ್ಯತ್ಯಾಸವಾಗದಿರುವಂತಹ ಪ್ರಯತ್ನಗಳನ್ನು ಹೆಚ್ಚಿಸುವಲ್ಲಿ ಪರಿಸರ ಪ್ರಜ್ಞೆಯ ಪಾಠಗಳ ಜೊತೆಗೆ ಪರಿಸರ ಚಳವಳಿಗಳ ಅಧ್ಯಯನಗಳು ನಡೆದಿರುವುದು ಸಾಲದು, ಇನ್ನೂ ಹೆಚ್ಚಾಗಿ ನಡೆಯಬೇಕು.

೧.೫ ಪರಿಸರ ಚಳವಳಿಗಳು ಅಲ್ಪಾಯುಷ್ಯವುಳ್ಳವಾಗಿದ್ದು, ಅಭಿವೃದ್ಧಿ ಯೋಜನೆಗಳು ಯಶಸ್ವಿಯಾದಾಗ ನಿಂತುಹೋಗುತ್ತವೆ. ಮತ್ತೊಂದು ಪರಿಸರ ಚಳವಳಿಯ ಮೇಲೆ ಪ್ರಭಾವ ಬೀರುವಷ್ಟರ ಮಟ್ಟಿಗೆ ದಾಖಲಾತಿ ಆಗಿರುವುದಿಲ್ಲ. ಪರಿಸರ ಪ್ರಜ್ಞೆಯ ಪಾಠಗಳಲ್ಲಿ ಪರಿಸರ ಚಳವಳಿಗಳನ್ನೂ ಸೇರಿಸಿ ಚರ್ಚಿಸಲೇಬೇಕು.

೧.೬ ಅಭಿವೃದ್ಧಿಯೂ ಬೇಕು, ಪರಿಸರವೂ ಉಳಿಯಬೇಕು ಎನ್ನುವ ವಿಚಾರವಂತಿಕೆಯನ್ನು ಪರಿಸರ ಚಳವಳಿಗಳು ಉಂಟು ಮಾಡಿವೆ. ಅಭಿವೃದ್ಧಿ ಮೊದಲು, ಪರಿಸರ ನಂತರ ಅಥವಾ ಪರಿಸರ ಮೊದಲು, ಅಭಿವೃದ್ಧಿ ನಂತರ ಎಂಬ ಗೊಂದಲಗಳ ನಡುವೆ ಪರಿಸರ ಚಳವಳಿಗಳು ಹುಟ್ಟಿ ಬೆಳೆದು ಮಹತ್ವ ಪಡೆದುಕೊಂಡಿವೆ. ಹಣ, ದರ್ಪ-ದೌರ್ಜನ್ಯಗಳಿಂದ ಉತ್ತಮ ಪರಿಸರ ನಿರ್ಮಾಣ ಅಸಾಧ್ಯ ಎಂಬ 'ವೈಚಾರಿಕ ಪರಿಸರ ಪ್ರಜ್ಞೆ'ಯನ್ನು ಸಾಮೂಹಿಕವಾಗಿಸುವಲ್ಲಿ ಪರಿಸರ ಚಳವಳಿಗಳ ಕೊಡುಗೆ ಗಮನಾರ್ಹವಾಗಿದೆ.

೧.೭ ಮನುಕುಲದ ಬೇಕು ಬೇಡಿಕೆಗಳೆಲ್ಲವೂ ಪರಿಸರ ಸಂಬಂಧಿತವಾಗಿದ್ದು, ಪರಿಸರ ಅಧ್ಯಯನವು ಅಂತರ್‌ಶಿಸ್ತೀಯ ಅಧ್ಯಯನ ವಿಷಯವಾಗಿದೆ. ಪರಿಸರ ಅಧ್ಯಯನವು ಸಮಾಜೋಪಯೋಗಿಯಾಗಬೇಕಾದರೆ ಪರಿಸರಕ್ಕೆ ಸಂಬಂಧಿಸಿದ ಸಮಸ್ಯೆಗಳು ಹಾಗೂ ಪರಿಸರ ಚಳವಳಿಗಳ ಅರ್ಥಪೂರ್ಣ ಅಧ್ಯಯನ ಮತ್ತು ದಾಖಲಾತಿಗಳು ಆಗಲೇಬೇಕೆಂದು ಪ್ರಸ್ತುತ ಈ ಅಧ್ಯಯನವು ಒತ್ತಾಯಪಡಿಸುತ್ತದೆ.

೧.೮ ಉತ್ತರ ಕನ್ನಡ ಜಿಲ್ಲೆಯಲ್ಲಿ ನಡೆದಷ್ಟು ಪರಿಸರ ಚಳವಳಿಗಳು ದೇಶದ ಬೇರೆ ಇನ್ನಾವ ಜಿಲ್ಲೆ - ಪ್ರದೇಶಗಳಲ್ಲಿಯೂ ನಡೆದಿಲ್ಲ ಎಂಬ ವಿಚಾರವು ವಿಶಿಷ್ಟವಾದುದಾಗಿದೆ. ಹೇರಳವಾಗಿ ನೈಸರ್ಗಿಕ ಸಂಪತ್ತು ಮತ್ತು ವಿರಳ ಜನಸಂಖ್ಯೆ ದೇಶದಲ್ಲಿ ಎಲ್ಲಿಯೇ ಇದ್ದರೂ ಅಭಿವೃದ್ಧಿ ಕೆಲಸಗಳಿಗೆ ಸರ್ಕಾರಗಳು ಹಾಗೂ ಸರ್ವಭಕ್ಷಕರೂ ಮುಂದಾಗುತ್ತಾರೆ.

ಪರಿಸರ ಪೂರಕವಾಗಿಲ್ಲದ, ಸ್ಥಳೀಯರನ್ನು ಒಕ್ಕಲೆಬ್ಬಿಸುವ ಯೋಜನೆಗಳು ಪರಿಸರ ಚಳವಳಿಗಳಿಗೆ ದಾರಿ ಮಾಡಿಕೊಡುತ್ತವೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಇಲ್ಲಿಯವರೆಗೂ ಆಗಿರುವುದು ಇದೇ ಆಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೈಸರ್ಗಿಕ ಸಂಪತ್ತಿದೆ ಎಂದು ಅಭಿವೃದ್ಧಿ ಯೋಜನೆಗಳಿಗೆ ಮುಂದಾದರೆ ಅಲ್ಲಿರುವ ಹೆಚ್ಚಿದ ಜನಸಂಖ್ಯೆಯು ಆರಂಭಿಕವಾಗಿಯೇ ತಡೆಯುತ್ತದೆ ; ಅಭಿವೃದ್ಧಿ ಯೋಜನೆಯೂ ನಿಂತು ಹೋಗುತ್ತದೆ. ಇಂತಹ ಪರಿಸ್ಥಿತಿಯು ಉತ್ತರ ಕನ್ನಡ ಜಿಲ್ಲೆಯಲ್ಲಿ ಇಲ್ಲದ್ದರಿಂದ ಹೆಚ್ಚು ಪರಿಸರ ಚಳವಳಿಗಳು ನಡೆದಿವೆ ಎಂಬುದನ್ನು ಪ್ರಸ್ತುತ ಅಧ್ಯಯನವು ಕಂಡುಕೊಂಡಿದೆ.

೧.೯ ಉದಾರೀಕರಣ, ಖಾಸಗೀಕರಣ, ಜಾಗತೀಕರಣಗಳು ಮುಂದೊಡ್ಡಿದ ಮುಕ್ತ ಆರ್ಥಿಕ ನೀತಿ ಮುಂತಾದ ಪ್ರಕ್ರಿಯೆಗಳು ಬೃಹತ್ ಕೈಗಾರಿಕೆಗಳು ಮತ್ತು ಅಸಾಂಪ್ರದಾಯಿಕ ಕೃಷಿ ಚಟುವಟಿಕೆಗಳಿಗೆ ಕಾರಣವಾಗಿವೆ. ಅವುಗಳ ಮಾಲಿನ್ಯ ಮೂಲದಿಂದ ಆರಂಭವಾದ ಚರ್ಚೆ ಜಾಗತಿಕವಾಯಿತು ; ಮುಂದುವರಿದು ಪರಿಸರ ಚಳವಳಿಗಳು ಕಾಣಿಸಿಕೊಂಡವು. ಈ ಪರಿಸರ ಚಳವಳಿಗಳ ಒತ್ತಾಯದಿಂದಾಗಿಯೇ ಕೂಪನ್ ಹೇಗನ್ ವಿಶ್ವ ಶೃಂಗಸಭೆ ಏರ್ಪಟ್ಟು, ವಿಶ್ವನಾಯಕರುಗಳು ಪರಿಸರ ಸಮಸ್ಯೆಗಳ ಕುರಿತು ಚರ್ಚಿಸಿ, ತೀರ್ಮಾನ ತೆಗೆದುಕೊಳ್ಳುವಂತಾಯಿತೆಂಬುದನ್ನು ಗಮನಿಸಿದೆ.

೧.೧೦ ಪರಿಸರ ಚಳವಳಿಗಳು ಮೇಲ್ನೋಟಕ್ಕೆ ವ್ಯಾಪಕವೆನಿಸಿದರೂ ಕ್ರಮೇಣ ನಿರ್ದಿಷ್ಟ ವ್ಯಕ್ತಿ-ಸಂಘ-ಸಂಸ್ಥೆ-ಸರ್ಕಾರಗಳತ್ತ ಕೇಂದ್ರೀಕೃತಗೊಂಡು ಗಮನ ಸೆಳೆದರೂ ವಿಫಲವಾಗುತ್ತಿರುವುದು ಹೆಚ್ಚಾಗಿದೆ. ಕೈಗಾ ಚಳವಳಿಯಲ್ಲಿ ಕೆ. ಶಿವರಾಮ ಕಾರಂತ, ಕುಸುಮ ಸೊರಬ ಮತ್ತಿತರರೊಂದಿಗೆ 'ಅವಿನಾಶ' ಎಂಬ ಸಂಸ್ಥೆಯು ಸೇರಿ ತಿಂಗಳುಗಟ್ಟಲೆ ಹೋರಾಟ ಮಾಡಿದರೂ ಸರ್ಕಾರ ತನ್ನ ನಿಲುವನ್ನು ಬಿಗಿಗೊಳಿಸಿದ್ದರಿಂದ ಚಳವಳಿ ವಿಫಲವಾಯಿತು. ಬೇಡ್ತಿ ಚಳವಳಿಯಲ್ಲಿ ವ್ಯಕ್ತಿ - ಸಂಘಟನೆಗಳು ಮುಂದಾಗಿ ಹೋರಾಡಿದರೂ, ಸರ್ಕಾರ ಹಟ ಬಿಡಲಿಲ್ಲ, ಧಾರ್ಮಿಕ ಮುಖಂಡರ ಪ್ರವೇಶವು ಬೇಡ್ತಿ ಚಳವಳಿಯನ್ನು ಸಫಲತೆಯತ್ತ ಸಾಗಿಸಿತೆಂಬುದನ್ನು ನಿರ್ದಿಷ್ಟಪಡಿಸಿಕೊಳ್ಳಲಾಗಿದೆ. ಬೇರೆ ರೀತಿಯಲ್ಲಿ ಬೇಡ್ತಿ ಯೋಜನೆಯನ್ನು ಮುಂದುವರಿಸಲು ಸರ್ಕಾರದ ಪ್ರಯತ್ನಗಳು ಈಗಲೂ ಮುಂದುವರಿದಿರುವುದನ್ನು ಕಂಡುಕೊಳ್ಳಲಾಗಿದೆ.

೧.೧೧ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ಸ್ವಾತಂತ್ರ್ಯ ಚಳವಳಿಯ ಕಾಲದ ಸ್ವದೇಶಿ, ಕರ ನಿರಾಕರಣೆ, ಉಪ್ಪಿನ ಸತ್ಯಾಗ್ರಹದಂತಹ ಚಳವಳಿಗಳಿಂದ ಪ್ರಭಾವಿತಗೊಂಡಿವೆ. ಬ್ರಿಟಿಷ್ ಪ್ರಭುತ್ವದ ವಿರುದ್ಧ ನ್ಯಾಯ ಪರತೆಗಾಗಿ ಹೋರಾಡಿದ ಜನರಲ್ಲಿ ಸಾಮೂಹಿಕ ಪ್ರಜ್ಞೆ ಹಾಗೂ ಜವಾಬ್ದಾರಿಗಳು ಹೆಚ್ಚಿದುದು ಪರಿಸರ ಚಳವಳಿಗಳ ಕಾಲಕ್ಕೆ ಸಹಾಯಕವಾಯಿತು. ಈ ಸಂಬಂಧ, ಬ್ರಿಟಿಷರ ವಿರುದ್ಧ ಶಿರಸಿಯಲ್ಲಿ ನಡೆದ 'ಹುಲ್ಲು ಬನ್ನಿ' ಚಳವಳಿಯು ಯಶಸ್ವಿಯಾಗಿದ್ದನ್ನು ಪ್ರಸ್ತುತ ಅಧ್ಯಯನವು ಉದಾಹರಿಸಿದೆ.

೧.೧೨ ಚಳವಳಿಗಳನ್ನು ಅಧ್ಯಯನ ಮಾಡುವಾಗ ದತ್ತಾಂಶಗಳಿಂದ ಪಡೆದುಕೊಂಡ ಸಂಗತಿಗಳನ್ನು ಸೈದ್ಧಾಂತೀಕರಿಸಿ, ಪಡೆದುಕೊಂಡ ಮಾಹಿತಿಗಳನ್ನು ಹಾಗಾಗಿಯೇ ಉಲ್ಲೇಖಿಸಿ, ಹೊಳಹುಗಳನ್ನು ಕಂಡುಕೊಳ್ಳಲಾಗಿದೆ.

ಹೊಳಹುಗಳನ್ನು ಸಿದ್ಧಾಂತೀಕರಿಸಿ ಹೇಳುವ ಪ್ರಯತ್ನದ ಅಗತ್ಯವಿದೆ ಎಂಬುದನ್ನು ಪ್ರಸ್ತುತ ಅಧ್ಯಯನವು ಕಂಡುಕೊಂಡಿದೆ.

೧.೧೩ ಪರಿಸರ ಚಳವಳಿಗಳ ಅಧ್ಯಯನಕ್ಕೆ ನಿರ್ದಿಷ್ಟಪಡಿಸಿದ ಸಾಹಿತ್ಯಾಕರವು ಕಡಿಮೆ ಎಂಬುದನ್ನು ಅಧ್ಯಯನವು ತೋರಿಸಿಕೊಟ್ಟಿದೆ ; ಕೆಲವು ಕೃತಿಗಳನ್ನು ಗಮನಿಸಲಾಗಿದೆ. ಇಂತಹ ಕೃತಿಯೊಂದನ್ನು ಬರೆದಿದ್ದುದರಿಂದಲೇ ಪರಿಸರ ಚಳವಳಿಯಾಯಿತು ಎಂಬುದಕ್ಕೆ ಭಾರತ ಇಲ್ಲವೇ ಕರ್ನಾಟಕದಲ್ಲಿ ಉದಾಹರಣೆಗಳಿಲ್ಲದಿರುವುದನ್ನು ಕಂಡುಕೊಳ್ಳಲಾಗಿದೆ.

೧.೧೪ ಅಂತಾರಾಷ್ಟ್ರೀಯ ಪರಿಸರ ಚಳವಳಿಗಳಲ್ಲಿ ರಾಜಕೀಯ ಪಕ್ಷಗಳು ಹಾಗೂ ಮುಖಂಡರು ಕಡ್ಡಾಯವಾಗಿ ತಮ್ಮ ಚುನಾವಣೆಗಳ ಪ್ರಣಾಳಿಕೆಯಲ್ಲಿ ಪರಿಸರ ಸಂಬಂಧದ ಧೋರಣೆಗಳನ್ನು ಪ್ರಕಟಿಸಿ, ಮತ ಕೇಳುವುದನ್ನು ಅಧ್ಯಯನವು ದಾಖಲಿಸಿ ಕೊಟ್ಟಿದೆ. ಭಾರತದಲ್ಲಿನ ಪರಿಸರ ಚಳವಳಿಗಳಲ್ಲಿ ರಾಜಕೀಯ ಪಕ್ಷಗಳ ಪಾತ್ರವು ನಿರ್ದಿಷ್ಟಗೊಂಡಿಲ್ಲ.

೧.೧೫ ಅಭಿವೃದ್ಧಿ ಯೋಜನೆಗಳಿಂದ ಅಪಾಯವಿದೆ ಎಂದು ಕಂಡುಬಂದಾಗ ಜನರು ಪರಿಸರ ಚಳವಳಿಗಳಲ್ಲಿ ಭಾಗವಹಿಸಿದರು, ಇಲ್ಲಿ ಸ್ವಂತ ಹಿತಾಸಕ್ತಿಯು ಮುಖ್ಯವಾಗಿತ್ತೆಂಬುದನ್ನು ಪ್ರಸ್ತುತ ಅಧ್ಯಯನವು ತೋರಿಸಿಕೊಟ್ಟಿದೆ. ಕಾಳಿ ಜಲ ವಿದ್ಯುತ್ ಯೋಜನೆಯಲ್ಲಿ ಜನರು ತಮ್ಮ ತೋಟ, ಮನೆಗಳು ಮುಳುಗಿ ನಿರಾಶ್ರಿತರಾಗುತ್ತೇವೆಂದು ಚಳವಳಿ ಮಾಡಿದರು. ಯೋಜನೆಯನ್ನೇ ಧಿಕ್ಕರಿಸಿದ್ದು ಕಡಿಮೆ.

೧.೧೬ ಪರಿಸರ ಚಳವಳಿಗಳ ಸ್ವರೂಪವು ದೊಡ್ಡದಿರಲಿ, ಪುಟ್ಟದಿರಲಿ ಉಪೇಕ್ಷಿಸಿದಂತೆ ತಾತ್ವಿಕತೆಯಡಿಯಲ್ಲಿ ತಂದುಕೊಂಡು ವಿವರಣೆ, ವಿಶ್ಲೇಷಣೆ, ತೌಲನಿಕತೆ ವಿಧಾನಗಳನ್ನು ಅಳವಡಿಸಿಕೊಂಡು ಅಧ್ಯಯನ ಮಾಡಬೇಕೆಂಬುದನ್ನು ಪ್ರಸ್ತುತ ಅಧ್ಯಯನ ಕಂಡುಕೊಂಡಿದೆ.

✦

೨.೧. ಪರಿಸರ ಚಳವಳಿಗಳ ಸ್ವರೂಪದಲ್ಲಿನ ಅಂಶಗಳನ್ನು ಗಮನಿಸಿರುವ ಅಧ್ಯಯನವು 'ನಾಯಕತ್ವದ ಪ್ರಶ್ನೆ'ಯ ಕುರಿತು ವಿಚಾರ ಮಾಡಿದೆ. ಪರಿಸರ ಸಂಬಂಧಿತ ಸಮಸ್ಯೆಗಳು ಮತ್ತು ಚಳವಳಿಗಳಲ್ಲಿ ಬೂರ್ಶ್ವಾವರ್ಗದ ನಾಯಕತ್ವದ ಪ್ರಭಾವವನ್ನು ಗುರುತಿಸಿದೆ. ಈ ನಾಯಕರು ವಿದೇಶಿ ಏಜೆನ್ಸಿಗಳಂತೆ ವರ್ತಿಸಿ, ಹಣ ಸಂಪಾದನೆಯಲ್ಲಿ ತೊಡಗಿಸಿಕೊಂಡು ಪರಿಸರ ಚಳವಳಿಯನ್ನೇ ಮರೆತರು ಎಂದು ಜನರು ಆಪಾದಿಸುವುದನ್ನು ಗಮನಿಸಿದೆ. ಇದೇ ಸಂದರ್ಭದಲ್ಲಿ ಸರ್ವವಿಧದಲ್ಲೂ ಚಳವಳಿಯಲ್ಲಿ ತೊಡಗಿಸಿಕೊಂಡಿದ್ದ ಸುಂದರಲಾಲ್ ಬಹುಗುಣ, ಡಾ. ಕುಸುಮ ಸೊರಬ ಮುಂತಾದ ಕೆಲವೇ ನಾಯಕರುಗಳನ್ನು ಜನರು ಗೌರವದಿಂದ ಹಿಂಬಾಲಿಸಿದುದನ್ನು ದಾಖಲಿಸಿಕೊಟ್ಟಿದೆ.

೨.೨ ಪರಿಸರ ಚಳವಳಿಗಳಲ್ಲಿ ಎಲ್ಲ ಜನವರ್ಗಗಳು, ಜಾತಿಗಳವರೂ ಭಾಗವಹಿಸಲಿಲ್ಲವೆಂಬುದನ್ನು ಅಧ್ಯಯನವು ಗಮನಿಸಿದೆ. ಕೆಲವು ಚಳವಳಿಗಳ ಸಂದರ್ಭದಲ್ಲಿ ನಮಗೆ ಸಂಬಂಧವೇ ಇಲ್ಲವೇನೋ ಎಂಬಂತಿದ್ದ ಜನವರ್ಗವನ್ನು

ನಿಚ್ಚಳವಾಗಿ ತೋರಿಸಿಕೊಟ್ಟಿದೆ. ಕಾಸ್ಟಿಕ್ ಸೋಡಾ ಕಾರ್ಖಾನೆಯ ಅವಘಡದಲ್ಲಿ ಮೀನುಗಾರರ ಹೋರಾಟಕ್ಕೆ ಇತರರ ಬೆಂಬಲ ದೊರೆಯದಿರುವುದನ್ನು, ಅಪ್ಪಿಕೋ ಹಾಗೂ ಬೇಡ್ತಿ ಚಳವಳಿಗಳಲ್ಲಿ ಹವ್ಯಕ ಬ್ರಾಹ್ಮಣ ವರ್ಗದವರ ಪಾತ್ರ ಪ್ರಮುಖವಾಗಿರುವುದನ್ನು ಕಂಡುಕೊಳ್ಳಲಾಗಿದೆ.

೨.೩ ಪರಿಸರ ನಾಶವಿಲ್ಲದೆ ಅಭಿವೃದ್ಧಿಯಾದರೆ ಆಗಲಿ ಎನ್ನುವ ವರ್ಗವೂ ಇದ್ದು, ತನ್ನಷ್ಟಕ್ಕೇ ತಾನು ಕಾಡಿನೊಳಗೆ ಬೆರೆತು ಬದುಕುತ್ತಿರುತ್ತದೆ. ಉತ್ತರ ಕನ್ನಡದ ಪರಿಸರ ಚಳವಳಿಗಳಲ್ಲಿ ಸಿದ್ದಿಗಳು, ಕುಣಬಿಗಳು, ಹಾಲಕ್ಕಿಗಳೇ ಮುಂತಾದವರು ತಮ್ಮ ಪಾಡಿಗೆ ತಾವು ಇದ್ದುಕೊಂಡು ಎಲ್ಲೂ ಚಳವಳಿಯನ್ನು ತಾವೇ ಮಾಡಿದ ಇಲ್ಲವೇ ಮುಖಂಡತ್ವ ವಹಿಸಿಕೊಂಡಿದ್ದ ಉದಾಹರಣೆಗಳಿಲ್ಲದಿರುವುದನ್ನು ಗುರುತಿಸಿಕೊಟ್ಟಿದೆ.

೨.೪ ಭಾರತೀಯರ ಸಂಪ್ರದಾಯಬದ್ಧ ಜೀವನ ಶೈಲಿಯಲ್ಲಿಯೇ ಇಂದಿನ ಆಧುನಿಕ ಅಭಿವೃದ್ಧಿಗೆ ಪರ್ಯಾಯವಿದೆ ಎಂಬುದು ಗಾಂಧೀವಾದಿಗಳ ವಾದವಾಗಿದ್ದು, ಬಡವರು ಪರಿಸರ ನಾಶಕ್ಕೆ ಕಾರಣ ಅಲ್ಲವೇ ಅಲ್ಲ ಎಂಬುದನ್ನು ಎತ್ತಿ ಹಿಡಿದಿದ್ದಾರೆ. ಮಾರ್ಕ್ಸಿಸ್ಟರು ಹಾಗೂ ಬಂಡವಾಳಶಾಹಿಗಳ ವಿರೋಧದ ನಡುವೆಯೂ ಪರಿಸರವನ್ನು ಉಳಿಸಿ, ಅಭಿವೃದ್ಧಿಯನ್ನು ನಡೆಸಲು ಗಾಂಧೀಪ್ರಣೀತ ಪರಿಸರವಾದವು ಬದ್ಧವಾಗಿರುವುದನ್ನು ಅಧ್ಯಯನವು ತೋರಿಸಿಕೊಟ್ಟಿದೆ.

೨.೫ ಪರಿಸರ ಚಳವಳಿಗಳಲ್ಲಿ ಜನರ ಗಮನವನ್ನು ಬೇರೆ ಕಡೆಗೆ ಸೆಳೆಯುವ ಕೆಲಸವನ್ನು ವ್ಯವಸ್ಥಿತವಾಗಿ ಬಂಡವಾಳಿಗರು ಮಾಡುತ್ತಿರುತ್ತಾರೆ. ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಸ್ಥಾಪಿಸಿದ ನಂತರವೂ ಸುತ್ತ ಮುತ್ತಲಿನ ಜನರನ್ನು ಸಮಾಧಾನಪಡಿಸಲು ದೇಣಿಗೆ ಕೊಡುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಸ್ಥಾಪಿಸಲಾಗಿರುವ ವೆಸ್ಟ್‌ಕೋಸ್ಟ್ ಪೇಪರ್ ಮಿಲ್, ಕಾಸ್ಟಿಕ್ ಸೋಡಾ ಕಾರ್ಖಾನೆ, ಕೈಗಾ ಪ್ರಾಜೆಕ್ಟ್‌ನವರು ಪ್ರತಿವರ್ಷವೂ ವಿವಿಧ ರೀತಿಯಲ್ಲಿ ಜನರನ್ನು ಆಕರ್ಷಿಸಿ ಪ್ರೋತ್ಸಾಹಿಸುತ್ತಾರೆ. ಕೈಗಾ ಪ್ರಾಜೆಕ್ಟ್‌ನವರು ಜಿಲ್ಲಾ ಮಟ್ಟದ ಆಟೋಟಗಳಲ್ಲಿ ಭಾಗವಹಿಸಿದವರಿಗೆ ಎನ್‌ಪಿಟಿಸಿಎಲ್ ಗುರುತು ಹಾಕಿರುವ ಟೋಪಿಗಳನ್ನು ನೀಡಿದ್ದರು. ಪ್ರಾಜೆಕ್ಟ್‌ನೊಳಗೆ ೩ ಮತ್ತು ೪ನೇ ಅಣುವಿದ್ಯುತ್ ಗುಮ್ಮಟಗಳನ್ನು ಕಟ್ಟುತ್ತಿದ್ದುದು ಟೋಪಿ ಕೆಳಗೆ ಕಾಣಿಸಲೇ ಇಲ್ಲ.

೨.೬ ಸ್ವಾನುಭವ ಪರಿಸರವಾದವು ಯಾವ ಕಾಲದಲ್ಲಿಯೂ ಇರುವುದೇ ಆಗಿದೆ. ಪರಿಸರದ ಕುರಿತು ವೈಯಕ್ತಿಕವಾಗಿ ಹೊಂದಿರುವ ನಿಲುವುಗಳು ಮತ್ತು ಅಭಿವ್ಯಕ್ತಿಯನ್ನು ಸ್ವಾನುಭವವಾದ ಎನ್ನಬಹುದು. ಸೂಡೋ ಪರಿಸರವಾದ, ಕಾನ್ವೆಂಟ್ ಪರಿಸರವಾದ ಇವೇ ಮುಂತಾದವುಗಳು ಈ ಸ್ವಾನುಭವವಾದದಡಿಯಲ್ಲಿ ಬರುತ್ತವೆ. ಪರಿಸರ ಚಳವಳಿಗಳ ಸೋಲು-ಗೆಲುವುಗಳ ಹಿಂದೆ ಸ್ವಾನುಭವವಾದವನ್ನೂ 'ನಂಬಲೂ ಆಗದು, ಕೈ ಬಿಡಲೂ ಆಗದು' ಎಂಬ ವಿಚಾರವನ್ನು ಅಧ್ಯಯನವು ಗಮನಿಸಿದೆ. ಬೇಡ್ತಿ ಚಳವಳಿಯಲ್ಲಿ ಸ್ವಾಮೀಜಿಯವರು 'ಯೋಜನೆ ನಡೆಯುವುದಾದರೆ ನನ್ನ ಎದೆಯ ಮೇಲೆ ನಡೆಯಲಿ' ಎಂದು ಸಾರುತ್ತಾ ಅಹಿಂಸಾತ್ಮಕ ಹೋರಾಟಕ್ಕೆ ಕರೆ ನೀಡಿದುದನ್ನು ಸ್ವಾನುಭವವಾದದ ಅಡಿಯಲ್ಲಿ ಕಡೆಗಣಿಸಲಾಗಿಲ್ಲ. ಭಾಗವಹಿಸಿದ್ದ ಎಲ್ಲ ಮನಸ್ಸುಗಳು ಹೀಗೇ ಇದ್ದವೆಂಬುದನ್ನು ನಂಬಿಯೂ ಇಲ್ಲ.

೨.೭ ಪರಿಸರವಾದಿ ಗುಂಪುಗಳ ನಡುವೆ ಹೊಂದಾಣಿಕೆ ಇಲ್ಲದಿರುವುದು ಎದ್ದು ಕಾಣುತ್ತದೆ. ಇದರಿಂದಾಗಿಯೇ ವಿನಾಶಕಾರಿ ಅಭಿವೃದ್ಧಿಗೆ ಒಂದು ಸರಿಯಾದ ಪರ್ಯಾಯವನ್ನು ಸೂಚಿಸಲು ಸಾಧ್ಯವಾಗದೆ ಬಂಡವಾಳಶಾಹಿಗಳು ಪರಿಸರವಾದಿಗಳನ್ನು ಅಭಿವೃದ್ಧಿ ವಿರೋಧಿಗಳೆಂದೂ, ವಿದೇಶಿಯರ ಏಜೆಂಟರೂ ಆಗಿದ್ದಾರೆಂದು ಕರೆಯಲು ದಾರಿಯಾಯಿತು. ಉತ್ತರ ಕನ್ನಡದ ಪರಿಸರ ಚಳವಳಿಗಳ ಕಾಲದಲ್ಲಿ ಎಲ್ಲರೊಂದಿಗೆ ಎಲ್ಲ ಚಳವಳಿಗಳಲ್ಲೂ ಭಾಗವಹಿಸಿದ್ದವರು ತೀರಾ ಕಡಿಮೆ. ಹಾಗೆಯೇ ಎಲ್ಲ ಚಳವಳಿಗಳಲ್ಲೂ ತಪ್ಪದೇ ಭಾಗವಹಿಸಿದ ಸಂಘಟನೆಗಳೂ ಇಲ್ಲ. ಪರಿಸರ ಚಳವಳಿಗಳ ಸಂಬಂಧವಾಗಿ ನಿರ್ದಿಷ್ಟ ಗುರಿ ಸಾಧನೆಗಾಗಿ, ನೋಂದಾಯಿತ ಸಂಸ್ಥೆಯಾಗಿ ಹೋರಾಡಿದ ಉದಾಹರಣೆಗಳು ಬೆರಳೆಣಿಕೆಯಷ್ಟು ಇಲ್ಲವೆಂಬುದನ್ನು ಪ್ರಸ್ತುತ ಅಧ್ಯಯನವು ಕಂಡುಕೊಂಡಿದೆ.

೨.೮ ಪರಿಸರದ ಖಚಿತವಾದ ನಿರ್ಧಾರಗಳನ್ನು ಹೊಂದಿದ್ದ ಪರಿಸರ ಪ್ರೇಮಿಗಳು ಕಡಿಮೆ. ಸುಂದರಲಾಲ್ ಬಹುಗುಣ, ಮೇಧಾಪಾಟ್ಕರ್, ಡಾ. ಕುಸುಮ ಸೊರಬ ಇವರ ಪರಿಸರ ಪ್ರೇಮವನ್ನು ಯಾರೂ ಪ್ರಶ್ನಿಸಿಲ್ಲ. ಡಾ. ಕುಸುಮ ಸೊರಬ ಅವರಂತೆ ಪರಿಸರ ಚಳವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡ ಉದಾಹರಣೆಯಾಗಿ ಇನ್ನೊಬ್ಬರು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಕಾಲದಲ್ಲಿ ಇಲ್ಲದಿರುವುದನ್ನು ಅಧ್ಯಯನವು ತೋರಿಸಿಕೊಟ್ಟಿದೆ.

೨.೯ ಸರ್ಕಾರಗಳು ಮತ್ತು ರಾಜಕೀಯ ಪಕ್ಷಗಳ ಅತಂತ್ರ ನಿಲುವುಗಳು ಪರಿಸರ ಚಳವಳಿಗಳ ಹಿಂದೆ ಪೂರಕವಾಗಿ ಕೆಲಸ ಮಾಡುತ್ತಿಲ್ಲ ಎಂಬುದನ್ನು ಅಧ್ಯಯನವು ಗಮನಿಸಿದೆ. ಬೇಡ್ತಿ ಚಳವಳಿಯ ಕಾಲದಲ್ಲಿ ಮೂವರು ಮುಖ್ಯಮಂತ್ರಿಗಳು ಮಧ್ಯ ಪ್ರವೇಶಿಸಿದರೂ ಸಮಸ್ಯೆ ಬಗೆಹರಿಯದಿರುವ ಗೊಂದಲವನ್ನೂ, ಚಳವಳಿಯು ತೀವ್ರಗೊಂಡಿದ್ದನ್ನು ತೋರಿಸಿಕೊಟ್ಟಿದೆ.

೨.೧೦ ಅತ್ಯಧಿಕ ವಿದ್ಯುತ್ ಉತ್ಪಾದನೆ ನೀಡುತ್ತಿರುವ ಉತ್ತರ ಕನ್ನಡ ಜಿಲ್ಲೆಯ ಜನರು ಜಿಲ್ಲೆಗೆ ನಿರಂತರ ವಿದ್ಯುತ್‌ಗಾಗಿ ಹೋರಾಟ ಮಾಡುತ್ತಿರುವುದನ್ನು ಗಮನಿಸಲಾಗಿದೆ. ಕರಾವಳಿ ತಾಲೂಕುಗಳಿಗೆ ವಿದ್ಯುತ್ ಕಡಿತದಿಂದ ವಿನಾಯಿತಿ ಪಡೆಯಲಾಗಿದೆ. ಎಷ್ಟೆಲ್ಲ, ಏನೆಲ್ಲ ಕೊಟ್ಟಿದ್ದೇವೆ ! ನಮಗೇನು ಲಾಭವಿದೆ ? ಎಂಬ ಪ್ರಶ್ನೆ ಜನರಲ್ಲಿ ಎದ್ದಿರುವುದನ್ನು ಗುರುತಿಸಲಾಗಿದೆ.

೨.೧೧ ಕರ್ನಾಟಕದಲ್ಲಿ ನಡೆದಿರುವ ಹೋರಾಟಗಳೆಲ್ಲವೂ ಪರಿಸರ ಹೋರಾಟಗಳಲ್ಲ. ಹಾಗೆಯೇ ಉತ್ತರ ಕನ್ನಡ ಜಿಲ್ಲೆಯ ಎಲ್ಲ ಹೋರಾಟಗಳು ಪರಿಸರ ಚಳವಳಿಗಳೆನಿಸಿಲ್ಲ. ಕಾವೇರಿ ನೀರಿನ ಹಂಚಿಕೆ ವಿವಾದ, ಅರಣ್ಯ ಅತಿಕ್ರಮಣದಾರರ ಹೋರಾಟಗಳು ಪರಿಸರ ಚಳವಳಿಗಳೆನಿಸಿಕೊಳ್ಳುವುದಿಲ್ಲವೆಂಬುದನ್ನು ತಿಳಿಯಲಾಗಿದೆ.

೨.೧೨ ಉತ್ತರ ಕನ್ನಡ ಜಿಲ್ಲೆಯ ಭೌಗೋಳಿಕ ಲಕ್ಷಣಗಳೇ ಪರಿಸರ ಚಳವಳಿಗಳು ನಡೆಯಲು ಮೂಲಾಂಶಗಳಾಗಿವೆ ಎಂಬುದನ್ನು ಕಂಡುಕೊಳ್ಳಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಪಕ್ಕದ ಹಾವೇರಿ ಜಿಲ್ಲೆಯಲ್ಲಿ ಪರಿಸರ ಚಳವಳಿಗಳು ನಡೆದಿಲ್ಲವೇಕೆ ? ಎಂಬುದನ್ನು ಅಧ್ಯಯನದಲ್ಲಿ ಚರ್ಚಿಸಿ, ವಿಶಿಷ್ಟ ಭೌಗೋಳಿಕ ಲಕ್ಷಣಗಳ್ಯಾವುವೂ ಅಲ್ಲಿ ಇಲ್ಲದಿರುವುದನ್ನು ಅಭ್ಯಸಿಸಲಾಗಿದೆ.

✦

೩.೧ ಉತ್ತರ ಕನ್ನಡ ಜಿಲ್ಲೆಯ ಪ್ರಕೃತಿ ಸಿರಿದೇವಿಯ ಸೊಬಗು ನಲುಗಿದ್ದರೂ, ಸೊರಗಿಲ್ಲದಿರುವುದನ್ನು ಸ್ವತಃ ಗಮನಿಸಬೇಕೆಂದು ಈ ಅಧ್ಯಯನವು ಒತ್ತಾಯಿಸುತ್ತದೆ. ಶೇ. ೭೦ ರಿಂದ ೮೦ ರಷ್ಟು ಅರಣ್ಯವು ಜಿಲ್ಲೆಯಲ್ಲಿ ಇದ್ದು, ಜನಸಂಖ್ಯೆಯ ತೀವ್ರತೆ ಕಡಿಮೆಯಾಗಿರುವುದಕ್ಕೆ ಕಾರಣವಾಗಿದೆ. ಈ ಅಂಶವು ಪ್ರಮುಖವಾಗಿ ಅಭಿವೃದ್ಧಿ ಯೋಜನೆಗಳಿಗೆ ಪೂರಕವೂ, ಪರಿಸರ ಚಳವಳಿಗಳ ಹಿನ್ನಡೆಗೆ ಕಾರಣವೂ ಆಗಿರುವುದನ್ನು ಅಧ್ಯಯನವು ತೋರಿಸಿಕೊಟ್ಟಿದೆ.

೩.೨ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳಿಗೆ ಜನಪ್ರತಿನಿಧಿಗಳ ನಾಯಕತ್ವ ಅಥವಾ ಬೆಂಬಲ ಕಡಿಮೆಯಾಗಿತ್ತು ಎಂಬುದನ್ನು ಈ ಅಧ್ಯಯನವು ವಿಶೇಷವಾಗಿ ಪ್ರಸ್ತಾಪಿಸುತ್ತದೆ. ಜಿಲ್ಲೆಯ ಜನಸಂಖ್ಯೆಗನುಗುಣವಾಗಿ ಕೇವಲ ಆರು ಎಂ.ಎಲ್.ಎ.ಗಳು ಹಾಗೂ ಒಬ್ಬರು ಎಂ.ಪಿ.ಗಳು ಮಾತ್ರವೇ ಇದ್ದು ವಿಶಾಲವಾದ ಜಿಲ್ಲೆಯಲ್ಲಿ ಎಲ್ಲ ಕಡೆಯೂ ಭಾಗವಹಿಸಲು ಸಾಧ್ಯವಾಗಿಲ್ಲದಿರುವುದನ್ನು ಕಂಡುಕೊಂಡಿದೆ. ಬೇಡ್ತಿ ಚಳವಳಿಯ ಆರಂಭಿಕ ನಾಯಕತ್ವವನ್ನು ಜನಪ್ರತಿನಿಧಿಯಾಗಿದ್ದ ಶ್ರೀಮತಿ ಅನಸೂಯ ಶರ್ಮ ವಹಿಸಿಕೊಂಡಿದ್ದನ್ನು ಉಲ್ಲೇಖಿಸಲು ಅಧ್ಯಯನವು ಮರೆತಿಲ್ಲ.

೩.೩ ಉತ್ತರ ಕನ್ನಡ ಜಿಲ್ಲೆಯಲ್ಲಿ 'ಘಟ್ಟದ ಮೇಲಿನ ಮತ್ತು ಘಟ್ಟದ ಕೆಳಗಿನ' ಎಂಬ ಭಾವನೆಗಳು ಭೌಗೋಳಿಕ ಹಿನ್ನೆಲೆಯಲ್ಲಿ ಬಲಗೊಂಡಿವೆ. ಪರಿಸರ ಚಳವಳಿಗಳ ಕಾಲದಲ್ಲಿ ಜನರಲ್ಲಿನ 'ಭಾವನಾತ್ಮಕ ಬಿರುಕು' ಚೆನ್ನಾಗಿಯೇ ಕೆಲಸ ಮಾಡಿದೆ. ಕೈಗಾ ಅಣುಸ್ಥಾವರ ವಿರುದ್ಧದ ಹೋರಾಟದಲ್ಲಿ ಕರಾವಳಿಗರಿಗಿಂತ ಘಟ್ಟದ ಮೇಲಿನವರೇ ಜಾಸ್ತಿಯಾಗಿದ್ದರು. ಕರಾವಳಿಯ ಸೀಬರ್ಡ್ ನಿರಾಶ್ರಿತರಿಗೆ ಘಟ್ಟದ ಮೇಲಿನವರು ಬೆಂಬಲ ಕೊಡಲಿಲ್ಲವೆಂದು ಆಪಾದನೆ ಮಾಡಿದ್ದನ್ನು ಅಧ್ಯಯನವು ದಾಖಲಿಸಿಕೊಂಡಿದೆ.

೩.೪ ಅಭಿವೃದ್ಧಿ ಯೋಜನೆಗಾಗಿ ಅರಣ್ಯ ನಾಶವಾಗುವುದು ಬೇಡವೆನ್ನುವಾಗ ಅತಿಕ್ರಮಣದಿಂದ ಅರಣ್ಯನಾಶ ವಾಗುವುದಿಲ್ಲವೇ ? ಎಂಬ ಪ್ರಶ್ನೆಯನ್ನು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಕಾಲದಲ್ಲಿ ಗಮನಿಸಲಾಗಿದೆ. ಅತಿಕ್ರಮಣದಾರರ ಅಕ್ರಮ - ಸಕ್ರಮ ಹೋರಾಟವನ್ನು ಪರಿಸರ ಚಳವಳಿ ಎಂದು ಅಧ್ಯಯನವು ಪರಿಗಣಿಸುವುದಿಲ್ಲ.

೩.೫ ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿ ದೊಡ್ಡದಾಗಿದ್ದು, ಜಿಲ್ಲಾ ಕೇಂದ್ರವು ಭೌಗೋಳಿಕವಾಗಿ ಒಂದು ಮೂಲೆಯಲ್ಲಿದ್ದು, ಖಾಸಗಿ ಬಸ್ ಸೌಕರ್ಯವು ಇಲ್ಲದಿರುವುದರಿಂದ ! ಅಗತ್ಯ ಬಿದ್ದಾಗಲೆಲ್ಲಾ ಜನರು ಜಿಲ್ಲಾ ಕೇಂದ್ರ ಕಾರವಾರಕ್ಕಿಂತ ಹುಬ್ಬಳ್ಳಿ - ಧಾರವಾಡಗಳಿಗೆ ಹೆಚ್ಚಾಗಿ ಹೋಗುತ್ತಾರೆ. ಇಂತಹ ಅಂಶಗಳು ಪರಿಸರ ಚಳವಳಿಗಳ ಮೇಲೆ ಪ್ರಭಾವ ಬೀರಿರುವುದನ್ನು ಅಧ್ಯಯನವು ಗುರುತಿಸಿಕೊಂಡಿದೆ.

೩.೬ ಉತ್ತರ ಕನ್ನಡ ಜಿಲ್ಲೆಯ ಜನರು ಸಾಂಸ್ಕೃತಿಕವಾಗಿ ಶ್ರೀಮಂತರು ; ಭಾವನಾತ್ಮಕವಾಗಿ ಬಡವರು ಎಂಬುದನ್ನು ಪರಿಸರ ಚಳವಳಿಗಳ ಹಿನ್ನೆಲೆಯಲ್ಲಿ ಅಧ್ಯಯನವು ಕಂಡುಕೊಂಡಿದೆ. ಶಿರಸಿ ಮಾರಿಕಾಂಬ ಜಾತ್ರೆಗೆ ಸೇರಿದಷ್ಟು ಜನರು ಪರಿಸರ ಚಳವಳಿಗಳಲ್ಲಿ ಭಾಗವಹಿಸಿಲ್ಲದಿರುವುದನ್ನು ಕಂಡು ಪರಿಸರ ಚಳವಳಿಯೂ ಸಾಂಸ್ಕೃತಿಕ ವಸ್ತು-ವಿಚಾರವಾಗುವುದೆಂದು ? ಎಂಬುದರ ಕುರಿತು ಆಲೋಚಿಸಿದೆ.

✦

೪.೧ ನೆಲಸಂಬಂಧದ ಯೋಜನೆಗಳು ಪ್ರಾಕೃತಿಕ ನಷ್ಟ ಉಂಟು ಮಾಡುವುದು ಕಡಿಮೆ. ಜಲಸಂಬಂಧದ ಯೋಜನೆಗಳು ಪ್ರಾಕೃತಿಕ ನಷ್ಟ ಉಂಟು ಮಾಡುವುದು ಜಾಸ್ತಿ ಎಂಬುದನ್ನು ಪ್ರಸ್ತುತ ಅಧ್ಯಯನವು ಗುರುತಿಸಿಕೊಟ್ಟಿದೆ. ಸೀಬರ್ಡ್ ನೌಕಾನೆಲೆಗೆ ವಶಪಡಿಸಿಕೊಂಡ ಭೂಮಿಯು ಬದಲಾವಣೆಗಳೊಂದಿಗೆ ಕಣ್ಣಿಗೆ ಕಾಣಿಸುತ್ತಿದೆ. ಕಾಳಿ ಜಲವಿದ್ಯುತ್ ಯೋಜನೆಗಳಿಗೆ ಮುಳುಗಡೆಯಾದ ಅರಣ್ಯ ಭೂಮಿಯು ಯಾರದ್ದೂ ಅಲ್ಲವಾಗಿದೆ. ಈ ಹಿನ್ನೆಲೆಯಿಂದಲೇ ಉತ್ತರ ಕನ್ನಡ ಜಿಲ್ಲೆ ಪರಿಸರ ಚಳವಳಿಗಳನ್ನು ನೆಲಸಂಬಂಧಿ ಹಾಗೂ ಜಲಸಂಬಂಧಿ ಎಂದು ವಿಭಾಗಿಸಿಕೊಂಡು ಅಧ್ಯಯನ ಮಾಡಿರುವುದಾಗಿದೆ.

೪.೨ ಉತ್ತರ ಕನ್ನಡ ಜಿಲ್ಲೆಯ ನೆಲ ಸಂಬಂಧಿ ಹಾಗೂ ಜಲಸಂಬಂಧಿ ಪರಿಸರ ಚಳವಳಿಗಳು ಒಂದಲ್ಲ ಒಂದು ರೀತಿಯಲ್ಲಿ 'ಪಶ್ಚಿಮ ಘಟ್ಟ ಉಳಿಸಿ' ಚಳವಳಿಯ ಭಾಗವೇ ಆಗಿದ್ದು, ಅವುಗಳನ್ನು ನೈಸರ್ಗಿಕ ಸೂಕ್ಷ್ಮ ಪ್ರದೇಶವೆಂದು ಘೋಷಿಸಬೇಕೆಂಬ ಒತ್ತಾಯ ಮಾಡುತ್ತಿವೆ. 'ಪರಿಸರ ಉಳಿಸಿ, ಅಭಿವೃದ್ಧಿ ನಡೆಸಿ' ಎಂಬ ವಿಚಾರಕ್ಕೆ ಬೆಂಬಲವಿರುವುದನ್ನು ಗುರುತಿಸಲಾಗಿದೆ.

೪.೩ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳಲ್ಲಿ ನೆಲಸಂಬಂಧದ ಚಳವಳಿಗಳನ್ನು ಗಮನಿಸಿದಾಗ ಯೋಜನಾ ಪ್ರದೇಶದ ಜನರು ಅಭಿವೃದ್ಧಿ ಯೋಜನೆಗಳನ್ನು ಬೆಂಬಲಿಸಿರುವುದನ್ನೂ, ಯೋಜನಾ ಪ್ರದೇಶದವರಾಗಿಲ್ಲದ ಜನರು ವಿರೋಧಿಸಿರುವುದು ಕಂಡುಬಂದಿರುತ್ತದೆ. ಉದಾಹರಣೆಗೆ ಕೊಂಕಣ ಲಿಖಿತರೈಲ್ವೆ ಯೋಜನೆಯನ್ನು ಯಾರೂ ವಿರೋಧಿಸಿದ ದಾಖಲೆಗಳಿಲ್ಲದಿರುವುದನ್ನು, ನಿರಾಶ್ರಿತರು ಮೌಖಿಕವಾಗಿ ಯೋಜನೆಯನ್ನು ವಿರೋಧಿಸಿರುವುದನ್ನು ಗಮನಿಸಲಾಗಿದೆ.

೪.೪ ನೆಲಸಂಬಂಧದ ಪರಿಸರ ಚಳವಳಿಗಳಲ್ಲಿ ವಿಶೇಷವಾಗಿ ಅಪಾಯಕಾರಿ ಯೋಜನೆಗಳನ್ನು ಜನರು ಬೆಂಬಲಿಸಲಿಲ್ಲ. ಉದಾಹರಣೆಗೆ ಕೈಗಾ ಅಣು ವಿದ್ಯುತ್ ಸ್ಥಾವರ, ತದಡಿ ಹಾಗೂ ಹಣಕೋಣ ಉಷ್ಣವಿದ್ಯುತ್ ಸ್ಥಾವರಗಳು. ಇವುಗಳ ಬಗ್ಗೆ ಪರಿಪೂರ್ಣ ಮಾಹಿತಿಗಳು ಜನರಿಗೆ ತಿಳಿಯದಿರುವುದರಿಂದಲೂ ಬೆಂಬಲಿಸದಿರಬಹುದೆಂಬ ಅನುಮಾನವನ್ನು ಪ್ರಸ್ತುತ ಅಧ್ಯಯನವು ಹೊಂದಿದೆ. ಕೆಲವರು ಪರಿಪೂರ್ಣ ಮಾಹಿತಿ ಇದ್ದೇ ವಿರೋಧಿಸಿದರು ಎಂಬುದನ್ನು ಗಮನಿಸಲಾಗಿದೆ.

✦

೫.೧ ಜಲಸಂಬಂಧದ ಪರಿಸರ ಚಳವಳಿಗಳಲ್ಲಿ ಒಂದಾದ ಮೇಲೆ ಒಂದರಂತೆ ಜಲವಿದ್ಯುತ್ ಯೋಜನೆಗಳನ್ನು ಹೇರಿದಾಗ ಅಭಿವೃದ್ಧಿ ಸಾಕು, ಪರಿಸರ ಬೇಕು ಎಂದು ಕೂಗುತ್ತಾ' ಪರಿಸರವನ್ನು ಉಳಿಸುವುದೂ ಒಂದು ಅಭಿವೃದ್ಧಿಯೇ' ಆಗಿದೆ ಎಂದು ಪ್ರತಿಪಾದಿಸಿದರು. ಬೇಡ್ತಿ ಯೋಜನೆ ವಿರೋಧದ ಕಾಲದಲ್ಲಿ ಸರ್ಕಾರವು 'ರನ್ ಆಫ್ ದಿ ರಿವರ್' ಯೋಜನೆಯನ್ನು ಪ್ರಸ್ತಾಪಿಸಿದಾಗ ವ್ಯಕ್ತವಾದ ಈ ಅಂಶವನ್ನು ಪ್ರಸ್ತುತ ಅಧ್ಯಯನವು ದಾಖಲಿಸಿಕೊಂಡಿದೆ.

೫.೨ ಜಲಸಂಬಂಧದ ಚಳವಳಿಯಾಗಿ ನಡೆದ 'ಶರಾವತಿ ಟೇಲ್‌ರೇಸ್' ಯೋಜನೆಯ ವಿರೋಧವು ಸಂಘಟನೆಯ ಒಡಕು ಮತ್ತು ಮುಖಂಡತ್ವ ವಹಿಸಿದ್ದ ಡಾ. ಕುಸುಮ ಸೊರಬ ಅವರ ಆಕಸ್ಮಿಕ ಸಾವಿನಿಂದ ಬಲ

ಕಳೆದುಕೊಂಡಿತು. ನ್ಯಾಯಾಲಯದ ಮಧ್ಯಪ್ರವೇಶವೂ ಒಂದು ಪ್ರಮುಖ ಕಾರಣವಾಗಿತ್ತೆಂಬುದನ್ನು ಪ್ರಸ್ತುತ ಅಧ್ಯಯನವು ಕಂಡುಕೊಂಡಿದೆ.

೫.೩ ಅಪಾರವಾದ ನೈಸರ್ಗಿಕ ಸಂಪತ್ತಿನ ಮುಳುಗಡೆಯೂ ಒಂದು ಅರ್ಥದಲ್ಲಿ ಅಭಿವೃದ್ಧಿಯ ಹಿನ್ನಡೆಯೇ ಆಗಿದೆ ಎಂಬುದನ್ನು ಜಲಸಂಬಂಧದ ಚಳವಳಿಗಳಲ್ಲಿ ಕಂಡುಕೊಳ್ಳಲಾಗಿದೆ. ಉತ್ತರ ಕನ್ನಡ ಜಿಲ್ಲೆಗೆ ಯಾವುದೇ ರೀತಿಯ ಯೋಜನೆಗಳು ಬರುತ್ತವೆ ಎಂದು ಗೊತ್ತಾದರೆ 'ಧಾರಣ ಶಕ್ತಿ'ಯ ಅಧ್ಯಯನವಾಗಬೇಕು, ಸುಸ್ಥಿರ ಅಭಿವೃದ್ಧಿ ನಮಗೆ ಬೇಕು ಎಂಬ ಬಲವಾದ ಕೂಗು ಎದ್ದಿರುವುದನ್ನು ಅಧ್ಯಯನವು ಗಮನಿಸಿದೆ.

೫.೪ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳಲ್ಲಿ ಅಲ್ಲಲ್ಲಿ ಸ್ಥಳೀಯರನ್ನು ಪರ-ವಿರೋಧದ ಗುಂಪುಗಳನ್ನಾಗಿ ಒಡೆಯುವುದು, ಈ ಮೊದಲೇ ಪ್ರಸ್ತಾಪಿಸಿದಂತೆ ದೇಣಿಗೆ ಕೊಡುವುದು, ನೀವೇಕೆ ಬ್ರಾಹ್ಮಣರ ಹಿತ ಕಾಪಾಡುತ್ತೀರಿ ಎನ್ನುವ ಒಳ ರಾಜಕೀಯಗಳು ನಡೆದಿವೆ. ಕ್ರಮವಾಗಿ ಶರಾವತಿ ಟೇಲ್‌ರೇಸ್, ವೆಸ್ಟ್‌ಕೋಸ್ಟ್ ಪೇಪರ್ ಮಿಲ್ ಹಾಗೂ ಅಪ್ಪಿಕೋ ಚಳವಳಿಗಳ ಸಂಬಂಧದಲ್ಲಿ ಗಮನಿಸಬಹುದಾಗಿದೆ.

'ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು' ಎಂಬ ಈ ವಿಷಯಾಧ್ಯಯನದೊಳಗೆ ಸಾಂಸ್ಕೃತಿಕ ರಾಜಕೀಯ ಹಾಗೂ ಬಂಡವಾಳಿಗರ ಪ್ರಭಾವ ಕಡಿಮೆ. ಸಾಮಾಜಿಕ ನ್ಯಾಯದ ಪ್ರಶ್ನೆ, ನೈಸರ್ಗಿಕ ಸಂಪತ್ತಿನ ನಾಶ, ನಿರಾಶ್ರಿತರ ಸಮಸ್ಯೆ, ಭಾವನಾತ್ಮಕ ಬಿರುಕು, ಸರ್ಕಾರದ ಧೋರಣೆಗಳು, ಮಾಹಿತಿಗಳ ಕೊರತೆಗಳು ಪ್ರಮುಖವಾಗಿ ಹೆಚ್ಚು ಪ್ರಭಾವ ಬೀರಿರುವುದನ್ನು ಇಲ್ಲಿ ದಾಖಲಿಸಬೇಕಾಗುತ್ತದೆ.

'ಇತಿಹಾಸವನ್ನು ಪಾಠವೆಂದು ಕಲಿಯುವುದಕ್ಕಿಂತಲೂ, ಇತಿಹಾಸದಿಂದ ಪಾಠ ಕಲಿಯೋಣ' ಎಂಬ ಮಾತಿನಂತೆ ಪರಿಸರ ಚಳವಳಿಗಳ ಇತಿಹಾಸದಿಂದ ಇಂದಿನ ಬಹುಚರ್ಚಿತ ವಿಷಯಗಳಾಗಿರುವ 'ಪರಿಸರ ಹಾಗೂ ಅಭಿವೃದ್ಧಿ'ಗಳೆರಡರ ಅಗತ್ಯ ಮತ್ತು ಮಹತ್ವವನ್ನು ಅರಿತು, ಮನುಕುಲದ ಒಳಿತಿಗಾಗಿ ಪೂರಕ ನಿರ್ಧಾರಗಳನ್ನು ಕೈಗೊಳ್ಳುವಂತಾಗಬೇಕೆಂಬುದನ್ನು ಪ್ರಸ್ತುತ ಅಧ್ಯಯನವು ಒತ್ತಾಯಿಸುತ್ತದೆ.

ರಾಷ್ಟ್ರದ ಹಿತದೃಷ್ಟಿಯಲ್ಲಿ ಉತ್ತರ ಕನ್ನಡ ಜಿಲ್ಲೆಯೂ ಒಂದು ಭಾಗ, ಅಲ್ಲಿನ ಸಂಪತ್ತು ರಾಷ್ಟ್ರದ ಸಂಪತ್ತು ಎನ್ನುವುದು ಪ್ರಭುತ್ವದ ವಾದವಾಗಿದೆ. ಅದಕ್ಕೆ ಪ್ರತಿಯಾಗಿ 'ಅಭಿವೃದ್ಧಿಗೆ ಮತ್ತೊಂದು ಜಿಲ್ಲೆ, ಲೂಟಿಗೆ ನಮ್ಮ ಜಿಲ್ಲೆ' ಎಂದು ತಿಳಿದಿರುವ ಉತ್ತರ ಕನ್ನಡ ಜಿಲ್ಲೆಯ ಜನರು ಒಟ್ಟು ಜಿಲ್ಲೆಗಳ ಸರಾಸರಿ ಆಧಾರದ ಮೇಲೆ ಯೋಜನೆಗಳನ್ನು ಮಂಜೂರು ಮಾಡಿ ಎಂದು ಒತ್ತಾಯಿಸುತ್ತಾರೆ. 'ವಿದ್ಯುತ್ ಯೋಜನೆ ನಮಗೆ, ವಿದ್ಯುತ್ ಬೇರೆಯವರಿಗೆ' ಎಂಬುದು ಜನರಿಗೆ ಅರ್ಥವಾಗಿದೆ. ಇತ್ತೀಚಿನ ವರ್ಷಗಳಲ್ಲಿ ಯಾವ ಯೋಜನೆಯನ್ನೂ ಜಿಲ್ಲೆಯೊಳಗೆ ಬರಲು ಒಪ್ಪುತ್ತಿಲ್ಲ. 'ಸ್ಥಳೀಯರ ನೋವಿನಲ್ಲಿ ರಾಷ್ಟ್ರದ ಹಿತವಿದೆ' ಎಂಬ ಮಾತಿನಂತೆ, 'ಪರಿಸರ ಪೂರಕವಾಗಿರುವ ನಲಿವಿನ ಯೋಜನೆಗಳನ್ನು'ಕೊಡಿ ಸ್ವಾಗತಿಸುತ್ತೇವೆ ಎಂದು 'ಉತ್ತರ ಕನ್ನಡ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ' ಕುರಿತು ಜಿಲ್ಲೆಯ ವಿವಿಧೆಡೆಗಳಲ್ಲಿ ಏರ್ಪಡಿಸಿದ್ದ ಸಮ್ಮೇಳನ ಹಾಗೂ ಸಂವಾದ ಕಾರ್ಯಕ್ರಮಗಳಲ್ಲಿ ಒತ್ತಾಯಿಸಲಾಗಿದೆ.

ಜಗತ್ತಿನ ಅಪರೂಪದ 'ಜೀವವೈವಿಧ್ಯ ತಾಣವೆನಿಸಿರುವ ಪಶ್ಚಿಮ ಘಟ್ಟ'ಗಳನ್ನು ಒಳಗೊಂಡಿರುವ ಉತ್ತರ ಕನ್ನಡ ಜಿಲ್ಲೆಯು ಪರಿಸರ ಚಳವಳಿಗಳಿಂದಾಗಿ ವಿಶ್ವದೆಲ್ಲೆಡೆ ಗುರುತಿಸಲ್ಪಟ್ಟಿದೆ. ಜನರು ಜಲವಿದ್ಯುತ್ ಯೋಜನೆಗಳಿಂದ ನಲುಗಿದ್ದಾರೆ, ಕೈಗಾ ಅಣುಸ್ಥಾವರದಿಂದ ಭಯಗೊಂಡಿದ್ದಾರೆ, ನಮ್ಮದು ದೇಶದಲ್ಲೇ ದೊಡ್ಡದಾದ ಸೀಬರ್ಡ್ ನೌಕಾನೆಲೆ ಎಂದು ಹೇಳಿಕೊಂಡಿದ್ದಾರೆ. ಮುಂದಿನ ಯಾವ ಯೋಜನೆಗಾಗಿ ನಮ್ಮ ಚಳವಳಿ !? ಎನ್ನುವ ಕುತೂಹಲವನ್ನು ಹೊಂದಿದ್ದಾರೆ ಹಾಗೂ ಎಚ್ಚೆತ್ತುಕೊಂಡಿದ್ದಾರೆ. 'ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು' ಎಂಬ ವಿಷಯದ ಕುರಿತು ರೂಪಿಸಿಕೊಂಡ ಚೌಕಟ್ಟಿನೊಳಗೆ ನಡೆದ ಪ್ರಸ್ತುತ ಅಧ್ಯಯನವು ನಾಲ್ಕಾರು ಉಪಯೋಗಿ ವಿಷಯಗಳನ್ನು ಕಟ್ಟಿಕೊಟ್ಟು ನಿಂತಿದೆ ; ಮುಗಿದಿಲ್ಲ.

❑ ❑ ❑

ಅನುಬಂಧಗಳು

ಅನುಬಂಧ - ಒಂದು

ಪರಾಮರ್ಶನ ಗ್ರಂಥಗಳು

- ಅನಂತರಾಮು ಟಿ ಆರ್ (ಸಂ), ಸಂಕುಲ (ಅಭಿನಂದನ ಗ್ರಂಥ), ಸಂಕುಲ ಪ್ರಕಾಶನ, ಬೆಂಗಳೂರು, ೨೦೦೮
- ಅನಂತ ಮಾಧವ ದೇಸಾಯಿ, ಚಿತ್ತಾಕುಲ - ಕಾರವಾರ ಎ ಹಿಸ್ಟರಿ, ಕಾರವಾರ, ೧೯೬೪
- ಅನಿಲ್ ಅಗರವಾಲ್ ಹಾಗೂ ಸುನೀತಾ ನಾರಾಯಣ್, ಹಸಿರು ಹಳ್ಳಿಗಳು, ಸೆಂಟರ್ ಫಾರ್ ಸೈನ್ಸ್ ಅಂಡ್ ಎನ್‌ವಾಯರನ್‌ಮೆಂಟ್, ನವದೆಹಲಿ ಮತ್ತು ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೨
- ಅಜೂರ ಜಿ ವಿ, ಉತ್ತರ ಕನ್ನಡ ಜಿಲ್ಲೆಯ ಅಂಕಿ-ಅಂಶಗಳ ನೋಟ ೨೦೦೬-೦೭, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ, ಕಾರವಾರ, ೨೦೦೮
- ಓಮ್‌ವೆಟ್ ಗೈಲ್, ಇಕಾಲಜಿ ಅಂಡ್ ಸೋಷಿಯಲ್ ಮೂವ್‌ಮೆಂಟ್ಸ್, ಇಕಾಲಜಿ ಅಂಡ್ ಪೊಲಿಟಿಕಲ್ ವೀಕ್ಲಿ, ನವೆಂಬರ್ ೩, ೧೯೮೪
- ಕಲಬುರ್ಗಿ ಎಂ ಎಂ, ಕನ್ನಡ ಸಂಶೋಧನಾ ಶಾಸ್ತ್ರ, ಸ್ವಪ್ನ ಬುಕ್‌ಹೌಸ್, ಬೆಂಗಳೂರು, ೨೦೦೨
- ಕೃಷ್ಣನಾಯಕ ಹಿಚಕಡ (ಸಂ), ಕರಾವಳಿ ಕಾಶ್ಮೀರ - ಸ್ಮರಣ ಸಂಚಿಕೆ, ಕನ್ನಡ ಸಾಹಿತ್ಯ ಪರಿಷತ್ತು, ತಾಲೂಕು ಘಟಕ, ಕಾರವಾರ, ೨೦೦೬
- ಚಂದ್ರಶೇಖರ ಟಿ ಆರ್ (ಸಂ) ಕರ್ನಾಟಕ ಅಭಿವೃದ್ಧಿ ಮಾಹಿತಿ ಕೋಶ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯
- ಚಂದ್ರಶೇಖರ್ ಬಿ ಎಸ್, ಸಮಾಜ ವಿಜ್ಞಾನಗಳಲ್ಲಿ ಸಂಶೋಧನಾ ವಿಧಾನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧
- ಚಂದ್ರಶೇಖರ ಕಂಬಾರ, (ಪ್ರ ಸಂ), ಕನ್ನಡ ಶೈಲಿ ಕೈಪಿಡಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬
- ಚಂದ್ರಪೂಜಾರಿ ಎಂ, ಪರಿಸರ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೮
- ಚಂದ್ರಪೂಜಾರಿ ಎಂ, ಜಂಟೀ ಅರಣ್ಯ ನಿರ್ವಹಣೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫
- ಚಂದ್ರಪೂಜಾರಿ ಎಂ, ಸಂಶೋಧಕರು ಮತ್ತು ಕ್ಷೇತ್ರಕಾರ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮
- ಚಟ್‌ವಾಲ್ ಜಿ ಆರ್, ಎನ್‌ವಾಯರನ್‌ಮೆಂಟಲ್ ಅನಾಲಿಸಿಸ್, ಅನ್‌ಮೋಲ್ ಪಬ್ಲಿಕೇಷನ್ಸ್ ಪ್ರೈ. ಲಿಮಿಟೆಡ್ ನ್ಯೂಡೆಲ್ಲಿ, ೧೯೯೬
- ಚಿದಾನಂದ ಮೂರ್ತಿ ಎಂ, ಸಂಶೋಧನೆ, ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು, ೨೦೦೨
- ಜಯಕರ ಭಂಡಾರಿ ಎಂ (ಸಂ), ಎನ್‌ವಿರಾನ್‌ಮೆಂಟಲ್ ಚಾಲೆಂಜಸ್ ಆಫ್ ಟ್ವೆಂಟಿಫಸ್ಟ್ ಸೆಂಚುರಿ - ದಿ ರೋಲ್ ಆಫ್ ಅಕಾಡೆಮಿಕ್ ಇನ್‌ಸ್ಟಿಟ್ಯೂಷನ್ಸ್, ಗೌರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ ಕಾಲೇಜ್, ಕಾರವಾರ, ೨೦೦೮

- ಡಿಸೋಜಾ ನಾ, ಶರಾವತಿ ಏನೀ ಪರಿಸ್ಥಿತಿ ? ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ, ೨೦೦೫
- ದೇಸಾಯಿ ಎಂ ಎ, ಚಿತ್ತಾಕುಲ ಕಾರವಾರ್ ಎ ಹಿಸ್ಟರಿ, ಕಾರವಾರ ಪ್ರಿಂಟಿಂಗ್ ಪ್ರೆಸ್, ಕಾರವಾರ, ೧೯೫೫
- ನಾಗೇಶ್ ಎಚ್ ವಿ, ಸಾಮಾಜಿಕ ಚಳವಳಿಗಳು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯
- ನಾಗೇಶ್ ಹೆಗಡೆ, ಪಶ್ಚಿಮ ಘಟ್ಟಗಳ ಅಳಿವು ಉಳಿವು, ಪಶ್ಚಿಮಘಟ್ಟಗಳು ನೆನ್ನೆ ಇಂದು, ಮಣ್ಣು ರಕ್ಷಣಾ ಕೂಟ, ಬೆಂಗಳೂರು, ೧೯೯೩
- ನಾಗೇಶ್ ಹೆಗಡೆ, ಶಾರದ ಗೋಪಾಲ (ಸಂ), ಶತಮಾನದ ಕುಸುಮ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯
- ನಾಗೇಶ್ ಹೆಗಡೆ, ಇರುವುದೊಂದೇ ಭೂಮಿ, ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೨೦೦೫
- ನಾಗೇಶ್ ಹೆಗಡೆ, ಪ್ರತಿದಿನ ಪರಿಸರ ದಿನ, ಅಂಕಿತ ಪುಸ್ತಕ, ಬಸವನಗುಡಿ, ಬೆಂಗಳೂರು ೨೦೧೦
- ನಾಯಕ್ ವಿ.ಎನ್. ಮತ್ತು ಸುಧೀರ್ ಡಿ ನಾಯಕ್ (ಸಂ) ಸಮೃದ್ಧಿ - ಜೀವವೈವಿಧ್ಯ ಕುರಿತಾದ ಲೇಖನಗಳ ಸಂಗ್ರಹ, ಕರ್ನಾಟಕ ಜೀವ ವೈವಿಧ್ಯ ಮಂಡಳಿ, ಬೆಂಗಳೂರು, ೨೦೦೬
- ನಾಯಕ್ ವಿ ಎನ್, ಸಾಗರಕ್ಕೆ ಸಾವುಂಟೆ ? ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಬೆಂಗಳೂರು, ೨೦೦೮
- ಪ್ರಶಾಂತ್ ಹೆಚ್ ಡಿ, ಕರ್ನಾಟಕ ರಾಜ್ಯಕೋಶ:೪, ಜನಸಮುದಾಯ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೦
- ಪಾಂಡುರಂಗ ಶಾಸ್ತ್ರಿ ಮತ್ತು ಸಿ ಆರ್ ಕೃಷ್ಣರಾವ್, ದೇಶ ವಿದೇಶಗಳ ಪರಿಚಯ, ನವ ಕರ್ನಾಟಕ ಪ್ರಕಾಶನ, ಬೆಂಗಳೂರು, ೨೦೦೧
- ಪಾಂಡುರಂಗ ಹೆಗಡೆ, ಅಪ್ಪಿಕೋ : ಲೇಖನಗಳ ಸಂಕಲನ, ಸಂ : ಪ್ರಕಾಶಕರು : ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ, ೧೯೮೪
- ಪಾಂಡುರಂಗ ಹೆಗಡೆ, ಕಾಳಿಯ ಕಥೆ - ವ್ಯಥೆ (ಸಂ), ಪರಿಸರ ಸಂರಕ್ಷಣಾ ಕೇಂದ್ರ, ಶಿರಸಿ, ೨೦೦೩
- ಪಾಂಡುರಂಗ ಹೆಗಡೆ, ಚಿಪ್ಕೋ ಅಂಡ್ ಅಪ್ಪಿಕೋ : ಹೌ ದಿ ಪೀಪಲ್ ಸೇವ್ ದಿ ಟ್ರೀಸ್, ಕ್ವಾಕರ್ ಪಬ್ಲಿಕೇಷನ್, ಲಂಡನ್, ೧೯೮೨
- ಫತ್ ಅಲಿ ಲಯಿಬ್, ಅನು : ಶ್ರೀಧರ ಭಾ ವೈ, ನಮ್ಮ ಪರಿಸರ, ನ್ಯಾಷನಲ್ ಬುಕ್ ಟ್ರಸ್ಟ್ ಆಫ್ ಇಂಡಿಯಾ, ನವದೆಹಲಿ, ೧೯೯೩
- ಬಾಲ್ಡ್‌ವಿನ್ ರಿಚಾರ್ಡ್, ಡಸ್ ಸಸ್ಟೈನಿಬಿಲಿಟಿ ರಿಕ್ವಾಯರ್ ಗ್ರೋಥ್ ? ಎಕನಾಮಿಕ್ಸ್ ಆಫ್ ಸಸ್ಟೈನೆಬಲ್ ಡೆವಲಪ್‌ಮೆಂಟ್, ಇಯಾನ್ ಗೋಲ್ಡ್‌ವಿನ್ ಅಂಡ್ ಅಲಾನ್ ವಿಂಟರ್ಸ್ (ಸಂ.) ಕೇಂಬ್ರಿಜ್ ಯುನಿವರ್ಸಿಟಿ ಪ್ರೆಸ್, ಕೇಂಬ್ರಿಡ್ಜ್, ೧೯೯೫
- ಬುಕಾನಿನ್ ಎಫ್ ಡಿ, ಎ ಜರ್ನಿ ಫ್ರಮ್ ಮದ್ರಾಸ್ ಥ್ರೂ ದಿ ಕಂಟ್ರೀಸ್ ಆಫ್ ಮೈಸೂರ್ ಕೆನರಾ ಅಂಡ್ ಮಲಬಾರ್, ವ್ಯಾಲೂಂ ೨, ಬಲ್ಮಾರ್ ಅಂಡ್ ಕಂ. ಲಂಡನ್, ೧೮೭೦

- ಬುಚ್ ಎಂ ಎನ್, ಅನು : ನಾಗೇಶ ಹೆಗಡೆ , ಪರಿಸರ ಪ್ರಜ್ಞೆ - ನಗರ ನಿರ್ಮಾಣ, ಓರಿಯಂಟ್ ಲಾಂಗ್‌ಮೆನ್, ೧೯೯೩
- ಭಂಡಾರಕರ ಎಂ ಎನ್, ಕಾರವಾರ ಜಿಲ್ಲಾ ದರ್ಶನ, ಶ್ರೀರಾಮ ಪ್ರಿಂಟಿಂಗ್ ಪ್ರೆಸ್, ಕಾರವಾರ, ೧೯೫೯
- ಭರತ್ ದೊಗ್ರ, ಉತ್ತರ ಕನ್ನಡ (ಪೋಟ್ ರೈಟ್ ಆಫ್ ಎನ್ ಎನ್‌ಡೇಂಜರ್ಡ್ ಡಿಸ್ಟ್ರಿಕ್ಟ್) ಭರತ್ ದೊಗ್ರ ಪ್ರಕಾಶನ, ನ್ಯೂಡೆಲ್ಲಿ, ೧೯೯೨
- ಭರತ್‌ಲಾಲ್ ಮೀನಾ. (ಸಂ), ಸ್ವರ್ಣದರ್ಪಣ, ಸ್ವಾತಂತ್ರ್ಯ ಸುವರ್ಣ ಮಹೋತ್ಸವ ಸಮಿತಿ ಹಾಗೂ ಜಿಲ್ಲಾಡಳಿತ, ಉತ್ತರ ಕನ್ನಡ, ಕಾರವಾರ, ೧೯೯೮
- ಭಾರತಿ ಭಟ್, ಬೇಡ್ತಿ ಚಳವಳಿ ಸಾಗಿ ಬಂದ ದಾರಿ, ಉತ್ತರ ಕನ್ನಡ ಜಿಲ್ಲಾ ಜಲವಿದ್ಯುತ್ ಯೋಜನಾ ವಿರೋಧಿ ಸಮಿತಿ, ಶಿರಸಿ, ೧೯೯೫
- ಭೈರಪ್ಪ ಕೆ, ಸುಂದರ ಪರಿಸರ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು, ೨೦೦೪
- ಭೈರಪ್ಪ ಕೆ, ಪರಿಸರ ಪ್ರಜ್ಞೆ, ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೨೦೦೪
- ಮಹಮದ್ ಟಿ ಕೆ, (ಸಂ), ಉತ್ತರ ಕನ್ನಡ ಜಿಲ್ಲಾ ದರ್ಶನ, ಕಾರವಾರ, ೧೯೯೨
- ಮಾಧವ ಐತಾಳ, ಜಾಗತಿಕ ಪರಿಸರ ಚರಿತ್ರೆ - ಪರಿಸರ ಸಿದ್ಧಾಂತಗಳ ಅಂತರ್ ಸಾಂಸ್ಕೃತಿಕ ಅಧ್ಯಯನ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೯೯
- ಮೋಹನ್‌ಕೃಷ್ಣ ರೈ ಕೆ, ಪರಿಸರ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯
- ಯಲ್ಲಪ್ಪ ರೆಡ್ಡಿ ಅ ನ, ಅರಸುಯುಗದ ಅರಣ್ಯಪರ್ವ, ಅಭಿಮಾನಿ ಪ್ರಕಾಶನ, ಬೆಂಗಳೂರು, ೨೦೦೧
- ರಮಾದೇವಿ ಪಾಣಿ ಸಿಸ್ಟಲಾ (ಸಂ), ಎನ್‌ವಾಯರನ್‌ಮೆಂಟಲ್ ಅಂಡ್ ಗ್ಲೋಬಲ್ ವಾರ್ಮಿಂಗ್, ಸ್ಪೆಷಲ್ ಇಸ್ಯೂ - ಯುನಿವರ್ಸಿಟಿ ನ್ಯೂಸ್, ವಾಲ್ಯೂಂ ೪೫, ನವೆಂಬರ್ ೨೦೦೬
- ರವಿಕುಮಾರ್ ಎನ್ (ಪ್ರ ಸಂ), ಕದಳೀವನ ಕರ್ಪೂರ, ಅಭಿನವ ಪ್ರಕಾಶನ, ಬೆಂಗಳೂರು, ೧೯೯೬
- ರವೀಂದ್ರನಾಥ್ ಕೆ, ಅಧ್ಯಯನದ ವಿಧಿ ವಿಧಾನಗಳು (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೮
- ರಾಜಶೇಖರ್ ಜಿ, ಸಮಾಜವಾದ ಮತ್ತು ಪರಿಸರ (ವಿಲಿಯಂ ರೇಮಂಡ್ಸ್‌ರವರ ಸೋಶ್ಯಾಲಿಸಂ ಅಂಡ್ ಎನ್‌ವಾಯರನ್‌ಮೆಂಟ್‌ನ ಅನುವಾದ), ಸ್ನೇಹಿತರ ಬಳಗ ಪ್ರಕಾಶನ, ಉಡುಪಿ, ೧೯೮೬
- ರಾಮಚಂದ್ರ ಗುಹಾ, (ಸಂ) ಸೋಷಿಯಲ್ ಇಕಾಲಜಿ, ಆಕ್ಸ್‌ಫರ್ಡ್ ಯುನಿವರ್ಸಿಟಿ ಪ್ರೆಸ್, ನವದೆಹಲಿ, ೧೯೯೪
- ರಾಮಚಂದ್ರ ಗುಹಾ, ಪರಿಸರವಾದ ಹಿನ್ನೋಟ, ಅನು : ಜಶವಂತ ಜಾಧವ, ನೀನಾಸಂ ಮಾತುಕತೆ, ಹೆಗ್ಗೋಡು, ಸಾಗರ, ೧೯೯೯
- ರಾವ್ ಎನ್ ಆರ್, ಪರಿಸರ ಮತ್ತು ಅಭಿವೃದ್ಧಿ - ಕೆಲವು ಸಮಸ್ಯಾಮುಖಗಳ ಅಧ್ಯಯನ, ನಂ. ೨೨, ಎನ್.ಜಿ., ಇ.ಎಫ್., ಕಾಲನಿ, ಬೆಂಗಳೂರು ೧೯೯೫

- ವಂದನಾ ಶಿವಾ, ಬತ್ತದ ಚಿಲುಮೆ, ಕನ್ನಡಕ್ಕೆ : ಮಾಧವ ಐತಾಳ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫
- ವಾಸುಕಿ ಕೆ ಜಿ, ಕರ್ನಾಟಕದ ಪರಿಸರ, ಕನ್ನಡ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೫
- ವಿಜಯ್ ತಂಬಡ ಪೂಣಚ್ಚ, (ಸಂ), ಚರಿತ್ರೆ ವಿಶ್ವಕೋಶ : ೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧
- ವಿಷ್ಣು ನಾಯ್ಕ, ದುಡಿಯುವ ಕೈಗಳ ಹೋರಾಟದ ಕತೆ, ಡಾ. ದಿನಕರ ದೇಸಾಯಿ ಸ್ಮಾರಕ ಪ್ರತಿಷ್ಠಾನ (ರಿ), ಅಂಕೋಲ, ಉತ್ತರ ಕನ್ನಡ, ೨೦೦೪
- ವಿಷ್ಣು ನಾಯ್ಕ, ಉತ್ತರ ಕನ್ನಡ ಮೆಲುಕು - ಮುನ್ನೋಟ, ಶ್ರೀ ರಾಘವೇಂದ್ರ ಪ್ರಕಾಶನ, ಅಂಕೋಲ, ಉತ್ತರ ಕನ್ನಡ, ೨೦೦೭
- ವಿರೂಪಾಕ್ಷಿ ಪೂಜಾರಹಳ್ಳಿ, ಜಲಸಂಬಂಧಿ ಚಳವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯
- ವಿವೇಕಾನಂದ ಟಿ ಎಸ್, ಭೂಮಿಗೀತೆ, ಇಂದ್ರಪ್ರಸ್ಥ ಪ್ರಕಾಶನ, ಬೆಂಗಳೂರು, ೨೦೦೫
- ವಿಶ್ವೇಶ್ವರಯ್ಯ ಎಂ, ಪ್ಲಾನಡ್ ಎಕಾನಮಿ ಫಾರ್ ಇಂಡಿಯಾ, ಬೆಂಗಳೂರು ಪ್ರೆಸ್, ೧೯೩೬
- ವೀರಪ್ಪ ಕೆ ಎಂ, ಪರಿಸರ ಸಂರಕ್ಷಣಾ ಕಾಯಿದೆಗಳು ೧೯೮೬, ಪ್ರಸಾರಾಂಗ,ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೬
- ಶಂಕರನಾರಾಯಣ ರಾವ್. ಎನ್.ಪಿ., ಸ್ವಾತಂತ್ರ್ಯಗಂಗೆಯ ಸಾವಿರ ತೊರೆಗಳು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈ.ಲಿ., ಬೆಂಗಳೂರು, ೧೯೯೯
- ಶಾರದ ಗೋಪಾಲ, ಪರಿಸರ ನ್ಯಾಯದ ತಕ್ಕಡಿಯಲ್ಲಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೩
- ಶಿವರಾಮಕಾರಂತ ಕೆ, ಭಾರತದ ಪರಿಸರದ ಪರಿಸ್ಥಿತಿ (ಡಾ. ಕೆ.ಎಸ್. ಕಾರಂತ್‌ರವರ ದಿ ಸ್ಟೇಟ್ ಆಫ್ ಇಂಡಿಯಾನ್ ಎನ್‌ವಿರಾನ್‌ಮೆಂಟ್‌ನ ಅನುವಾದ) ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ, ೧೯೮೨
- ಶಿವರಾಮ ಕಾರಂತ ಕೆ, (ಸಂಗ್ರಹಾನುವಾದ) ಭಾರತದ ಪರಿಸರ - ದ್ವಿತೀಯ ಸಮೀಕ್ಷೆ ೧೯೮೫-೮೬, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೮೬
- ಶಿವಾನಂದ ಕಳವೆ, ಕಾಡುನೆಲದ ಕಾಲಮಾನ, ಮಿತ್ರಮಾಧ್ಯಮ, ಬೆಂಗಳೂರು ೨೦೦೨
- ಶಿವಾನಂದ ಕಳವೆ, ಕಾಲುದಾರಿಯ ದಾಖಲೆ, ಕಾವ್ಯಕಲಾ ಪ್ರಕಾಶನ, ಬೆಂಗಳೂರು, ೨೦೦೩
- ಶಿವಾನಂದ ಕಳವೆ, ಪಶ್ಚಿಮ ಘಟ್ಟದಲ್ಲಿ ಮೊನೋಕಲ್ಚರ್ ಮಹಾಯಾನ, ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು, ೨೦೦೩
- ಶಿವಾನಂದ ಕಳವೆ, ಅರಣ್ಯ (ದೇಶಿ ಕೃಷಿ ಜ್ಞಾನ ಸಂ.) ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು, ೨೦೦೮
- ಶಿವಾನಂದ ಕಳವೆ, ಮಳೆ ಮನೆಯ ಮಾತುಕತೆ (ಜಲಸಂರಕ್ಷಣೆಗೆ ಜಾಗೃತಿ) ಧಾತ್ರಿ ಪುಸ್ತಕ, ಬೆಂಗಳೂರು, ೨೦೦೨

* ಶಿವಾನಂದ ಕಳವೆ, ಹಸುರು ಪುಸ್ತಕದ ಹಳೆಯ ಪುಟಗಳು (ಕೃಷಿ-ಪರಿಸರ ಕುರಿತ ಬರಹ) ಧಾತ್ರಿ ಪುಸ್ತಕ, ಬೆಂಗಳೂರು, ೨೦೦೮
* ಶೂದ್ರ ಶ್ರೀನಿವಾಸ್ (ಸಂ), ನೆಲದ ಮಾತು, ಅ.ನ. ಯಲ್ಲಪ್ಪ ರೆಡ್ಡಿ ಅಭಿನಂದನಾ ಗ್ರಂಥ, ಶೂದ್ರ ಪ್ರಕಾಶನ, ಜೆ.ಪಿ. ನಗರ, ಬೆಂಗಳೂರು, ೨೦೦೨
* ಶೇಷಗಿರಿ ರಾವ್ ಡಿ, ಪರಿಸರ ಪಾಲನೆ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೯೨
* ಶ್ರೀನಿವಾಸ ಎಂ ಎನ್, ಕಾಸ್ಟ್ ಇನ್ ಮಾಡರ್ನ್ ಇಂಡಿಯಾ ಅಂಡ್ ಅದರ್ ಎಸ್ಸೇಸ್, ಏಷ್ಯಾ ಪಬ್ಲಿಷಿಂಗ್ ಹೌಸ್, ಕಲ್ಕತ್ತಾ, ೧೯೯೨
* ಸತೀಶ್ ಚಪ್ಪರಿಕೆ ಹಾಗೂ ಯಲ್ಲಪ್ಪರೆಡ್ಡಿ ಅ ನ, ಮತ್ತೊಂದು ಮೌನಕಣಿವೆ, ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೧೯೯೩
* ಸದಾನಂದ ಕನವಳ್ಳಿ, ಕಿತ್ತಿಕೋ ಹಚ್ಚಿಕೋ ಸತ್ಯಾಗ್ರಹ, ಸಮಾಜ ಪರಿವರ್ತನ ಸಮುದಾಯ, ಧಾರವಾಡ ೧೯೯೩
* ಸಬಿಹಾ ಭೂಮಿಗೌಡ, (ಸಂ) ನಾವು ಮತ್ತು ನಮ್ಮ ಪರಿಸರ, ಡಾ. ಕೆ. ಶಿವರಾಮ ಕಾರಂತ ಪೀಠ, ಮಂಗಳೂರು ವಿಶ್ವವಿದ್ಯಾಲಯ, ಮಂಗಳೂರು, ೨೦೦೪
* ಸಿಲ್ವಾ ಎಸ್, ಜಿಲ್ಲಾದರ್ಶನ, ಶ್ರೀರಾಮ ಪ್ರಿಂಟಿಂಗ್ ಪ್ರೆಸ್, ಕಾರವಾರ, ೧೯೪೪
* ಹರಿಕಾಂತ ಟಿ ಬಿ (ಸಂ), ಹಸಿರ್ಗಡಲು - ಸ್ಮರಣ ಸಂಚಿಕೆ, ಕರಾವಳಿ ಉತ್ಸವ, ೨೦೦೮, ಕಾರವಾರ, ೨೦೦೮
* ಹಾಬ್ಸ್‌ವಾಮ್, ಇ.ಜೆ., ದಿ ಏಜ್ ಆಫ್ ಕ್ಯಾಪಿಟಲ್, ರೂಪ ಅಂಡ್ ಕಂಪನಿ, ಮುಂಬಯಿ, ೧೯೯೨

❑ ❑ ❑

ಲೇಖನ ಸೂಚಿ

- ಅನಂತ ಹೆಗಡೆ ಅಶೀಸರ ಹಾಗೂ ಕೇಶವ ಕೊರ್ಸೆ ಎಚ್, ಅಭಿವೃದ್ಧಿಯ ಅಂಧಯುಗದಲ್ಲಿಸಹ್ಯಾದ್ರಿ;ಬೆಳಕಿನ ದಾರಿಯೆಂತು ? ಸಂ : ವಿವಿಧ ಲೇಖಕರು, ಸಂಕುಲ ಪ್ರಕಾಶನ, ಬೆಂಗಳೂರು, ೨೦೦೮
- ಗೌರೀಶ ಗಾಂವಕರ, 'ಉತ್ತರ ಕನ್ನಡ ಜಿಲ್ಲೆಯಲ್ಲಿ ಮೂಡಿಬಂದ ಚಾರಿತ್ರಿಕ ಹೆಜ್ಜೆ ಗುರುತುಗಳು', ಸ್ವರ್ಣದರ್ಪಣ, ಸಂ : ಭರತ್‌ಲಾಲ್ ಮೀನಾ, ಜಿಲ್ಲಾಡಳಿತ, ಉತ್ತರ ಕನ್ನಡ, ೧೯೯೮
- ಪ್ರಭಾಕರ ಆಚಾರ್ ಕೆ, 'ಪಶ್ಚಿಮ ಘಟ್ಟ - ಪಶ್ಚಿಮ ಕರಾವಳಿಯ ಜೀವವೈವಿಧ್ಯ', ನಾವು ಮತ್ತು ನಮ್ಮ ಪರಿಸರ, ಸಂ : ಸಬಿಹಾ ಭೂಮಿಗೌಡ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ೨೦೦೪
- ಬುಚ್ ಎಂ.ಎನ್, 'ಜನಸಂಖ್ಯೆ ಮತ್ತು ಪರಿಸರ' (ಅನು : ಪ್ರಿಸಂ), ಕದಳೀವನ ಕರ್ಪೂರ, ಸಂ : ವಿವಿಧ ಲೇಖಕರು, ಅಭಿನವ, ಬೆಂಗಳೂರು, ೧೯೯೭
- ಮಾಧವ ಐತಾಳ್, 'ಉಪಭೋಗಿ ಸಂಸ್ಕೃತಿ ಮತ್ತು ಪರಿಸರ', ಕದಳೀವನ ಕರ್ಪೂರ, ಸಂ : ವಿವಿಧ ಲೇಖಕರು, ಅಭಿನವ, ಬೆಂಗಳೂರು, ೧೯೯೬
- ಮೇಧಾ ಪಾಟ್ಕರ್, 'ನರ್ಮದೆಯ ಗೋಳು' (ಅನು : ಶೈಲಜ ವಿ), ಕದಳೀವನ ಕರ್ಪೂರ, ಸಂ : ವಿವಿಧ ಲೇಖಕರು, ಅಭಿನವ, ಬೆಂಗಳೂರು, ೧೯೯೬
- ಮೋಹನ ಭಟ್ಟ, 'ಉತ್ತರ ಕನ್ನಡ ಜಿಲ್ಲೆಯ ಪರಿಸರ ಹಾಗೂ ಅಭಿವೃದ್ಧಿ - ಒಂದು ಚಿಂತನ', ಸ್ವರ್ಣದರ್ಪಣ, ಸಂ : ಭರತ್‌ಲಾಲ್ ಮೀನಾ, ಜಿಲ್ಲಾಡಳಿತ, ಉತ್ತರ ಕನ್ನಡ, ೧೯೯೮
- ರಾಮಚಂದ್ರ ಗುಹಾ, ಪರಿಸರವಾದದ ಹಿನ್ನೋಟ ; ಅನುವಾದ : ಜಯಂತ ಜಾಧವ, ನೀನಾಸಂ ಮಾತುಕತೆ, ಆಗಸ್ಟ್, ೧೯೯೯
- ವಿದ್ಯಾ ನಾಯಕ್, 'ಪರಿಸರ ಸಂರಕ್ಷಣಾ ಚಳವಳಿಗಳು ಮತ್ತು ಮಹಿಳೆ', ನಾವು ಮತ್ತು ನಮ್ಮ ಪರಿಸರ, ಸಂ : ಸಬಿಹಾ ಭೂಮಿ ಗೌಡ, ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳೂರು, ೨೦೦೪
- ಶಾಂತಾರಾಮ ನಾಯಕ, 'ಸ್ವಾತಂತ್ರ್ಯ ಸಂಗ್ರಾಮ - ಉತ್ತರ ಕನ್ನಡ ಜಿಲ್ಲೆ', ಹಸಿರ್ಗಡಲು, ಸಂ : ಟಿ.ಬಿ. ಹರಿಕಾಂತ, ಕರಾವಳಿ ಉತ್ಸವ ಸಮಿತಿ, ಉತ್ತರ ಕನ್ನಡ, ಕಾರವಾರ ೨೦೦೮
- ಶಿವಾನಂದ ಕಳವೆ, ಒಂದು ಹಸುರಿನ ತುಂಡು ಹಾಗೂ ಪರಿಸರ ಸಂವಹನ ಬಿಕ್ಕಟ್ಟುಗಳು, ಸಂ : ವಿವಿಧ ಲೇಖಕರು, ಸಂಕುಲ ಪ್ರಕಾಶನ, ಬೆಂಗಳೂರು, ೨೦೦೮
- ಸದಾಶಿವ ವೈ, 'ಉತ್ತರ ಕನ್ನಡ ಜಿಲ್ಲೆಯಲ್ಲಿ ಕೈಗಾರಿಕೆಗಳು ನಡೆದು ಬಂದ ದಾರಿ', ಸ್ವರ್ಣ ದರ್ಪಣ, ಸಂ : ಭರತ್‌ಲಾಲ್ ಮೀನಾ, ಜಿಲ್ಲಾಡಳಿತ, ಉತ್ತರ ಕನ್ನಡ, ೧೯೯೮

❑ ❑ ❑

ಪತ್ರಿಕಾ ಸೂಚಿ

- ಅನಂತರಾಮು ಟಿ ಆರ್, ಗಣಿಗಾರಿಕೆಯ ನೀತಿಗಳು ಎತ್ತ ಸಾಗಿವೆ ? ಧರಣಿಮಂಡಲ, ತುಮಕೂರು, ಸಂಪುಟ ೧, ಸಂಚಿಕೆ ೧, ಫೆಬ್ರವರಿ ೨೦೦೯
- ಅನಂತ ಹೆಗಡೆ ಅಶೀಸರ, ಹಸಿರುಳಿಸಲು ಹೋರಾಟದ ಹೆದ್ದಾರಿ, ಧ್ಯೇಯ ನಿಷ್ಠ ಪತ್ರಕರ್ತ, ಶತಮಾನ ವಿಶೇಷಾಂಕ, ಶಿರಸಿ ೨೦೦೦
- ಅನಂತ ಹೆಗಡೆ ಅಶೀಸರ, ಪಶ್ಚಿಮಘಟ್ಟ ಉಳಿಸಿ, ಧರಣಿಮಂಡಲ, ತುಮಕೂರು, ಸಂಪುಟ ೧, ಸಂಚಿಕೆ ೧, ಫೆಬ್ರವರಿ ೨೦೦೯
- ಅನಂತ ಹೆಗಡೆ ಅಶೀಸರ, ಪಶ್ಚಿಮಘಟ್ಟ ಕಾರ್ಯಪಡೆಯು ಸರ್ಕಾರಕ್ಕೆ ಸಲ್ಲಿಸುತ್ತಿರುವ ಪ್ರಮುಖ ಶಿಫಾರಸ್ಸುಗಳು, ಧರಣಿ ಮಂಡಲ, ಸಂಪುಟ ೨, ಸಂಚಿಕೆ ೨, ತುಮಕೂರು ೨೦ನೇ ಏಪ್ರಿಲ್ ೨೦೧೦
- ಓಮ್‌ವೆಟ್ ಗೈಲ್, ಇಕಾಲಜಿ ಅಂಡ್ ಸೋಷಿಯಲ್ ಮೂವ್‌ಮೆಂಟ್ಸ್, ಇಕಾನ್‌ಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ನವೆಂಬರ್ ೩, ೧೯೮೪
- ಕಿಶೋರ್‌ಕುಮಾರ್ ಎಚ್ ಎ ನಾಯಕರಲ್ಲ, ಜನ ಎಚ್ಚೆತ್ತುಕೊಂಡು ಈ ಭೂಮಿಯ ಜೀವಸಂಕುಲ ಉಳಿಸಬೇಕಾಗಿದೆ ; ಸುಂದರಲಾಲ್ ಬಹುಗುಣ, ಧರಣಿಮಂಡಲ ಸಂಪುಟ ೨, ಸಂಚಿಕೆ ೧, ತುಮಕೂರು ೨೮ನೇ ಫೆಬ್ರವರಿ ೨೦೧೦
- ಗಣಪತಿ ಬಿ, ದಿಕ್ಕೆಟ್ಟ ಯೋಜನೆಗಳ ಭಾರದಿಂದ ಉತ್ತರ ಕನ್ನಡ ಜಿಲ್ಲೆ ಧ್ವಂಸ ಆಗಲಿದೆಯೇ... ? ತರಂಗ, ೧೩ನೇ ಡಿಸೆಂಬರ್ ೧೯೯೨
- ಗಣಪತಿ ಬಿ, ಕೈಗಾ ಮರಣ ಗಂಟೆ ಬಾರಿಸುತ್ತಿದೆಯೇ ? ತರಂಗ ೧೯ನೇ ಜೂನ್, ೧೯೯೪
- ಗಣಪತಿ ಬಿ, ಕೈಗಾ ಗೋರಿ ಆಗಬೇಕೆ ? ಬೇಡವೆ ? ತರಂಗ ೨ನೇ ಅಕ್ಟೋಬರ್ ೧೯೯೪
- ಗಣಪತಿ ಬಿ, ಕೊಡಸಳ್ಳಿ ಅಣೆಕಟ್ಟು - ಕಣ್ಣೀರ ಕತೆ, ತರಂಗ, ಆಗಸ್ಟ್ ೧೬, ೧೯೯೮
- ಗಣಪತಿ ಬಿ, ಸೀಬರ್ಡ್ ನೌಕಾನೆಲೆ, ತರಂಗ, ಮಾರ್ಚ್ ೧೧, ೧೯೯೯
- ಗಣಪತಿ ಬಿ, ಸೀಬರ್ಡ್ ನೌಕಾನೆಲೆ - ಹೆಪ್ಪುಗಟ್ಟಿದೆ ನಿರಾಶ್ರಿತರ ಅಳಲು - ಅಹವಾಲು ತರಂಗ, ೧೮ನೇ ಮಾರ್ಚ್ ೧೯೯೯
- ಗಣೇಶ್ ನಾಡೋರ ಪಿ, ಕಾಳಿಯ ಒಡಲಿಗೆ 'ಕಾಗದದ ಕಿಚ್ಚು', ಪ್ರಜಾವಾಣಿ ೫ನೇ ಜೂನ್, ೨೦೦೩
- ಜಯಕರ ಭಂಡಾರಿ ಮತ್ತು ನಾಯಕ ವಿ ಎನ್, ಕರ್ನಾಟಕದ ಕರಾವಳಿಯಲ್ಲೊಂದು ಸಾಗರ ಜೀವಿಗಳ ವಿಸ್ಮಯ ಲೋಕ - ನೇತ್ರಾಣಿ ದ್ವೀಪ, ಧರಣಿಮಂಡಲ, ತುಮಕೂರು ಸಂಪುಟ ೧, ಸಂಚಿಕೆ ೨, ಜೂನ್ ೨೦೦೯
- ಜಯಂಕರ ಭಂಡಾರಿ ಎಂ, ಆಪತ್ತಿನಲ್ಲಿ ಕಾಳಿ ಕೊಳ್ಳದ ಜೀವ ಜಾಲ, ಧರಣಿಮಂಡಲ, ತುಮಕೂರು, ಸಂಪುಟ ೧, ಸಂಚಿಕೆ ೪, ಅಕ್ಟೋಬರ್ ೨೦೦೯

- ಜಯಕರ ಭಂಡಾರಿ ಎಂ, ಸುಸ್ಥಿರ ಅಭಿವೃದ್ಧಿ : ಯಾವುದು ಸುಸ್ಥಿರವಾಗಿರಬೇಕು ? ಯಾವುದು ಅಭಿವೃದ್ಧಿಯಾಗಬೇಕು ? ಧರಣಿಮಂಡಲ, ಸಂಪುಟ ೨, ಸಂಚಿಕೆ ೩, ತುಮಕೂರು, ೩೦ನೇ ಜೂನ್ ೨೦೧೦
- ತಿಲಕನಾಥ ಮಂಜೇಶ್ವರ, ಬಂತೈ ಬಂತೈ ಕೊಂಕಣ ರೈಲು, ತರಂಗ ವಾರಪತ್ರಿಕೆ, ೨೨ನೇ ಜೂನ್ ೧೯೯೭
- ತುಮರಿ ಯು ಎಂ, ಶರಾವತಿಯಿಂದ ಇನ್ನಷ್ಟು ಬೆಳಕು, ಪ್ರಜಾವಾಣಿ, ೭ನೇ ಡಿಸೆಂಬರ್ ೨೦೦೭
- ನಾಗೇಂದ್ರ ಖಾರ್ವಿ, ಪರಿಹಾರ ಕಾಣದ ಅಕ್ರಮ - ಸಕ್ರಮ ಸಮಸ್ಯೆ, ಪ್ರಜಾವಾಣಿ, ೮ನೇ ಜನವರಿ ೨೦೦೯
- ನಾಗೇಂದ್ರ ಖಾರ್ವಿ, ಕೊಡಸಳ್ಳಿ ನಿರಾಶ್ರಿತರಿಗೆ ಪರಿಹಾರ ದಕ್ಕೀತೆ ? ಪ್ರಜಾವಾಣಿ ೩೦ನೇ, ಜೂನ್, ೨೦೦೯
- ನಾಗೇಂದ್ರ ಖಾರ್ವಿ, ಯೋಜನೆಗಳ ಭಾರದಿಂದ ನಲುಗುತ್ತಿದೆ ಜಿಲ್ಲೆ, ಪ್ರಜಾವಾಣಿ ೧೩ನೇ ಆಗಸ್ಟ್, ೨೦೦೯
- ನಾಗೇಂದ್ರ ಖಾರ್ವಿ, ವಿದ್ಯುತ್ತಿನ ನಾಡು ಜಲಪಾತಗಳ ಬೀಡು, ಪ್ರಜಾವಾಣಿ ೨೫ನೇ ಫೆಬ್ರವರಿ ೨೦೧೦
- ಪ್ರಕಾಶ್ ಕೆ ಆರ್, ಕೇಳಿ ಕಾಳಿಯ ಕತೆ ಕೇಳಿ, ಕರ್ಮವೀರ, ೧೫ನೇ ಜೂನ್, ೨೦೦೩
- ಪ್ರಹ್ಲಾದ್ ಎನ್ ಬಿ, ಕರಾವಳಿ ತಳಮಳ, ಪ್ರಜಾವಾಣಿ ೨೧ನೇ ಮೇ ೨೦೦೬
- ಬಾಲಕೃಷ್ಣ ಎಂ ಜಿ, 'ದಾಖಲೆ ಬರೆದ ಕೈಗಾ' ಪ್ರಜಾವಾಣಿ, ೬ನೇ ಮಾರ್ಚ್ ೨೦೦೭
- ಯತಿರಾಜು ಸಿ, ಜಗದ ಸಂಕಟಗಳಿಗೆ ಮಾತಿನ ಮುರುಕು ಮಂಟಪದ ಸಾಂತ್ವನ!ಧರಣಿಮಂಡಲ, ತುಮಕೂರು, ಸಂಪುಟ ೧, ಸಂಚಿಕೆ ೫, ಡಿಸೆಂಬರ್, ೨೦೦೯
- ರಂಗರಾಜನ್, ಸರ್ವೆ ಆಫ್ ದ ಎನ್‌ವಿರಾನ್‌ಮೆಂಟ್, ದಿ ಹಿಂದೂ, ಮದ್ರಾಸ್, ೧೯೯೩
- ರಘುನಂದನ ಭಟ್, ಬೃಹತ್ ತಂತಿ ಮಾರ್ಗ, ವನ್ಯ ವಿಪತ್ತಿನ ಹಾದಿ, ಪ್ರಜಾವಾಣಿ ೨ನೇ, ಫೆಬ್ರವರಿ, ೨೦೦೬
- ರವಿಶರ್ಮಾ, ದಿನೇವಿ, : ಫಾರ್ ಎ ಬೇಸ್ ಅಟ್ ಕಾರವಾರ, ಫ್ರಂಟ್ ಲೈನ್, ಸಂಪುಟ ೧೫, ೧೯೯೮
- ರಾಜಶೇಖರ ಹೆಬ್ಬಾರ (ಸಂ), ಉತ್ತರ ಕನ್ನಡ ಜಿಲ್ಲೆಯಲ್ಲಿ ರಾಷ್ಟ್ರೀಯ ಚಳವಳಿ, ಧ್ಯೇಯನಿಷ್ಠ ಪತ್ರಕರ್ತ, ಪಾಕ್ಷಿಕ ಪುರವಣಿ, ನವಿಲುಗರಿ, ಶಿರಸಿ ೧೫-೮-೧೯೯೭
- ರಾಮಕೃಷ್ಣ ವೈ ಬಿ, ಕೈಗಾ ಕೈಗಾ ಎಲ್ಲಿಯವರೆಗೆ ? ಕ್ಯಾನ್ಸರ್ ಹತ್ತಿ ಸಾಯೋವರೆಗೆ ! ಧರಣಿಮಂಡಲ, ತುಮಕೂರು, ಸಂಪುಟ ೧, ಸಂಚಿಕೆ ೫, ಡಿಸೆಂಬರ್ ೨೦೦೯
- ರಾಮಕೃಷ್ಣ ವೈ ಬಿ (ಕನ್ನಡಕ್ಕೆ : ಎನ್.ಪಿ. ನಾಗರಾಜ್) ಪಶ್ಚಿಮ ಘಟ್ಟದ ದೊಡ್ಡ ಅಣೆಕಟ್ಟುಗಳು ; ಸಾಮಾಜಿಕ ಪರಿಣಾಮಗಳು ಹಾಗೂ ಪರಿಸರದ ಅಸಮತೋಲನ, ಧರಣಿಮಂಡಲ-ದ್ವೈಮಾಸಿಕ, ಸಂ.ವಿ., ಸಂಚಿಕೆ ೨, ತುಮಕೂರು, ಏಪ್ರಿಲ್ ೨೦೧೦
- ರಾಮಚಂದ್ರ ಗುಹಾ, ಪ್ರಿ ಹಿಸ್ಟರಿ ಆಫ್ ಇಂಡಿಯನ್ ಎನ್‌ವಿರಾನ್‌ಮೆಂಟಲಿಸಂ ; ಇಂಟಲೆಕ್ಚುಯಲ್ ಟ್ರೆಡಿಷನ್ಸ್, ಇಕಾನಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ೪-೧೧ ಜನವರಿ, ೧೯೯೨
- ಲಕ್ಷ್ಮಣ ನಾಯ್ಕ ಟಿ, 'ಮೇಲೆ ಖಾಲಿ, ಕೆಳಗೆ ಕಾಳಿ ; ಪ್ರಜಾವಾಣಿ, ೨೨ನೇ ಮೇ, ೨೦೦೩
- ಲಕ್ಷ್ಮಣ ನಾಯ್ಕ ಟಿ, ಬೇಡ್ತಿ - ವರದಾ ನದಿ ಜೋಡಣೆ ಜಲಮಾಲಿನ್ಯದ ನಾಶ, ಪ್ರಜಾವಾಣಿ ೭ನೇ ಡಿಸೆಂಬರ್ ೨೦೦೭
- ವಿಷ್ಣು ನಾಯ್ಕ, ಉತ್ತರ ಕನ್ನಡದ ಪರಿಸರ ಮತ್ತು ಅಭಿವೃದ್ಧಿ, ಧ್ಯೇಯನಿಷ್ಠ ಪತ್ರಕರ್ತ, ಪಾಕ್ಷಿಕ ಪುರವಣಿ ನವಿಲುಗರಿ, ಶಿರಸಿ, ೨೩-೧-೧೯೯೯

- ಶರ್ಮಾ ಎಸ್ ಎಸ್, ಬಣ್ಣ ಬದಲಿಸುತ್ತಲೇ ಹೋದ ಪರಿಸರ ಹೋರಾಟ, ಉದಯವಾಣಿ ದೈನಿಕ, ೫ನೇ ಆಗಸ್ಟ್, ೨೦೦೮
- ಶಿವಾನಂದ ಮೂರ್ತಿ ಹೆಚ್ ಜಿ, ಉತ್ತರ ಕನ್ನಡ ಜಿಲ್ಲೆಯಲ್ಲಿ ಗ್ರಾಮೀಣಾಭಿವೃದ್ಧಿ, ಕರ್ನಾಟಕ ವಿಕಾಸ, ಅಕ್ಟೋಬರ್ ೨೦೦೭
- ಶ್ರೀಧರ ಕಾಮತ್, ಉತ್ತರ ಕನ್ನಡಕ್ಕೆ ಬೇಕು ಸರ್ವಾಂಗೀಣ ಅಭಿವೃದ್ಧಿಗೊಂದು ಸಮಗ್ರ ಯೋಜನೆ, ಧ್ಯೇಯನಿಷ್ಠ ಪತ್ರಕರ್ತ, ಪಾಕ್ಷಿಕ ಪುರವಣಿ ನವಿಲುಗರಿ, ೨೫-೧-೧೯೯೮
- ಶ್ರೀಧರ ಮಂಗಳೂರ, ೨೫ ಪೂರೈಸಿದ 'ಅಪ್ಪಿಕೋ' ಸಾಧನೆಯ ಮೆಲುಕು, ಲೋಕಧ್ವನಿ, ಶಿರಸಿ, ೭ನೇ ಸೆಪ್ಟೆಂಬರ್, ೨೦೦೮
- ಶ್ರೀರಂಗ ಕಟ್ಟಿ, ಕೊಡಸಳ್ಳಿಯ ಕರ್ಮಭೂಮಿಗೆ ಅಂತಿಮ ವಿದಾಯ, ಸುಧಾ ವಾರಪತ್ರಿಕೆ, ೯ನೇ ಆಗಸ್ಟ್ ೧೯೯೮
- ಸಂತೋಷ್‌ಕುಮಾರ್ ಮೆಹಂದಳೆ, ಬರಲಿದೆ ಇನ್ನೊಂದು ಉಷ್ಣವಿದ್ಯುತ್ ಸ್ಥಾವರ, ಪ್ರಜಾವಾಣಿ ದೈನಿಕ, ೭ನೇ ಆಗಸ್ಟ್ ೨೦೦೮
- ಸದಾನಂದ ಜೆ ಎಸ್ ಹಾಗೂ ಚಿದಾನಂದ ಆರ್ ಜಿ, ಕರ್ನಾಟಕದಲ್ಲಿ ಪ್ರಾದೇಶಿಕ ಅಸಮತೋಲನ ಮತ್ತು ಪ್ರದೇಶಾಭಿವೃದ್ಧಿ ಮಂಡಳಿಗಳು, ಅಭಿವೃದ್ಧಿ ಅಧ್ಯಯನ : ಸಮಾಜ ವಿಜ್ಞಾನ ಪತ್ರಿಕೆ, ಎ. ಶ್ರೀಧರ (ಸಂ) ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೫
- ಸದಾನಂದ ಪಿ ಎಸ್, ಕಟ್ಟಿಗೆ ಚಳವಳಿ, ಲೋಕಧ್ವನಿ, ಶಿರಸಿ, ೧೫-೮-೨೦೦೯
- ಸತೀಶ್‌ಕುಮಾರ್ ಕೆ ಎಸ್, ಪಶ್ಚಿಮ ಘಟ್ಟಗಳೆಂಬ ಕಾಮಧೇನುವಿನ ಕೆಚ್ಚಲಿಗೂ ಕೊಡಲಿಯೇ ? ಧರಣಿಮಂಡಲ, ಸಂಪುಟ ೨, ಸಂಚಿಕೆ ೧, ತುಮಕೂರು, ೨೮ನೇ ಫೆಬ್ರವರಿ ೨೦೧೦
- ಸಯದ್ ಫಸಿಹುದ್ದೀನ್, ಜೈವಿಕ ಅತಿಕ್ರಮಣ ಮತ್ತು ಜೀವವೈವಿಧ್ಯ, ಧರಣಿಮಂಡಲ, ತುಮಕೂರು, ಸಂಪುಟ ೧, ಸಂಚಿಕೆ ೫, ಡಿಸೆಂಬರ್ ೨೦೦೯
- ಸಿದ್ಧಲಿಂಗಯ್ಯ, ಮರದ ಮಾತುಗಳು, ಧರಣಿಮಂಡಲ ದ್ವೈಮಾಸಿಕ, ತುಮಕೂರು, ಸಂಪುಟ ೧, ಸಂಚಿಕೆ ೨, ಏಪ್ರಿಲ್ ೨೦೦೯
- ಸುಭಾಶ್‌ಚಂದ್ರನ್ ಎಂ ಡಿ, ಆನ್ ದಿ ಎಕೋಲಜಿಕಲ್ ಹಿಸ್ಟರಿ ಆಫ್ ದಿ ವೆಸ್ಟರ್ನ್ ಘಾಟ್ಸ್, ಕರೆಂಟ್ ಸೈನ್ಸ್, ಸಂಪುಟ ೭೩, ನಂ. ೨, ಜುಲೈ ೧೯೯೭
- ಹೆಗಡೆ ಕೆ ಎಂ, ಉತ್ತರ ಕನ್ನಡ ಜಲ ಸಂಪನ್ಮೂಲಗಳ ಸದುಪಯೋಗ, ಉದ್ಯಮದರ್ಶಿ, ಮಾಸಿಕ, ಮೇ, ೨೦೦೦

❑ ❑ ❑

ಇತರೆ (ಸಂಕೀರ್ಣ)

- ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಸೌಲಭ್ಯಗಳ ಕೈಪಿಡಿ, ಉತ್ತರ ಕನ್ನಡ ಜಿಲ್ಲಾ ಅಡಿಕೆ ಮತ್ತು ಸಾಂಬಾರ ಬೆಳೆಗಾರರ ಸಂಘ, ತೋಟಿಗರ ಕಲ್ಯಾಣ ಮಂಟಪ, ಶಿರಸಿ, ೧೯೯೩
- ಕರ್ನಾಟಕ ಅರಣ್ಯ ಇಲಾಖೆ : ವಾರ್ಷಿಕ ವರದಿಗಳು
- ಕಾನಡಾ ಧುರೀಣ, ಕುಮಟ, ಪತ್ರಿಕಾ ಸಂಚಿಕೆಗಳು, ೧೯೨೪
- ಕೈಪಿಡಿ, ಕಾಳಿನದಿ ಜಲವಿದ್ಯುತ್ ಯೋಜನೆ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಗಣೇಶಗುಡಿ, ೧೯೮೩
- ಜಿಲ್ಲಾ ಸಾಂಖ್ಯಿಕ ಕಛೇರಿ : ಉತ್ತರ ಕನ್ನಡ ಜಿಲ್ಲೆಯ ಅಂಕಿ - ಅಂಶಗಳ ನೋಟಗಳು, ೨೦೦೬-೦೭
- ನರೇಂದ್ರ ಹೆಗಡೆ, ಉತ್ತರ ಕನ್ನಡ ಡಿಸ್ಟ್ರಿಕ್ಟ್ ; ಎ ಪ್ರೊಫೈಲ್ ಆಫ್ ಡೆವಲಪ್‌ಮೆಂಟ್, ಹೊಂಡಗಾಸಿ, ಸಿದ್ಧಾಪುರ ತಾಲೂಕು, ಉತ್ತರ ಕನ್ನಡ, ನವೆಂಬರ್, ೧೯೯೯
- ಪ್ರಗತಿಚಿತ್ರ - ಉತ್ತರ ಕನ್ನಡ ಜಿಲ್ಲೆ - ಮೈಸೂರು ಸರ್ಕಾರ, ಪ್ರಚಾರ ಮತ್ತು ವಾರ್ತಾ ಇಲಾಖೆ ಪ್ರಕಟಣೆ, ಬೆಂಗಳೂರು, ೧೯೬೬
- ಮಲ್ನಾಡ್ ಇಮ್‌ಪ್ರೂವ್‌ಮೆಂಟ್ ಮ್ಯಾನ್ಯುಯಲ್, ಬೆಂಗಳೂರು, ೧೯೧೭
- ಮುಂಬಯಿ ಸರ್ಕಾರದ ರೆವಿನ್ಯೂ ಡಿಪಾರ್ಟ್‌ಮೆಂಟಿನ ಪ್ರೆಸ್ ನೋಟ್, ೧೯೨೦
- ಮೈಸೂರು ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ : ಉತ್ತರ ಕನ್ನಡ ಜಿಲ್ಲೆ ಪ್ರಗತಿ ಚಿತ್ರ, ೧೯೬೬

ಗೆಜೆಟಿಯರ್‍ಸ್

- ಇಂಪೀರಿಯಲ್ ಗೆಜೆಟಿಯರ್ ಆಫ್ ಬಾಂಬೆ ಪ್ರಾವಿನ್ಸ್, ಗೌರ್‍ನಮೆಂಟ್ ಆಫ್ ಬಾಂಬೆ ಪ್ರಾವಿನ್ಸ್, ಬಾಂಬೆ, ೧೮೮೪
- ಸೂರ್ಯನಾಥ್ ಕಾಮತ್ ಯು, ಕರ್ನಾಟಕ ಸ್ಟೇಟ್ ಗೆಜೆಟಿಯರ್, ಉತ್ತರ ಕನ್ನಡ ಡಿಸ್ಟ್ರಿಕ್ಟ್, ಗೌರ್‍ನಮೆಂಟ್ ಆಫ್ ಕರ್ನಾಟಕ, ಬೆಂಗಳೂರು, ೧೯೮೫

ಎಂ.ಫಿಲ್. - ಪಿಎಚ್.ಡಿ. - ಡಿ.ಲಿಟ್. ನಿಬಂಧಗಳು

- ಅರಕೇರಿ ಎ ವಿ, ಟಿಬೇಟಿಯನ್ ರೆಫ್ಯೂಜೀಸ್ ಆಫ್ ಮುಂಡಗೋಡ : ಎ ಕೇಸ್ ಸ್ಟಡಿ ಆಫ್ ಕಲ್ಚುರಲ್ ಟ್ರಾನ್ಸ್ ಪ್ಲಾಂಟೇಷನ್, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೭೮

- ಕುಶಾಲ ಬಿ ಸಿ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ ಮತ್ತು ಜೀವನ ದರ್ಶನ, ಅಪ್ರಕಟಿತ ಎಂ.ಫಿಲ್., ಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೬
- ಮಹಾಲಿಂಗ ಕೆ, ಕರ್ನಾಟಕದಲ್ಲಿ ಸಾಮಾಜಿಕ ಚಳವಳಿಗಳು : ಪರಿಸರ ಚಳವಳಿಯ ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೨೦೧೦
- ರಮೇಶ್ ಎಸ್ ಮಾಂಗ್ಲೇಕರ್, ಡೆವಲಪ್‌ಮೆಂಟ್, ಡಿಸ್‌ಪ್ಲೇಸ್‌ಮೆಂಟ್ ಅಂಡ್ ರಿಯಾಬಿಲಿಟೇಷನ್ (ಎ ಸೋಷಿಯಾಲಜಿಕಲ್ ಕೇಸ್ ಸ್ಟಡಿ ಆಫ್ ಸೀಬರ್ಡ್ ಪ್ರಾಜೆಕ್ಟ್, ಕಾರವಾರ) ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಗೋವಾ ವಿಶ್ವವಿದ್ಯಾಲಯ, ಗೋವಾ, ೨೦೦೬
- ಶರತ್‌ಚಂದ್ರ ಹೆಚ್ ಸಿ, ಕರ್ನಾಟಕದಲ್ಲಿ ಪರಿಸರ ನಿರ್ವಹಣೆ, ಅಪ್ರಕಟಿತ ಡಿ.ಲಿಟ್. ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೪
- ಸಿದ್ಧಲಿಂಗಯ್ಯ, ಹಿಸ್ಟರಿ ಆಫ್ ಬ್ಯಾಂಕಿಂಗ್ ಇನ್ ಮೈಸೂರ್ ಸ್ಟೇಟ್ ವಿತ್ ಸ್ಪೆಷಲ್ ರೆಫರೆನ್ಸ್ ಟು ದಿ ಬ್ಯಾಂಕ್ ಆಫ್ ಮೈಸೂರ್ ಲಿ., ೧೮೬೮-೧೯೫೬, ಅಪ್ರಕಟಿತ ಎಂ.ಫಿಲ್. ಪ್ರಬಂಧ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು, ೧೯೯೧
- ಹೇಮಂತ್ ಭಟ್, ಕರಾವಳಿ ಕರ್ನಾಟಕದ ಉತ್ತರ ಭಾಗದ ಶಾಸನಗಳು ಮತ್ತು ದೇವಾಲಯಗಳು ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೨೦೦೨

❑ ❑ ❑

ನಕಾಶೆಗಳು

ಭಾರತದಲ್ಲಿ ಪರಿಸರ ಚಳವಳಿಗಳು




ಕರ್ನಾಟಕದಲ್ಲಿ ಪರಿಸರ ಚಳವಳಿಗಳು




ಭಾರತದಲ್ಲಿ ಉತ್ತರ ಕನ್ನಡ ಜಿಲ್ಲೆ




ಉತ್ತರ ಕನ್ನಡ ಜಿಲ್ಲೆ – ಭೌತಿಕ ನಕಾಶೆ



ಉತ್ತರ ಕನ್ನಡ ಜಿಲ್ಲೆ – ನೆಲಸಂಬಂಧಿ ಪರಿಸರ ಚಳವಳಿಗಳು



ಉತ್ತರ ಕನ್ನಡ ಜಿಲ್ಲೆ – ಜಲಸಂಬಂಧಿ ಪರಿಸರ ಚಳವಳಿಗಳು




ಚಿತ್ರಗಳು



ಅಪ್ಪಿಕೋ ಚಳವಳಿ
ಚಿತ್ರಕೃಪೆ : ಪ್ರಜಾವಾಣಿ (ಸಂಗ್ರಹ ಚಿತ್ರ)



ಅಪ್ಪಿಕೋ ಚಳವಳಿ
ಚಿತ್ರಕೃಪೆ : ಧರಣಿಮಂಡಲ ಸಂಚಿಕೆಯಿಂದ



ಶಿರಸಿ ತಾಲ್ಲೂಕಿನ ವಾನಳ್ಳಿಯಲ್ಲಿ
ಅಪ್ಪಿಕೋ ಚಳವಳಿಯಲ್ಲಿ
ಸೇರಿದ್ದ ಜನಸ್ತೋಮ

ಚಿತ್ರಕೃಪೆ :ಪ್ರಜಾವಾಣಿ (ಸಂಗ್ರಹ ಚಿತ್ರ)



ಪಶ್ಚಿಮ ಘಟ್ಟ ಪರಿಸರದಲ್ಲಿ ತಲೆ
ಎತ್ತಲಿರುವ ಕೈಗಾ ಅಣುವಿದ್ಯುತ್ ಕೇಂದ್ರ

ಚಿತ್ರಕೃಪೆ : ಮುಂಗಾರು ದಿನ ಪತ್ರಿಕೆ,
ಮಂಗಳೂರು



ಕೈಗಾ ಕೈ ಬಿಡಿ ಎಂಬ ಘೋಷಣೆಗಳನ್ನು ಮೊಳಗಿಸಿದ ಪರಿಸರವಾದಿಗಳು

ಚಿತ್ರಕೃಪೆ :ಮುಂಗಾರು ದಿನಪತ್ರಿಕೆ



ಕೈಗಾ ಚಳವಳಿಯಲ್ಲಿ ಡಾ. ಕೆ. ಶಿವರಾಮ ಕಾರಂತರು ಮತ್ತು ಚಳವಳಿಗಾರರು

ಚಿತ್ರಕೃಪೆ : ಮುಂಗಾರು ದಿನಪತ್ರಿಕೆ



ಕೈಗಾ ವಿರೋಧಿ ಆಂದೋಲನದ ಮುಂಚೂಣಿಯ ಡಾ. ಕುಸುಮಾ ಸೊರಬ

ಚಿತ್ರಕೃಪೆ : ಶತಮಾನದ ಕುಸುಮ ಪುಸ್ತಕ



ಕೈಗಾ ವಿರೋಧಿ ಮೆರವಣಿಗೆಯಲ್ಲಿ ಮೇಧಾ ಪಾಟ್ಕರ್

ಚಿತ್ರಕೃಪೆ : ಶತಮಾನದ ಕುಸುಮ ಪುಸ್ತಕ



ಕೈಗಾ ವಿರುದ್ಧ ಮೆರವಣಿಗೆಗೆ ನೇತೃತ್ವ ವಹಿಸಿದ ಮಠಾಧೀಶರು

ಚಿತ್ರಕೃಪೆ : ಸುಧಾ ಪತ್ರಿಕೆ ೧೯೯೦



ಅಣು ವಿರೋಧಿ ನಾಗರಿಕ ಶಕ್ತಿ ತಂಡದಿಂದ ನಾಟಕ ಪ್ರದರ್ಶನ

ಚಿತ್ರಕೃಪೆ : ಸುಧಾ ಪತ್ರಿಕೆ ೧೯೯೦



ಕೈಗಾ ಅಣುಸ್ಥಾವರವನ್ನು ರಾಷ್ಟ್ರಕ್ಕೆ ಸಮರ್ಪಿಸಿದ ಪ್ರಧಾನಮಂತ್ರಿ ವಾಜಪೇಯಿಯವರು

ಚಿತ್ರಕೃಪೆ : ಉದ್ಯಮದರ್ಶಿ, ಮೇ ೨೦೦೦




ಹೀಗಿದೆ ಕೈಗಾ ಅಣುಸ್ಥಾವರ !

ಚಿತ್ರಕೃಪೆ : ಹಸಿರ್ಗಡಲು ಸ್ಮರಣಸಂಚಿಕೆ, ಕಾರವಾರ, ೨೦೦೮



ಕಾರವಾರದ ಬಳಿ ಸೀಬರ್ಡ್ ನೌಕಾನೆಲೆ
ಕಬಳಿಸಲಿರುವ ಫಲವತ್ತಾದ ಪ್ರದೇಶ
ಚಿತ್ರಕೃಪೆ : ತರಂಗ ಡಿಸೆಂಬರ್ ೧೯೯೨



ಸೀಬರ್ಡ್ ಯೋಜನೆಯ ರೂವಾರಿ
ಮಾಜಿ ಅಡ್ಮಿರಲ್ ಓ.ಎಸ್.ದಾವಸನ್
ಕೃಪೆ : ತರಂಗ, ಮಾರ್ಚ್ ೧೯೯೯



ಸೀಬರ್ಡ್ ಯೋಜನೆ ಉದ್ಘಾಟನೆಗೆ
ಬಂದ ಆಗಿನ ಪ್ರಧಾನಿ ದಿ. ರಾಜೀವ್
ಗಾಂಧಿಯವರ ಕುಟುಂಬ ಜೊತೆಗೆ ಆಗಿನ
ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆ
ಚಿತ್ರಕೃಪೆ : ಮುಂಗಾರು ದಿನಪತ್ರಿಕೆ



ಸೀಬರ್ಡ್ ಯೋಜನೆಯ ನಕ್ಷೆ
ವೀಕ್ಷಿಸುತ್ತಿರುವ ಆಗಿನ ಪ್ರಧಾನಿ
ದಿ. ರಾಜೀವಗಾಂಧಿಯವರು
ಚಿತ್ರಕೃಪೆ : ಮುಂಗಾರು ದಿನಪತ್ರಿಕೆ




ದಿ. ಪ್ರಧಾನಿ ರಾಜೀವ್‌ಗಾಂಧಿಯವರಿಂದ
ಸೀಬರ್ಡ್ ನೌಕಾನೆಲೆ ಶಿಲಾನ್ಯಾಸ
ಚಿತ್ರಕೃಪೆ : ಮುಂಗಾರು ದಿನಪತ್ರಿಕೆ



ನೆನಗುದಿಗೆ ಬಿದ್ದಿದ್ದ ಸೀಬರ್ಡ್ ನೌಕಾನೆಲೆ
ಸ್ಥಾಪನೆಗೆ ಚಾಲನೆ ನೀಡಿದ ಆಗಿನ ರಕ್ಷಣಾ
ಮಂತ್ರಿ ಜಾರ್ಜ್ ಫರ್ನಾಂಡೀಸ್,
ಕರ್ನಾಟಕದ ಆಗಿನ ಮುಖ್ಯಮಂತ್ರಿ
ದಿ. ಜೆ.ಎಚ್. ಪಟೇಲ್‌ರೊಂದಿಗೆ
ಚಿತ್ರಕೃಪೆ : ತರಂಗ ಮಾರ್ಚ್ ೧೯೯೯



ಸೀಬರ್ಡ್ ನೌಕಾನೆಲೆ ನಿರಾಶ್ರಿತರ ಜಾಥಾ
ಚಿತ್ರಕೃಪೆ : ಮುಂಗಾರು ದಿನಪತ್ರಿಕೆ



ನಿರಾಶ್ರಿತರು ಸೀಬರ್ಡ್ ನೌಕಾನೆಲೆ
ವಿರೋಧಿಸಿ ಎಚ್ಚರಿಕೆ ನೀಡಿದ ಫಲಕ
ಚಿತ್ರಕೃಪೆ : ಮುಂಗಾರು ದಿನಪತ್ರಿಕೆ



ಬಿಸಿಲಿನಲ್ಲಿ ಸೀಬರ್ಡ್ ನಿರಾಶ್ರಿತರಿಗಾಗಿ ಶೀಟ್‌ಗಳಿಂದ ನಿರ್ಮಿಸಿದ ತಾತ್ಕಾಲಿಕ ಶೆಡ್‌ಗಳು

ಚಿತ್ರಕೃಪೆ : ಸುಧಾ, ಮೇ ೧೯೯೯



ಅನೇಕ ವರ್ಷಗಳಿಂದ ವಾಸಿಸುತ್ತಿದ್ದ ಜನರು ಸೀಬರ್ಡ್ ನೌಕಾನೆಲೆಗಾಗಿ ಸ್ವಂತ ಮನೆಗಳನ್ನು ಖಾಲಿ ಮಾಡುತ್ತಿರುವುದು

ಚಿತ್ರಕೃಪೆ : ಮುಂಗಾರು ಪತ್ರಿಕೆ



ಅನೇಕ ವರ್ಷಗಳಿಂದ ವಾಸಿಸುತ್ತಿದ್ದ ಜನರು ಸೀಬರ್ಡ್ ನೌಕಾನೆಲೆಗಾಗಿ ಸ್ವಂತ ಮನೆಗಳನ್ನು ಖಾಲಿ ಮಾಡುತ್ತಿರುವುದು

ಚಿತ್ರಕೃಪೆ : ಮುಂಗಾರು ಪತ್ರಿಕೆ



ಹದಿನೇಳು ವರ್ಷಗಳಿಂದ ಸೂಕ್ತ ಪರಿಹಾರ ದೊರಕಿಸಿಕೊಡದ ಸರ್ಕಾರಗಳ ವಿರುದ್ಧ ನಿರಾಶ್ರಿತರ ಅರೆಬೆತ್ತಲೆ ಮೆರವಣಿಗೆ

ಚಿತ್ರಕೃಪೆ : ಕರಾವಳಿ ಮುಂಜಾವು
೧೬-೧೨-೨೦೦೬






ಕಾಳಿಯ ಒಡಲು ಸೇರುತ್ತಿರುವ ವೆಸ್ಟ್‌ಕೋಸ್ಟ್ ಪೇಪರ್‌ಮಿಲ್‌ನ ಕಲುಷಿತ ನೀರು

ಚಿತ್ರಕೃಪೆ : ಪ್ರಜಾವಾಣಿ ೫ನೇ ಜೂನ್ ೨೦೦೩



ಕಾಳಿ ಬಚಾವೋ ಪಾದಯಾತ್ರೆಯಲ್ಲಿ
ಚಿಪ್ಕೋ ಚಳವಳಿಯ ನೇತಾರ
ಸುಂದರಲಾಲ್ ಬಹುಗುಣ

ಚಿತ್ರಕೃಪೆ : ಕರ್ಮವೀರ, ೧೫-೦೬-೨೦೦೩



ಕಾಸ್ಟಿಕ್ ಸೋಡ ಕಾರ್ಖಾನೆಗೆ ಭೂಮಿ
ಕಳೆದುಕೊಂಡ ನಿರಾಶ್ರಿತರ ಹೋರಾಟದ ಚಿತ್ರ

ಚಿತ್ರಕೃಪೆ : ಮುಂಗಾರು ಪತ್ರಿಕೆ



ಬಿಣಗಾ ಕಾಸ್ಟಿಕ್ ಸೋಡ ಕಾರ್ಖಾನೆ - ಒಂದು ನೋಟ

ಚಿತ್ರಕೃಪೆ : ತರಂಗ ಮಾರ್ಚ್ ೧೯೯೯



ಗಣಿಗಾರಿಕೆ ಜೊತೆ ಅರಣ್ಯವೂ ಲೂಟಿ !

ಚಿತ್ರಕೃಪೆ : ಪ್ರಜಾವಾಣಿ, ೫ನೇ ಜುಲೈ ೨೦೦೮



ಸಂಚಾರ ಸಮಸ್ಯೆಗೆ ಕಾರಣವಾಗುತ್ತಿರುವ ಅದಿರು ತುಂಬಿದ ಲಾರಿಗಳು

ಚಿತ್ರಕೃಪೆ : ಲೋಕಧ್ವನಿ ದೈನಿಕ, ಶಿರಸಿ
೧೦-೧೨-೨೦೦೭



ಅದಿರು ಕಂಪನಿಗಳ ವಿರುದ್ಧ ನೂರಾರು ಮಹಿಳೆಯರು ಪ್ರತಿಭಟಿಸುತ್ತಿರುವುದು

ಚಿತ್ರಕೃಪೆ : ಪ್ರಜಾವಾಣಿ



ಬೇಲೇಕೇರಿ ಬಂದರು ಸಮೀಪ ದಾಸ್ತಾನು ಮಾಡಿರುವ ಅದಿರು

ಚಿತ್ರಕೃಪೆ : ಕರಾವಳಿ ಮುಂಜಾವು ದೈನಿಕ

೨೪-೧-೨೦೦೭



ಅದಿರು ದೊರೆಗಳ ವಂಚನೆ ವಿರುದ್ಧ ಮೀನುಗಾರರ ಸಾಂಕೇತಿಕ ಧರಣಿ


ಚಿತ್ರಕೃಪೆ : ಕರಾವಳಿ ಮುಂಜಾವು ದೈನಿಕ

೨೪-೧-೦೭



ನಿತ್ಯಹರಿದ್ವರ್ಣದ ಪಶ್ಚಿಮ ಘಟ್ಟ

ಚಿತ್ರಕೃಪೆ : ಶಿವಾನಂದ ಕಳವೆ



ಪಶ್ಚಿಮ ಘಟ್ಟ ಉಳಿಸಿ ಜಾಥಾ - ಡಾ. ಕುಸುಮಾ ಸೊರಬ ಮುಂಚೂಣಿಯಲ್ಲಿ

ಚಿತ್ರಕೃಪೆ :ಶತಮಾನದ ಕುಸುಮ ಕೃತಿಯಿಂದ



ಸಹ್ಯಾದ್ರಿ ದಿನಾಚರಣೆಯಲ್ಲಿ ಸುಂದರಲಾಲ್ ಬಹುಗುಣ, ಪಾಂಡುರಂಗ ಹೆಗಡೆ ಮತ್ತು ಇತರರು

ಚಿತ್ರಕೃಪೆ : ಪ್ರಜಾವಾಣಿ ೬-೯-೨೦೦೮



ಉತ್ತರ ಕನ್ನಡ ಜಿಲ್ಲೆ 'ಪರಿಸರ ಸೂಕ್ಷ್ಮ ಪ್ರದೇಶ' ವಿಚಾರ ಸಂಕಿರಣ

ಚಿತ್ರಕೃಪೆ : ಪ್ರಜಾವಾಣಿ ೨-೯-೨೦೦೬



ಸೊಪ್ಪಿನ ಬೆಟ್ಟ, ವಿಚಾರ ಸಂಕಿರಣ



ಸೊಪ್ಪಿನ ಬೆಟ್ಟದ ಉಪಯೋಗ

ಚಿತ್ರಕೃಪೆ : ಮುಂಗಾರು ದಿನಪತ್ರಿಕೆ



ಅರಣ್ಯ ಅತಿಕ್ರಮಣ ಸಕ್ರಮಕ್ಕೆ ಒತ್ತಾಯಿಸಿ ಅಕ್ಟೋಬರ್ ೨೦೦೨ರಲ್ಲಿ ಬನವಾಸಿಯಲ್ಲಿ ನಡೆದ ಪ್ರತಿಭಟನೆ

ಚಿತ್ರಕೃಪೆ : ಪ್ರಜಾವಾಣಿ ೮ನೇ ಜನವರಿ ೨೦೦೯



ಕೊಂಕಣ ರೈಲ್ವೆ - ಶರಾವತಿ ನದಿ ಸೇತುವೆ

ಚಿತ್ರಕೃಪೆ : ಕರ್ನಾಟಕ ಟೂರಿಸಂ ಡಿಪಾರ್ಟ್‌ಮೆಂಟ್, ಬೆಂಗಳೂರು



ಹುಬ್ಬಳ್ಳಿ - ಅಂಕೋಲ ರೈಲು ಮಾರ್ಗಕ್ಕೆ ಒತ್ತಾಯಿಸಿ ಯಲ್ಲಾಪುರದಲ್ಲಿ ರಸ್ತೆತಡೆ

ಚಿತ್ರಕೃಪೆ : ಪ್ರಜಾವಾಣಿ ೨೦೦೬



ತದಡಿ ಉಷ್ಣ ವಿದ್ಯುತ್ ಸ್ಥಾವರ ಸ್ಥಾಪನೆಗಾಗಿ ಗುರುತಿಸಿರುವ ವಿಶಾಲವಾದ ಪ್ರದೇಶ

ಚಿತ್ರಕೃಪೆ : ಕರಾವಳಿ ಮುಂಜಾವು ೧೨ ಆಗಸ್ಟ್ ೨೦೦೮



ತದಡಿ ಉಷ್ಣವಿದ್ಯುತ್ ಸ್ಥಾವರ ವಿರೋಧಿ ಹೋರಾಟದಲ್ಲಿ ಮಠಾಧೀಶರುಗಳ ಬೆಂಬಲ



ತದಡಿ ಉಷ್ಣವಿದ್ಯುತ್ ಸ್ಥಾವರ ವಿರೋಧಿ ಹೋರಾಟದಲ್ಲಿ ಸೇರಿದ್ದ ಜನಸ್ತೋಮ



ತದಡಿ ಉಷ್ಣವಿದ್ಯುತ್ ಸ್ಥಾವರದ ಪರವಾಗಿ ಸಭೆ ಸೇರಿದ ಗ್ರಾಮಸ್ಥರು

ಚಿತ್ರಕೃಪೆ : ಕನ್ನಡ ಜನಾಂತರಂಗ ದೈನಿಕ

೨೩-೮-೦೮



ತದಡಿ ಉಷ್ಣವಿದ್ಯುತ್ ಸ್ಥಾವರದ ಪರವಾಗಿ ಸಭೆ

ಚಿತ್ರಕೃಪೆ : ಕನ್ನಡ ಜನಾಂತರಂಗ ದೈನಿಕ

೨೩-೮-೦೮



ಹಣಕೋಣದಲ್ಲಿ ಉಷ್ಣವಿದ್ಯುತ್ ಸ್ಥಾವರ ವಿರೋಧಿಸಿ ನಡೆದ ಸಭೆ

ಚಿತ್ರಕೃಪೆ : ಪ್ರಜಾವಾಣಿ ೧೫ನೇ ಜುಲೈ ೨೦೦೮




ಹಣಕೋಣದಲ್ಲಿ ಉಷ್ಣವಿದ್ಯುತ್ ಸ್ಥಾವರ ಬೇಕು ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿದ ಗ್ರಾಮಸ್ಥರು

ಚಿತ್ರಕೃಪೆ : ಪ್ರಜಾವಾಣಿ ೧೫ನೇ ಜುಲೈ ೨೦೦೮



ಹಣಕೋಣ ಉಷ್ಣವಿದ್ಯುತ್ ಸ್ಥಾವರ ವಿರೋಧಿಸಿ ಧರಣಿ



ಕಾಳಿ ನದಿ ಯೋಜನೆಗಳು

ಚಿತ್ರಕೃಪೆ : ದಯಾನಂದ ಪಯ್ಯಡೆ, ಮಂಗಳೂರು



ಪಶ್ಚಿಮ ಘಟ್ಟದಲ್ಲಿ ಕಾಳಿನದಿಗೆ
ಕಟ್ಟಲಾಗಿರುವ ಅಣೆಕಟ್ಟೆ



ಯಲ್ಲಾಪುರದ ಮಾಗೋಡ ಸಮೀಪ
ಹರಿಯುತ್ತಿರುವ ಬೇಡ್ತಿ ನದಿ
ಚಿತ್ರಕೃಪೆ : ತರಂಗ ೧೩ನೇ ಡಿಸೆಂಬರ್
೧೯೯೨



ಬೇಡ್ತಿ ಚಳವಳಿಗಾರರು
೧೦ ರೂ. ಕೊಟ್ಟು ಧರಿಸಬೇಕಾಗಿದ್ದ
ಬ್ಯಾಡ್ಜ್



ಸ್ವರ್ಣವಲ್ಲಿಯ ಶ್ರೀ ಗಂಗಾಧರೇಂದ್ರ ಸರಸ್ವತಿ
ಸ್ವಾಮೀಜಿಯವರಿಂದ ಬೇಡ್ತಿ
ರಕ್ಷಣೆಯ ಪ್ರತಿಜ್ಞೆ
ಚಿತ್ರಕೃಪೆ : ಸುಧಾ, ೧೮ನೇ ಅಕ್ಟೋಬರ್
೧೯೯೨



ಬೇಡ್ತಿ ಯೋಜನೆ ವಿರೋಧಿ ಚಳವಳಿಯಲ್ಲಿ ಭಾಗವಹಿಸಿದ ಜನಸ್ತೋಮ

ಚಿತ್ರಕೃಪೆ : ಮುಂಗಾರು ಪತ್ರಿಕೆ
೨೨ ಸೆಪ್ಟಂಬರ್ ೧೯೯೨



ಬೇಡ್ತಿ ಯೋಜನೆ ಸಂಬಂಧದ ತಜ್ಞರ ಸಮಿತಿಯೊಂದಿಗೆ ಚಳವಳಿಗಾರರ ಚರ್ಚೆ

ಚಿತ್ರಕೃಪೆ : ಬೇಡ್ತಿ ಚಳವಳಿ ನಡೆದು ಬಂದ ದಾರಿ ಪುಸ್ತಕದಿಂದ



ಗೇರುಸೊಪ್ಪೆಯ ಬಳಿ ಶರಾವತಿ ಟೇಲ್‌ರೇಸ್ ನಿರ್ಮಿಸಿದ ನದಿಯ ಸ್ಥಳ

ಚಿತ್ರಕೃಪೆ : ತರಂಗ ೧೩ನೇ ಡಿಸೆಂಬರ್, ೧೯೯೨



ಶರಾವತಿ ಕೊಳ್ಳ ರಕ್ಷಣೆಗೆ ನಡೆದಿರುವ ಸಮಾಲೋಚನೆ

ಚಿತ್ರಕೃಪೆ : ಶತಮಾನದ ಕುಸುಮ ಪುಸ್ತಕದಿಂದ

ಅನುಬಂಧ - ಎರಡು

ಕರಾವಳಿ ನಿಯಂತ್ರಣ ವಲಯ ಅಧಿಸೂಚನೆ ೧೯೯೧ [ಕ.ನಿ.ವ (ಸಿ.ಆರ್.ಜ಼ಡ್.)]

ಕರಾವಳಿ ಕಾನೂನು

ಭಾರತದ ಕಡಲತೀರ ಪ್ರದೇಶಗಳನ್ನು ರಕ್ಷಿಸಲು ಮತ್ತು ಈ ಪ್ರದೇಶಗಳಲ್ಲಿ ಚಟುವಟಿಕೆಗಳನ್ನು ನಿಯಂತ್ರಿಸಲು ಕೇಂದ್ರ ಸರ್ಕಾರವು ೧೯೯೧ರಲ್ಲಿ ಕ.ನಿ.ವ. ಅಧಿಸೂಚನೆಯನ್ನು ಹೊರಡಿಸಿತು. ಸಂಕ್ಷಿಪ್ತವಾಗಿ ಹೇಳುವುದಾದರೆ ಇದರ ಮೂಲ ಉದ್ದೇಶ ಕರಾವಳಿಯ ಪರಿಸರ ಮತ್ತು ಸಂಪನ್ಮೂಲಗಳ ಸಂರಕ್ಷಣೆ ಮತ್ತು ಇದರ ಮೂಲಕ ಕರಾವಳಿ ಜನರ ಜೀವನಾಂಶದ ರಕ್ಷಣೆ.

ಭಾರತದೇಶದ ಕರಾವಳಿ ಪ್ರದೇಶವನ್ನು ಈ ಅಧಿಸೂಚನೆಯು ಸಂರಕ್ಷಿಸುತ್ತದೆ. ಈ ಪ್ರದೇಶಗಳನ್ನು ಕರಾವಳಿ ನಿಯಂತ್ರಣವಲಯ (ಕ.ನಿ.ವ.) ಎಂದು ಕರೆಯಲಾಗುತ್ತದೆ. ಅವುಗಳು ಯಾವುವೆಂದರೆ :

೧. ಏರುಬ್ಬರ ರೇಖೆಯಿಂದ ಭೂಮಿಯ ಕಡೆಗೆ ೫೦೦ ಮೀಟರ್ ದೂರದವರೆಗಿನ ಪ್ರದೇಶ.

೨. ಕಡಲ ತೀರದ ಸಮುದ್ರ, ಕೊಲ್ಲಿ, ಅಳಿವೆ, ನದಿ, ಖಾರಿ ಮತ್ತು ಭೂಮಿಯ ಕಡೆಗಿನ ಅಲೆಗಳಿಂದ ರೂಪಿತವಾಗುವ ಪ್ರದೇಶಗಳು.

೩. ಏರುಬ್ಬರ ರೇಖೆಯಿಂದ ಉಬ್ಬರ ಇಳಿತ ರೇಖೆಯವರೆಗಿನ ಭೂ ಪ್ರದೇಶ.

ಪ್ರತಿಯೊಂದು ಕರಾವಳಿಯು ತನ್ನದೇ ಆದ ಗುಣಲಕ್ಷಣಗಳನ್ನು ಹೊಂದಿರುವುದರಿಂದ ಕ.ನಿ.ವ. ಅಧಿಸೂಚನೆಯು ಕರಾವಳಿ ತೀರವನ್ನು ಅದರ ಗುಣ ಲಕ್ಷಣ ಮತ್ತು ಸ್ವರೂಪಗಳ ಆಧಾರದ ಮೇಲೆ ವಿವಿಧ ವರ್ಗಗಳಾಗಿ ವಿಂಗಡಿಸಲಾಗಿದೆ. ಪ್ರತಿಯೊಂದು ವರ್ಗದಲ್ಲೂ ಕೆಲವು ಚಟುವಟಿಕೆಗಳನ್ನು ನಿಷೇಧಿಸಲಾಗಿದೆ. ಆದ್ದರಿಂದ ಉತ್ತರ ಕನ್ನಡದ ೧೪೪ ಕಿ.ಮೀ. ಉದ್ದದ ಕರಾವಳಿ ತೀರವನ್ನು ಒಂದೇವರ್ಗ ಎಂದು ಹೇಳಲಾಗುವುದಿಲ್ಲ. ಉದಾಹರಣೆಗೆ ಹೇಳುವುದಾದರೆ ಭಟ್ಕಳದ ಕೆಲವು ಜಾಗಗಳನ್ನು ಕಾರವಾರದ ಕೆಲವು ಜಾಗಗಳಿಗಿಂತ ಭಿನ್ನವಾಗಿ ವಿಂಗಡಿಸಲಾಗಿದೆ.

ಈ ಕಾನೂನು ಕರಾವಳಿಯ ಕೆಲವು ಪ್ರದೇಶಗಳಿಗೆ ಉಳಿದ ಪ್ರದೇಶಗಳಿಗಿಂತ ಹೆಚ್ಚಿನ ರಕ್ಷಣೆ ಬೇಕು ಎಂದು ಒಪ್ಪುತ್ತದೆ. ಆದ್ದರಿಂದ ಆಯಾ ಪ್ರದೇಶದ ಗುಣಸ್ವರೂಪದ ಆಧಾರದ ಮೇಲೆ ಕರಾವಳಿ ತೀರವನ್ನು ಕ.ನಿ.ವ. - ೧, ಕ.ನಿ.ವ. - ೨, ಕ.ನಿ.ವ. - ೩ ಮತ್ತು ಕ.ನಿ.ವ. - ೪ ಎಂದು ವರ್ಗೀಕರಿಸಲಾಗಿದೆ.

ಪ್ರತಿಯೊಂದು ಭೂಮಿಗೆ ಸೂಕ್ತವಾದ ಸರ್ವೆ ನಂಬರುಗಳು ಇರುತ್ತವೆ. ಕರಾವಳಿ ಪ್ರದೇಶದಲ್ಲಿ ಚಟುವಟಿಕೆಗಳನ್ನು ನಿಯಂತ್ರಿಸಲು ಈ ಸರ್ವೆನಂಬರುಗಳನ್ನು ವಿವಿಧ ಕ.ನಿ.ವ. (೧, ೨, ೩, ೪) ವರ್ಗಗಳಲ್ಲಿ ಕರಾವಳಿ ತೀರ ನಿರ್ವಹಣಾ ಯೋಜನೆಯು ಈ ಮಾಹಿತಿಯನ್ನೊಳಗೊಂಡ ದಾಖಲೆಯಾಗಿರುತ್ತದೆ. ಕರಾವಳಿ ತೀರ ನಿರ್ವಹಣಾ ಯೋಜನೆಯ ಯಾವ ಯಾವ ಸರ್ವೆ ನಂಬರುಗಳು ಆಯಾಯ ಕ.ನಿ.ವಲಯದಲ್ಲಿ ಬರುತ್ತದೆ ? ಎಂದು ತೋರಿಸುತ್ತದೆ. ಈ ಯೋಜನೆಯನ್ನು

ರಾಜ್ಯ ಸರ್ಕಾರ ತಯಾರಿಸುತ್ತದೆ. ಕರಾವಳಿ ಪ್ರದೇಶದಲ್ಲಿ ಅಭಿವೃದ್ಧಿಯನ್ನು ನಿಯಂತ್ರಿಸಲು ಇದನ್ನು ರಾಜ್ಯದ ಎಲ್ಲಾ ಪಂಚಾಯತ್ ಕಚೇರಿಗಳಿಗೆ ತಲುಪಿಸಬೇಕು. ಜನರಿಗೆ ಕ.ನಿ.ವಲಯದ ಅಳತೆ ಮಾಡಲು ಏರುಬ್ಬರ ರೇಖೆಯನ್ನು ನೆಲದ ಮೇಲೆ ಗುರುತಿಸಬೇಕು.

ಈ ಕಾಯಿದೆಯು ಕ.ನಿ.ವಲಯದೊಳಗೆ ಕೆಲವು ಚಟುವಟಿಕೆಗಳನ್ನು ಅನುಮತಿಸುತ್ತದೆ. ಆದರೆ ಈ ಚಟುವಟಿಕೆಗಳಿಗೆ ಕಟ್ಟುಪಾಡುಗಳಿರುತ್ತವೆ. ಈ ಚಟುವಟಿಕೆಗಳೆಂದರೆ,

ಸಮುದ್ರ ದಡದ ಆವಶ್ಯಕತೆಯಿರುವ ಚಟುವಟಿಕೆಗಳಿಗೆ ಸೌಲಭ್ಯ. ಅನುಮತಿಸಲಾದ ಚಟುವಟಿಕೆಗಳಲ್ಲಿ ಕೆಲವು ಪರಿಸರ ಮತ್ತು ಅರಣ್ಯ ಮಂತ್ರಾಲಯದಿಂದ ಅನುಮತಿ ಪಡೆಯಬೇಕು. ಇವುಗಳು ಕೆಳಕಂಡ ಚಟುವಟಿಕೆಗಳಿಗೆ ಸಂಬಂಧಿಸಿವೆ.

* ಸಮುದ್ರ ದಡದ ಆವಶ್ಯಕತೆ ಇರುವ ಅಣುಶಕ್ತಿ ಇಲಾಖೆ ಅಥವಾ ರಕ್ಷಣಾ ಇಲಾಖೆಗೆ ಸಂಬಂಧಪಟ್ಟ ಕಾಮಗಾರಿಗಳು.
* ಸಣ್ಣ / ದೊಡ್ಡ ಬಂದರು / ದೀಪ ಗಂಬಗಳು ಮತ್ತು ಇನ್ನಿತರ ಚಟುವಟಿಕೆಗಳಾದ ಜೆಟ್ಟಿಗಳು, ಜಾರುಕಟ್ಟೆಗಳು, ಹಡಗು ನಿಲ್ದಾಣಗಳು, ಕೊಳವೆ ಮಾರ್ಗಗಳು ಮತ್ತು ಸಾಗಣೆ ಮಾಡುವುದು (ವಿದ್ಯುತ್ ಸರಬರಾಜು ಸೇರಿದಂತೆ) ನಿರ್ಮಾಣ ಮಾಡುವುದು.
* ಎಣ್ಣೆ ಮತ್ತು ನೈಸರ್ಗಿಕ ಅನಿಲಗಳ ಶೋಧನೆ ಮತ್ತು ಸಂಗ್ರಹಣೆ.
* ಸಮುದ್ರ ದಡದ ಅವಶ್ಯವಿರುವ ವಿದ್ಯುತ್ ಘಟಕಗಳು.

ಟಿಪ್ಪಣಿ

೧) ಈ ವಿವರಣೆಯು ಏಪ್ರಿಲ್ ೨೦೦೧ ರವರೆಗೆ ತಿದ್ದುಪಡಿಯಾದ ಅಧಿಸೂಚನೆಯ ಮಾಹಿತಿಗಳನ್ನೊಳಗೊಂಡಿದೆ.

೨) ಈ ಸಂಕ್ಷಿಪ್ತ ಕ.ನಿ.ವ. ಅಧಿಸೂಚನೆಯ ಸಾರಾಂಶವು ರಾಷ್ಟ್ರೀಯ ಕಡಲ ತೀರ ನಿರ್ವಹಣಾ ಪ್ರಾಧಿಕಾರ, ನವದೆಹಲಿ - ೧೧೦ ೦೦೩ - ಇವರ ಪ್ರಕಟಣೆಯಿಂದ ಪಡೆದುದಾಗಿರುತ್ತದೆ.

❑ ❑ ❑

೨.೨ ಅಣುವಿದ್ಯುತ್ ವಿಕಿರಣ ಎಂದರೆ ? !

ಅಣುವಿನಿಂದ ವಿದ್ಯುತ್ ಉತ್ಪಾದನೆ ಹೇಗೆ ? ಅರ್ಥಮಾಡಿಕೊಳ್ಳುವುದು ಕಷ್ಟವೇನಲ್ಲ. ಭೂಮಿಯೊಳಗಿನ ಕೆಲವು ಬಂಡೆಗಲ್ಲುಗಳಲ್ಲಿ ಪಿಚ್‌ಬ್ಲೆಂಡ್ ಎಂಬ ಅದಿರು ಸಿಗುತ್ತದೆ ಅಥವಾ ಕೆಲಕಡೆ ಸಮುದ್ರ ತೀರದಲ್ಲಿ ಥೋರಿಯಂ ಎಂಬ ಮರಳು ಸಿಗುತ್ತದೆ. ಅದನ್ನು ಅಗೆದು ತೆಗೆದು ಪುಡಿ ಮಾಡಿ ಶುದ್ಧೀಕರಿಸಿದರೆ ಯುರೇನಿಯಮ್ ಧಾತು ಉತ್ಪಾದಿಸಬಹುದು. ಇದರ ಪುಟ್ಟ ಕಣಗಳ ಪೈಕಿ ಒಂದಕ್ಕೆ ಚಕಮಕಿ ಕೊಟ್ಟರೆ ಅಣು ಸಿಡಿಯುತ್ತವೆ. ಅವುಗಳಿಂದ ಮತ್ತಷ್ಟು ಶಾಖ, ಪ್ರಭೆ ; ಇನ್ನಷ್ಟು ಅಣುಗಳ ಸಿಡಿತ, ಹೀಗೆ ಸರಪಳಿಯಂತೆ ಒಂದರಿಂದ ನೂರಾಗಿ, ಸಾವಿರ - ಲಕ್ಷ- ಕೋಟಿ ಅಣುಗಳು ಸಿಡಿಯುತ್ತ ಹೋದರೆ ಅದೇ ಅಣುಬಾಂಬ್ ! ಯುರೇನಿಯಮ್ ಕಡ್ಡಿಗಳನ್ನು ನೀರಲ್ಲಿ ಮುಳುಗಿಸಿಟ್ಟು ಸಂಯಮದಿಂದ ಸಿಡಿಸಿದರೆ ನೀರು ಕುದಿಯುತ್ತದೆ. ಆ ಆವಿಯಲ್ಲಿ ಚಕ್ರ ತಿರುಗುತ್ತದೆ. ಆಗ ವಿದ್ಯುತ್ ಹುಟ್ಟುತ್ತದೆ.

ಯುರೇನಿಯಮ್ ಕಡ್ಡಿ ಉರಿದು ಭಸ್ಮವಾದ ಮೇಲೆ ಅದು ಇನ್ನಷ್ಟು ಶಕ್ತಿಯುತ ಪ್ಲುಟೋನಿಯಂ ಮೂಲವಸ್ತುವಾಗಿ ಮಾರ್ಪಡುತ್ತದೆ. ಇದನ್ನು ಬಾಂಬ್ ತಯಾರಿಕೆಗೆ ಬಳಸಬಹುದು, ಇಲ್ಲವೆ ಮತ್ತೊಂದು ಬಗೆಯ (ಬ್ರೀಡರ್) ಅಣು ಸ್ಥಾವರಕ್ಕೆ ಇಂಧನವಾಗಿ ಬಳಸಬಹುದು. ಅವೆರಡೂ ಆಗದಿದ್ದರೆ ಭಾರಿ ಭದ್ರ ಕೊಳವೆಗಳಲ್ಲಿ ಬಚ್ಚಿಡಬಹುದು ; ಎಲ್ಲೂ ಬಿಸಾಡುವಂತಿಲ್ಲ.

ಅಣುಸ್ಥಾವರಗಳಲ್ಲಿ ಗೋಲಾಕಾರದ ಗರ್ಭಗುಡಿ(ರಿಯಾಕ್ಟರ್)ಗಳಿರುತ್ತವೆ. ಇವು ಶಾಖವನ್ನು ಹಿಡಿದಿಟ್ಟುಕೊಳ್ಳುವುದಷ್ಟೇ ಅಲ್ಲ, ಮಹಾ ಅಪಾಯಕಾರಿ ವಿಕಿರಣ ಹೊರ ಸೂಸದಂತೆ ತಡೆಹಿಡಿಯುತ್ತವೆ, ತಡೆ ಹಿಡಿಯಬೇಕು. ಇದಕ್ಕೆ ಒಂದು ಕಾಂಕ್ರೀಟ್ ಗೋಡೆ ಏನೇನೂ ಸಾಲದು. ಉಕ್ಕಿನ ಜೋಡಿಗೋಡೆ, ಅದರೊಳಕ್ಕೆ ಸೀಸಲೋಹದ ಲೇಪನ ಹಾಕಿರಬೇಕು.

ವಿಕಿರಣ ಎಂದರೇನು ? ದೇಹದೊಳಕ್ಕೆ ಸುಲಭವಾಗಿ ತೂರಿ ಆಚೆ ಹೋಗಬಲ್ಲ 'ಗ್ಯಾಮಾ' ಕಿರಣ ಪುಂಜ. ಕಣ್ಣಿಗೆ ಕಾಣಿಸುವುದಿಲ್ಲ ; ಬಿಸಿ ತಟ್ಟಿಸುವುದಿಲ್ಲ; ನೋಯಿಸುವುದಿಲ್ಲ ; ಆದರೂ ಈ ಕಿರಣಗಳಿಗೆ ಮೈ ಒಡ್ಡುವುದೆಂದರೆ ಲಕ್ಷಾಂತರ ಸೂಕ್ಷ್ಮ ಬುಲೆಟ್‌ಗಳ ಮಳೆಗರೆಯುವ ಮಷಿನ್‌ಗನ್ ಎದುರು ನಿಂತಂತೆ. ಈ ಬುಲೆಟ್‌ಗಳು ಶರೀರದಲ್ಲಿ ತೂರಿ ಹೋಗುವಾಗ ಅಲ್ಲಿನ ಜೀವಕೋಶಗಳನ್ನು ಭಗ್ನಗೊಳಿಸುತ್ತವೆ. ಜೀವಕೋಶ ತಕ್ಷಣ ನಾಶವಾಗಬಹುದು. ಇಲ್ಲವೇ ಘಾಸಿಗೊಂಡು ಎರ್ರಾಬಿರ್ರಿ ವರ್ತಿಸಬಹುದು. ಜೀವಕೋಶದಲ್ಲಿ ದೇಹ ನಿಯಂತ್ರಣದ ಸೂತ್ರಗಳೆಲ್ಲ ಅಡಕವಾಗಿರುವುದರಿಂದ ಅಲ್ಲಿನ ಕೆಲಸ ಕಾರ್ಯವೆಲ್ಲ ಎಡವಟ್ಟಾಗಿ, ಕೋಶ ನಿರೋಧಕ ಶಕ್ತಿ ಮಾಯವಾಗುತ್ತದೆ. ಜೀರ್ಣಶಕ್ತಿ ನಷ್ಟವಾಗುತ್ತದೆ. ರಕ್ತದ ಉತ್ಪಾದನೆ ಕ್ಷೀಣವಾಗುತ್ತದೆ ; ನಪುಂಸಕತ್ವ ಬರುತ್ತದೆ. ವಾಂತಿ, ರಕ್ತಭೇದಿಯಿಂದ ಹಿಡಿದು, ವೈದ್ಯಕೀಯ ನಿಘಂಟಿನಲ್ಲೂ ಇರದ ದಾರುಣ ರೋಗಗಳ ಹಂದರವಾಗುತ್ತದೆ. ಭಗ್ನ ಜೀವಕೋಶಗಳು ತಮ್ಮಂಥದೇ ಲಕ್ಷಾಂತರ ಜೀವಕೋಶಗಳನ್ನು ಉತ್ಪಾದಿಸತೊಡಗಿ ದೇಹಕ್ಕೆಲ್ಲ ಕ್ಯಾನ್ಸರ್ ಪಸರಿಸಬಹುದು. ವೀರ್ಯಾಣು ಅಂಡಾಣುಗಳು ವಿಕೃತಗೊಂಡು, ಮುಂದೆ ಹುಟ್ಟುವ ಸಂತತಿಯೂ ವಿಕಲಾಂಗ, ವಿಕೃತ ರೋಗಗಳ ಗುಡಾಣವಾಗಬಹುದು.

ವಿಕಿರಣ ಸೋಂಕಿದ ತಕ್ಷಣ ಇಷ್ಟೆಲ್ಲಾ ಆಗುತ್ತದೆಂದಲ್ಲ. ಹಿರೋಶಿಮಾ, ನಾಗಸಾಕಿಯಂಥ ರೌದ್ರ ಪ್ರಕರಣಗಳಲ್ಲಿ ಇವೆಲ್ಲ ಒಟ್ಟಿಗೇ ಸಂಭವಿಸಬಹುದು. ವಿಕಿರಣ ಶಕ್ತಿಯ ಪ್ರಭಾವ ಎಲ್ಲ ಪ್ರಸಂಗಗಳಲ್ಲಿ ಏಕರೂಪವಾಗಿರುವುದಿಲ್ಲ. ಕೆಲವೇಳೆ ತೀರ ಗೌಣವಾಗಿದ್ದು, ಪ್ರಭೆ ಸೋಂಕಿ ಹತ್ತಿಪ್ಪತ್ತು ವರ್ಷಗಳ ನಂತರ ಪರಿಣಾಮ ಕಾಣಬಹುದು. ಕೆಲವೊಮ್ಮೆ ರಕ್ತದ ಕ್ಯಾನ್ಸರ್, ಶ್ವಾಸಕೋಶದ ಕ್ಯಾನ್ಸರ್‌ಗಳಿಗೆಮಾತ್ರದೇಹ ಬಲಿಯಾಗಬಹುದು.

ಲೇಖನ ಕೃಪೆ: ನಾಗೇಶ ಹೆಗಡೆ ಅವರ 'ಇರುವುದೊಂದೇ ಭೂಮಿ' ಕೃತಿಯಿಂದ

❑ ❑ ❑

೨.೩ ಜಗತ್ತಿನ ೨೫ ಮಹಾವೈವಿಧ್ಯತೆಯ ನೆಲೆಗಳು-ಭಾರತದ ಪಶ್ಚಿಮ ಘಟ್ಟಗಳ ಸ್ಥಾನ

ಕ್ರ.ಸಂ./ ವಿಭಾಗ ಸಂ.	ಖಂಡಗಳು/ಪ್ರಾದೇಶಿಕತೆ	ಮಹಾವೈವಿಧ್ಯತೆಯ ನೆಲೆಗಳು	ಸ್ಥಾನ
೦೧	ನಾರ್ತ್ ಅಂಡ್ ಸೆಂಟ್ರಲ್ ಅಮೆರಿಕಾ	ಕೆರಿಬಿಯನ್	೦೧
		ಕ್ಯಾಲಿಫೋರ್ನಿಯ ಫ್ಲೋರಿಸ್ಟಿಕ್ ಪ್ರಾವಿನ್ಸ್‌ಸ್	೦೨
		ಮೆಸೊಯಮೆರಿಕಾ	೦೩
೦೨	ಸೌತ್ ಅಮೆರಿಕಾ	ಟ್ರೋಪಿಕಲ್ ಆಂಡೀಸ್	೦೪
		ಚಾಕೊ-ಡೆರಿಯನ್-ವೆಸ್ಟರ್ನ್ ಈ ಕ್ವೆಡಾರ್	೦೫
		ಅಟ್ಲಾಂಟಿಕ್ ಫಾರೆಸ್ಟ್	೦೬
		ಬ್ರೆಜಿಲಿಯನ್ ಕೆಣಡೊ	೦೭
		ಸೆಂಟ್ರಲ್ ಚಿಲಿ	೦೮
೦೩	ಯುರೋಪ್ ಅಂಡ್ ಸೆಂಟ್ರಲ್ ಏಷ್ಯಾ	ಕಾಸ್ಕಸ್	೦೯
		ಮೆಡಿಟರೇನಿಯನ್ ಬೇಸಿನ್	೧೦
೦೪	ಆಫ್ರಿಕಾ	ಮಡಗಾಸ್ಕರ್ ಅಂಡ್ ಇಂಡಿಯನ್ ಓಶನ್ ಐಲ್ಯಾಂಡ್ಸ್	೧೧
		ಈಸ್ಟರ್ನ್ ಅರ್ಕ್ ಮೌಂಟೆನ್ಸ್ ಅಂಡ್ ಕೋಸ್ಟಲ್ ಫಾರೆಸ್ಟ್	೧೨
		ಗುನಿಯನ್ ಫಾರೆಸ್ಟ್ಸ್ ಆಫ್ ವೆಸ್ಟ್ ಆಫ್ರಿಕಾ	೧೩
		ಕೇಪ್ ಪ್ಲಾರಿಸ್ಟಿಕ್ ರೀಜನ್	೧೪
		ಸುಕುಲೆಂಟ್ ಕಾರೊ	೧೫
೦೫	ಏಷ್ಯಾ	ಮೌಂಟೆನ್ಸ್ ಆಫ್ ಸೌತ್‌ವೆಸ್ಟ್ ಚೀನಾ	೧೬
		ಇಂಡೋ ಬರ್ಮಾ	೧೭
		ವೆಸ್ಟ್ರರ್ನ್ ಘಾಟ್ಸ್ ಅಂಡ್ ಶ್ರೀಲಂಕಾ	೧೮
೦೬	ಏಷ್ಯಾ-ಪೆಸಿಫಿಕ್	ಫಿಲಿಫೈನ್ಸ್	೧೯
		ಸುಂಡಾಲ್ಯಾಂಡ್	೨೦
		ವೆಲೆಷಿಯಾ	೨೧
		ಸೌತ್ ವೆಸ್ಟ್ ಆಸ್ಟ್ರೇಲಿಯಾ	೨೨
		ನ್ಯೂಜಿಲ್ಯಾಂಡ್	೨೩
		ನ್ಯೂ ಕೆಲೆಡೊನಿಯಾ	೨೪
		ಪಾಲಿನೇಸಿಯಾ ಅಂಡ್ ಮೈಕ್ರೋನೆಸಿಯಾ	೨೫

ಆಧಾರ: ಕರ್ನಾಟಕದ ಜೀವ ವೈವಿಧ್ಯ - ಒಂದು ಕಿರು ನೋಟದ ವರದಿ, ಅರಣ್ಯ ಇಲಾಖೆ, ಕರ್ನಾಟಕ ಸರ್ಕಾರ

❑ ❑ ❑

೨.೪ ೧೯೫೬ರ ನಂತರ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಭೂಮಿಯು ವಿವಿಧ ಅಭಿವೃದ್ಧಿ ಯೋಜನೆಗಳಿಗೆ ಹಂಚಿಕೆಯಾದ ವಿವರ

ಕ್ರ.ಸಂ.	ವಿವರಣೆಗಳು	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
೧.	೧೯೯೪ರಿಂದ೧೯೬೯ ರವರೆಗೆ (ತ್ರಿಸದಸ್ಯಕಮಿಟಿ ವರದಿಯಂತೆ) ವ್ಯವಸಾಯಕ್ಕೆ ಬಿಡುಗಡೆಯಾದ ಭೂಮಿ	೬೦೪೨.೫೦೦
೨.	ಸರ್ಕಾರಿ ಆದೇಶ (ವಿಶೇಷ) ಸಂ. ಎಎಫ್‌ಡಿ. ೧೧೬, ದಿನಾಂಕ ೧೬-೪-೬೯ರ ಪ್ರಕಾರ ಬಿಡುಗಡೆಯಾದ ಭೂಮಿ	೧೧೫೯೩.೩೪೭
೩.	ಸರ್ಕಾರಿ ಆದೇಶ ಸಂ. ಎಎಫ್‌ಡಿ -೨೮೨-ಎಫ್‌ಜಿಎಲ್ ೭೪/೧೩, ದಿನಾಂಕ ೧೯-೧೨-೧೯೭೪ ರ ಪ್ರಕಾರ ಬಿಡುಗಡೆಯಾದ ಅರಣ್ಯ ಭೂಮಿ	೩೩೬೯.೪೦೦
೪.	ಹಂಗಾಮಿ ತೆರಿಗೆ ನೋಟಿಫೈಡ್ ಏರಿಯಾ	೮೦೩೪.೪೫೦
೫.	ಎಕ್ಸ್‌ಟೆಂಕ್ಷನ್ ಆಫ್ ಗೊಥಾನಾ	೩೯೦.೪೦೦
೬.	ಟೌನ್‌ಷಿಪ್‌ಗಾಗಿ ಬಿಡುಗಡೆಯಾದ ಅರಣ್ಯ ಭೂಮಿ	೧೦೯೬.೯೦೦
೭.	ಮನೆಯಿಲ್ಲದವರಿಗೆ ಮನೆ ನಿವೇಶನಗಳಿಗಾಗಿ (೧೯೩೨-೧೯೭೯)	೩೬೬.೦೦೦
೮.	ಟಿಬೆಟಿಯನ್ ನಿರಾಶ್ರಿತರು, ಶರಾವತಿ, ಘಟಪ್ರಭಾ ಹಾಗೂ ಮಲಪ್ರಭಾ ಮತ್ತು ಗೌಳಿ ಕುಟುಂಬಗಳು ಮತ್ತು ಇತರೆ	೪೫೪೮.೧೭೦
೯.	ಮುಳುಗಡೆ ಮತ್ತು ಇತರೆ ಯೋಜನೆಗಳ ಸಂಬಂಧ	
	೧. ಕಾಳಿ ಜಲವಿದ್ಯುತ್ ಯೋಜನೆ	೧೪೬೦೭.೦೦೦
	೨. ಬೇಡ್ತಿ ಯೋಜನೆ (ಕಾಲೋನಿಗಾಗಿ)	೩೦೦.೦೦೦
	೩. ಇತರೆ ನೀರಾವರಿ ಕೆರೆಗಳು, ಇತರೆ	೩೦೩.೩೬೫
೧೦.	ಕೆಎಸ್‌ಎಫ್‌ಐಸಿ ಮತ್ತು ಹೈಬ್ರಿಡ್ ಗ್ರಾಸ್‌ಕಲ್ಟಿವೇಶನ್ (ಸಿರಸಿ ವಿಭಾಗ) ಸಂಬಂಧ, ದಿನಾಂಕ ೩೦-೦೯-೧೯೭೬	೧೬೧.೮೭೭
೧೧.	ಕ್ಯಾಂಪ್ಕೊ ಯೂನಿಟ್‌ಗಾಗಿ, ದಿನಾಂಕ ೨೭-೦೮-೧೯೮೬	೭೬.೫೫೮
೧೨.	ಕೆಎಸ್‌ಎಫ್‌ಐಸಿ - ಪೈನಾಪಲ್ ಕೃಷಿಗಾಗಿ	೧೬೩.೩೨೦
೧೩.	ಕರ್ನಾಟಕ ಸ್ಟೇಟ್ ವೀನರ್ಸ್ ಲಿ. ಸ. ಆ.ಸಂ. ಎಎಫ್‌ಡಿ -೧೬/ಎಫ್‌ಡಿಎಫ್-೭೪ ದಿನಾಂಕ ೨೨-೦೧-೧೯೭೫	೨೪.೦೦೦
೧೪.	ಪವರ್ ಟ್ರಾನ್ಸ್‌ಮಿಷನ್ ಲೈನ್ಸ್	೬೭೭.೬೩೯
೧೫.	ತೋಟಗಾರಿಕೆ ಇಲಾಖೆಗೆ (೧೯೬೯-೭೦)	೭೧.೮೪೭
೧೬.	ಶರಾವತಿ ಟೇಲ್ ರೇಸ್ ಸ.ಆ.ಸಂ. ಎಫ್‌ಎಫ್‌ಡಿ೨೬೯/ಎಫ್‌ಜಿಎಲ್-೮೩, ದಿನಾಂಕ ೧೩-೧೦-೧೯೮೬	೭೦೦.೦೦೦

೧೭.	ಸೀ ಬರ್ಡ್ ನೇವಲ್ ಬೇಸ್ ಪ್ರಾಜೆಕ್ಟ್ ಸ.ಆ.ಸಂ. ಎಫ್‌ಎಫ್‌ಡಿ ೪೭/ಎಫ್‌ಜಿಎಲ್-೮೪, ದಿನಾಂಕ : ೪-೧೨-೧೯೮೬	೨೨೫೯.೦೦೦
೧೮.	ಕದ್ರಾಪವರ್ ಹೌಸ್ ಪ್ರಾಜೆಕ್ಟ್ ಸ.ಆ.ಸಂ. ಎಫ್‌ಎಫ್‌ಡಿ ೧೯೮/ಎಫ್‌ಜಿಎಲ್-೮೩, ದಿನಾಂಕ : ೦೬-೦೭-೧೯೮೭	೩೦೫೧.೦೦೦
೧೯.	ಕೊಡಸಳ್ಳಿ ಡ್ಯಾಂ ಪವರ್ ಹೌಸ್‌ಪ್ರಾಜೆಕ್ಟ್ ಸ.ಆ.ಸಂ. ಎಫ್‌ಎಫ್‌ಡಿ - ೨೪೨/ಎಫ್‌ಜಿಎಲ್- ೮೩, ದಿನಾಂಕ : ೧೯-೦೫-೧೯೮೭	೧೩೬೦.೦೦೦
೨೦.	ಸೀ ಬರ್ಡ್ ನಿರಾಶ್ರಿತರಿಗೆ ಪುನರ್ವಸತಿಗಾಗಿ ಸ.ಆ.ಸಂ. ಎಎಚ್‌ಎಫ್‌ಎಫ್ - ೧೪೪/ಎಫ್‌ಜಿಎಲ್ ೮೭, ದಿನಾಂಕ : ೧೮-೦೭-೧೯೮೯	೬೪೩.೭೨೦
೨೧.	ಕೊಂಕಣ ರೈಲ್ವೆ ಪ್ರಾಜೆಕ್ಟ್ ಸ.ಆ.ಸಂ. ಎಎಚ್‌ಎಫ್‌ಎಪ್ - ೧೬೫/ಎಫ್‌ಜಿಎಲ್ - ೯೦, ದಿನಾಂಕ : ೩-೮-೧೯೯೧	೨೭೨.೧೪೦
೨೨.	ಅಂಕೋಲ - ಹುಬ್ಬಳ್ಳಿ ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಗಾಗಿ ಸ.ಆ.ಸಂ. ಎಎಚ್‌ಎಫ್‌ಎಫ್ - ೭೫/ಎಫ್‌ಎಫ್‌ಎಂ - ೯೧, ದಿನಾಂಕ : ೬-೨-೧೯೯೨	೧೩೨.೪೫೦
೨೩.	ಕೆಎಚ್‌ಇಪಿ ಮತ್ತು ಕೈಗಾ ಯೋಜನೆಗಳಿಂದ ನಿರಾಶ್ರಿತರ ಪುನರ್ವಸತಿಗಾಗಿ ಸ.ಆ.ಸಂ. ಎಫ್‌ಇಇ-೧೮೨/ಎಫ್‌ಜಿಎಲ್ - ೮೮, ದಿನಾಂಕ : ೦೩-೧೧-೧೯೯೩	೩೧೪.೧೬೦
೨೪.	ಸೀ ಬರ್ಡ್ ಯೋಜನೆ ನಿರಾಶ್ರಿತರಿಗೆ ಪುನರ್ವಸತಿಗಾಗಿ ಸ.ಆ. ಸಂ. ಎಫ್‌ಇಇ -೪೩/ಎಫ್‌ಜಿಎಲ್ - ೯೦ (ಪಿ), ದಿನಾಂಕ : ೦೩-೯-೧೯೯೬	೫೯೪.೧೦೦
೨೫.	೨೭-೪-೧೯೭೮ರ ಮೊದಲ ಅತಿಕ್ರಮಣವನ್ನು ಸಕ್ರಮಗೊಳಿಸಲು ಸ.ಆ.ಸಂ. ಎಫ್‌ಇಇ-೫/ಎಫ್‌ಜಿಎಲ್ -೯೬, ದಿನಾಂಕ : ೫-೫-೧೯೯೭	೨೮೨೪.೮೫೨
೨೬.	ಕುಮಟ-ಮುರ್ಡೇಶ್ವರ ನಡುವೆ ೧೧೦ ಕೆವಿ ವಿದ್ಯುತ್ ತಂತಿ ಎಳೆಯಲು ಸ.ಆ.ಸಂ. ಎಫ್‌ಇಇ-೯೯/ಎಫ್‌ಜಿಎಲ್ - ೯೫, ದಿನಾಂಕ : ೨೬-೧೨-೧೯೯೭	೬೦.೨೩೦
೨೭.	ಕೈಗಾ ಅಣುವಿದ್ಯುತ್ ಸ್ಥಾವರ ಯೋಜನೆ ಸ.ಆ.ಸಂ. ಎಫ್‌ಎಫ್‌ಡಿ- ೧೦೦/ಎಫ್‌ಜಿಎಲ್-೯೮, ದಿನಾಂಕ : ೧೩-೭-೨೦೦೦	೭೨೭.೦೭೪
೨೮.	ಸೀ ಬರ್ಡ್ ಯೋಜನೆ - ವಾಯು ನೆಲೆ ನಿರ್ಮಾಣ ಸ.ಆ.ಸಂ. ಎಫ್‌ಇಇ- ೧೦೪/ಎಫ್‌ಜಿಎಲ್-೯೯, ದಿನಾಂಕ : ೨೫-೨-೨೦೦೨	೨೪೬.೪೬೦
೨೯.	ಸೀ ಬರ್ಡ್ ನೌಕಾನೆಲೆ ಯೋಜನೆ ಸ.ಆ.ಸಂ. ಎಫ್‌ಇಇ-೩೪/ಎಫ್‌ಜಿಎಲ್-೯೯, ದಿನಾಂಕ :೩-೫-೨೦೦೨	೧೦೦೦.೦೦೦
೩೦.	೨೨೦ ಕೆ.ವಿ. ಕೈಗಾ - ನರೇಂದ್ರ ಸಬ್ ಸ್ಟೇಷನ್ ನಿರ್ಮಾಣ ಸ.ಆ.ಸಂ. ಎಫ್‌ಇಇ-೫೦/ಎಫ್‌ಜಿಎಲ್ -೨೦೦೦ ದಿನಾಂಕ : ೨೪-೩-೨೦೦೩	೩೩೦.೦೦೦
೩೧.	ಇತರೆ ಉದ್ದೇಶಗಳಿಗಾಗಿ ಬಿಡುಗಡೆ (ಸ.ಆ. ಕಡತದಲ್ಲಿರುವಂತೆ)	೯೪.೪೫೫
	ಒಟ್ಟು	೬೬೪೬೧.೭೫೩

ಆಧಾರ : ಅರಣ್ಯ ಸಂರಕ್ಷಣಾಧಿಕಾರಿಗಳು, ಕೆನರಾ ವೃತ್ತ, ಅರಣ್ಯ ಇಲಾಖೆ, ಸಿರಸಿ ಇವರಿಂದ ಸಂಗ್ರಹ

❑ ❑ ❑

೨.೫ ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಸೌಲಭ್ಯಗಳು

ಪ್ರಕರಣ ೧೦

ಬೆಟ್ಟ ಭೂಮಿ ಸೌಲಭ್ಯಗಳು

(ಜಿ.ಆರ್.ಆರ್.ಡಿ. ೭೯೮-೧೬-೪-೧೯೨೩)

೯೩) ಪ್ರೊಟೆಕ್ಟೆಡ್ ಅಡವಿಗಳಿಂದ 'ಬೆಟ್ಟ' ಎಂದು ಒದಗಿಸಿದ ಪ್ರದೇಶಗಳಲ್ಲಿ ಅನುಭವಿಸಬಹುದಾದ ಸೌಲಭ್ಯಗಳನ್ನು ಈ ಕೆಳಗೆ ವಿವರಿಸಿದೆ.

೯೪) ಆದಷ್ಟು ಮಟ್ಟಿಗೆ ಬೆಟ್ಟವನ್ನು ಕೆಳಕಂಡ ಪ್ರಮಾಣದಲ್ಲಿ ಒದಗಿಸಬೇಕು.

೧) ಘಟ್ಟದ ತಗ್ಗಿನ ತಾಲೂಕು :

ಅ) ಒಂದು ಎಕರೆ ತೋಟಕ್ಕೆ ನಾಲ್ಕು ಎಕರೆ ಬೆಟ್ಟ

ಆ) ಒಂದು ಎಕರೆ ಬತ್ತದ ಗದ್ದೆಗೆ ಎರಡು ಎಕರೆ ಬೆಟ್ಟ

೨) ಘಟ್ಟದ ಮೇಲಿನ ತಾಲೂಕು :

ಒಂದು ಎಕರೆ ತೋಟಕ್ಕೆ ೯ ಎಕರೆ ಬೆಟ್ಟ, ಸಾಗುವಳಿ ಅಥವಾ ಬೀಡಿನ ಬಾಜು ಬೆಟ್ಟ ಸಿಗದಿದ್ದರೆ, ಸಾಧ್ಯವಾದಷ್ಟು ಮಟ್ಟಿಗೆ ಇತರ ಕಾಡುಗಳಲ್ಲಿ ಅಥವಾ ಕಾನುಗಳಲ್ಲಿ ಬೆಟ್ಟ ಕೊಡಬಹುದು.

ಸೂಚನೆ : ಬೆಟ್ಟ ಭೂಮಿಗೆ ಪ್ರತಿ ಸೆಪ್ಟಂಬರ್ ಮೂವತ್ತರ ಒಳಗೆ ಸಂಬಂಧಪಟ್ಟ ತಹಸೀಲ್ದಾರರಿಗೆ ಅರ್ಜಿ ಹಾಕಿಕೊಳ್ಳಬೇಕು.

೯೫) ಸಾಂಬಾರ ತೋಟದ ಹಿಡುವಳಿದಾರರೂ ಅವರ ಗೇಣಿದಾರರೂ ಕೆಳಕಂಡ ಸೌಲಭ್ಯಗಳನ್ನೇ ಅನುಭವಿಸಬಹುದು :

೧) ಸ್ವಂತ ಜಾನುವಾರುಗಳನ್ನು ಮೇಯಿಸಬಹುದು.

೨) ಸ್ವಂತ ಉಪಯೋಗಕ್ಕಾಗಿ ಹುಲ್ಲನ್ನು ಕತ್ತರಿಸಬಹುದು

೩) ಮುಂದೆ ಹೇಳುವ ನಿರ್ಬಂಧನೆಗೆ ಒಳಪಟ್ಟು 'ಬೆಟ್ಟ'ವೆಂದು ಕೊಟ್ಟ ಭೂಮಿಯಲ್ಲಿ ಕೊಟ್ಟಿಗೆ ಮತ್ತು ತಾತ್ಕಾಲಿಕ ಗುಡಿಸಲು ಕಟ್ಟಬಹುದು ; ಬಾವಿ ತೆಗೆಯಬಹುದು ; ನೀರಿನ ಕಾಲುವೆ ತೋಡಬಹುದು ; ದಾರಿ ಮಾಡಬಹುದು ; ಕಣ ಮಾಡಬಹುದು ; ಕಬ್ಬಿನ ಗಿರಣಿ ಹಾಕಬಹುದು ; ಹುಲ್ಲು ಮತ್ತು ತೆನೆ ಕಾಳು ಉಗ್ರಾಣ ಇಡಬಹುದು ; ಅಡಿಕೆಗೆ, ಗೊಬ್ಬರಕ್ಕೆ, ಒಟ್ಟಲು ಪಾತಿ (ನರ್ಸರಿ)ಗೆ ಉಪಯೋಗಿಸಬಹುದು.

೪) ರಿಸರ್ವ್ ಅಡವಿಗೆ ಹರಡದಂತೆ ಲಾಂಟಾನ ಮತ್ತು ನೆಲ ಕುರುಚಲನ್ನು (ಕಿರಿಝಾಡಿ) ಸುಡಬಹುದು.

೫) ಜೇಡಿಮಣ್ಣು, ಮಣ್ಣು ಮತ್ತು ಕಲ್ಲುಗಳನ್ನು ಮಾರಾಟಕ್ಕಾಗಲಿ, ಬದಲು ಮಾಡಲಿಕ್ಕಾಗಲಿ, ಅಲ್ಲದೆ ಸ್ವಂತ ಉಪಯೋಗಕ್ಕೆ ಒಯ್ಯಬಹುದು.

೬) ಮಾರಾಟಕ್ಕಾಗಲಿ, ಬದಲು ಮಾಡಲಿಕ್ಕಾಗಲಿ ಅಲ್ಲದೆ ಸ್ವಂತ ಉಪಯೋಗಕ್ಕೆ ಅಡವಿ ಜೀನಸನ್ನು ಕೆಳಕಂಡ ನಿಬಂಧನೆಗೆ ಒಳಪಟ್ಟು ಒಯ್ಯಬಹುದು.

ಸೌಲಭ್ಯಗಾರನು ಕೆಳಗೆ ಹೇಳಿರುವುದನ್ನು ಮಾಡಲಾಗದು :

ಅ) ತೇಗ (ಸಾಗವಾನಿ: ಟೆಕ್ಟೋನ ಗ್ರಾಂಡಿಸ್), ಗಂಧ (ಸ್ಕಾಂಟಾಲಂ ಆಲ್ಬೆ), ಸಿಸ್ಸಂ (ಡಾಲ್ಬರ್ಗಿಯಾ ಲಾಟಿಫೋಲಿಯ), ಅಬನಾಸಿ (ಡಯೋಸ್ಪಿರೋಸ್ ಆಸಿಮಿಲಿಸ್) ಮತ್ತು ಹಾಲಮಡ್ಡಿ (ಐಲಾಂತಸ್ ಮಲಬಾರಿಕಂ) ಗಿಡಗಳಿಗೆ ಯಾವುದೇ ರೀತಿಯಾಗಿ ನೋವು ಮಾಡಬಾರದು ಮತ್ತು ಕಡಿಯಬಾರದು.

ಆ) ಅನುಬಂಧ ೬ರಲ್ಲಿ ಹೇಳಿರುವ ಸಜೀವ ಮರ ಜಾತಿಗಳನ್ನು ಅರಣ್ಯ ಇಲಾಖೆಯ ಪೂರ್ವ ಅಪ್ಪಣೆಯಿಲ್ಲದೆ ಉರುಳಿಸಕೂಡದು.

೭) ತೋಟದ ಹಿಡುವಳಿದಾರರು ತಮ್ಮ ಸ್ವಂತ ಉಪಯೋಗಕ್ಕೆ ಅಥವಾ ವ್ಯವಸಾಯಕ್ಕೆ ಅಥವಾ ದುರಸ್ತು ಮಾಡುವುದಕ್ಕೆ ಅನುಬಂಧ ೬ರಲ್ಲಿ ಸೂಚಿಸಿರುವ ಮರಜಾತಿಗಳಿಗೆ ಅರ್ಜಿ ಹಾಕಿಕೊಳ್ಳಬಹುದು. ಬೇಡಿಕೆ ನ್ಯಾಯವಾಗಿದ್ದರೆ ಮರಕ್ಕೆ ಒಂದು ರೂಪಾಯಿನಂತೆ ವಸೂಲು ಮಾಡಿ, ಅವರಿಗೆ ಕಡಿದುಕೊಂಡು ಹೋಗಲು ಅಪ್ಪಣೆ ಕೊಡಲಾಗುವುದು.

೮) ತೋಟ ಅಥವಾ ತೋಟಗಳ ಗುಂಪಿನ ಹಿಡುವಳಿದಾರನೊಬ್ಬನು ತನಗೆ ಒದಗಿಸಿದ ಬೆಟ್ಟದಲ್ಲಿ, ಅರಣ್ಯ ಇಲಾಖೆಯಿಂದ ಬರವಣಿಗೆಯಲ್ಲಿ ಮುನ್ನಪ್ಪಣೆ ಪಡೆದು ಅನುಬಂಧ ೬ ರಲ್ಲಿನ ಮರಗಳನ್ನು ಮುಫತ್ತಾಗಿ ಕಡಿಯಬಹುದು. ಆದರೆ ಅಂಥಾ ಮರಗಳು

೧) ಸಾಗುವಳಿಗೆ ಅಡ್ಡಿ ಬಂದಿರಬೇಕು.

೨) ನೀರಿನ ಹರಿಯುವಿಕೆಗೆ ಅಡಚಣೆಯಾಗಿರಬೇಕು

೩) ಕಟ್ಟಡಗಳ ತಲೆ ಮೇಲೆ ತೂಗಬೇಕು

೪) ಬೆಟ್ಟದಲ್ಲಿ ಓಡಾಡುವ ರಸ್ತೆಗೆ ಅಡ್ಡಲಾಗಿರಬೇಕು.

೯) ತೋಟಗಾರರಿಗೆ ಬೆಟ್ಟದಲ್ಲಿ ಅನುಬಂಧ ೬ರಲ್ಲಿ ಹೇಳದೆ ಇರುವ ಎಲ್ಲ ಜಾತಿ ಮರಗಳನ್ನೂ ಮುಫತ್ತಾಗಿ ಸ್ವಂತ ಉಪಯೋಗಕ್ಕಾಗಿ ಕೊಡಲಾಗುವುದು.

೧೦) ಹಣ್ಣಿನ ಗಿಡಗಳನ್ನು ನೆಟ್ಟು, ಹಣ್ಣು, ಹೂ ಮುಂತಾದುವನ್ನು ಶೇಖರಿಸಿ ಉಪಯೋಗಿಸಬಹುದು.

೧೧) ಬೆಟ್ಟ ಯಾರದೋ, ಅಲ್ಲಿನ ಜೇನುಗೂಡುಗಳು ಅವರದೇ.

೧೨) ನೈರ್ಮಲ್ಯ ದೃಷ್ಟಿಯಿಂದ ಮತ್ತು / ಅಥವಾ ಸಾಗುವಳಿಗಾಗಿ ಗುಡಿಸಲುಗಳಾಗಲಿ, ಶಾಶ್ವತ ಪಕ್ಕಾ ಮನೆಗಳಾಗಲಿ ಕಟ್ಟುವ ಆವಶ್ಯಕತೆಯಿದೆ ಎಂದು ಕಂಡರೆ ಅನುಮತಿ ಕೊಡಲಾಗುವುದು.

ಆಧಾರ : ಉತ್ತರ ಕನ್ನಡ ಜಿಲ್ಲಾ ಅಡಿಕೆ ಮತ್ತು ಸಾಂಬಾರ ಬೆಳೆಗಾರರ ಸಂಘ, ಸಿರಸಿ, ಇವರ ಪ್ರಕಟಣೆ : ಉತ್ತರಕನ್ನಡ ಜಿಲ್ಲೆಯ ಅರಣ್ಯ ಸೌಲಭ್ಯಗಳ ಕೈಪಿಡಿ, ೮-೧-೧೯೯೩

❑ ❑ ❑

೨.೬ ಪಶ್ಚಿಮಘಟ್ಟ ಕಾರ್ಯಪಡೆ : ಪ್ರಮುಖ ನೀತಿ ನಿರೂಪಣೆ ಶಿಫಾರಸುಗಳು

೧) ಕರ್ನಾಟಕ ೧,೯೨,೦೦೦ಚ.ಕಿ.ಮೀ. ವಿಸ್ತಾರದಲ್ಲಿ ಕೇವಲ ಸುಮಾರು ೨೦% ಮಾತ್ರ ಅರಣ್ಯ ಕವಚ ಉಳಿದಿದೆ. ಈ ಅರಣ್ಯ ಪ್ರದೇಶಗಳ ಸಂರಕ್ಷಣೆ ಪ್ರಥಮ ಆದ್ಯತೆಯಾಗಬೇಕು. ರಾಷ್ಟ್ರೀಯ ಅರಣ್ಯನೀತಿ ಆಶಯದಂತೆ ರಾಜ್ಯದ ನೆಲ - ಜಲ ಸಂರಕ್ಷಣೆ ಹಾಗೂ ಮಾನವನ ಜೀವನ ಭದ್ರತೆ ದೃಷ್ಟಿಯಿಂದ ಇದನ್ನು ಕನಿಷ್ಠ ೩೩%ಕ್ಕೆ ಹೆಚ್ಚಿಸುವ ಆವಶ್ಯಕತೆ ಇದೆ. ಮುಂದಿನ ಹತ್ತು ವರ್ಷಗಳಲ್ಲಿ ಇದನ್ನು ಆದ್ಯತೆಯ ಮೇರೆಗೆ ಹಂತಹಂತವಾಗಿ ಹಮ್ಮಿಕೊಳ್ಳಬೇಕು. ವೃಕ್ಷಾರೋಹಣ ಅಭಿಯಾನದಂಥ ಜನಸಹಭಾಗಿತ್ವದ ಕಾರ್ಯಕ್ರಮಗಳ ಮೂಲಕ ಇದನ್ನು ಒಂದು ಜನಾಂದೋಲನವನ್ನಾಗಿಸಬೇಕಿದೆ.

೨) ಮಲೆನಾಡಿನಲ್ಲಿ ಔಷಧಿಗಿಡ ಕೃಷಿ, ಉಪ ಅರಣ್ಯ ಉತ್ಪನ್ನ ಸಂಗ್ರಹಣೆ, ಒಳನಾಡು ಸಿಹಿನೀರು ಮೀನುಗಾರಿಕೆ, ಕೃಷಿ ಉತ್ಪನ್ನಗಳ ಗುಣ ಸಂವರ್ಧನೆ - ಇತ್ಯಾದಿ ಪರಿಸರ ಸ್ನೇಹಿ ಕ್ಷೇತ್ರಗಳಿಗೆ ಮರು ಜೀವ ತುಂಬುವ ಹೊಸನೀತಿ ಜಾರಿಗೆ ತಂದು, ವಿವಿಧ ಇಲಾಖೆಗಳ ಸೂಕ್ತ ಸಹಯೋಗ ಹಾಗೂ ಕಾರ್ಯಕ್ರಮಗಳ ಮೂಲಕ ಗ್ರಾಮೀಣ ಜನತೆಯ ಉದ್ಯೋಗಾವಕಾಶ ಹೆಚ್ಚು ಮಾಡುವ ಕಾರ್ಯವಾಗಬೇಕಿದೆ.

೩) ಜಂಟಿ ಅರಣ್ಯಯೋಜನೆಯ ಕಾರ್ಯಕ್ರಮಗಳಿಗೆ ಜೀವ ತುಂಬಿ ಪ್ರತಿ ತಾಲೂಕಿನಲ್ಲಿ ಇನ್ನೂ ಹೆಚ್ಚಿನ ಗ್ರಾಮ ಅರಣ್ಯ ಸಮಿತಿ (ವಿಲ್ಲೇಜ್ ಫಾರೆಸ್ಟ್ ಕಮಿಟೀಸ್ - ವಿಎಫ್‌ಸಿ)ಗಳನ್ನು ರಚಿಸಿ, ಪ್ರೋತ್ಸಾಹಿಸುವುದರ ಮೂಲಕ ಅರಣ್ಯ ಸಂರಕ್ಷಣೆ ಮತ್ತು ಸಂವರ್ಧನೆಯಲ್ಲಿ ಜನರ ಸಹಭಾಗಿತ್ವ ಹೆಚ್ಚಿಸಬೇಕಿದೆ. ಇಂತಹ ಅರಣ್ಯ ಸಂವರ್ಧನೆ ಕಾರ್ಯದ ಮೌಲ್ಯಮಾಪನ ಕಾಲ ಕಾಲಕ್ಕೆ ಆಗಬೇಕು.

೪) ಪಶ್ಚಿಮಘಟ್ಟ ಪ್ರದೇಶದ ೯ ಜಿಲ್ಲೆಗಳ ಅರಣ್ಯ ಇಲಾಖೆಯ ಕನಿಷ್ಠ ೨೫%ರಷ್ಟು ವಾರ್ಷಿಕ ಉತ್ಪನ್ನವಾದರೂ ಆ ಪ್ರದೇಶದ ಅರಣ್ಯ ಸಂರಕ್ಷಣೆಮತ್ತು ಸಂವರ್ಧನೆಗೆ ಮರುಬಳಕೆಯಾಗುವಂತಾಗಬೇಕು.

೫) ಅರಣ್ಯ ಇಲಾಖೆಯ ತಳಮಟ್ಟದಲ್ಲಿ ಸಿಬ್ಬಂದಿಗಳ ತೀವ್ರ ಕೊರತೆ ಇದ್ದು, ಶೀಘ್ರ ನೇಮಕಾತಿ ಮಾಡಬೇಕಿದೆ. ಸಿಬ್ಬಂದಿಗಳ ನೇಮಕಾತಿಯಲ್ಲಿ ಸ್ಥಳೀಯರು ಮತ್ತು ವನವಾಸಿಗಳಿಗೆ ಆದ್ಯತೆ ಸಿಗುವಂತೆ ಸೂಕ್ತ ನೀತಿ ಜಾರಿಗೆ ಬರಬೇಕು.

೬) ಮಲೆನಾಡಿನ ಪ್ರದೇಶದಲ್ಲಿ ಅರಣ್ಯ ಉತ್ಪನ್ನಗಳ ಕಳ್ಳ ಸಾಗಾಣಿಕೆ, ಅತಿಕ್ರಮಣ, ಅರಣ್ಯನಾಶ, ಬೆಂಕಿ, ವನ್ಯ ಜೀವಿಗಳ ಕಳ್ಳಸಾಗಾಣಿಕೆ- ಇತ್ಯಾದಿಗಳೆಲ್ಲವನ್ನೂ ತಡೆದು - ಯಶಸ್ವಿಯಾಗಿ ಅರಣ್ಯ ಸಂರಕ್ಷಣೆ ಕಾರ್ಯವಾಗುವಂತೆ ಜಿಲ್ಲಾಮಟ್ಟದಲ್ಲಿ ಇಲಾಖೆಯು ಒಂದು ತಾಂತ್ರಿಕ ಮಾಹಿತಿ ಕೇಂದ್ರ (ಟೆಕ್ನಿಕಲ್ ರಿಸೋರ್ಸ್ ಸೆಂಟರ್) ಕಾರ್ಯನಿರ್ವಹಿಸಬೇಕಿದೆ. ಜೊತೆಗೆ ಪ್ರತಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಸುಪರ್ದಿಯಲ್ಲಿ ಅರಣ್ಯ ಜಾಗ್ರತ

ಪಡೆ (ಇನ್ಸ್‌ಸ್ಪೆಕ್ಷನ್ ಸ್ಕ್ವಾಡ್)ಯೊಂದನ್ನು ಆಧುನಿಕ ತಂತ್ರಜ್ಞಾನ ಮತ್ತು ತರಬೇತಿಗಳ ಮೂಲಕ ಸುಸಜ್ಜಿತ ಗೊಳಿಸಬೇಕಿದೆ.

೭) ಮಲೆನಾಡಿನ ಪ್ರದೇಶ ವ್ಯಾಪ್ತಿಯ ಗುರುತಿಸುವಿಕೆಯಾಗಬೇಕಿದ್ದು, ಗ್ರಾಮದ ಹಂತದವರೆಗೆ ರೆವಿನ್ಯೂ ನಕ್ಷೆಯಲ್ಲಿ ಅದನ್ನು ಗುರುತಿಸಿ ಪಶ್ಚಿಮಘಟ್ಟ ಪ್ರದೇಶಗಳ ವ್ಯಾಪ್ತಿ ನಕ್ಷೆ ರೂಪಿಸಬೇಕಿದೆ. ಇನ್ನು ಮುಂದೆ ಈ ಪ್ರದೇಶದಲ್ಲಿ ಗಣಿಗಾರಿಕೆಯನ್ನು ನಿಷೇಧಿಸಬೇಕಿದೆ.

೮) ಕಿರು ಅದಿರು, ಮರಳು ಜಲ್ಲಿ ಇತ್ಯಾದಿಗಳ ಗಣಿಗಾರಿಕೆಯನ್ನು ಸೂಕ್ತವಾಗಿ ನಿಯಂತ್ರಿಸುವ ಜವಾಬ್ದಾರಿಯುಳ್ಳ ಜಿಲ್ಲಾಧಿಕಾರಿಗಳ ನೇತೃತ್ವದ ಜಿಲ್ಲಾಮಟ್ಟದ ಕಾರ್ಯಪಡೆಗಳಿಗೆ ಆಡಳಿತಾತ್ಮಕವಾಗಿ ಮರುಜೀವ ತುಂಬಿ, ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಬೇಕಿದೆ.

೯) ಗ್ರಾಮೀಣಾಭಿವೃದ್ಧಿ ಇಲಾಖೆ ಮತ್ತು ಜಲಾನಯನ ಅಭಿವೃದ್ಧಿ ಇಲಾಖೆಗಳ ಸೂಕ್ತ ಸಹಯೋಗದೊಂದಿಗೆ ಅರಣ್ಯ ಇಲಾಖೆಯು ಮಲೆನಾಡಿನ ಕೆರೆ, ಬಾವಿ ಮತ್ತು ಜಲಮೂಲಗಳನ್ನು ರಕ್ಷಿಸಿ, ಅಭಿವೃದ್ಧಿಪಡಿಸುವ ಜನಸಹಭಾಗಿತ್ವವುಳ್ಳ ನವೀನ ಜಲಾನಯನ ಅಭಿವೃದ್ಧಿ ಯೋಜನೆಗಳನ್ನು ಜಾರಿಗೆ ತರಬೇಕಿದೆ.

೧೦) ರಾಜ್ಯಾದ್ಯಂತ ಶಾಲಾ - ಕಾಲೇಜುಗಳ ವಿದ್ಯಾರ್ಥಿಗಳು, ಸಂಘ - ಸಂಸ್ಥೆಗಳು, ರೈತರು, ಯುವಕರು, ಮಹಿಳೆಯರು -ಹೀಗೆ ಎಲ್ಲರೂ ಸೇರಿ ನಿರಂತರ ಪರಿಸರ ಸಂರಕ್ಷಣೆ ಜಾಗೃತಿ ಮತ್ತು ಕಾರ್ಯ ಕೈಗೊಳ್ಳುವ ನಿಟ್ಟಿನಲ್ಲಿ 'ಹಸಿರು ಪಡೆ' ರಚಿಸಬೇಕು. ಈಗಾಗಲೇ ಇರುವ ಇಂತಹ ಎಲ್ಲಾ ಚಟುವಟಿಕೆಗಳನ್ನು ಈ ನಿಟ್ಟಿನಲ್ಲಿ ಸಮನ್ವಯಗೊಳಿಸಬೇಕು.

೧೧) ಸಹ್ಯಾದ್ರಿ ಪರಿಸರದಲ್ಲಿ ಯಾವುದೇ ಬೃಹತ್ ಅಭಿವೃದ್ಧಿ ಕಾರ್ಯಕ್ರಮಗಳನ್ನು ಜಾರಿಗೆ ತರುವಾಗ, ಅದರ ಸಾಧಕ ಬಾಧಕಗಳ ಕುರಿತಂತೆ ಪಶ್ಚಿಮಘಟ್ಟ ಕಾರ್ಯಪಡೆಯ ಅಭಿಪ್ರಾಯ ಪಡೆಯುವಂತಾಗಬೇಕು. ಇಡೀ ಸಹ್ಯಾದ್ರಿಗೊಂದು ದೀರ್ಘಕಾಲೀನ ಸುಸ್ಥಿರ ಅಭಿವೃದ್ಧಿ ವಿಧಾನ ಮತ್ತು ಭೂಬಳಕೆ ವಿಧಾನ (ಲ್ಯಾಂಡ್ ಯೂಸ್ ಪ್ಲ್ಯಾನ್) ರೂಪಿಸಲು ಇದು ಸಹಾಯಕವಾಗುತ್ತದೆ.

೧೨) ರಾಜ್ಯದಲ್ಲಿನ ಸುಮಾರು ೪೦೦ ಕಿ.ಮೀ.ನಷ್ಟು ಉದ್ದದ ಕರಾವಳಿ ಪ್ರದೇಶದ ಸಂರಕ್ಷಣೆಗೆ 'ಹಸಿರುಗೋಡೆ...', ಮರಳುಸಂರಕ್ಷಣೆ, ಕಾಂಡ್ಲಾವನ ಸಂವರ್ಧನೆ ಇತ್ಯಾದಿ ತಂತ್ರಗಳುಳ್ಳ ಜನಸಹಭಾಗಿತ್ವದ ಹೊಸ ಸಂರಕ್ಷಣಾ ನೀತಿ ಮತ್ತು ಕಾರ್ಯಕ್ರಮಜಾರಿಗೆಬರಬೇಕಿದೆ.

೧೩) ಪಶ್ಚಿಮಘಟ್ಟದಾದ್ಯಂತ ಇರುವ ಭೀಮಗಡ್, ಬೇಡ್ತಿ, ಕಣಿವೆ, ಅಘನಾಶಿನಿಕೊಳ್ಳ, ಆಗುಂಬೆ, ಚಾರ್ಮಾಡಿ ಮುಂತಾದ ಅನೇಕ ಪರಿಸರ ಸೂಕ್ಷ್ಮಪ್ರದೇಶಗಳನ್ನು ಗುರುತಿಸಿ, ಸ್ಥಳೀಯ ಜನರ ಹಕ್ಕುಗಳಿಗೆ ಯಾವುದೇ ತೊಂದರೆ ಬಾರದ ರೀತಿಯಲ್ಲಿ 'ನೈಸರ್ಗಿಕ ಪರಂಪರಾ ಪ್ರದೇಶ' ಅಥವಾ'ಸಮುದಾಯ ಸಂರಕ್ಷಣಾ ಪ್ರದೇಶ'ಗಳಂಥ ತತ್ವಗಳ ಆಶ್ರಯದಲ್ಲಿ ಸಂರಕ್ಷಿಸಬೇಕು. ವನ್ಯಜೀವಿ

ಧಾಮಗಳಿಗೆ ಹೊಂದಿಕೊಂಡಿರುವ ಸೂಕ್ಷ್ಮ ಪ್ರದೇಶಗಳನ್ನು ಆದ್ಯತೆಯ ಮೇರೆಗೆ ಈ ನಿಟ್ಟಿನಲ್ಲಿ ಪರಿಶೀಲಿಸಬೇಕು.

೧೪) ಪಶ್ಚಿಮಘಟ್ಟ ಪ್ರದೇಶ ವ್ಯಾಪ್ತಿಯಲ್ಲಿನ ಅನೇಕ ಬಗೆಯ ಸರ್ಕಾರಿ ಮತ್ತು ಸಾಮೂಹಿಕ ಕಂದಾಯ ಭೂಮಿಯಲ್ಲಿರುವ ಅರಣ್ಯ ಪ್ರದೇಶಗಳನ್ನು (ಡೀಮ್ಡ್ ಫಾರೆಸ್ಟ್) ಜಂಟಿ ಸಮೀಕ್ಷೆಯ ಮೂಲಕ ಗುರುತಿಸಿ, ಅಧ್ಯಯನಮಾಡಿ, ಅವುಗಳ ಸಂರಕ್ಷಣೆಗೆ ಸೂಕ್ತ ನೀತಿ ಹಾಗೂ ಕಾರ್ಯಕ್ರಮ ರೂಪಿಸಬೇಕು.

೧೫) ಸಹ್ಯಾದ್ರಿಯ ಅರಣ್ಯ, ಪರಿಸರ ಮತ್ತು ಜನಜೀವನ ಕುರಿತ ಸಮಗ್ರ ಮತ್ತು ನಿರಂತರ ಸಂಶೋಧನೆ ನಡೆಸುವ ಮತ್ತು ಸಂರಕ್ಷಣೆಗೆ ದಾರಿದೀಪವಾಗಬಲ್ಲ ರಾಷ್ಟ್ರಮಟ್ಟದ ಸಂಶೋಧನಾ ಸಂಸ್ಥೆಯೊಂದನ್ನು ಸ್ಥಾಪಿಸುವ ಅವಶ್ಯಕತೆಯಿದೆ. ಗಣಿಗಾರಿಕೆಯಿಂದ ತೆರವಾದ ಕುದುರೆಮುಖ ರಾಷ್ಟ್ರೀಯ ಉದ್ಯಾನವನದ ಟೌನ್‌ಶಿಪ್‌ನಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಈ ನಿಟ್ಟಿನಲ್ಲಿ ಬಳಸಿಕೊಳ್ಳಬಹುದಾಗಿದೆ.

೧೬) ರಾಜ್ಯ ಔಷಧಿ ಗಿಡ ಪ್ರಾಧಿಕಾರವನ್ನು ಕೇಂದ್ರವಾಗಿರಿಸಿಕೊಂಡು ಔಷಧಿ ಗಿಡಮೂಲಿಕೆ ಸಂರಕ್ಷಣೆ, ಸಂವರ್ಧನೆಮತ್ತು ಸಹನಶೀಲ, ಬಳಕೆಯ ಕುರಿತಾದ ಎಲ್ಲ ಯೋಜನೆಗಳನ್ನು ಕ್ರೋಡೀಕರಿಸಿ, ಸಮಗ್ರ ನೀತಿಯೊಂದರ ಮೂಲಕ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಬೆಕು.

೧೭) ಸಹ್ಯಾದ್ರಿ ಮತ್ತು ಕರಾವಳಿ ಪ್ರದೇಶದ ರಮ್ಯ ಪ್ರದೇಶಗಳಲ್ಲಿ ಸಂರಕ್ಷಣೆ, ಸಂವರ್ಧನೆ, ನಿರಂತರ ನಿಯಂತ್ರಣ, ಸ್ಥಳೀಯ ಜನರ ಸಹಭಾಗಿತ್ವ ಮತ್ತು ಅವರೊಂದಿಗೆ ಲಾಭ ಹಂಚಿಕೊಳ್ಳುವಿಕೆ ತತ್ವಗಳ ಆಧಾರಿತ ನೂತನವಾದ ಪರಿಸರ ಪ್ರವಾಸೋಧ್ಯಮ ನೀತಿ. ಜಾರಿಗೆ ಬರಬೇಕು.

೧೮) ಪಶ್ಚಿಮಘಟ್ಟ ಮತ್ತು ಕರಾವಳಿ ಪ್ರದೇಶಗಳ ಎಲ್ಲಾ ದೇವರ ಕಾಡು ಪ್ರದೇಶಗಳನ್ನು ಜೀವವೈವಿಧ್ಯ ಮಂಡಳಿಯ ಮೂಲಕ ಗುರುತಿಸಿ, ಗ್ರಾಮ ಅರಣ್ಯ ಸಮಿತಿಗಳ ಮೂಲಕ ಸಂರಕ್ಷಣಾ ಕಾರ್ಯಕ್ರಮ ಹಮ್ಮಿಕೊಳ್ಳಬೇಕು.

೧೯) ರಾಜ್ಯದೆಲ್ಲೆಡೆ 'ಜೀವವೈವಿಧ್ಯ ಸಂರಕ್ಷಣೆ ಕಾನೂನು' (೨೦೦೨) ಅನ್ವಯ ಎಲ್ಲಾ ಗ್ರಾಮಪಂಚಾಯಿತಿಗಳಲ್ಲಿ ಜೀವವೈವಿಧ್ಯ ನಿರ್ವಹಣೆ ಸಮಿತಿ (ಬಯೋಡೈವರ್ಸಿಟಿ ಮ್ಯಾನೇಜ್‌ಮೆಂಟ್ ಕಮಿಟಿ - ಬಿಎಂಸಿ) ಗಳು ರಚಿತವಾಗಿ, ಜೀವವೈವಿಧ್ಯಗಳ ದಾಖಲಾತಿ ಮತ್ತು ಸಂರಕ್ಷಣೆಗೆ ಆದ್ಯತೆ ಸಿಗಬೇಕು.

೨೦) ಪಶ್ಚಿಮಘಟ್ಟವೂ ಸೇರಿದಂತೆ ರಾಜ್ಯಾದ್ಯಂತ ಇರುವ ಸರ್ಕಾರಿ, ಸಾಮೂಹಿಕ ಮತ್ತು ಖಾಸಗಿ ಅರಣ್ಯಪ್ರದೇಶಗಳನ್ನು ಗುರುತಿಸಿ, ಸಂರಕ್ಷಿಸುವ ಕೆಲಸವಾಗಬೇಕು. ಕಾದಿಟ್ಟ ಅರಣ್ಯದ ನಡುವೆ ಇರುವ ಅಂತಹ ಜಾಗಗಳನ್ನು (ಎನ್‌ಕ್ಲೋಸರ್ಸ್) ಆದ್ಯತೆಯ ಮೇರೆಗೆ ಈ ನಿಟ್ಟಿನಲ್ಲಿ ಪರಿಶೀಲಿಸಬೇಕು.

೨೧) ರೈತರ ಅಧೀನದಲ್ಲಿರುವ ಬೆಟ್ಟ ಪ್ರದೇಶಗಳ ಸಂರಕ್ಷಣೆಮತ್ತು ಸಂವರ್ಧನೆ ಸಲುವಾಗಿ ಜಂಟಿ ಯೋಜನೆ ರೂಪಿಸಬೇಕು. ಔಷಧಿ ಗಿಡ, ಉರುವಲು, ಮೇವು ಮತ್ತು ಇತರ ಉಪಯೋಗಿ ಗಿಡಗಳನ್ನು ಲಾಭ ಹಂಚಿಕೊಳ್ಳುವಿಕೆಯ ಆಧಾರದ

ಮೇಲೆ ಬೆಳೆಸುವಂತಾಗಬೇಕು. ಈ ಕುರಿತಂತೆ ಅವಶ್ಯವಿರುವ ಕಾನೂನಿನ ತೊಡಕನ್ನು ನಿವಾರಿಸಿ ಆಡಳಿತಾತ್ಮಕ ಕ್ರಮ ಕೈಗೊಳ್ಳಬೇಕು.

೨೨) ಎಲ್ಲ ನಗರ ಪ್ರದೇಶಗಳ ರಸ್ತೆಗಳು, ರಾಷ್ಟ್ರ - ರಾಜ್ಯ ಹೆದ್ದಾರಿಗಳು, ನೀರಾವರಿ ಕಾಲುವೆಗಳ ಪಕ್ಕ - ಹೀಗೆ ಇಂತಹ ಎಲ್ಲ ಖಾಲಿ ಜಾಗಗಳಲ್ಲಿ ಸಾಲುಮರ ಬೆಳೆಸುವ ಯೋಜನೆ ಸಂಬಂಧಪಟ್ಟ ಇಲಾಖೆಗಳ ಸಹಕಾರದೊಂದಿಗೆ ರೂಪಿಸಬೇಕು.

೨೩) ೨೦ ಮೈಕ್ರೋನ್‌ಗಳಿಗಿಂತ ತೆಳುವಾದ ಹಾಗೂ ಬಣ್ಣದ ಪ್ಲಾಸ್ಟಿಕ್ ಚೀಲಗಳ ಬಳಕೆಗಿರುವ ನಿರ್ಬಂಧ ಪರಿಣಾಮಕಾರಿಯಾಗಿ ಜಾರಿಗೆ ಬರಬೇಕು.

೨೪) ಪಶ್ಚಿಮಘಟ್ಟ ಪ್ರದೇಶದಾದ್ಯಂತ ಈಗಾಗಲೇ ೧೩ ಔಷಧಿ ಗಿಡ ಸಂರಕ್ಷಣಾ ಪ್ರದೇಶಗಳಿದ್ದು (ಮೆಡಿಸನಲ್ ಪ್ಲಾಂಟ್ ಕನ್ಸರ್ವೇಷನ್ ಏರಿಯಾ - ಎಂಪಿಸಿಎ) ಅಂತಹ ಇತರ ಪ್ರಮುಖ ಪ್ರದೇಶಗಳನ್ನು ಗುರುತಿಸಿ, ಸಂರಕ್ಷಿಸುವ ಕಾರ್ಯಕ್ರಮ ಆಗಬೇಕು.

೨೫) ರಾಜ್ಯದ ಎಲ್ಲಾ ವನ್ಯಜೀವಿ ರಕ್ಷಣಾಧಾಮಗಳಲ್ಲಿ ಕೆಳಹಂತದ ಸಿಬ್ಬಂದಿಗಳು ಮತ್ತು ಪಶುವೈದ್ಯರ ಕೊರತೆ ನೀಗಿಸಿ, ಅವುಗಳ ರಕ್ಷಣೆಗೆ ಸಮಗ್ರ ಕಾರ್ಯಕ್ರಮ ರೂಪಿಸಬೇಕು.

೨೬) ಸಾಮಾಜಿಕ ಅರಣ್ಯ ಯೋಜನೆಯ ವಿಭಾಗವು ಈಗಾಗಲೇ ಬೆಳೆಸಿರುವ ಅರಣ್ಯವನ್ನು ಮತ್ತು ಮುಂದೆ ಬೆಳೆಸಲಿರುವ ಅರಣ್ಯಗಳ ನಿರಂತರ ಸಂರಕ್ಷಣೆಗೆ ಕಾರ್ಯಯೋಜನೆ ರೂಪಿಸಬೇಕು.

೨೭) ಕೃಷಿ ಮತ್ತು ತೋಟಗಾರಿಕಾ ಇಲಾಖೆಗಳು ತಮ್ಮೆಲ್ಲ ಯೋಜನೆಗಳನ್ನು ಕ್ರೋಢೀಕರಿಸಿ, ಕೃಷಿಕರ ಭೂಮಿಯಲ್ಲಿ ಕೃಷಿ ಅರಣ್ಯಬೆಳೆಸುವ ಕಾರ್ಯಕ್ರಮ ಚುರುಕಾಗುವಂತೆ ಕ್ರಮಕೈಗೊಳ್ಳಬೇಕು. ಇದಕ್ಕೆ ಅರಣ್ಯ ಇಲಾಖೆ ತಾಂತ್ರಿಕ ಸಹಕಾರ ನೀಡುವಂತಾಗಬೇಕು.

೨೮) ಜೇನುತುಪ್ಪ ಕಾಡು ಹಣ್ಣು - ಹಂಪಲು, ಔಷಧಿ ಗಿಡಮೂಲಿಕೆ - ಹೀಗೆ ಅನೇಕ ಬಗೆಯ ನೈಸರ್ಗಿಕ ಸಂಪನ್ಮೂಲ ಕೊಡುವ ಕಾಡು ಉತ್ಪನ್ನಗಳ (ನಾನ್ ಟಿಂಬರ್ ಫಾರೆಸ್ಟ್ ಪ್ರೊಡಕ್ಟ್ಸ್ - ಎನ್‌ಟಿಎಫ್‌ಪಿ) ಸಂರಕ್ಷಣೆ, ಸಂವರ್ಧನೆ ಮತ್ತು ಸಹನಶೀಲ ಬಳಕೆಯ ಕುರಿತಾದ ಸಮಗ್ರ ನೀತಿ ರೂಪಿತವಾಗಿ, ಅವುಗಳ ಆಧಾರಿತ ಗ್ರಾಮೀಣ ಉದ್ಯೋಗ ಅವಕಾಶ ಹೆಚ್ಚಿಸುವ ಕೆಲಸವಾಗಬೇಕು.

೨೯) ಮಲೆನಾಡಿನ ಪರಿಸರದ ಗ್ರಾಮೀಣ ಜನರ ಬದುಕು ಅಲ್ಲಿನ ನೆಲ, ಜಲ, ಕಾಡು ಸಂರಕ್ಷಣೆಗೆ ನೇರವಾಗಿ ಸಂಬಂಧ ಹೊಂದಿದ್ದು, ಗ್ರಾಮೀಣಾಭಿವೃದ್ಧಿ ಇಲಾಖೆಯು 'ನೈಸರ್ಗಿಕ ಸಂಪನ್ಮೂಲ ಸಂರಕ್ಷಣೆ' ಆಧಾರಿತ ಗ್ರಾಮೀಣ ಅಭಿವೃದ್ಧಿ ಯೋಜನೆಗಳನ್ನು ರೂಪಿಸಬೇಕು.

೩೦) ಜೈವಿಕ ಅನಿಲ, ಕಟ್ಟಿಗೆ ಆಧಾರಿತ ಇಂಧನ, ಸೌರಶಕ್ತಿ - ಇತ್ಯಾದಿ ಸ್ಥಳೀಯ ಬದಲಿ ಇಂಧನ ಬಳಕೆಯ ಕುರಿತು

ಹಳ್ಳಿಗರಿಗೆ ಮಾಹಿತಿ ಹಾಗೂ ಆರಂಭಿಕ ಆರ್ಥಿಕ ಸಹಕಾರ ನೀಡುವ ಯೋಜನೆಗಳನ್ನು ಪ್ರತೀ ತಾಲೂಕಿಗೆ ವಿಸ್ತರಿಸಬೇಕು.

೩೧) ಅರಣ್ಯ ಇಲಾಖೆಯ ಸಂಶೋಧನಾ ವಿಭಾಗ ಅರಣ್ಯಸಂಬಂಧಿ ಎಲ್ಲಾ ವಿಷಯಗಳ ಕುರಿತು ನಿರಂತರ ಸಂಶೋಧನೆಮತ್ತು ಇತರೆಡೆಯಾದ ಅಧ್ಯಯನಗಳ ಕ್ರೋಢೀಕರಣ ಕೆಲಸಗಳನ್ನು ವ್ಯಾಪಕವಾಗಿ ತೆಗೆದುಕೊಳ್ಳಬೇಕು. ಅದರ ಸುಪರ್ದಿಯಲ್ಲಿರುವ ನರ್ಸರಿಗಳಲ್ಲಿ ವಿನಾಶದ ಅಂಚಿನಲ್ಲಿರುವ ಹಾಗೂ ಇತರ ಎಲ್ಲಾ ಬಹು ಉಪಯೋಗಿ ಗಿಡಮೂಲಿಕೆಗಳ ತಳಿ ವೈವಿಧ್ಯಸಂರಕ್ಷಣೆ ಮತ್ತು ಸಂವರ್ಧನೆ ಕೆಲಸವಾಗಬೇಕು. ಪ್ರತೀ ಜಿಲ್ಲೆಯಲ್ಲಿ ಆ ಪ್ರದೇಶದ ಅಪರೂಪದ 'ಸಸ್ಯ ವೈವಿಧ್ಯಗಳ ಸಂರಕ್ಷಣಾ ಕೇಂದ್ರ' (ಕ್ಲಾನಲ್ ಆರ್ಚರ್ಡ್) ಸ್ಥಾಪಿತವಾಗಬೇಕು.

೩೨) ಚಿಕ್ಕಮಗಳೂರು ಜಿಲ್ಲೆಯ ಅಮೃತ್ ಕಾವಲಿನಂಥ ಮಾದರಿಯ ಎಲ್ಲಾ ಕಾವಲುಗಳನ್ನು ಸಂರಕ್ಷಿಸಿ, ಸಾಧ್ಯವಿರುವೆಡೆ ಸಂರಕ್ಷಣಾ ಧಾಮಗಳನ್ನಾಗಿ ರೂಪಿಸಬೇಕು.

೩೩) ಪಶ್ಚಿಮಘಟ್ಟ ವ್ಯಾಪ್ತಿಯ ಪ್ರದೇಶದಲ್ಲಿನ ಆನೆಗಳನ್ನು ಸ್ಥಳೀಯರಿಗೆ ಯಾವುದೇ ತೊಂದರೆ ಆಗದ ರೀತಿಯಲ್ಲಿ ಸಂರಕ್ಷಿಸುವ ಕಾರ್ಯ ಯೋಜನೆ ರೂಪಿಸಬೇಕು. ಜನರಿಗೆ ವನ್ಯಪ್ರಾಣಿಗಳಿಂದ ಹಾನಿಯಾದ ಸಂದರ್ಭದಲ್ಲಿ ನೀಡುವ ಪರಿಹಾರವನ್ನು ಶೀಘ್ರವಾಗಿ ತಲುಪಿಸುವ ಕೆಲಸವಾಗಬೇಕು.

೩೪) ರಾಜ್ಯ ಅರಣ್ಯ ಇಲಾಖೆಯ ಭಾಗವಾದ ಜೀವವೈವಿಧ್ಯ ಮಂಡಳಿ, ರಾಜ್ಯ ಔಷಧಿ ಗಿಡ ಅಭಿವೃದ್ಧಿ ಪ್ರಾಧಿಕಾರ, ಕೆರೆ ಅಭಿವೃದ್ಧಿ ಪ್ರಾಧಿಕಾರ, ಮಲೆನಾಡು ಅಭಿವೃದ್ಧಿ ಮಂಡಳಿ ಹಾಗೂ ಇತರ ಇಲಾಖೆಗಳಾದ ಗ್ರಾಮಾಭಿವೃದ್ಧಿ ಇಲಾಖೆ, ಜಲಾನಯನ ಅಭಿವೃದ್ಧಿ ಇಲಾಖೆ, ಕೃಷಿ ಮತ್ತು ತೋಟಗಾರಿಕಾ ಇಲಾಖೆ, ನೀರಾವರಿಮತ್ತು ಮೀನುಗಾರಿಕೆ ಇಲಾಖೆ, ಗಣಿ ಮತ್ತು ಭೂಗರ್ಭ ಇಲಾಖೆ ಮುಂತಾದವುಗಳ ನಿರಂತರ ಸಂಪರ್ಕ ಹಾಗೂ ಸಹಯೋಗ ಅರಣ್ಯಮತ್ತು ಪರಿಸರ ಇಲಾಖೆಯ ಅನೇಕ ಕಾರ್ಯಕ್ರಮಗಳಿಗೆ ಅವಶ್ಯವಿರುತ್ತದೆ. ಇಲಾಖೆಯ ಕೆಳಹಂತದ ಅಧಿಕಾರಿಗಳು ಈ ನಿಟ್ಟಿನಲ್ಲಿ ಮಾರ್ಗದರ್ಶನ ಹಾಗೂ ಸಹಕಾರ ನೀಡುವ ಉನ್ನತಮಟ್ಟದ ಸಂಪರ್ಕ ಕೇಂದ್ರ ಇಲಾಖಾ ಮಟ್ಟದಲ್ಲಿ ಕಾರ್ಯನಿರ್ವಹಿಸಬೇಕು.

೩೫) ಪರಿಸರ ಕುರಿತಾದ ನಿಗಾ ವಹಿಸುವ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯ ಜಿಲ್ಲಾ ಪರಿಸರ ಸಮಿತಿಗಳು ಚುರುಕಾಗಿ ಕಾರ್ಯ ನಿರ್ವಹಿಸುವಂತಾಗಬೇಕು.

೩೬) ಅಂತರ್ಜಲ ಸಂರಕ್ಷಣೆ, ಮಾಲಿನ್ಯ ತಡೆ ಮತ್ತು ಅನಿರ್ಬಂಧಿತ ಕೊಳವೆ ಬಾವಿಗಳನ್ನು ತೋಡುವುದನ್ನು ನಿಯಂತ್ರಿಸುವ ಸೂಕ್ತ ಆಡಳಿತಾತ್ಮಕ ಕ್ರಮ ತೆಗೆದುಕೊಳ್ಳಬೇಕು.

೩೭) ಪ್ರತಿ ಗ್ರಾಮದ ಉರುವಲು ಕಟ್ಟಿಗೆ ಮತ್ತು ಮೇವನ್ನು ಪೂರೈಸುವುದರ ಜೊತೆಗೆ ದೀರ್ಘಕಾಲೀನ ಉದ್ದೇಶವಾದ ಹಸಿರು ಕವಚ ಹೆಚ್ಚಳ, ಅಂತರ್ಜಲ ಸಂರಕ್ಷಣೆ, ಹವಾಮಾನ ಬದಲಾವಣೆ ತಡೆಗಟ್ಟುವುದು, ಜೀವವೈವಿಧ್ಯ ಸಂರಕ್ಷಣೆ

ಇತ್ಯಾದಿ ಬಹುಮುಖಿ ಉದ್ದೇಶವುಳ್ಳ ಗ್ರಾಮ ಅರಣ್ಯ ಯೋಜನೆ ಜಾರಿಗೆ ಬರಬೇಕು. ಸಾಮಾಜಿಕ ಅರಣ್ಯ ಜೋನೆ ವಿಭಾಗ ಮತ್ತು ಪಂಚಾಯತ್‌ರಾಜ್ ಇಲಾಖೆಗಳು ಇಂತಹ ಬಹುಜಾತಿ ಸಸ್ಯಗಳ ಅರಣ್ಯಗಳನ್ನು ವ್ಯಾಪಕವಾಗಿ ಬೆಳೆಸಬೇಕು. ಇದರ ಭಾಗವಾಗಿ ರೈತರೇ ನರ್ಸರಿ ಬೆಳೆಸುವ 'ಕಿಸಾನ್ ನರ್ಸರಿ' ತರಹದ ಯೋಜನೆಗಳಿಗೆ ಮರುಜೀವ ನೀಡಬೇಕು. ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಹಾಗೂ ಬದಲಿ ಅರಣ್ಯೀಕರಣ ನಿಧಿ ಸಂಪನ್ಮೂಲಗಳನ್ನು ಈ ನಿಟ್ಟಿನಲ್ಲಿ ಬಳಸುವತ್ತ ಚಿಂತಿಸಬಹುದು.

೩೮) ಅರಣ್ಯ ಮತ್ತು ಪರಿಸರ ಸಂರಕ್ಷಣೆ ಕುರಿತ ವಿವಿಧ ಅಂತಾರಾಷ್ಟ್ರೀಯ ಒಪ್ಪಂದಗಳು, ರಾಷ್ಟ್ರೀಯ ಕಾನೂನುಗಳು ಮತ್ತು ಅವುಗಳಲ್ಲಿರಬಹುದಾದ ಅನೇಕ ತಾಂತ್ರಿಕ ಅಂಶಗಳು ಇತ್ಯಾದಿಗಳೆಲ್ಲದರ ಕುರಿತು ವ್ಯಾಪಕವಾದ ಜಾಗೃತಿ ಉಂಟು ಮಾಡಲು ರಾಜ್ಯದ ಶಾಸಕರು ಹಾಗೂ ಸಂಸತ್ ಸದಸ್ಯರ ಜೊತೆಗೆ ಸಮಾಲೋಚನಾ ಸಭೆಗಳನ್ನು ಹಮ್ಮಿಕೊಳ್ಳಬೇಕು. ಪರಿಣಾಮಕಾರಿ ಅರಣ್ಯ ಸಂರಕ್ಷಣೆ ವಿಧಾನ ಮತ್ತು 'ಇಂಗಾಲದ ವ್ಯಾಪಾರ' (ಕಾರ್ಬನ್ ಟ್ರೇಡ್)ದಂಥ' ಹೊಸ ವಿಷಯಗಳ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಹೊಸ ರೂಪದ ಯೋಜನೆಗಳನ್ನು ರೂಪಿಸಲು ಇದು ಸಹಾಯವಾಗಬಲ್ಲದು.

೩೯) ಅರಣ್ಯ ಇಲಾಖೆಯ ಕೆಳಹಂತದ ಅಧಿಕಾರಿಗಳು ದಿನಂಪ್ರತಿ ಅನೇಕ ಕಾನೂನಿನ ಸಮಸ್ಯೆಗಳನ್ನು ಎದುರಿಸುವುದರಿಂದ ಮತ್ತು ಅಂತಹ ಅನೇಕ ಪ್ರಕರಣಗಳು ನ್ಯಾಯಾಲಯದ ಮುಂದಿರುವುದರಿಂದ, ಇಲಾಖೆಗೆ ಮಾರ್ಗದರ್ಶನ ಮಾಡಲು ಬೆಂಗಳೂರಿನಲ್ಲಿ ಇಲಾಖಾ ಮಟ್ಟದಲ್ಲಿ ಓರ್ವ ಪೂರ್ಣಕಾಲಿಕ ಕಾನೂನಿನ ತಜ್ಞರ (ಲೀಗಲ್ ಅಡ್ವೈಸರ್) ನೇಮಕಾತಿಯಾಗಬೇಕು.

೪೦) ರಾಜ್ಯದಲ್ಲೇ ಹೆಚು ಮಾಲಿನ್ಯವುಳ್ಳ ನದಿಗಳಾಗಿ ರೂಪುಗೊಂಡಿರುವ ಭದ್ರಾವತಿಯ ಭದ್ರಾ ನದಿ ಮತ್ತು ದಾಂಡೇಲಿಯ ಕಾಳೀ ನದಿಯ ಮಾಲಿನ್ಯ ನಿಯಂತ್ರಣಕ್ಕೆ ಸಂಬಂಧಪಟ್ಟ ಎಲ್ಲಾ ಸರ್ಕಾರಿ ಅರೆಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ದೀರ್ಘಕಾಲೀನ ಯೋಜನೆ ರೂಪಿಸಬೇಕು. ಭದ್ರಾವತಿಯ ಸಮಗ್ರ ಪರಿಸರ ಸಂರಕ್ಷಣೆ ಕುರಿತಂತೆ ಸರ್ಕಾರ 'ಭದ್ರಾವತಿ ಪ್ಯಾಕೇಜ್' ಒಂದನ್ನು ನೀಡುವುದರ ಕುರಿತು ಚಿಂತಿಸಬೇಕು.

೪೧) ಪಶ್ಚಿಮಘಟ್ಟದೆಲ್ಲೆಡೆ ತಾಲೂಕಿನಲ್ಲಿ ಒಂದರಂತೆ ಸುವ್ಯವಸ್ಥಿತ ಮಾದರಿ ಅರಣ್ಯ ಇಲಾಖಾ ನರ್ಸರಿಗಳನ್ನು ಅಭಿವೃದ್ಧಿಪಡಿಸಬೇಕು. ಇಲ್ಲಿ ಪರಿಸರದ ದೃಷ್ಟಿಯಿಂದ ಅಮೂಲ್ಯವಾದ ಮತ್ತು ವಾಣಿಜ್ಯ ದೃಷ್ಟಿಯಿಂದ ಅವಶ್ಯವಿರುವ ಎಲ್ಲಾ ಬಗೆಯ ಗಿಡಗಳನ್ನು ಬೆಳೆಸಿ, ನಿರಂತರವಾಗಿ ಸ್ಥಳೀಯರಿಗೆ ಸುಲಭದ ಬೆಲೆಯಲ್ಲಿ ನೀಡುವಂತಾಗಬೇಕು. ರಾಜ್ಯಾದ್ಯಂತ ಈ ಎಲ್ಲಾ ನರ್ಸರಿಗಳ ಜಾಲವೊಂದನ್ನು ರಚಿಸಿ, ಎಲ್ಲಾ ಅರಣ್ಯೀಕರಣ ಯೋಜನೆಗಳಿಗೆ ಅವು ತಾಂತ್ರಿಕ ಮಾರ್ಗದರ್ಶನ ನೀಡುವಂತಹ ಕೇಂದ್ರಗಳಾಗಿ ರೂಪುಗೊಳ್ಳಬೇಕು.

೪೨) ಸಹ್ಯಾದ್ರಿಯ ಜಾಗತಿಕ ಮಹತ್ವ ಮತ್ತು ಸ್ಥಳೀಯ ಜನರ ಜನಜೀವನದ ದೃಷ್ಟಿಯಿಂದ ಇದರ ಪ್ರಾಮುಖ್ಯತೆಯನ್ನು ಸಮಾಜದ ಎಲ್ಲಾ ಸ್ತರದ ಜನರಿಗೆ ತಲುಪಿಸಲು ಮತ್ತು ಆ ಮೂಲಕ ವಿವಿಧ ಸಂರಕ್ಷಣಾ ನೀತಿ ರೂಪಿಸುವಂತೆ ಪ್ರಯತ್ನಿಸಲು ಹಾಗೂ ಈ ಕುರಿತಂತೆ ಹಣಕಾಸಿನ ಮೂಲಗಳ ಕ್ರೋಡೀಕರಣ - ಇತ್ಯಾದಿ ಎಲ್ಲಾ ಉದ್ದೇಶಗಳ ಸಫಲತೆಗಾಗಿ ಪ್ರತಿವರ್ಷ 'ಸಹ್ಯಾದ್ರಿ ಶಿಖರ ಸಮ್ಮೇಳನ' (ಸಹ್ಯಾದ್ರಿ ಸಮ್ಮಿತ್) ಏರ್ಪಡಿಸಬೇಕು.

ಆಧಾರ : ಧರಣಿ ಮಂಡಲ ದ್ವೈಮಾಸಿಕ, ತುಮಕೂರು, ಸಂಪುಟ ೨, ಸಂಚಿಕೆ ೨, ೩೦.೦೪.೨೦೧೦

❑ ❑ ❑

೨.೭ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳನ್ನು ಕುರಿತ ಅಭಿಪ್ರಾಯಗಳು

೧. ಸಹ್ಯಾದ್ರಿ ಪ್ರದೇಶವು ಅಪೂರ್ವ, ಅಪರೂಪದ ಸಸ್ಯ - ಜೀವ ವೈವಿಧ್ಯತೆಯ ವೈಭವ ಹೊಂದಿರುವುದರಿಂದ ಎಲ್ಲ ವಿಧಗಳಿಂದಲೂ ಉತ್ತರ ಕನ್ನಡ ಜಿಲ್ಲೆಯನ್ನು ಜೈವಿಕ ವಲಯವೆಂದು ಘೋಷಿಸಬೇಕು. ಸರ್ಕಾರ ಮತ್ತು ಇಲಾಖೆ ಜೈವಿಕ ವಲಯ ಅನುಷ್ಠಾನಕ್ಕೆ ಮಹತ್ವ ನೀಡಲೇಬೇಕು. ಅಲ್ಲಿಯವರೆಗೂ ಯಾವುದೇ ಯೋಜನೆಗಳಿಗೆ ಒಂದು ಹನಿ ನೀರನ್ನು ಕೊಡೆವು. ಕಾಯ್ದೆಯ ರಕ್ಷಣೆಯಲ್ಲೇ ಪರಿಸರ ಉಳಿಸುವಂತಾಗಬೇಕು.

- ಶ್ರೀಗಂಗಾಧರೇಂದ್ರ ಸರಸ್ವತಿ ಸ್ವಾಮೀಜಿ
ಸೋಂದ-ಸ್ವರ್ಣವಲ್ಲಿ ಮಠ
ಸಿರಸಿ

೨. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ರಾಷ್ಟ್ರಮಟ್ಟದಲ್ಲಿ ಮಾದರಿಯಾಗಿದ್ದು ಇಷ್ಟು ಪರಿಸರ ಚಳವಳಿ ಮಾಡಿರುವ ಜಿಲ್ಲೆಗಳು ಸಿಗುವುದು ಕಠಿಣ.

- ಪಾಂಡುರಂಗ ಹೆಗಡೆ
ಅಪ್ಪಿಕೋ ಚಳವಳಿ ಸಂಘಟಕರು
ಸಿರಸಿ

೩. ಪಶ್ಚಿಮ ಘಟ್ಟಗಳಲ್ಲಿ ಜೀವ ವೈವಿಧ್ಯತೆ ಉಳಿದುಕೊಂಡಿದೆ ಎಂದರೆ ಅವು ಅಲ್ಲಿಯ ದೇವರ ಕಾಡುಗಳಿಂದ ಮಾತ್ರ. ಅದರಿಂದ ಅವು ವಿನಾಶದ ಅಂಚಿನಲ್ಲಿದ್ದು, ಅವುಗಳ ರಕ್ಷಣೆಗೆ ಮುಂದಾಗಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕಿದೆ. ಜೀವ ವೈವಿಧ್ಯತೆ ರಕ್ಷಣೆ ಅಗತ್ಯವಾಗಿ ಆಗಬೇಕಿದೆ.

-ಪ್ರೊ. ಎಂ.ಡಿ. ಸುಭಾಶ್ಚಂದ್ರ
ಕುಮಟ

೪. ಅತ್ತ ಕರಾವಳಿ ಜಿಲ್ಲೆಯಲ್ಲ, ಇತ್ತ ಉತ್ತರ ಕರ್ನಾಟಕಕ್ಕೂ ಸೇರಿಲ್ಲ. ಉತ್ತರ ಕನ್ನಡ ಜಿಲ್ಲೆ ಅಭಿವೃದ್ಧಿಯಲ್ಲಿ ಕಡೆಗಣಿಸಲ್ಪಟ್ಟಿದೆ. ಪರಿಸರ ಚಳವಳಿಗಾರರು ಹಾಗೂ ಸರ್ಕಾರ ಜಿಲ್ಲೆಯ ಸಂಪೂರ್ಣ ಅಭಿವೃದ್ಧಿ ಕಡೆಗೆ ಗಮನ ಹರಿಸಬೇಕು.

- ಪ್ರಜ್ಞಾವಂತ ನಾಗರಿಕರ ವೇದಿಕೆ
ಕಾರವಾರ

೫. ಉತ್ತರ ಕನ್ನಡ ಜಿಲ್ಲೆಯಲ್ಲಿ 'ನದಿ ತಿರುವು ಯೋಜನೆ' ಸಂಬಂಧ ಸಮಗ್ರ ಅಧ್ಯಯನ ಅಗತ್ಯ. ಅದಿಲ್ಲವಾದಲ್ಲಿ ಯೋಜನೆಗಳು ಪ್ರಯೋಜನವಾಗುವುದಕ್ಕಿಂತ ಸಮಸ್ಯೆಯಾಗುವುದೇ ಹೆಚ್ಚು. ಪಶ್ಚಿಮ ಘಟ್ಟ ಪ್ರದೇಶವು ಅಂತಾರಾಷ್ಟ್ರೀಯ ಕಾನೂನಿನ ಚೌಕಟ್ಟಿನೊಳಗಿದೆ. ಇಲ್ಲಿ ಏನೇ ಮಾಡುವುದಾದರೂ ಸುಪ್ರೀಂ ಕೋರ್ಟಿನ ಅಗತ್ಯವಿದೆ.

- ಡಾ. ವೆಂಕಟಾಚಲ ಹೆಗಡೆ
ಅಂತಾರಾಷ್ಟ್ರೀಯ ಕಾನೂನು ವಿಭಾಗ
ಜವಹರಲಾಲ್ ನೆಹರು ವಿಶ್ವವಿದ್ಯಾಲಯ, ದೆಹಲಿ
(ಸಿರಸಿಯಲ್ಲಿ ಏರ್ಪಡಿಸಿದ್ದ ನದಿ ಜೋಡಣೆ ಕುರಿತ ಸಂವಾದ ಕಾರ್ಯಕ್ರಮದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯ)

೬. ಉತ್ತರ ಕನ್ನಡ ಜಿಲ್ಲೆಗೆ ಬೃಹತ್ ವಿದ್ಯುತ್ ಯೋಜನೆಗಳು ಬೇಡವೇ ಬೇಡ. ನದಿಗೆ ಸಣ್ಣ ಸಣ್ಣ ಅಣೆಕಟ್ಟು ನಿರ್ಮಿಸಿ ಕೃಷಿಗೆ ನೀರಾವರಿ ಮಾಡುವ ಯೋಜನೆ ಜಾರಿಯಾಗಬೇಕು. ಹುಬ್ಬಳ್ಳಿ - ಅಂಕೋಲಾ ಬ್ರಾಡ್‌ಗೇಜ್ ರೈಲು ಮಾರ್ಗದ ಅನುಷ್ಠಾನ ಬೇಗನೆ ಆಗಬೇಕು. ಬೃಹತ್ ಜಲವಿದ್ಯುತ್ ಯೋಜನೆಗಳನ್ನು ಹೇರಿದರೆ ಮತ್ತೆ ಚಳವಳಿ ಮಾಡುತ್ತೇವೆ.

ಉತ್ತರ ಕನ್ನಡ ಜಿಲ್ಲೆ ಅಭಿವೃದ್ಧಿಯನ್ನು

ಕುರಿತ ಚಿಂತನ ಕಾರ್ಯಾಗಾರದಿಂದ

ಯಲ್ಲಾಪುರ

೭. ಉತ್ತರ ಕನ್ನಡ ಜಿಲ್ಲೆಯ ಜೀವ ವೈವಿಧ್ಯ, ಧಾರಣಾ ಸಾಮರ್ಥ್ಯ, ನೈಸರ್ಗಿಕವಾದವುಗಳ ಲಾಭ - ನಷ್ಟದ ಅಧ್ಯಯನವಾಗದೇ ಬೇರೆ ಯಾವುದೇ ಯೋಜನೆಗೆ ಅವಕಾಶ ನೀಡುವುದಿಲ್ಲ.

ಅನಂತಕುಮಾರ ಹೆಗಡೆ

ಸಂಸತ್ ಸದಸ್ಯರು

ಉತ್ತರ ಕನ್ನಡ ಲೋಕಸಭಾಕ್ಷೇತ್ರ

೮. ಉದ್ಯಮಪತಿಗಳ ಅಗತ್ಯ ಪೂರೈಸಲು, ನಗರ ವಾಸಿಗಳಿಗೆ ಉರುವಲು ಒದಗಿಸಲು ಪಶ್ಚಿಮ ಘಟ್ಟದ ಅರಣ್ಯಗಳ ಮೇಲೆ ಕೊಡಲಿ ಹಿಡಿದು ಸತತ ದಾಳಿಯ ವಿರುದ್ಧ ನಿಸರ್ಗವು ಈಗ ಹಳ್ಳಿಯ ರೈತರ ರೂಪದಲ್ಲಿ ಸಿಡಿದೆದ್ದಿದೆ. ಅರಣ್ಯನಾಶದಿಂದ ಆಗುತ್ತಿರುವ ಅನಾಹುತದ ಬಗ್ಗೆ ಜಾಗೃತಗೊಂಡಿರುವ ಉತ್ತರ ಕನ್ನಡ ಜಿಲ್ಲೆಯ ರೈತರು ಹಿಮಾಲಯದ ಚಿಪ್ಕೋ ಚಳವಳಿ ಮಾದರಿಯಲ್ಲಿ ಮರ ಅಪ್ಪಿಕೊಂಡು ಅವನ್ನು ಕಟುಕರ ಕೊಡಲಿಗಳಿಂದ ರಕ್ಷಿಸುವ 'ಅಪ್ಪಿಕೋ' ಚಳವಳಿಗೆ ಧುಮುಕಿದ್ದಾರೆ. ಜಿಲ್ಲೆಯ ಆರು ಅರಣ್ಯಗಳಿಗೆ ವ್ಯಾಪಿಸಿರುವ ಈ ಆಂದೋಲನ ಪಟ್ಟಭದ್ರ ಹಿತಾಸಕ್ತಿಗಳನ್ನು ಕಂಗೆಡಿಸಿದೆ.

ನಾಗೇಶ್ ಹೆಗಡೆ

ಪರಿಸರ ಪತ್ರಕರ್ತ, ಬೆಂಗಳೂರು

೯. ಪಶ್ಚಿಮ ಘಟ್ಟಗಳ ಪ್ರದೇಶದಲ್ಲಿ ಮಿತಿಮೀರಿದ ಅರಣ್ಯನಾಶ, ನದಿಗಳ ಹೂಳು ತುಂಬುವಿಕೆ, ಅತಿಕ್ರಮಣ, ಗಣಿಗಾರಿಕೆ, ವಿನಾಶಕಾರಿ ಬೃಹತ್ ಯೋಜನೆಗಳು ಈ ಮುಂತಾದ ಚಟುವಟಿಕೆಗಳಿಂದ ಸಮಸ್ಯೆಗಳು ಉದ್ಭವಿಸಿವೆ. ಇವೆಲ್ಲವುಗಳನ್ನೂ ಸಮಗ್ರವಾಗಿ ಅಭ್ಯಸಿಸಲು, ವಿಶೇಷ ನೀತಿ ರೂಪಿಸಲು ತಜ್ಞ ಕಾರ್ಯಪಡೆ ರಚಿಸಬೇಕು.

ಅನಂತಹೆಗಡೆ ಅಶೀಸರ

ಅಧ್ಯಕ್ಷರು, ವೃಕ್ಷಲಕ್ಷ ಆಂದೋಲನ, ಸಿರಸಿ

೧೦. ಉತ್ತರ ಕನ್ನಡ ಜಿಲ್ಲೆಯ ಗ್ರಾಮ - ಗ್ರಾಮಗಳಲ್ಲಿ ಜೀವ ವೈವಿಧ್ಯ ದಾಖಲಾತಿ ಕಾರ್ಯ ನಡೆಯಬೇಕು. ಉತ್ತರ ಕನ್ನಡ ಜಿಲ್ಲೆಯ ಅರಣ್ಯ ಮತ್ತು ಪರಿಸರ ನಾಶಗೊಳಿಸುವ ಯಾವುದೇ ಯೋಜನೆಗಳನ್ನು ತಡೆಯಲು ಚಳವಳಿಗಳು ನಡೆಯಬೇಕು.

ಶ್ರೀರಾಘವೇಶ್ವರ ಭಾರತೀ ಸ್ವಾಮೀಜಿ

ರಾಮಚಂದ್ರಾಪುರ ಮಠ

ಆಧಾರ: ಕ್ಷೇತ್ರ ಕಾರ್ಯ ಪ್ರಶ್ನಾವಳಿ, ಪುಸ್ತಕ-ಪತ್ರಿಕೆಗಳಲ್ಲಿನ ವೈಯುಕ್ತಿಕ ಹೇಳಿಕೆಗಳು

❑ ❑ ❑

೨.೮ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು : ಪ್ರಮುಖ ಪರಿಸರವಾದಿಗಳು

[ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು ಜಾಗತಿಕವಾಗಿ ಗುರುತಿಸಲ್ಪಟ್ಟಿರುವ ಚಾರಿತ್ರಿಕ ಘಟನೆಗಳಾಗಿವೆ. ದಶಕಗಳಷ್ಟು ಕಾಲ ನಡೆದ ಪರಿಸರ ಚಳವಳಿಗಳು ಉತ್ತರ ಕನ್ನಡ ಜಿಲ್ಲೆಯಲ್ಲಿ ಈಗಲೂ ನಿಂತಿಲ್ಲ. ಪರಿಸರ ಚಳವಳಿಗಳಿಗೆ ಪ್ರೇರಕವಾಗಿರುವ ಅಂಶಗಳಲ್ಲಿ ಪರಿಸರ ಪ್ರೇಮಿಗಳು, ಪರಿಸರವಾದಿಗಳ ಪಾತ್ರವೂ ಪ್ರಮುಖವಾದುದಾಗಿದೆ. ಚಳವಳಿಗಾರರಿಗೆ ಸೈಕಲ್ ಮೇಲೆ ಊಟ ಸಾಗಿಸಿದ ಸಾಮಾನ್ಯ ಮನುಷ್ಯ, ಕಾಡಿನಲ್ಲಿಯೇ ಬೆರತು ಹೋಗಿರುವ ವನವಾಸಿಗಳು, ಬ್ಯಾನರ್ ಬರೆದ, ಪೋಸ್ಟರ್ ಹಿಡಿದ, ಘೋಷಣೆಗಳನ್ನು ಕೂಗಿದ ಚಳವಳಿಗಾರರೆಲ್ಲರನ್ನೂ, ಬೇರೆ ಬೇರೆ ಚಳವಳಿಗಳಲ್ಲಿ ಮುಖಂಡತ್ವ ವಹಿಸಿದ್ದವರನ್ನೂ ಯಾರೂ ಮರೆಯುವಂತಿಲ್ಲ. ಇವರೆಲ್ಲರಿಗೆ ಮಾರ್ಗದರ್ಶನ ನೀಡಿದ, ಉತ್ತರ ಕನ್ನಡ ಜಿಲ್ಲೆಯ ಹೊರಗಿನವರಾಗಿದ್ದೂ, ಜಿಲ್ಲೆಯವರೇ ಆಗಿ ಹೋರಾಡಿದ ಪ್ರಮುಖ ಪರಿಸರವಾದಿಗಳ ಕುರಿತು ಇನ್ನೊಂದಷ್ಟನ್ನು ತಿಳಿಸುವ ಈ ಮುಂದಿನ ಪ್ರಯತ್ನವು ಅಗತ್ಯವೆನಿಸಿದೆ.]

ಸುಂದರ್‌ಲಾಲ್ ಬಹುಗುಣ



ಸುಂದರ್‌ಲಾಲ್ ಬಹುಗುಣ ಒಬ್ಬ ಪರಿಸರವಾದಿಯಾಗಿ ಪ್ರಪಂಚಕ್ಕೆ ಪರಿಚಯವಿರುವವರು. ಇವರು ಭಾರತದ ಉತ್ತರಾಖಂಡ್ ರಾಜ್ಯದ ತೆಹರಿ ಜಿಲ್ಲೆಯ ಮರೋದ (ಹಿಮಾಲಯದ ತಪ್ಪಲಿನ) ಗ್ರಾಮದಲ್ಲಿ ೧೯೨೭ ಜನವರಿ ೯ರಂದು ಜನಿಸಿದರು. ಈಗ ಅವರಿಗೆ ೮೦ ದಾಟಿದ ವಯಸ್ಸು. ಶ್ರೀಮತಿ ವಿಮಲಾ ಬಹುಗುಣ ಇವರ ಪತ್ನಿ - ಬಹುಗುಣ ದಂಪತಿಗಳಿಗೆ ರಾಜೀವ್ ಬಹುಗುಣ, ಮಾಧುರಿ ಪಾಠಕ್, ಪ್ರದೀಪ್ ಬಹುಗುಣ ಮೂವರು ಮಕ್ಕಳು.

ಪರಿಸರ ಸಂರಕ್ಷಣೆ ಮತ್ತು ಸಮಾಜ ಸೇವೆಯಲ್ಲಿ ಇವರ ಕೊಡುಗೆಯನ್ನು ಗುರುತಿಸಿ ಭಾರತ ಸರ್ಕಾರವು 'ಪದ್ಮವಿಭೂಷಣ' ಪ್ರಶಸ್ತಿ ನೀಡಿ ಗೌರವಿಸಿದೆ. ನೊಬೆಲ್ ಪ್ರಶಸ್ತಿಗೆ ಸಮಾನ ಎಂದೇ ಗುರುತಿಸಲ್ಪಟ್ಟಿರುವ 'ರೈಟ್ ಲೈವ್‌ಲಿ ಹುಡ್' ಪ್ರಶಸ್ತಿಯನ್ನು ೧೯೮೭ರಲ್ಲಿ ಇವರಿಗೆ ನೀಡಲಾಗಿದೆ. ಇನ್ನೂ ಅನೇಕ ಪ್ರಶಸ್ತಿ - ಪುರಸ್ಕಾರಗಳು ಇವರಿಗೆ ಸಂದಿವೆ.


ಪ್ರಾರಂಭದಲ್ಲಿ ಬಹುಗುಣರು ಅಸ್ಪೃಶ್ಯತೆ ವಿರೋಧಿಸಿ ಹೋರಾಟ ಮಾಡಿದರು. ನಂತರ ಹಿಮಾಲಯದ ಹಳ್ಳಿಗಳಲ್ಲಿ ಮದ್ಯಪಾನ ವಿರೋಧಿ ಚಳವಳಿ ಪ್ರಾರಂಭಿಸಿದರು. ಹಳ್ಳಿಯಲ್ಲೇ ವಾಸವಿರುವ ಬಹುಗುಣರು ತನ್ನ ಸುತ್ತಮುತ್ತಲ ಮರಗಳನ್ನು ಕಡಿಯುವುದನ್ನು ನೋಡಲಾಗದೆ ಪ್ರತಿಭಟಿಸಿದರು. ಚಿಪ್ಕೋ ಚಳವಳಿ ಆರಂಭಿಸಿದರು. ಚಿಪ್ಕೋ ಎಂದರೆ ಅಪ್ಪಿಕೋ ಎಂದರ್ಥ. ಮರಗಳನ್ನು ಕಡಿಯದಂತೆ ಅಪ್ಪಿ ಹಿಡಿದು ರಕ್ಷಿಸಿದ ಹೋರಾಟ ಚಿಪ್ಕೋ ಚಳವಳಿ ಎಂದು ಹೆಸರಾಯಿತು. ಮೂರು ವರ್ಷಗಳಲ್ಲಿ (೧೯೮೧ ರಿಂದ ೧೯೮೩) ಸುಮಾರು ೫,೦೦೦ ಕಿ.ಮೀ. ಪಾದಯಾತ್ರೆ ಮಾಡಿ 'ಪರಿಸರವೇ ಶಾಶ್ವತ ಆರ್ಥಿಕತೆ' ಎಂಬ ಘೋಷಣೆಯನ್ನು ಮೊಳಗಿಸಿದರು. ತೆಹರಿ ಅಣೆಕಟ್ಟು ವಿರೋಧಿ ಚಳವಳಿಯ ನೇತಾರರಾಗಿ ೭೪ ದಿನಗಳ ದೀರ್ಘ ಉಪವಾಸ ಕೈಗೊಂಡಿದ್ದರು. ಭಾರತದೆಲ್ಲೆಡೆ ಪರಿಸರ ಚಳವಳಿಗಳಲ್ಲಿ ಭಾಗವಹಿಸಿ 'ಹಸಿರು ಸಂತ'ನೆಂದೇ ಹೆಸರಾಗಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಯ ಮಾರ್ಗದರ್ಶಕರೆಂದೇ ಹೆಸರಾಗಿರುವ ಬಹುಗುಣ ಅವರು ೧೯೮೩ರ ಆಗಸ್ಟ್ ತಿಂಗಳಿನಲ್ಲಿ ಶಿರಸಿಗೆ ಬಂದು ಬಾಳೆಗದ್ದೆ ಶಾಲೆಯಲ್ಲಿಸಭೆ ನಡೆಸಿ ಅಹಿಂಸಾತ್ಮಕ ಹೋರಾಟದ ಮಾರ್ಗಗಳನ್ನು ಬೋಧಿಸಿದರು. 'ಅಪ್ಪಿಕೋ ಚಳವಳಿ' ಯಶಸ್ವಿಯಾಗಿ ನಡೆಯಿತು. 'ಕಾಳಿ ಬಚಾವೋ' ಆಂದೋಲನದಲ್ಲಿಯೂ ಸಕ್ರಿಯವಾಗಿ ಭಾಗವಹಿಸಿ, ಕಾಳಿನದಿ ನೀರನ್ನು ಒಂದು ಬಕೆಟ್‌ನಲ್ಲಿ ತಂದು ಪತ್ರಕರ್ತರೆದುರಿಗೆ ಜಲಮಾಲಿನ್ಯದ ಬಗ್ಗೆ ವಿವರಿಸಿದ್ದರು. ಈ ಮಧ್ಯೆ ಕರ್ನಾಟಕ ವಿವಿಧೆಡೆಗಳಿಗೆ (ಬೆಂಗಳೂರು, ಸಕಲೇಶಪುರ ಮುಂತಾದ ಸ್ಥಳಗಳು) ಭೇಟಿ ಕೊಟ್ಟು ಪರಿಸರ ಚಳವಳಿಗಳಲ್ಲಿ ಭಾಗವಹಿಸಿದ್ದಾರೆ. ೨೦೦೮ ರ ಸೆಪ್ಟೆಂಬರ್ ೭ ರಂದು ಉತ್ತರ ಕನ್ನಡ ಜಿಲ್ಲೆಯ ಬಾಳೆಗದ್ದೆಗೆ ಬಹುಗುಣ ಬಂದಿದ್ದರು. ೨೫ ವರ್ಷ ಪೂರೈಸಿದ 'ಅಪ್ಪಿಕೋ ಚಳವಳಿ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡುತ್ತಾ, ಪಶ್ಚಿಮಘಟ್ಟಗಳ ವೈವಿಧ್ಯತೆ ಬಗ್ಗೆ ಅರಿವು ಮೂಡಿಸಿದರು.

ಗಾಂಧೀವಾದಿ ಬಹುಗುಣ ಅವರು ಮಿತಾಹಾರಿ, ಶಾಂತಿಪ್ರಿಯ, ಪ್ರಾಮಾಣಿಕ, ಸರಳಜೀವಿ, ಟೀಕೆ ಟಿಪ್ಪಣಿಗಳಿಗೆ ಕಿವಿಗೊಡದೆ ಪರಿಸರದ ಉಳಿವಿಗಾಗಿ ಅಹಿಂಸಾತ್ಮಕ ಹೋರಾಟದ ಹಾದಿ ತುಳಿದಿರುವ ಪರಿಸರವಾದಿ. 'ಮರ ಅನೇಕ ಸಮಸ್ಯೆಗಳ ನಿವಾರಣೆಗೆ ವರ' ಎಂದೇ ಬದುಕಿ ಬಾಳುತ್ತಿದ್ದಾರೆ ಬಹುಗುಣ ಅವರು.

❑ ❑ ❑

ಮೇಧಾಪಾಟ್ಕರ್



ಪರಿಸರವಾದಿ ಮೇಧಾಪಾಟ್ಕರ್ ಡಿಸೆಂಬರ್ ೧, ೧೯೫೪ರಲ್ಲಿ ಜನಿಸಿದರು. ಸ್ವಾತಂತ್ರ್ಯಯೋಧ ತಂದೆ, ಸಾಮಾಜಿಕ ಕಾರ್ಯಕರ್ತೆ ತಾಯಿ. ಟಾಟಾ ಇನ್‌ಸ್ಟಿಟ್ಯುಟ್ ಆಫ್ ಸೋಷಿಯಲ್ ಸೈನ್ಸ್‌ನಲ್ಲಿ ಡಾಕ್ಟರೇಟ್ ಪದವಿ ಪಡೆದಿರುವ ಮೇಧಾಪಾಟ್ಕರ್ ನರ್ಮದಾ ಬಚಾವೋ ಆಂದೋಲನದ ಮೂಲಕ ಪ್ರಪಂಚದಾದ್ಯಂತ ಪ್ರಸಿದ್ಧರಾಗಿದ್ದಾರೆ. 'ರೈಟ್ ಲೈವ್ಲಿ ಹುಡ್ ಪ್ರಶಸ್ತಿ', ಗೋಲ್ಡ್‌ಮ್ಯಾನ್ ಪರಿಸರ ಪ್ರತಿಷ್ಠಾನದ ಪ್ರಶಸ್ತಿಗಳು ಸಂದಿವೆ. ಇವರ ವಾಸ್ತವ್ಯದ ವಿಳಾಸ : ನರ್ಮದಾ ಬಚಾವೋ ಆಂದೋಲನ, ಉದಯನಿವಾಸ, ೨ನೇ ಮಹಡಿ, ಪೋತಿವಾಲಿ ಹತ್ತಿರ, ಶಿವಾಜಿ ರಸ್ತೆ, ಬಂದಿಯಾ ಬಜಾರ್, ಬರೋಡ - ೩೯೦೦೦೧


೧೯೮೫ರಲ್ಲಿ ಆರಂಭವಾದ ನರ್ಮದಾ ಬಚಾವೋ ಚಳವಳಿಯಲ್ಲಿ ಮೇಧಾಪಾಟ್ಕರ್ ರೂಪಿಸಿದ, ತುಳಿದ ಹಾದಿಗಳು ಗಂಭೀರವಾಗಿದ್ದವು. ಸರ್ಕಾರಗಳ ವಿರೋಧ ಕಟ್ಟಿಕೊಂಡ ಪರಿಸರ ನಾಶ ತಡೆಗಾಗಿ ಹಗಲಿರುಳು ದುಡಿದರು. ಸುಪ್ರೀಂ ಕೋರ್ಟಿನ ತೀರ್ಪು ನರ್ಮದಾ ಅಣೆಕಟ್ಟು ಕಟ್ಟಲು ಪರವಾನಗಿ ನೀಡಿತು. ಆಗಲೂ ನಿರಾಶರಾಗದೆ, ಎದೆಗುಂದದೆ ದೇಶದಾದ್ಯಂತ ಎಲ್ಲೇ ಪರಿಸರ ಚಳವಳಿಗಳು ನಡೆಯಲಿ, ಅಲ್ಲಿ ಮೇಧಾ ಪಾಟ್ಕರ್ ಹಾಜರಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಸಂಬಂಧವಾಗಿ ಕೈಗಾ ಅಣುವಿದ್ಯುತ್ ಸ್ಥಾವರ ವಿರೋಧಿ ಹೋರಾಟದಲ್ಲಿ ಮೇಧಾಪಾಟ್ಕರ್ ಭಾಗವಹಿಸಿದ್ದರು. ವಿದ್ಯುತ್ ಉತ್ಪಾದನೆಗೆ ಪರಮಾಣು ಸ್ಥಾವರ ಅತ್ಯಂತ ದುಬಾರಿ ಹಾಗೂ ಅಪಾಯಕಾರಿ ಎಂಬುದು ಇವರ ವಾದವಾಗಿತ್ತು. ೨೦೦೯ರ ಡಿಸೆಂಬರ್ ೨೦ರಂದು ಕಾರವಾರದ ಸಮೀಪವಿರುವ ಹಣಕೋಣಕ್ಕೆ ಮೇಧಾಪಾಟ್ಕರ್ ಬಂದಿದ್ದರು. ಹಣಕೋಣ ಉಷ್ಣವಿದ್ಯುತ್ ಸ್ಥಾವರ ವಿರೋಧಿ ಹೋರಾಟದಲ್ಲಿ ಭಾಗವಹಿಸಿದರು. ಹಣಕೋಣ ವಿಷಯದಲ್ಲಿ ಕಾನೂನು ಜನಪರವಾಗಿದ್ದರೆ ಸರಿ, ಜನಹಿತ ಕಡೆಗಣಿಸುವ ತೀರ್ಪುಗಳು ಬಂದರೆ ಕಾನೂನು ಕೈಗೆತ್ತಿಕೊಳ್ಳಲು ಹಿಂಜರಿಯುವುದಿಲ್ಲ ಎಂದು ಎಚ್ಚರಿಸಿದರು. ಹೋರಾಟವು ಯಶಸ್ವಿಯಾಗಿ ಉಷ್ಣವಿದ್ಯುತ್ ಸ್ಥಾವರ ಸ್ಥಾಪನೆಯು ಹಣಕೋಣದಿಂದ ಬೇರೆಡೆಗೆ ಸ್ಥಳಾಂತರಗೊಂಡಿತು.

'ಪರಿಸರ ಹೋರಾಟ ಈಕ್ವಲ್ಸ್ ಮೇಧಾಪಾಟ್ಕರ್' ಎಂಬುದಾಗಿ ಗುರುತಿಸಲ್ಪಟ್ಟಿರುವ ಅವರು ಈಗಲೂ ಸಕ್ರಿಯ ಕಾರ್ಯಕರ್ತರು ಹಾಗೂ ಮಾರ್ಗದರ್ಶಕರಾಗಿದ್ದಾರೆ.

❑ ❑ ❑

ಡಾ. ಕೆ. ಶಿವರಾಮಕಾರಂತ



ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಡಾ. ಶಿವರಾಮ ಕಾರಂತರು ಉಡುಪಿ ಜಿಲ್ಲೆಯ ಕೋಟಾ ಎಂಬಲ್ಲಿ ಹುಟ್ಟಿದವರು. ೧೯೦೨ರ ಅಕ್ಟೋಬರ್ ೧೦ ರಂದು ಜನಿಸಿದ ಇವರು ೯೬ ವರ್ಷಗಳು ಜೀವಿಸಿದ್ದು, ೧೯೯೭ ರ ಡಿಸೆಂಬರ್ ೯ರಂದು ನಿಧನಹೊಂದಿದರು. ಇವರ ತಂದೆ ಶೇಷ ಕಾರಂತ, ತಾಯಿ ಲಕ್ಷ್ಮಿ. ಶಿಕ್ಷಣ ಪಡೆಯುತ್ತಿರುವಾಗಲೇ ಗಾಂಧೀಜಿಯವರ ಕರೆಗೆ ಓಗೊಟ್ಟು ಸ್ವಾತಂತ್ರ್ಯ ಚಳವಳಿಗೆ ಧುಮುಕಿದರು. ಜೀವಮಾನವಿಡೀ ಅಸಾಧಾರಣ ಜ್ಞಾನ ಸಂಪಾದನೆಯನ್ನು ಮಾಡಿ ನಡೆದಾಡುವ ವಿಶ್ವವಿದ್ಯಾಲಯ, ವಿಶ್ವಕೋಶ ಎಂದು ಹೆಸರಾಗಿದ್ದರು. ಅವರು ಬರೆಯದ ವಿಷಯವೇ ಇಲ್ಲವೆಂದು ಗುರುತಿಸಿದವರಿದ್ದಾರೆ.

ಜ್ಞಾನ ಪೀಠ, ಪದ್ಮಭೂಷಣ, ಪಂಪ ಪ್ರಶಸ್ತಿ, ನಾಡೋಜ ಪುರಸ್ಕಾರಗಳು, ಹಲವು ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್ ಪದವಿಗಳು ಕಾರಂತರಿಗೆ ಸಂದಿವೆ. ಸಾಹಿತ್ಯದ ಎಲ್ಲ ಪ್ರಕಾರಗಳ ಬರವಣಿಗೆಗಳು ಅವರಿಂದ ಬಂದಿವೆ. ಅವರ 'ಮೂಕಜ್ಜಿಯ ಕನಸುಗಳು' ಕೃತಿಗೆ ಜ್ಞಾನಪೀಠ ಪ್ರಶಸ್ತಿ ಲಭಿಸಿದೆ. ಪರಿಸರ ಸಂಬಂಧಿ ಬರವಣಿಗೆಗಳು ಅತ್ಯಂತ ಮಹತ್ವ ಪೂರ್ಣವಾದವುಗಳಾಗಿವೆ. ವಿಶ್ವಕೋಶಗಳಲ್ಲಿ ಬಾಲ ಪ್ರಪಂಚ, ವಿಜ್ಞಾನ ಪ್ರಪಂಚ ಪ್ರಮುಖವಾಗಿದ್ದರೆ, ಅನುವಾದ ಸಾಹಿತ್ಯದಲ್ಲಿ ಭಾರತದ ಪರಿಸರ - ದ್ವಿತೀಯ ಸಮೀಕ್ಷೆ, ಭಾರತದ ಪರಿಸರದ ಪರಿಸ್ಥಿತಿ ಕೃತಿಗಳು ಗಮನಾರ್ಹವಾಗಿದೆ.

ಸಾಹಿತ್ಯ, ಕಲೆಗಳಲ್ಲಿ ಆಸಕ್ತಿಯಿದ್ದಂತೆಯೇ ಕಾರಂತರು ಹೋರಾಟಗಳಲ್ಲೂ ಮುಂದು. ವಿಶೇಷವಾಗಿ ಪರಿಸರ ಅವರ ಹೋರಾಟದ ಪ್ರಮುಖ ಕ್ಷೇತ್ರವಾಗಿತ್ತು. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳಲ್ಲಿ ಡಾ. ಶಿವರಾಮ ಕಾರಂತರ ಪಾತ್ರ ದೇಶವ್ಯಾಪಿ ಗಮನ ಸೆಳೆಯಿತು. ಕೈಗಾ ಅಣುವಿದ್ಯುತ್‌ಸ್ಥಾವರ ವಿರೋಧಿ ಹೋರಾಟದಲ್ಲಿ ಅವರು ಸಕ್ರಿಯವಾಗಿ ಭಾಗವಹಿಸಿದ್ದರು. 'ಕೈಗಾ ಒಂದು ಭಯಾನಕ ಸ್ಥಾವರ' ಎಂದು ಹೇಳಿಕೆ ನೀಡಿದ ಕಾರಂತರು 'ಕೈಗಾ ಇರುವ ಸ್ಥಳವೇ ಅಣುವಿದ್ಯುತ್ ಸ್ಥಾವರ ಸ್ಥಾಪನೆಗೆ ಯೋಗ್ಯವಾದುದ್ದಲ್ಲವೆಂದರು. ಚಳವಳಿಗಾರರನ್ನು ಕುರಿತು ಕೈಗಾ ಯೋಜನೆಯನ್ನು ವಿರೋಧಿಸಿ ಭಾಷಣ ಮಾಡಿದರು. ಡಾ. ಕುಸುಮಾ ಸೊರಬ ಮತ್ತಿತರರು ಡಾ. ಶಿವರಾಮ ಕಾರಂತರನ್ನು ೧೯೮೯ರಲ್ಲಿ ನಡೆದ ಲೋಕಸಭಾ ಚುನಾವಣೆಗೆ ನಿಲ್ಲುವಂತೆ ಮನವೊಲಿಸಿದರು. ಹಸಿರು ಪಕ್ಷದ ಅಭ್ಯರ್ಥಿಯಾಗಿ ಕೆನರಾ ಲೋಕಸಭಾ ಕ್ಷೇತ್ರದ ಚುನಾವಣೆಗೆ ಸ್ಪರ್ಧಿಸಿದರು. ಇಡೀ ದೇಶದ ಗಮನವನ್ನು ಕೆನರಾ ಲೋಕಸಭಾ ಕ್ಷೇತ್ರವು ಸೆಳೆಯಿತು. ಚುನಾವಣಾ ಪ್ರಚಾರ ಕೈಗೊಳ್ಳದೆ ವಿದೇಶ ಪ್ರವಾಸಕ್ಕೆ ಹೋಗಿದ್ದರು. ಆದರೂ ಪರಿಸರ ಚಳವಳಿಗಾರರು ಕಾರಂತರ ಪರವಾಗಿ ಪ್ರಚಾರ ಮಾಡಿದರು. ಫಲಿತಾಂಶವೂ ಬಂದು ಕಾರಂತರು ೭೫,೦೦೦ ಮತಗಳನ್ನು ಪಡೆದು ಮೂರನೇ ಸ್ಥಾನದಲ್ಲಿದ್ದರು. ಪರಿಸರ ಸಂಬಂಧಿತವಾಗಿ ಜನರ ಕಾಳಜಿಯನ್ನು ವಿಶ್ಲೇಷಿಸಲಾಯಿತು. ಡಾ. ಕೆ. ಶಿವರಾಮ ಕಾರಂತರು "ಮರ ತಾನಾಗಿ ಬೆಳೆಯುತ್ತದೆ, ಆ ರೀತಿ ಮನುಷ್ಯ ಬೆಳೆಯಲಾರ. ನಮ್ಮ ಬದುಕು ಆರಂಭವಾಗುವುದಕ್ಕೆ ಸಾವಿರಾರು ವರ್ಷಗಳ ಮೊದಲೇ ಜೀವರಾಶಿ ಇಲ್ಲಿತ್ತು ಎಂಬುದನ್ನು ತಿಳಿದರೆ ಸಾಕು" ಎಂದು ಹೇಳುತ್ತಲೇ ಎಲ್ಲರ ಮನಸ್ಸಿನಲ್ಲಿ ಅಮರತ್ವವುಳ್ಳವರಾಗಿದ್ದಾರೆ.

❑ ❑ ❑

ಡಾ. ಕುಸುಮಾ ಸೊರಬ



'ಶತಮಾನದ ಕುಸುಮ' ಎಂದು ಹೆಸರಾಗಿದ್ದ ಡಾ. ಕುಸುಮಾ ಸೊರಬ ಅವರ ಮನೆತನದವರು ಮೂಲತಃ ಶಿವಮೊಗ್ಗ ಜಿಲ್ಲೆಯ ಸಾಗರದವರು. ಹುಬ್ಬಳ್ಳಿಯ ರೈಲ್ವೆ ಕ್ವಾರ್ಟರ್ಸ್‌ನಲ್ಲಿ ಕುಸುಮಾ ೧೯೩೮ರ ಅಕ್ಟೋಬರ್ ೧೩ ರಂದು ಹುಟ್ಟಿದರು. ತಂದೆ ಭವಾನಿ ಶಂಕರ ಸೊರಬ ಅವರು ಹುಬ್ಬಳ್ಳಿಯ ರೈಲ್ವೆ ಇಲಾಖೆಯಲ್ಲಿ ನೌಕರರಾಗಿದ್ದರು. ತಾಯಿ ಉಮಾಬಾಯಿಯ ಹಾರೈಕೆಯಲ್ಲಿ ಕಿರಿಯ ಮಗಳಾಗಿದ್ದ ಕುಸುಮಾ ಇಬ್ಬರು ಅಕ್ಕಂದಿರು, ಒಬ್ಬ ಅಣ್ಣನ ಒಡನಾಟದಲ್ಲಿ ಬೆಳೆದು, ತನಗನಿಸಿದ್ದನ್ನು ಮಾಡಲೇಬೇಕು ಎನ್ನುವ ಸ್ವಭಾವದವಳಾಗಿದ್ದಳು. ಸಾಕು ಪ್ರಾಣಿಗಳ ದಂಡೊಂದು ಮನೆಯ ಸುತ್ತಲೂ ಇರಲೇಬೇಕೆಂದು ಬೆಳೆಸಿದಳು. ಓದಿದ್ದು ನರ್ಸ್‌ಕೋರ್ಸ್, ಶುಶ್ರೂಷಕಿಯಾಗಿ ಕೆಲಸಕ್ಕೆ ಸೇರಿ, ಡಾಕ್ಟರ್‌ಗಳ ಸಲಹೆಯಂತೆ ಬೊಂಬಾಯಿಗೆ ತೆರಳಿ ವೈದ್ಯಕೀಯದಲ್ಲಿ ಅಧ್ಯಯನ ಮುಂದುವರಿಸಿ ಎಂ.ಎಸ್. ಪದವಿ ಪಡೆದು ಬಂದರು. ಮದುವೆ ಮಾಡಲು ಸಿದ್ಧತೆ ನಡೆಸಿದಾಗ 'ಇಷ್ಟಪಟ್ಟು ವೈದ್ಯಕೀಯವನ್ನು ಮದುವೆ ಆಗಿದ್ದೇನೆ, ನನಗೇಕೆ ಇನ್ನೊಂದು ಮದುವೆ ?' ಎಂದು ನಿರಾಕರಿಸಿ ಜೀವನವಿಡೀ ದೀನ-ದಲಿತರ, ಬಡವರ, ಪರಿಸರದ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರು. ಗಾಂಧೀಜಿಯವರ ಪ್ರಭಾವಕ್ಕೊಳಗಾಗಿ ಖಾದಿ ತೊಟ್ಟರು, ಚರಕ ಹಿಡಿದರು. ಮಹಾರಾಷ್ಟ್ರದ ಅಹಮದ್‌ನಗರ ಜಿಲ್ಲೆಯ ಶ್ರೀರಾಂಪುರವೆಂಬ ಸ್ಥಳದಲ್ಲಿ ಎರಡು ವರ್ಷ ಸೇವೆ ಸಲ್ಲಿಸುವಾಗ ಸಹೋದ್ಯೋಗಿಗಳೊಂದಿಗೆ ಸೇರಿ 'ಸ್ನೇಹಕುಂಜ' ಟ್ರಸ್ಟ್ ಸ್ಥಾಪಿಸಿದ್ದರು. ಅದು ನಂತರದ ವರ್ಷಗಳಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ನೆಲೆ ನಿಂತಿತು.

ಉತ್ತರ ಕನ್ನಡದ ಪ್ರಕೃತಿ ಸೌಂದರ್ಯ, ಹಸಿರು ವನಸಿರಿ, ಜಲಪಾತಗಳು, ಕಣಿವೆಗಳು ಡಾ. ಕುಸುಮಾ ಸೊರಬ ಅವರ ಮನಸೆಳೆದವು. ಪೂರ್ವಿಕರ ಸ್ವಲ್ಪ ಜಮೀನು ಉತ್ತರ ಕನ್ನಡ ಜಿಲ್ಲೆಯ ಕೆರವಳ್ಳಿ (ಹೊನ್ನಾವರ ಸಮೀಪ) ಯಲ್ಲಿ ಇದ್ದು, ಆಗಾಗ್ಗೆ ಹೋಗಿ ಬರುತ್ತಿದ್ದರಿಂದ ಪ್ರಕೃತಿಯ ಸೆಳೆತಕ್ಕೊಳಗಾಗಿದ್ದರು. ಆ ಭಾಗದಲ್ಲಿ ಆಸ್ಪತ್ರೆ ಸೌಲಭ್ಯವಿಲ್ಲದಿರುವುದರಿಂದ ತಮ್ಮ ದೂರದ ಸಂಬಂಧಿಕರೊಬ್ಬರು ಪಟ್ಟ ನೋವನ್ನು ಕಂಡು ಆ ಜಾಗದಲ್ಲಿ ನೆಲೆನಿಂತು ಸೇವೆ ಮಾಡಲು ನಿರ್ಧರಿಸಿದರು.

೧೯೭೭ ಜನವರಿ ೧೪ ರಂದು ಹೊನ್ನಾವರ ಪಟ್ಟಣದ ಪಕ್ಕದ ಕಾಸರಕೋಡು ಎಂಬ ಹಳ್ಳಿಯಲ್ಲಿ ಮೂರು ಹಾಸಿಗೆಗಳ 'ವಿವೇಕಾನಂದ ಆರೋಗ್ಯಧಾಮ' ವನ್ನು ಸ್ಥಾಪಿಸಿದರು. ಕ್ರಮೇಣ 'ಸ್ನೇಹ ಕುಂಜ' ಟ್ರಸ್ಟ್‌ನ ಆಶ್ರಯದಲ್ಲಿ ಬೃಹತ್ ಸಂಸ್ಥೆಯಾಗಿ ಬೆಳೆದು ನಿಂತಿದೆ. ವಿವಿಧ ರೀತಿಯ ಸೇವೆ ಸಲ್ಲಿಸುತ್ತಿದೆ. ಸ್ನೇಹ ಕುಂಜದಲ್ಲಿ ಸೇವೆ ಮಾಡುತ್ತಲೇ ಡಾ. ಕುಸುಮಾ ಸೊರಬ ಪರಿಸರ ಜಾಗೃತಿ ಕೆಲಸಗಳಲ್ಲಿ ತೊಡಗಿಸಿಕೊಂಡರು. ಉತ್ತರ ಕನ್ನಡ ಜಿಲ್ಲೆಯ ಪರಿಸರ ನಾಶಕ್ಕೆ ಕಾರಣವಾಗಿದ್ದ ಅಭಿವೃದ್ಧಿ ಯೋಜನೆಗಳನ್ನು ವಿರೋಧಿಸಿ ಪರಿಸರ ಚಳವಳಿಗಳನ್ನು ಆರಂಭಿಸಿ, ಮುನ್ನಡೆಸಿ, ಮಾರ್ಗದರ್ಶನ ನೀಡಿದರು.

ಮರಾಠಿ-ಹಾಲಕ್ಕಿ ಜನಾಂಗದ ಏಳಿಗೆ, ಹೆಣ್ಣು ಮಕ್ಕಳಿಗೆ ಕಾನೂನು ನೆರವು, ಶರಾವತಿ ನದಿ, ಉಪನದಿಗಳಲ್ಲಿ ನೆರೆ ಬಂದಾಗ ಸಂತ್ರಸ್ತರಿಗೆ ಪರಿಹಾರ, ಸಹ್ಯಾದ್ರಿ ಶ್ರೇಣಿಯ ರಕ್ಷಣೆಗಾಗಿ ಕೇರಳದಿಂದ ಮಹಾರಾಷ್ಟ್ರದವರೆಗೆ ಪಾದಯಾತ್ರೆ, ಕೈಗಾ ಮತ್ತು ಗುಜರಾತಿನ ಅಣುಸ್ಥಾವರಗಳ ವಿರುದ್ಧ, ಮರ ಕಡಿತ-ಅರಣ್ಯನಾಶಗಳ ವಿರುದ್ಧ ಹಾಗೂ ಹೆಂಚಿಗಾಗಿ ಹೊಲ ಗದ್ದೆಯ ಮಣ್ಣುಗಳನ್ನು ಅಗೆದು ತೆಗೆಯುವುದರ ವಿರುದ್ಧ

ಜನ ಜಾಗೃತಿ, ಪ್ರತಿಭಟನೆ, ಚಳವಳಿ ಇತ್ಯಾದಿ ; ಬೇಡ್ತಿ - ಅಘನಾಶಿನಿ - ಕೈಗಾ - ಶರಾವತಿ ಮುಂತಾದ ವಿನಾಶಕಾರಿ ಬೃಹತ್ ಯೋಜನೆಗಳ ವಿರುದ್ಧ ಚಳವಳಿ ಮಾಡಿದರು. ಹರಿಹರದ ಪಾಲಿಫೈಬರ್ಸ್ - ಶಿವಮೊಗ್ಗದ ತುಂಗಾ ಮೂಲ - ದಕ್ಷಿಣ ಕನ್ನಡದ ಹಲವು ಪರಿಸರ ಚಳವಳಿಗಳಲ್ಲಿ ತೊಡಗಿಸಿಕೊಂಡಿದ್ದರು. ಸುಂದರಲಾಲ್ ಬಹುಗುಣ, ಚಂಡೀಪ್ರಸಾದ್ ಭಟ್, ಮೇಧಾಪಾಟ್ಕರ್, ಶಿವರಾಮ ಕಾರಂತ ಮುಂತಾದ ಪರಿಸರವಾದಿಗಳ ಜೊತೆಗೂಡಿ ಚಳವಳಿಗಳನ್ನು ಮಾಡಿದರು.

ಸದಾಚೈತನ್ಯದ ಚಿಲುಮೆಯಾಗಿದ್ದ, ಒಕ್ಕಣ್ಣಿನ, ಮುವತ್ತು ಕೆ.ಜಿ. ತೂಕದ ಕುಸುಮಕ್ಕ ಶರಾವತಿ ಟೇಲ್‌ರೇಸ್ ಯೋಜನೆ ತಡೆ ಸಂಬಂಧ ನ್ಯಾಯಾಲಯದ ಕೆಲಸದ ಮೇಲೆ ಬೆಂಗಳೂರಿಗೆ ಹೋಗಿ ಬರುವಾಗ ಆಕಸ್ಮಿಕ ಅಪಘಾತಕ್ಕೆ ತುತ್ತಾಗಿ ಪರಿಸರದೊಂದಿಗೆ ಲೀನವಾದರು. ಪರಿಸರ ಮತ್ತು ಪರಿಸರ ಸಂಬಂಧಿತ ವಿಚಾರಗಳು ಯಾವಾಗಲೂ ಶಾಶ್ವತ. ಅಲ್ಲಿಯವರೆಗೂ ಪರಿಸರ ಪ್ರೇಮಿ ಡಾ. ಕುಸುಮಾ ಸೊರಬ ಅವರೂ ಅಮರ.

** ಮಾಹಿತಿ : ವಿವಿಧ ಮೂಲಗಳಿಂದ*

❑ ❑ ❑

೨.೯ ಉತ್ತರ ಕನ್ನಡ ಜಿಲ್ಲೆ ಅಭಿವೃದ್ಧಿ - ಕುರಿತು ಹಲವರ ಅಭಿಪ್ರಾಯಗಳು

೧. ನಮ್ಮ ಜಿಲ್ಲೆಯಲ್ಲಿ ಜನರ ಅಗತ್ಯಕ್ಕೆ ಅನುಸಾರವಾಗಿ ಬಸ್ಸುಗಳಿಲ್ಲ. ಕೆಲವು ಹಳ್ಳಿಗಳಿಗೆ ರಸ್ತೆಗಳಿಲ್ಲ. ಜಿಲ್ಲಾಡಳಿತವು ಸಾರಿಗೆ ವ್ಯವಸ್ಥೆಯನ್ನು ಬಲಪಡಿಸಲು ಕ್ರಮ ಕೈಗೊಳ್ಳಬೇಕು. ಯಾವುದೇ ಅಭಿವೃದ್ಧಿ ಕಾರ್ಯಗಳು ಮತ್ತು ಕಾಮಗಾರಿಗಳು ಜನರ ಆವಶ್ಯಕತೆಗೆ ಅನುಸಾರವಾಗಿ ಕೈಗೊಳ್ಳಬೇಕು. ಜಿಲ್ಲಾ ಆಡಳಿತವು ಆಗಾಗ ಜನಸಾಮಾನ್ಯರಿಂದ ಜಿಲ್ಲೆಯ ಅಭಿವೃದ್ಧಿಯಲ್ಲಿನ ಕುಂದು ಕೊರತೆಗಳನ್ನು ಕ್ರೋಡಿಕರಿಸಿ, ನಿವಾರಿಸುವಲ್ಲಿ ಆಸಕ್ತಿ ವಹಿಸಬೇಕು.

ಚಾರ್ಲ್ಸ್‌ಪೆರೇರಾ

ನಾಗರಿಕ, ಕಾರವಾರ

೨. ಅಭಿವೃದ್ಧಿ ಬಾಲಗ್ರಸ್ತವಾಗಿರುವುದರ ಬಗ್ಗೆ ಜನ - ಪುಡಾರಿಗಳು ಅನುಕಂಪ, ಅಸಹಾಯಕತೆ ತೋರಿದರೆ ಹೇಡಿಗಳ ಲಕ್ಷಣವಾದೀತು. ಅಲ್ಪ ಸ್ವಲ್ಪ ಬೆಳೆದಾಗ ಬೆನ್ನು ಚಪ್ಪರಿಸಿಕೊಂಡು ಹೊರಳಿಸಿ ಕೊಳ್ಳುವುದಕ್ಕಿಂತ ಸನಿಹದಲ್ಲಿರುವವರ ಮಟ್ಟಕ್ಕೆ ಬರಲಾಗದಿದ್ದರೂ ಇನ್ನೂ ಹೀನಾಯವಾಗಿ ಬದುಕದೆ, ಕರ್ನಾಟಕದಲ್ಲಿನ ಕಾಶ್ಮೀರದಲ್ಲೊಂದು ಕಹಳೆಯನ್ನೂದಿ, ಅಭಿವೃದ್ಧಿಯ ಜೊತೆಗೆ ಶಾಂತಿ ಸಮೃದ್ಧಿಗಳ ಬುತ್ತಿಯನ್ನು ಬಿಚ್ಚಿಡುವಂತಾಗಬೇಕು.

ಎಸ್.ಎಚ್. ನಾಯಕ

ಉಪನಿಬಂಧಕರು, ಸಹಕಾರಿ ಸಂಘಗಳು

ಕಾರವಾರ

೩. ಜಿಲ್ಲೆಯ ಮುಖಂಡರು ಪಕ್ಷ ಭೇದ ಮರೆತು ಎಲ್ಲ ರೀತಿಯ ಯೋಜನೆಗಳನ್ನು ಸ್ವಾಗತಿಸಿ ಜಿಲ್ಲೆಯನ್ನು ಅಭಿವೃದ್ಧಿಪಡಿಸಬೇಕು ; ಪ್ರವಾಸೋದ್ಯಮವನ್ನು ಬೆಳೆಸಬೇಕು.

ಎಂ.ಎನ್. ನಾಯ್ಕ

ಶಿಕ್ಷಕರು, ಕಾರವಾರ

೪. ಸೀಬರ್ಡ್ ನೌಕಾನೆಲೆಯಂಥ, ಕೈಗಾ ಅಣುಸ್ಥಾವರದಂತಹ/ಕೊಂಕಣ ರೈಲ್ವೆಯಂತಹ ಪ್ರಗತಿಪರ ಯೋಜನೆಗಳು ಜಿಲ್ಲೆಯಾದ್ಯಂತ ವ್ಯಾಪಿಸಿ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಜಿಲ್ಲೆಯು ಪ್ರಗತಿ ಪಥದತ್ತ ಮುಂದುವರೆಯುವಂತಾಗಬೇಕು.

ಸುಲೋಚನಾ ವಾಯ್. ಗಾಂವಕರ

ವಿದ್ಯಾರ್ಥಿನಿ, ಅಂಕೋಲ

೫. ಸಮಸ್ಯೆಗಳೆಲ್ಲಕ್ಕೂ ಶಾಶ್ವತ ಪರಿಹಾರ ದೊರೆಯಬೇಕಾದರೆ ನನ್ನ ಜಿಲ್ಲೆಯ ಪ್ರತಿಯೊಬ್ಬ ವ್ಯಕ್ತಿಯೂ ಪ್ರಕೃತಿ ಮಾತೆಯ ವಿಶಾಲ ಮನೋಭಾವನೆಯನ್ನು ತಿಳಿದ ಸಹೃದಯಿಯಾಗಬೇಕು.

ಸತೀಶ್ ಎಸ್. ಮಡಿವಾಳ

ಸಂಶೋಧನಾ ವಿದ್ಯಾರ್ಥಿ

ಕುಮಟ

೬. ಕೈಗಾ ಅಣುವಿದ್ಯುತ್ ಕೇಂದ್ರದಿಂದ ನನ್ನ ಜಿಲ್ಲೆಯ ಜನತೆಗೆ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ನದಿಗಳ ನೀರು ಕೃಷಿಗೆ ಬಳಸುವಂತಾಗಬೇಕು. ಸುಧಾರಿತ ಬೇಸಾಯ ಪದ್ಧತಿ ಆರಂಭಗೊಳ್ಳಬೇಕು. ದೇಶದ ಸಮಸ್ಯೆಯಾಗಿರುವ ಕೋಮುಗಲಭೆ ಜಿಲ್ಲೆಗೆ ನುಸುಳದಂತೆ ನೋಡಿಕೊಳ್ಳಬೇಕು.

ಹರೀಶ ಕೊಂಡಕುಳಿ

ಸಾಲಕೋಡ, ಹೊನ್ನಾವರ

೭. ನನ್ನ ಜಿಲ್ಲೆಯ ನಿಸರ್ಗ ಸೊಬಗಿಗೆ ಚ್ಯುತಿ ಬರದ ರೀತಿಯಲ್ಲಿ ಕೈಗಾರಿಕೆಗಳು ಬರಬೇಕು. ಬಂದರುಗಳನ್ನು ಅಭಿವೃದ್ಧಿಪಡಿಸಬೇಕು. ಹುಬ್ಬಳ್ಳಿ - ಅಂಕೋಲಾ, ತಾಳಗುಪ್ಪ - ಹೊನ್ನಾವರ ರೈಲು ಮಾರ್ಗಗಳಾಗಲು ಹೋರಾಟ ನಡೆಸಬೇಕು. ಜಿಲ್ಲೆಗೆ ಮಾರಕವಾಗಿರುವ ಯಾವುದೇ ಜಲವಿದ್ಯುತ್ ಯೋಜನೆಗಳು ಬರದಂತೆ ಮುಂಜಾಗ್ರತೆ ವಹಿಸಬೇಕು. ಪ್ರವಾಸೋದ್ಯಮ ಮತ್ತು ಸಾರಿಗೆ ಸೌಲಭ್ಯಗಳು ಬೆಳೆಯಬೇಕು.

ವಿ.ಆರ್. ನಾಯ್ಕ

ಹೊನ್ನಾವರ

೮. ಉಷ್ಣ ಮತ್ತು ಅಣುಸ್ಥಾವರಗಳಿಗಿಂತ ಹರಿಯುವ ನದಿಗಳ ನೀರಿನ ಬಳಕೆಯು ಪರಿಸರ ರಕ್ಷಣೆಗೋಸ್ಕರ ಆಗಬೇಕಾಗಿದೆ. ಸರ್ಕಾರದ ಹೆಚ್ಚಿನ ಯೋಜನೆಗಳು ಹಿಂದುಳಿದ ವರ್ಗದವರನ್ನು ತಲುಪಬೇಕಾಗಿದೆ.

ಶ್ರೀಮತಿ ವಿದ್ಯಾ ಎಸ್. ನಾಯಕ

ಶಿಕ್ಷಕಿ, ಭಟ್ಕಳ

೯. ಅರಣ್ಯ ಉತ್ಪನ್ನಕ್ಕೆ ಒತ್ತು ಕೊಟ್ಟು ಅರಣ್ಯ ರಕ್ಷಣೆಯಾಗಬೇಕು. ಅರಣ್ಯ ಲೂಟಿ ನಿಲ್ಲಬೇಕು. ಅರಣ್ಯನಾಶವಾಗದಂತಹ ವಿವಿಧ ದೊಡ್ಡ ದೊಡ್ಡ ಯೋಜನೆಗಳಿಗೆ ಜಿಲ್ಲೆಗೆ ಸ್ವಾಗತ.

ಬಸವರಾಜ ವೀರನಗೌಡ ಪಾಟೀಲ

ಇಂದೂರು, ಮುಂಡಗೋಡ

೧೦. ಜೀವನಕ್ಕೆ ಭಂಗ ತರದ ಕೈಗಾರಿಕೆಗಳನ್ನು ಸ್ಥಾಪಿಸುವ ಗುರಿ ಹೊಂದಿರುವ ಸಹೃದಯರ ಜಿಲ್ಲೆಯಾಗಬೇಕು. ನಿರುದ್ಯೋಗ ನಿವಾರಣೆಯಲ್ಲಿ ಹೊಸ ಮೈಲುಗಲ್ಲುಗಳನ್ನು ಹಾಕಿದ ಜಿಲ್ಲೆಯಾಗಬೇಕು.ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಯನ್ನು ಎಲ್ಲಾ ರಂಗಗಳಲ್ಲಿ ಸಾಧಿಸಿ ಸಕಲ ಸೌಲಭ್ಯಗಳಿಂದ ನೆಮ್ಮದಿಯಿಂದ ಬದುಕುವ ಭಾಗ್ಯ ನಮ್ಮ ಜಿಲ್ಲೆಯ ಜನರದ್ದಾಗಲಿ

ಎನ್.ಆರ್. ರೂಪಶ್ರೀ

ಸಿರಸಿ

೧೧. ಜಿಲ್ಲೆಯ ಸಂಪನ್ಮೂಲಗಳ ಸರಿಯಾದ ರಕ್ಷಣೆ, ಬೆಳವಣಿಗೆ ಮತ್ತು ಬಳಕೆ,ಜನರ ಜೀವನಮಟ್ಟ ಏರಿಕೆಗೆ ಆದ್ಯಗಮನ, ಪರಿಸರ ಪೂರಕವಾದ ಅಭಿವೃದ್ಧಿ ಯೋಜನೆಗಳು, ಉದ್ಯೋಗ ನಿರ್ಮಾಣ, ಸಾರ್ವಜನಿಕ, ಸಾಂಸ್ಕೃತಿಕ ಚಟುವಟಿಕೆಗಳಿಂದ ಭಾವೈಕ್ಯತೆ ಆಗುವ ರೀತಿಯಲ್ಲಿ ನನ್ನ ಜಿಲ್ಲೆಯ ವಾತಾವರಣ ನಿರ್ಮಾಣವಾಗುವುದು ನನ್ನ ದೃಷ್ಟಿಯಲ್ಲಿ ಅಗತ್ಯವಿದೆ.

ಜಿ.ಜಿ. ಹೆಗಡೆ

ವರದಿಗಾರರು, ಸಿದ್ದಾಪುರ

೧೨. ಅಭಿವೃದ್ಧಿಯಾಗಬೇಕಾದರೆ ಜನಪ್ರತಿನಿಧಿಗಳಲ್ಲಿ, ಜನರಲ್ಲಿ ಇಚ್ಛಾಶಕ್ತಿ ಜಾಗೃತಗೊಳ್ಳಬೇಕು. ಕೃಷಿ ಅಭಿವೃದ್ಧಿಯ ಜೊತೆಗೆ ತೋಟಗಾರಿಕೆ ಅಭಿವೃದ್ಧಿಗಾಗಿ ರೈತರಿಗೆ ಕೃಷಿಯಲ್ಲಿ ವೈಜ್ಞಾನಿಕತೆಯನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ ನೀಡಬೇಕು.

ವಿ.ಆರ್. ಜೋಷಿ

ಕುಮಟ

೧೩. ತಾಲೂಕಿನಲ್ಲಿ ಪ್ರವಾಸೋದ್ಯಮ ಅಭಿವೃದ್ಧಿ ಪಡಿಸಲು ಅವಕಾಶವಿದ್ದರೂ. ಪ್ರವಾಸೋದ್ಯಮ ಇಲಾಖೆ ಗಮನ ನೀಡುತ್ತಿಲ್ಲ. ಗ್ರಾಮೀಣ ರಸ್ತೆ, ಆಸ್ಪತ್ರೆ, ಕುಡಿಯುವ ನೀರಿನ ಸೌಲಭ್ಯಗಳು ಹೆಚ್ಚಬೇಕಲ್ಲದೇ ಕೈಗಾರಿಕಾಭಿವೃದ್ಧಿಯಾಗಬೇಕು.

ವಿಜಯಕುಮಾರ ಕರ್ಕಿ

ಹೊನ್ನಾವರ

೧೪. ತಾಲೂಕಿನ ಆರ್ಥಿಕ ಅಭಿವೃದ್ಧಿ ಹೊಂದದೆ ಇರಲು ಅರಬ್ಬಿ ಸಮುದ್ರ ಮತ್ತು ದಟ್ಟ ಅರಣ್ಯದಿಂದಾಗಿ ರೈತರಿಗೆ ಸಾಕಷ್ಟು ಸಾಗುವಳಿ ಭೂಮಿ ಇಲ್ಲವಾಗಿದೆ. ಹಾಗಾಗಿ ನಿರುದ್ಯೋಗಿಗಳಿಗೆ ಉದ್ಯೋಗ ಒದಗಿಸಲು ಕೈಗಾರಿಕೆಗಳ ಆವಶ್ಯಕತೆಯಿದ್ದು ಅಭಿವೃದ್ಧಿ ಪಥದಲ್ಲಿ ಮುನ್ನಡೆಯಲು ಸಾಧ್ಯವಾಗಬಹುದು.

ಸತೀಶ್ ಕುಮಾರ ಮಣಕುಳಿ, ಭಟ್ಕಳ

೧೫. ಜಿಲ್ಲೆಯಲ್ಲಿಯೇ ಆರ್ಥಿಕ ಚೈತನ್ಯವಿಲ್ಲದೇ ಶಾಪಗ್ರಸ್ಥವಾಗಿರುವ ಯಲ್ಲಾಪುರ ತಾಲೂಕು ಜಿಲ್ಲೆಯ ಮಧ್ಯವರ್ತಿ ಸ್ಥಳವಾಗಿದ್ದು ಜಿಲ್ಲಾ ಕೇಂದ್ರವನ್ನು ಯಲ್ಲಾಪುರಕ್ಕೆ ಸ್ಥಳಾಂತರಿಸಬೇಕು. ಯೋಜನೆಯ ಹೆಸರಿನಲ್ಲಿ ಭೂಮಿಗಳು ಬರಡಾಗುತ್ತಿವೆ. ಕೈಗಾರಿಕೋದ್ಯಮ, ಹೈನುಗಾರಿಕೆ, ಪ್ರವಾಸೋದ್ಯಮಗಳು ಬೆಳೆಯಬೇಕಾಗಿದೆ. ಕೃಷಿಗೆ ನೀರಾವರಿ ಸೌಲಭ್ಯಗಳನ್ನು ಹೆಚ್ಚಿಸಬೇಕು.

ಶ್ರೀರಂಗಕಟ್ಟೆ, ಯಲ್ಲಾಪುರ

೧೬. ದಾಂಡೇಲಿ ಪಟ್ಟಣವನ್ನು ತಾಲೂಕು ಕೇಂದ್ರವನ್ನಾಗಿಸುವುದು ಅತ್ಯವಶ್ಯವಿದ್ದು, ಇರುವ ಮೂಲಭೂತ ಸೌಲಭ್ಯಗಳನ್ನು ಬಳಸಿಕೊಂಡು ಅಭಿವೃದ್ಧಿಯ ಕುರಿತು ಚಿಂತನೆ ನಡೆಸಿ, ಈ ನಿಟ್ಟಿನಲ್ಲಿ ಹೆಜ್ಜೆ ಇಡಬೇಕಾಗಿದೆ.

ಆರ್.ಎನ್. ಕನಕ, ದಾಂಡೇಲಿ

೧೭. ಕಾರವಾರ ತಾಲೂಕಿನಲ್ಲಿ ಐ.ಟಿ. ಪಾರ್ಕ್ ಆವಶ್ಯಕತೆ ಇದ್ದು, ಕಾರವಾರ ಬಂದರು ಪ್ರದೇಶವನ್ನು ಹಡಗು ಕಟ್ಟುವ ಕೇಂದ್ರವನ್ನಾಗಿ ಮಾಡಬೇಕು. ತಾಲೂಕಿನಲ್ಲಿ ಸ್ಥಳೀಯ ಜನರಿಗೆ ಉದ್ಯೋಗ ನೀಡುವ ಯೋಜನೆಗಳ ಆವಶ್ಯಕತೆಯಿದೆ. ಹತ್ತಿರದಲ್ಲಿ ಗೋವಾ ಇರುವುದರಿಂದ ಪ್ರವಾಸಿಗರ ಸಂಖ್ಯೆ ಕಡಿಮೆಯಾಗುತ್ತಿದ್ದು, ಕಾಳಿನದಿಯ ನೀರನ್ನು ಬಳಸಿಕೊಂಡು ಪ್ರವಾಸೋದ್ಯಮವನ್ನು ಅಭಿವೃದ್ಧಿ ಪಡಿಸುವುದು ಅಗತ್ಯವಾಗಿದೆ. ಮೀನುಗಾರಿಕಾ ಬಂದರನ್ನು ಮಾಜಾಳಿಯಲ್ಲಿ ನಿರ್ಮಿಸಬೇಕು.

ಅಶೋಕ ಹಾಸ್ಯಗಾರ

ಸಂಪಾದಕರು, ಲೋಕಧ್ವನಿ

ಸಿರಸಿ

೧೮. ತ್ಯಾಗಮಾಡಿದ ತಾಲೂಕುಗಳಲ್ಲೊಂದಾದ ಅಂಕೋಲದಲ್ಲಿ ಕೃಷಿ ತೋಟಗಾರಿಕೆಯನ್ನೇ ಅಭಿವೃದ್ಧಿ ಪಡಿಸಲು ಚೆಕ್ ಡ್ಯಾಂ ನಿರ್ಮಿಸಿ ನೀರಿನ ಸೌಲಭ್ಯ ಒದಗಿಸಬೇಕು. ಕಲ್ಲಂಗಡಿ ಬೆಳೆ ಬೆಳೆಯಲು ಹೆಚ್ಚಿನ ಅನುದಾನ ನೀಡಬೇಕು. ಇಲ್ಲಿನ ಬಂದರನ್ನು ಅದಿರು ಮುಸುಕಿನಿಂದ ಮುಕ್ತವಾಗಿ ಪ್ರವಾಸಿ ಕೇಂದ್ರವನ್ನಾಗಿ ರೂಪಿಸಬೇಕು. ಅಂಕೋಲಾ-ಹುಬ್ಬಳ್ಳಿ ರೈಲ್ವೆ ಮಾರ್ಗದ ಆವಶ್ಯಕತೆ ಇದೆ.

ವಿಠಲ್‌ದಾಸ್ ಕಾಮತ್, ಅಂಕೋಲ

೧೯. ಮುಂಡಗೋಡ ಉತ್ತರಕನ್ನಡ ಜಿಲ್ಲೆಯಲ್ಲಿ ಹಿಂದುಳಿದ ತಾಲೂಕಾಗಿದ್ದು ಮಳೆಯಾಧಾರಿತ ಕೃಷಿಹೊಂದಿದ್ದು, ಮೂಲಭೂತ ಸೌಕರ್ಯಗಳಿಂದ ವಂಚಿತವಾಗಿದೆ. ತಾಲೂಕಿನಲ್ಲಿ ಕೃಷಿ ತರಬೇತಿ ಕೇಂದ್ರಗಳ ಆವಶ್ಯಕತೆಯಿದ್ದು,

ರಸ್ತೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಅಭಿವೃದ್ಧಿ, ಪಕ್ಷಿಧಾಮಗಳ ಅಭಿವೃದ್ಧಿಯಾಗಬೇಕಾಗಿದ್ದು ನೈಸರ್ಗಿಕ ಸಂಪನ್ಮೂಲ ಬಳಕೆ ಮಾಡಿಕೊಂಡು ಅಭಿವೃದ್ಧಿ ಪಥದತ್ತ ಮುನ್ನಡೆಯಬೇಕಾಗಿದೆಯಲ್ಲದೆ ವಸತಿ ಸೌಕರ್ಯ ಅತ್ಯವಶ್ಯವಾಗಿದೆ.

-ಡಿ.ಜಿ. ಹೆಗಡೆ, ಮುಂಡಗೋಡ

೨೦. ಗಡಿ ತಾಲೂಕುಗಳಲ್ಲೊಂದಾದ ಜೋಯಿಡಾ ತಾಲೂಕಿನಲ್ಲಿ ಕೃಷಿ, ತೋಟಗಾರಿಕೆ ಹೆಚ್ಚಿಸಲು ರೈತರಿಗೆ ಮಾಹಿತಿ ಅಗತ್ಯತೆಯಿದ್ದು, ಆರ್ಥಿಕವಾಗಿ ಬಲಾಢ್ಯವಾಗಲು ಸಾಧ್ಯವಿದೆ ಹಾಗೇ ವಿದ್ಯುತ್ ಸೌಲಭ್ಯವನ್ನು ಹೆಚ್ಚಿಸಬೇಕಾಗಿದೆ.

- ನರಸಿಂಹ ಛಾಪಖಂಡ, ಜೋಯಿಡಾ

ಆಧಾರ : *ಕ್ರ.ಸಂ. ೧ ರಿಂದ ೧೧ ರವರೆಗಿನ ಅಭಿಪ್ರಾಯಗಳು ಸ್ವರ್ಣ ಸಂಪದ (ಪ್ರ ಸಂ: ಭರತ್‌ಲಾಲ್ ಮೀನಾ) ಸಂಚಿಕೆ, ಆಗಸ್ಟ್ ೧೫, ೧೯೯೮ ಇದರಿಂದ ಆಯ್ದುಕೊಂಡವು. ಕ್ರ.ಸಂ. ೧೨ ರಿಂದ ೨೦ ರವರೆಗಿನ ಅಭಿಪ್ರಾಯಗಳನ್ನು ಉ.ಕ. ಜಿಲ್ಲೆಯ ಯಲ್ಲಾಪುರದಲ್ಲಿ ನಡೆದ ಜಿಲ್ಲೆಯ ಸರ್ವಾಂಗೀಣ ಅಭಿವೃದ್ಧಿ ಕುರಿತ ಚಿಂತನ ಸಭೆಯಲ್ಲಿ (೭-೭-೨೦೦೭) ಭಾಗವಹಿಸಿ ಪಡೆದವುಗಳು. ಇವು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ (ಉದಾ : ಲೋಕಧ್ವನಿ : ೬-೭-೨೦೦೭)*

❑ ❑ ❑

೨.೧೦ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು

ಕ್ಷೇತ್ರ ಕಾರ್ಯ / ಪ್ರಶ್ನಾವಳಿ

ಸಹೃದಯರೇ,

ಯಾವುದೇ ಚಳವಳಿಗಳು ದುರುದ್ದೇಶಪೂರಿತವಾಗಿರದೆ, ದೂರದೃಷ್ಟಿಯನ್ನು ಹೊಂದಿ ಪ್ರಗತಿಪರವಾಗಿರಬೇಕೆಂಬುದು ಪ್ರತಿಯೊಬ್ಬರ ಆಶಯವಾಗಿರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿಯ ಮಾತು ಬಂದಿತೆಂದರೆ ಅಲ್ಲಿ ಬೇಕು/ಬೇಡಗಳ ಮಾತು. ಬೇಡವಾದುದನ್ನು ಬೇಕು ಎಂದು ಒಪ್ಪಿಕೊಳ್ಳದವರೆಲ್ಲರ ಕೂಗು ಚಳವಳಿಯ ರೂಪ ತಾಳುತ್ತದೆ. ಅಂತಹ ಚಳವಳಿಗಳಿಗೆ ಪ್ರಮುಖ ಉದಾಹರಣೆಗಾಗಿ ನಿಲ್ಲುತ್ತವೆ ನಮ್ಮ ಪರಿಸರ ಚಳವಳಿಗಳು.

ತಾವು ತಮ್ಮ ಪರಿಸರದಲ್ಲಿ ಅಭಿವೃದ್ಧಿ ಯೋಜನೆಯೊಂದರ / ಯೋಜನೆಗಳ ಸ್ಥಾಪನೆಗಾಗಿ ಭೂಮಿ ಕಳೆದುಕೊಂಡು ನಿರಾಶ್ರಿತರೆಂದು ಗುರುತಿಸಿ ಪುನರ್ವಸತಿ ಪಡೆದವರು. ನಾನು ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಕುರಿತ ಪಿಎಚ್.ಡಿ. ಅಧ್ಯಯನ / ಸಂಶೋಧನೆಗಾಗಿ ಈ ಮುಂದಿನ ಪ್ರಶ್ನೆಗಳಿಗೆ ತಮ್ಮಿಂದ ಉತ್ತರ ಬಯಸುತ್ತೇನೆ. ದಯವಿಟ್ಟು ಸಹಕರಿಸಿ.

ನಿರಾಶ್ರಿತರೆಂದು ಗುರುತಿಸಲ್ಪಟ್ಟವರಿಗಾಗಿ ಪ್ರಶ್ನಾವಳಿ

(ಸೂಚನೆ: ಬಿಟ್ಟಿರುವ ಸ್ಥಳದಲ್ಲಿ ಬಯಸಿದ ಉತ್ತರದ ಸಂಖ್ಯೆ ಬರೆಯಿರಿ)

1. ಯಾವ ಅಭಿವೃದ್ಧಿ ಯೋಜನೆಯ ಸಂಬಂಧದ ಚಳವಳಿಯಲ್ಲಿ ಭಾಗವಹಿಸಿದ್ದೀರಿ ? ☐

1. ಜಲವಿದ್ಯುತ್ ಯೋಜನೆಗಳು 2. ಸೀಬರ್ಡ ನೌಕಾನೆಲೆ

3. ಗಣಿಗಾರಿಕೆ 4. ಜಿಲ್ಲೆಯ ಎಲ್ಲ ರೀತಿಯ ಪರಿಸರ ಚಳವಳಿಗಳು

2. ಅಭಿವೃದ್ಧಿ ಯೋಜನೆಗಳ ವಿಷಯವಾಗಿ ಪೂರ್ಣವಾಗಿ ನಿಮಗೆ ತಿಳಿದಿತ್ತೆ ? ☐

1. ಇಲ್ಲ 2. ತಿಳಿದಿತ್ತು

3. ಗೊಂದಲವಿತ್ತು 4. ಉದಾಸೀನ

3. ಯೋಜನೆಯ ಸಂಬಂಧ ಕಳೆದುಕೊಂಡಿದ್ದು ಏನು ? ☐

1. ಜಮೀನು ಮಾತ್ರ 2. ಮನೆ ಮಾತ್ರ

3. ಜಮೀನು/ಮನೆ ಎರಡು 4. ಏನೆಲ್ಲವನ್ನು

4. ಯೋಜನೆಯ ಸಂಬಂಧ ಕಳೆದುಕೊಂಡ ಭೂಮಿ ವಿಸ್ತೀರ್ಣ ☐

1. ಒಂದು ಎಕರೆಗಿಂತ ಕಡಿಮೆ/ಜಾಸ್ತಿ 2. ಎರಡು ಎಕರೆ

3. 3 ಎಕರೆ 4. ಮೂರು ಎಕರೆಗಿಂತ ಜಾಸ್ತಿ

5. **ನಿಮ್ಮನ್ನು ಒಕ್ಕಲೆಬ್ಬಿಸಿರುವ ವಿಧಾನ ಯಾವುದು ?**

1. ಪರಿಹಾರ ಹಣ ನೀಡಿ
2. ಉದ್ಯೋಗ ನೀಡುವ ಭರವಸೆ ನೀಡಿ
3. ಮನವೊಲಿಸಿ
4. ಕಾನೂನು/ಪೊಲೀಸ್ ಕಾರ್ಯಾಚರಣೆಯಿಂದ

6. **ನಿರಾಶ್ರಿತರಾದ ನಿಮಗೆ ಸೂಕ್ತ ಪರಿಹಾರಗಳನ್ನು ನೀಡಲಾಗಿದೆಯೇ ?**

1. ಹೌದು
2. ಇಲ್ಲ
3. ಭಾಗಶಃ
4. ಬಾಕಿ ಇದೆ

7. **ಅಭಿವೃದ್ಧಿ ಯೋಜನೆಗಳ ಸಂಬಂಧ ನಡೆದ ಪರಿಸರ ಚಳವಳಿಗಳಲ್ಲಿ ಭಾಗವಹಿಸಿದ್ದೀರಾ ?**

1. ಹೌದು
2. ಇಲ್ಲ
3. ಸಂಬಂಧವಿಲ್ಲ
4. ಗೊತ್ತಿಲ್ಲ

8. **ಪರಿಸರ ಚಳವಳಿಗಳಿಂದ ನಿರಾಶ್ರಿತರಾಗಿರುವ ನಿಮಗೆ ಲಾಭವಾಗಿದೆಯೇ ?**

1. ಹೌದು
1. ಇಲ್ಲ
3. ಭಾಗಶಃ
4. ಸಂಬಂಧವಿಲ್ಲ

9. **ನಿರಾಶ್ರಿತರಾಗಿರುವ ಈಗಿನ ನಿಮ್ಮ ಸ್ಥಿತಿ ಹೇಗಿದೆ ?**

1. ಸಾಧಾರಣವಾಗಿದೆ
2. ಉತ್ತಮವಾಗಿದೆ
3. ಪರವಾಗಿಲ್ಲ
4. ಕೆಟ್ಟದ್ದಾಗಿದೆ

10. **ನಿರಾಶ್ರಿತರಾಗಿ ಅಭಿವೃದ್ಧಿ ಯೋಜನೆಗಳ ಕುರಿತು ನಿಮ್ಮ ಅಭಿಪ್ರಾಯವೇನು ?**

ತಮ್ಮ ಹೆಸರು ಮತ್ತು ಸಂಪರ್ಕ ವಿಳಾಸ :

❑ ❑ ❑

೨.೧೧ ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳು

ಕ್ಷೇತ್ರ ಕಾರ್ಯ / ಪ್ರಶ್ನಾವಳಿ

ಸಹೃದಯರೇ,

ಯಾವುದೇ ಚಳವಳಿಗಳು ದುರುದ್ದೇಶಪೂರಿತವಾಗಿರದೆ, ದೂರದೃಷ್ಟಿಯನ್ನು ಹೊಂದಿ ಪ್ರಗತಿಪರವಾಗಿರಬೇಕೆಂಬುದು ಪ್ರತಿಯೊಬ್ಬರ ಆಶಯವಾಗಿರುತ್ತದೆ. ಇತ್ತೀಚಿನ ದಿನಮಾನಗಳಲ್ಲಿ ಯಾವುದೇ ಕ್ಷೇತ್ರದಲ್ಲಿ ಅಭಿವೃದ್ಧಿಯ ಮಾತು ಬಂದಿತೆಂದರೆ ಅಲ್ಲಿ ಬೇಕು / ಬೇಡಗಳ ಮಾತು. ಬೇಡವಾದುದನ್ನು ಬೇಕು ಎಂದು ಒಪ್ಪಿಕೊಳ್ಳದವರೆಲ್ಲರ ಕೂಗು ಚಳವಳಿಯ ರೂಪ ತಾಳುತ್ತದೆ. ಅಂತಹ ಚಳವಳಿಗಳಿಗೆ ಪ್ರಮುಖ ಉದಾಹರಣೆಗಳಾಗಿ ನಿಲ್ಲುತ್ತವೆ ಪರಿಸರ ಚಳವಳಿಗಳು.

ತಾವು ತಮ್ಮ ಪರಿಸರದಲ್ಲಿಅಭಿವೃದ್ಧಿ ಯೋಜನೆಯೊಂದರ / ಯೋಜನೆಗಳ ಸ್ಥಾಪನೆ ಹಿನ್ನೆಲೆಯಲ್ಲಿ ನಡೆಸಿದ ಹೋರಾಟದಲ್ಲಿ ಪಾಲ್ಗೊಂಡಿರುವವರು. ನಾನು ಉತ್ತರಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಕುರಿತ ಪಿಎಚ್.ಡಿ. ಅಧ್ಯಯನ/ಸಂಶೋಧನೆಗಾಗಿ ಈ ಮುಂದಿನ ಪ್ರಶ್ನೆಗಳಿಗೆ ತಮ್ಮಿಂದ ಉತ್ತರ ಬಯಸುತ್ತೇನೆ. ದಯವಿಟ್ಟು ಸಹಕರಿಸಿರಿ.

ಪರಿಸರ ಹೋರಾಟಗಾರರಿಗೆ ಪ್ರಶ್ನಾವಳಿ

(ಸೂಚನೆ: ಬಿಟ್ಟಿರುವ ಸ್ಥಳದಲ್ಲಿ ಬಯಸಿದ ಉತ್ತರದ ಸಂಖ್ಯೆ ಬರೆಯಿರಿ)

1. ಯಾವ ಅಭಿವೃದ್ಧಿಯ ಯೋಜನೆ ಸಂಬಂಧದ ಚಳವಳಿಯಲ್ಲಿ ಭಾಗವಹಿಸಿದ್ದೀರಿ ? ☐

1. ಜಲವಿದ್ಯುತ್ ಯೋಜನೆಗಳು   2. ಸೀಬರ್ಡ್ ನೌಕಾನೆಲೆ
3. ಗಣಿಗಾರಿಕೆ   4. ಜಿಲ್ಲೆಯ ಎಲ್ಲ ರೀತಿಯ ಪರಿಸರ ಚಳವಳಿಗಳು

2. ಚಳವಳಿಯಲ್ಲಿ ಭಾಗವಹಿಸುವಿಕೆಯು ☐

1. ನನ್ನ ಸ್ವಂತ ನಿರ್ಧಾರ   2. ನಿರಾಶ್ರಿತರಾಗಿರುವುದರಿಂದ
3. ಇತರರ ಬೆಂಬಲಕ್ಕಾಗಿ   4. ಸೇವಾಮನೋಭಾವನೆಯಿಂದ

3. ಪರಿಸರ ಚಳವಳಿಯಲ್ಲಿ ಭಾಗವಹಿಸಲು ಇದ್ದ ಪೂರ್ವ (ಮೊದಲ) ಪ್ರೇರಣೆ ಯಾವುದು ? ☐

1. ಈ ಮೊದಲು ತಿಳಿದವರಿಂದ ಪ್ರೇರಣೆ   2. ಸಮೂಹದ ಪ್ರಭಾವ
3. ಮಾಧ್ಯಮಗಳ ಪ್ರೇರೇಪಣೆ   4. ವೈಯಕ್ತಿಕ ನಿಲುವುಗಳು

4. ಚಳವಳಿಯಲ್ಲಿ ಭಾಗವಹಿಸಲು ಇದ್ದ ಪ್ರಮುಖ ಪ್ರೇರಕ ಅಂಶ ಯಾವುದು ? ☐

1. ಪರಿಸರ ಮಾಲಿನ್ಯ   2. ನಿರಾಶ್ರಿತ
3. ಹೆಚ್ಚಿನ ಪರಿಹಾರದ ಹಣಕ್ಕಾಗಿ   4. ಜಿಲ್ಲೆಯ ಅಭಿವೃದ್ಧಿಗಾಗಿ

5. ಉತ್ತರ ಕನ್ನಡ ಜಿಲ್ಲೆಗೆ ಅಭಿವೃದ್ಧಿ ಯೋಜನೆಗಳು ಬೇಕೆ ? ☐

1. ಬೇಕು   2. ಅಗತ್ಯವಿಲ್ಲ
3. ಇರುವಂತಹವುಗಳೇ ಸಾಕು   4. ಪರಿಸರ ಸ್ನೇಹಿ ಯೋಜನೆಗಳು ಬರಲಿ

6. ಚಳವಳಿಯಲ್ಲಿ ಭಾಗವಹಿಸಿದ ನಾನೊಬ್ಬ

1. ಪರಿಸರ ಪ್ರೇಮಿ
2. ರೈತ
3. ನಿರಾಶ್ರಿತ
4. ಬೆಂಬಲಿಗ

7. ಭಾಗವಹಿಸಿದ ಚಳವಳಿಯಲ್ಲಿ ಯಾವ ರೀತಿಯ ಪಾತ್ರ ವಹಿಸಿರುತ್ತೀರಿ ?

1. ನಾಯಕನಾಗಿ
2. ಮಾರ್ಗದರ್ಶಕನಾಗಿ
3. ಸಂಘಟಕನಾಗಿ
4. ಸಾಮಾನ್ಯ ಚಳವಳಿಗಾರನಾಗಿ

8. ಉ.ಕ. ಜಿಲ್ಲೆಯ ಎಷ್ಟು ಪರಿಸರ ಚಳವಳಿಗಳಲ್ಲಿ ಭಾಗವಹಿಸಿರುತ್ತೀರಿ ?

1. 1
2. 2
3. 3
4. 3ಕ್ಕಿಂತಲೂ ಹೆಚ್ಚು

9. ರಾಜ್ಯದ / ದೇಶದ / ಇನ್ನಿತರೆಡೆಗಳಲ್ಲಿ ನಡೆದ ಪರಿಸರ ಚಳವಳಿಗಳ ಕುರಿತು ತಿಳಿದಿದೆಯೇ ?

1. ತಿಳಿದಿದೆ
2. ತಿಳಿದಿಲ್ಲ
3. ಭಾಗವಹಿಸಿದ್ದೇನೆ
4. ಅಗತ್ಯವಿಲ್ಲ

10. ಭಾಗವಹಿಸಿದ ಚಳವಳಿಯು

1. ವಿಫಲವಾಯಿತು
2. ಯಶಸ್ವಿಯಾಯಿತು
3. ದಾರಿ ತಪ್ಪಿತು
4. ಭಾಗಶಃ ಯಶಸ್ವಿಯಾಯಿತು

11. ಉತ್ತರ ಕನ್ನಡ ಜಿಲ್ಲೆಯ ಪರಿಸರ ಚಳವಳಿಗಳ ಕುರಿತು ನಿಮ್ಮ ಅಭಿಪ್ರಾಯವೇನು ?

ತಮ್ಮ ಹೆಸರು ಮತ್ತು ಸಂಪರ್ಕ ವಿಳಾಸ :

❑ ❑ ❑